ಕರ್ನಾಟಕ ಸರ್ಕಾರ

## ಪಿ.ಯು.ಸಿ. ದ್ವಿತೀಯ ವರ್ಷ

## ಕನ್ನಡ ಭಾಷಾ ಪಠ್ಯಪುಸ್ತಕ

*ಪರಿಷ್ಕೃತ ಆವೃತ್ತಿ ೨೦೧೬*

# ಸಾಹಿತ್ಯ ಸಂಪದ


ಪದವಿಪೂರ್ವ ಶಿಕ್ಷಣ ಇಲಾಖೆ

೧೮ನೇ ತಿರುವು, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–೫೬೦ ೦೧೨

© *Department of Pre-University Education* 2014-2015.

*Revised Edition - 2016*

*Printed on 80 GSM Maplitho paper*

**All Rights Are Reserved**

No part of this publication may be reproduced, stored in a retrieval system or transmitted, in any form or by any means, electronic, mechanical, photo copying, recording or otherwise without the prior permission of the publisher.

This book is sold subject to the condition that it shall not, by way of trade, be lent, resold, hired out or otherwise disposed of without the publisher's consent, in any form of binding or cover other than that in which it is published.

The correct price of this publication is the price printed on this page/cover page. Any revised price indicated by a rubber stamp or by a sticker or by any other means is incorrect and should be unacceptable.

The Karnataka Text Book Society ®
100 feet Ring Road, Banashankari
III Stage, BENGALURU - 560 085.

*Publisher :*
**VINAYAKA OFFSET PRINTERS**
#56, 9th Main, 1st Cross, Kaverinagar,
BSK II Stage, Banashankari Industrial Area
Bengaluru - 560 070.
Mobile : 94480 58802
Email : vinayaka1000@yahoo.com

# ಪ್ರಸ್ತಾವನೆ

ಪದವಿ ಪೂರ್ವ ಶಿಕ್ಷಣ ವಿದ್ಯಾರ್ಥಿ ಜೀವನದಲ್ಲಿ ಪರ್ವಕಾಲ. ಹದಿಹರೆಯದ ಮನಸ್ಸುಗಳಿಗೆ ಸಾಹಿತ್ಯಾಭಿಮಾನ ಮೂಡಿಸುವುದು ಸವಾಲಿನ ಕೆಲಸ. ಐಚ್ಛಿಕ ವಿಷಯಗಳೇ ಪ್ರಧಾನವಾಗುತ್ತಿರುವ ಈ ಸಂಕ್ರಮಣ ಕಾಲದಲ್ಲಿ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಅರ್ಥೈಸುವುದು ಸುಲಭ ಸಾಧ್ಯವಲ್ಲ, ಸಮಕಾಲೀನ ಸಾಮಾಜಿಕ ಪರಿಸರಕ್ಕೆ ಪ್ರಸ್ತುತವಾಗುವಂತೆ ವೈಚಾರಿಕತೆಯ ವಿಚಾರಗಳನ್ನು ವೈಜ್ಞಾನಿಕ ಆಲೋಚನೆಯಿಂದ ಚಿಂತಿಸುವಂತೆ ಪ್ರೇರೇಪಿಸುವುದು ಇಂದಿನ ಅವಶ್ಯಕತೆಯಾಗಿದೆ.

ದ್ವಿತೀಯ ಪಿ.ಯು.ಸಿ ಕನ್ನಡ ಪಠ್ಯ ಪುಸ್ತಕ ಪ್ರಥಮ ಪಿ.ಯು.ಸಿ. ಮಟ್ಟದ ಸಾಹಿತ್ಯ–ಭಾಷೆಗಳ ಮುಂದುವರೆದ ಭಾಗವಾಗಬೇಕು. ಈ ನಿಟ್ಟಿನಲ್ಲಿ ಹಳಗನ್ನಡ, ನಡುಗನ್ನಡ, ಹೊಸಗನ್ನಡ, ಆಧುನಿಕ ಕನ್ನಡಗಳ ಪ್ರಾತಿನಿಧಿಕ ಕಾವ್ಯಭಾಗಗಳನ್ನೂ ಸಮಾನಾಂತರವಾಗಿ ಗದ್ಯಭಾಗಗಳನ್ನೂ, ಒಂದು ದೀರ್ಘಗದ್ಯದ ಭಾಗವನ್ನೂ ಒಂದೇ ಪುಸ್ತಕದಲ್ಲಿ ಅಳವಡಿಸುವುದು ಇಂದಿನ ಅವಶ್ಯಕತೆಯಾಗಿದೆ. ಇದರ ಉದ್ದೇಶವೆಂದರೆ ಸಾಹಿತ್ಯಾಭ್ಯಾಸದ ವೈಶಿಷ್ಟ್ಯಗಳಾದ ನೇರ ಹಾಗೂ ಸರಳಗ್ರಹಿಕೆ, ಸೂಕ್ಷ್ಮಗ್ರಹಿಕೆ, ಭಾಷಾಸಾಮರ್ಥ್ಯ ಅಭಿವೃದ್ಧಿ ಮುಂತಾದ ಅಂಶಗಳನ್ನು ಉತ್ತೇಜನ ಗೊಳಿಸುವುದಾಗಿದೆ. ಸಾಮಾಜಿಕ ಹಾಗೂ ರಾಷ್ಟ್ರೀಯ ಆಶೋತ್ತರಗಳು ಬದಲಾಗುತ್ತಿರುವ ಈ ಸಂದರ್ಭದಲ್ಲಿ ಶಿಕ್ಷಣವು ಅವುಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವುದು ಪ್ರಗತಿಯ ಲಕ್ಷಣ. ಮಾನವನ ಜ್ಞಾನಶಾಖೆಗಳನ್ನು ವೃದ್ಧಿಸುವ ಹಾಗೂ ನಾಗರಿಕರಲ್ಲಿ ವೈಚಾರಿಕ ಸ್ವಾತಂತ್ರ್ಯ ಮೂಡಿಸುವುದು ನಮ್ಮ ಸಂವಿಧಾನದಲ್ಲಿ ಪ್ರತಿಫಲಿತವಾಗಿದೆ. ವಿದ್ಯಾರ್ಥಿಗಳು ಭಾಷಾ ಕಲಿಕೆ ಮೂಲಕ ಜ್ಞಾನ ಸಂಯೋಜನೆ, ನೈತಿಕ ಮೌಲ್ಯಗಳ ಅಳವಡಿಕೆ, ವಿಜ್ಞಾನ–ತಂತ್ರಜ್ಞಾನಗಳ ಬಳಕೆ ಆತ್ಮಸ್ಥೈರ್ಯ, ವಿಶಾಲದೃಷ್ಟಿಕೋನ, ದೇಶದ ಏಕತೆ–ಸಮಗ್ರತೆ, ಸಾಮರಸ್ಯ, ಪರಿಸರ ಪ್ರಜ್ಞೆ, ರಾಷ್ಟ್ರಾಭಿಮಾನ ಮುಂತಾದ ಗುಣಾತ್ಮಕ ಅಂಶಗಳನ್ನು ಬೆಳೆಸಿಕೊಳ್ಳುವಂತಹ ಪಠ್ಯ ಪುಸ್ತಕ ಇಂದಿನ ಅಗತ್ಯವಾಗಿದೆ.

ಈ ಹಿನ್ನೆಲೆಯಲ್ಲಿ ದ್ವಿತೀಯ ಪಿ.ಯು.ಸಿ ಕನ್ನಡ ಭಾಷಾ ಪಠ್ಯ ಪುಸ್ತಕ ಸಮಿತಿಯು ರಾಜ್ಯದ ವಿವಿಧ ಭಾಗಗಳಿಗೆ ಸಂಚರಿಸಿ ಅಲ್ಲಿನ ಕೆಲವು ಹಿರಿಯರನ್ನು ಸಂಪರ್ಕಿಸಿ, ಸಮಾಲೋಚಿಸಿ, ಸಾಹಿತ್ಯದ ವಿವಿಧ ಪ್ರಕಾರಗಳ ಬಗ್ಗೆ ಚರ್ಚಿಸಿ, ನಾಡು–ನುಡಿಗಾಗಿ ಶ್ರಮಿಸಿದವರ ಹಿನ್ನಲೆ ಗಮನಿಸಿ ವಸ್ತು ವೈವಿಧ್ಯತೆಯನ್ನೊಳಗೊಂಡಂತೆ, ವಿವಿಧ ಪ್ರಕಾರಗಳ ಕವಿ–ಕಾವ್ಯ ಪರಿಚಯವನ್ನು ಮಾಡುವ ಪ್ರಯತ್ನ ಮಾಡಲಾಗಿದೆ.

ಉಪನ್ಯಾಸಕರಿಗೆ ಬೋಧಿಸಲು ಹೊರೆಯಾಗದಂತೆ, ವಿದ್ಯಾರ್ಥಿಗಳಿಗೆ ಮನನ ಮಾಡಿಕೊಳ್ಳಲು ಆಸಕ್ತಿ ಮೂಡುವಂತೆ ಪಠ್ಯ ವಿಷಯ ರೂಪಿಸಲಾಗಿದೆ ಎಂದು ಭಾವಿಸಿದ್ದೇವೆ. ಪ್ರಥಮ ಪಿ.ಯು.ಸಿ.ಯಲ್ಲಿ ನಾಟಕ ಪ್ರಕಾರ ಪರಿಚಯಿಸಿರುವುದರಿಂದ ದ್ವಿತೀಯ ಪಿ.ಯು.ಸಿ.ಗೆ ದೀರ್ಘಗದ್ಯ ಅಥವಾ ಕಿರುಕಾದಂಬರಿ ನಿಗದಿಗೊಳಿಸ ಬೇಕೆಂದು ಸಾಹಿತ್ಯದ ಮತ್ತೊಂದು ಮಹತ್ತ್ವದ ಮಜಲನ್ನು ಈ ಮೂಲಕ ಪರಿಚಯಿಸಬೇಕೆಂದು ಹಲವಾರು ಉಪನ್ಯಾಸಕರು ಸಲಹೆ ನೀಡಿದ ಮೇರೆಗೆ ದೀರ್ಘಗದ್ಯವನ್ನು ಅಳವಡಿಸಲಾಗಿದೆ. ಒಟ್ಟಾರೆಯಾಗಿ ಪಠ್ಯಪುಸ್ತಕದಲ್ಲಿ ಹನ್ನೆರಡು ಪದ್ಯಗಳು, ಎಂಟು ಪಾಠಗಳು, ಒಂದು ದೀರ್ಘಗದ್ಯ ಸೇರಿ ೨೨೦ ಪುಟಗಳಿಗೆ ಮಿತಿಗೊಳಿಸಲಾಗಿದೆ. ಮಾದರಿ ಪ್ರಶ್ನೆಗಳು, ಭಾಷಾಭ್ಯಾಸವನ್ನು ಪಠ್ಯಕ್ಕೆ ಪೂರಕವಾಗಿ ಸಂಯೋಜಿಸಲಾಗಿದೆ, ಜೊತೆಗೆ ವಿದ್ಯಾರ್ಥಿಗಳ ಕ್ರಿಯಾತ್ಮಕ ಚಟುವಟಿಕೆಗಳಿಗಾಗಿ ಎಂದಿನಂತೆ ಅಭ್ಯಾಸ ಪುಸ್ತಕವನ್ನು ಪ್ರತ್ಯೇಕವಾಗಿ ರಚಿಸಲಾಗಿದೆ.

ಕನ್ನಡ ಪಠ್ಯ ಪುಸ್ತಕ ಸಮಿತಿ ಸಭೆ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ ನಡೆಯುವಾಗ ಸಭೆಗೆ ಆಗಮಿಸಿ ಸಲಹೆ ಮಾರ್ಗದರ್ಶನ ನೀಡಿದ ಕರ್ನಾಟಕ ಸರ್ಕಾರದ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರಾದ ಸನ್ಮಾನ್ಯ ಶ್ರೀ ಕಿಮ್ಮನೆ ರತ್ನಾಕರರವರಿಗೆ ಸಮಿತಿ ಆಭಾರಿಯಾಗಿದೆ.

ಪಠ್ಯ ಪುಸ್ತಕ ರಚನೆ ಸಂದರ್ಭದಲ್ಲಿ ಸಲಹೆ–ಸಹಕಾರಗಳನ್ನು ನೀಡಿದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಮಾನ್ಯ ನಿರ್ದೇಶಕರಿಗೆ, ಸಹನಿರ್ದೇಶಕರಿಗೆ, ಇಲಾಖಾ ಅಧಿಕಾರಿಗಳಿಗೆ, ವಿವಿಧ ಜಿಲ್ಲೆಗಳಲ್ಲಿ ಪಠ್ಯ ಪುಸ್ತಕ ಸಮಿತಿ ಸಭೆ ನಡೆಸುವಾಗ ಸ್ಥಳಾವಕಾಶ ಹಾಗೂ ಇತರೆ ಸೌಲಭ್ಯ–ಸಹಕಾರ ನೀಡಿದ ಆಡಳಿತ ಮಂಡಳಿಯವರಿಗೆ, ಉಪನಿರ್ದೇಶಕರುಗಳಿಗೆ, ಪ್ರಾಚಾರ್ಯರಿಗೆ ಸಮಿತಿ ಆಭಾರಿಯಾಗಿದೆ.

ತುಮಕೂರು, ಮೈಸೂರು, ಬೆಂಗಳೂರಿನಲ್ಲಿ ನಡೆದ ಪಠ್ಯ ಪುಸ್ತಕ ಸಮಿತಿ ಸಭೆಗಳಲ್ಲಿ ಹಾಜರಾಗಿ ಸಲಹೆ–ಸೂಚನೆಗಳನ್ನು ನೀಡಿದ ಪಠ್ಯ ಪುಸ್ತಕ ಪರಿಶೀಲನಾ ಸಮಿತಿ ಸದಸ್ಯರಾದ ಶ್ರೀ ಮಲೆಯೂರು ಗುರುಸ್ವಾಮಿ, ಡಾ॥ ಚಂದ್ರಶೇಖರ ನಂಗಲಿ, ಡಾ॥ ಪರಮಶಿವಮೂರ್ತಿ ರವರಿಗೆ ಸಮಿತಿ ಕೃತಜ್ಞತೆ ಸಲ್ಲಿಸುತ್ತದೆ.

ಪಠ್ಯಪುಸ್ತಕ ಉತ್ತಮವಾಗಿ ಮೂಡಲು ವಿಶೇಷ ಶ್ರಮವಹಿಸಿದ ಸಂಚಾಲಕರಾದ ಡಾ. ಎಚ್.ಎಸ್. ಸತ್ಯನಾರಾಯಣರವರಿಗೆ, ಸಮಿತಿಯ ಎಲ್ಲಾ ಸದಸ್ಯರಿಗೆ, ಎಲ್ಲ ಸಭೆಗಳಲ್ಲೂ ಹಾಜರಿದ್ದು ಸಹಕರಿಸಿದ, ಕರಡು ತಿದ್ದಿದ ಶ್ರೀ ಎಸ್. ಚಂದ್ರಶೇಖರ್‌ರವರಿಗೆ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಎನ್.ಎಸ್. ವೇಣುಗೋಪಾಲ್‌ರವರಿಗೆ, ಪುಸ್ತಕವನ್ನು ಅಚ್ಚುಕಟ್ಟಾಗಿ ಡಿ.ಟಿ.ಪಿ ಮಾಡಿದ ಶ್ರೀ ಟಿ. ರಾಘವೇಂದ್ರ ರಾವ್‌ರವರಿಗೆ, ಪ್ರತ್ಯಕ್ಷ–ಪರೋಕ್ಷ ಸಲಹೆ–ಸಹಕಾರ ನೀಡಿದ ರಾಜ್ಯದ ಎಲ್ಲ ಕನ್ನಡ ಉಪನ್ಯಾಸಕ ಮಿತ್ರರಿಗೆ ಸಮಿತಿ ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸುತ್ತದೆ. ಪಠ್ಯರಚನಾ ಸಮಿತಿಯ ಸಭೆಗಳಿಗೆ ಅನುವು ಮಾಡಿಕೊಟ್ಟ ತೀರ್ಥಹಳ್ಳಿಯ ಕೃಷಿಕ್ ಸಮಾಜ ಫೌಂಡೇಶನ್, ತುಮಕೂರಿನ ಸರ್ವೋದಯ ಪದವಿ ಪೂರ್ವ ಕಾಲೇಜು, ಬೆಳಗಾವಿಯ ಜಿ.ಎಸ್.ಎಸ್. ಕಾಲೇಜು, ಬೀದರ್‌ನ ಆರ್.ಆರ್.ಕೆ. ಪದವಿ ಪೂರ್ವ ಕಾಲೇಜು ಮತ್ತು ಮೈಸೂರಿನ ಜೆ.ಎಸ್.ಎಸ್. ಮಹಿಳಾ ಪದವಿ ಕಾಲೇಜು – ಈ ಎಲ್ಲಾ ಆಡಳಿತ ಮಂಡಳಿಯವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ನಾಡಿನಾದ್ಯಂತ ಸಾಹಿತ್ಯ ಸಂಪದಕ್ಕೆ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಮೊದಲ ಮುದ್ರಣದ ಸಂದರ್ಭದಲ್ಲಿ ಕಣ್ತಪ್ಪಿನಿಂದ ಉಳಿದಿದ್ದ ಅಚ್ಚಿನ ದೋಷಗಳನ್ನು ಸರಿಪಡಿಸಲಾಗಿದೆ. ಅನೇಕ ಉಪನ್ಯಾಸಕರು ಪುಸ್ತಕವನ್ನು ಇನ್ನಷ್ಟು ಚೆಂದಗಾಣಿಸಲು ನೀಡಿದ ಸಲಹೆಗಳನ್ನು ಅಳವಡಿಸಿಕೊಳ್ಳಲಾಗಿದೆ. ಇನ್ನಷ್ಟು ಟಿಪ್ಪಣಿಗಳನ್ನು, ಶಬ್ದಾರ್ಥಗಳನ್ನು ಸೇರಿಸಲಾಗಿದೆ ಮತ್ತು ಕೆಲವೊಂದು ಅಧ್ಯಾಯಗಳಲ್ಲಿ ಪ್ರಶ್ನೆಗಳ ಸಂಖ್ಯೆಯನ್ನು ಮಿತಗೊಳಿಸಲಾಗಿದೆ. ಈ ಬದಲಾವಣೆಯನ್ನು ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು ಗಮನಿಸಬೇಕೆಂದು ವಿನಂತಿಸುತ್ತೇವೆ. ತಪ್ಪುಗಳು ಕಂಡುಬಂದಲ್ಲಿ, ರಚನಾತ್ಮಕ ಸಲಹೆ ಸೂಚನೆಗಳಿದ್ದಲ್ಲಿ ಗಮನಕ್ಕೆ ತಂದರೆ ಮುಂದಿನ ಮುದ್ರಣದಲ್ಲಿ ಸರಿಪಡಿಸಲಾಗುವುದು. ಪರಿಪೂರ್ಣತೆಯೆಂಬುದು ಬಹುಶಃ ಸಾಧಿಸಲಾಗದ ಆದರ್ಶ. ಅದರ ಕಡೆ ಕೇವಲ ಮಾರ್ಗಕ್ರಮಣ ಮಾಡಬಹುದು, ಅದಕ್ಕೆ ಕೊನೆಯೆಂಬುದಿಲ್ಲ.

ವಂದನೆಗಳೊಂದಿಗೆ,

**ಡಾ. ಎಚ್.ಎಸ್. ಸತ್ಯನಾರಾಯಣ**
ಹಿರಿಯ ಕನ್ನಡ ಉಪನ್ಯಾಸಕರು
ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು,
ಬಿ.ಪಿ. ವಾಡಿಯಾ ರಸ್ತೆ,
ಬಸವನಗುಡಿ, ಬೆಂಗಳೂರು – ೫೬೦ ೦೦೪.

**ಕೆ.ಎಸ್. ಸಿದ್ಧಲಿಂಗಪ್ಪ**
ಅಧ್ಯಕ್ಷರು
ಕನ್ನಡ ಪಠ್ಯ ಪುಸ್ತಕ ರಚನಾ ಸಮಿತಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಬೆಂಗಳೂರು.

# ದ್ವಿತೀಯ ಪಿಯುಸಿ ಕನ್ನಡ ಭಾಷಾ ಪಠ್ಯ ಪುಸ್ತಕ ರಚನಾ ಸಮಿತಿ

**ಅಧ್ಯಕ್ಷರು** : **ಶ್ರೀ ಕೆ.ಎಸ್. ಸಿದ್ಧಲಿಂಗಪ್ಪ**
ಪ್ರಾಚಾರ್ಯರು
ಸರ್ಕಾರಿ ಪದವಿ ಪೂರ್ವ ಕಾಲೇಜು
ಗುಬ್ಬಿ, ತುಮಕೂರು ಜಿಲ್ಲೆ.

**ಸಂಚಾಲಕರು** : **ಡಾ. ಎಚ್.ಎಸ್. ಸತ್ಯನಾರಾಯಣ**
ಹಿರಿಯ ಕನ್ನಡ ಉಪನ್ಯಾಸಕರು
ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು,
ಬಿ.ಪಿ. ವಾಡಿಯಾ ರಸ್ತೆ,
ಬಸವನಗುಡಿ, ಬೆಂಗಳೂರು – ೫೬೦ ೦೦೪.

---

## : ಸದಸ್ಯರು :

೧. **ಶ್ರೀ ಜಿ.ಎ. ತಿಗಡಿ**
ಪ್ರಾಚಾರ್ಯರು
ಸರ್ಕಾರಿ ಪದವಿ ಪೂರ್ವ ಕಾಲೇಜು
ನಾಗನೂರು, ಬೆಳಗಾವಿ.

೨. **ಡಾ. ಅರ್ಜುನ ಗೊಳಸಂಗಿ**
ಹಿರಿಯ ಕನ್ನಡ ಉಪನ್ಯಾಸಕರು
ಜಿ.ಸಿ.ಟಿ.ಎಂ. ಪದವಿ ಪೂರ್ವ ಕಾಲೇಜು
ಹುಲಕೋಟಿ, ಗದಗ ಜಿಲ್ಲೆ.

೩. **ಡಾ. ಎ.ಜಿ. ಸಂತೋಷ್ ಚೊಕ್ಕಾಡಿ**
ಹಿರಿಯ ಕನ್ನಡ ಉಪನ್ಯಾಸಕರು
ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜು
ಮೈಸೂರು.

೪. **ಡಾ. ಸುಭಾಶ್ ಎಸ್. ಪೋರೆ**
ಹಿರಿಯ ಕನ್ನಡ ಉಪನ್ಯಾಸಕರು
ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು
ತಾವರಗೆರೆ, ಕೊಪ್ಪಳ ಜಿಲ್ಲೆ.

೫. **ಶ್ರೀ ಸಿ.ಜಿ. ರಮೇಶ್**
ಹಿರಿಯ ಕನ್ನಡ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು,
ಕೆಸರೆ, ಮೈಸೂರು.

೬. **ಶ್ರೀ ಎಸ್. ನಂದೀಶ್**
ಹಿರಿಯ ಕನ್ನಡ ಉಪನ್ಯಾಸಕರು
ಜೆ.ಎಸ್.ಎಸ್. ಪದವಿ ಪೂರ್ವ ಕಾಲೇಜು
ಮೈಸೂರು.

೭. **ಶ್ರೀ ಶಿವಕುಮಾರ ನಾಗವಾರ**
ಹಿರಿಯ ಕನ್ನಡ ಉಪನ್ಯಾಸಕರು
ಆರ್.ಆರ್.ಕೆ. ಪದವಿ ಪೂರ್ವ ಕಾಲೇಜು
ನೌಬಾದ್, ಬೀದರ.

೮. **ಶ್ರೀಮತಿ ಸುಧಾ ವೈ.ಎಂ.**
ಹಿರಿಯ ಕನ್ನಡ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು
ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ.

---

## : ಪರಿಶೀಲನಾ ಸಮಿತಿ ಸದಸ್ಯರು :

೧. **ಡಾ. ಚಂದ್ರಶೇಖರ ನಂಗಲಿ**
ಪ್ರಾಚಾರ್ಯರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಮಾಲೂರು, ಕೋಲಾರ ಜಿಲ್ಲೆ.

೨. **ಡಾ. ಪರಮಶಿವಮೂರ್ತಿ**
ಕನ್ನಡ ಪ್ರಾಧ್ಯಾಪಕರು
ತುಮಕೂರು ವಿಶ್ವವಿದ್ಯಾನಿಲಯ.

೩. **ಶ್ರೀ ಮಲೆಯೂರು ಗುರುಸ್ವಾಮಿ**
ವಿಶ್ರಾಂತ ಪ್ರಾಧ್ಯಾಪಕರು ಮತ್ತು ಲೇಖಕರು
ಮೈಸೂರು.

# : ಪರಿವಿಡಿ :

## ಪದ್ಯ ಭಾಗ :


| | | |
|---|---|---|
| ೧. ಕದಡಿದ ಸಲಿಲಂ ತಿಳಿವಂದದೆ | – ನಾಗಚಂದ್ರ | ೩ |
| ೨. ವಚನಗಳು | | ೧೬ |
| ೨.೧ ಬಸವಣ್ಣನವರ ವಚನಗಳು | | ೧೬ |
| ೨.೨ ಉರಿಲಿಂಗಪೆದ್ದಿಯ ವಚನಗಳು | | ೨೦ |
| ೩. ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು | – ಕುಮಾರವ್ಯಾಸ | ೨೩ |
| ೪. ಪಗೆಯಂ ಬಾಲಕನೆಂಬರೇ | – ಪುಲಿಗೆರೆ ಸೋಮನಾಥ | ೩೩ |
| ೫. ಜಾಲಿಯ ಮರದಂತೆ | – ಪುರಂದರದಾಸರು | ೩೯ |
| ೬. ಹಬ್ಬಲಿ ಅವರ ರಸಬಳ್ಳಿ | – ಜನಪದ | ೪೩ |
| ೭. ಬೆಳಗು ಜಾವ | – ದ.ರಾ. ಬೇಂದ್ರೆ | ೪೮ |
| ೮. ಮುಂಬೈ ಜಾತಕ | – ಜಿ.ಎಸ್. ಶಿವರುದ್ರಪ್ಪ | ೫೩ |
| ೯. ಶಿಲುಬೆ ಏರಿದ್ದಾನೆ | – ಕೆ.ಎಸ್. ನಿಸಾರ್ ಅಹಮದ್ | ೫೮ |
| ೧೦. ಒಂದು ಹೂ ಹೆಚ್ಚಿಗೆ ಇಡುತೀನಿ | – ಲಲಿತಾ ಸಿದ್ಧಬಸವಯ್ಯ | ೬೪ |
| ೧೧. ಹತ್ತಿ... ಚಿತ್ತ... ಮತ್ತು... | – ಟಿ. ಯಲ್ಲಪ್ಪ | ೭೦ |
| ೧೨. ಒಮ್ಮೆ ನಗುತ್ತೇವೆ | – ಸುಕನ್ಯಾ ಮಾರುತಿ | ೭೫ |


## ಗದ್ಯ ಭಾಗ :


| | | |
|---|---|---|
| ೧. ಮುಟ್ಟಿಸಿಕೊಂಡವನು | – ಪಿ. ಲಂಕೇಶ್ | ೮೩ |
| ೨. ವಾಲ್‌ಪರೈ : ಅಭಿವೃದ್ಧಿ ತಂದ ದುರಂತ | – ಕೃಪಾಕರ ಸೇನಾನಿ, ಕೆ. ಪುಟ್ಟಸ್ವಾಮಿ | ೯೧ |
| ೩. ಆಯ್ಕೆಯಿದೆ ನಮ್ಮ ಕೈಯಲ್ಲಿ | – ನೇಮಿಚಂದ್ರ | ೯೯ |
| ೪. ಕನ್ನಡವನ್ನು ಕಟ್ಟುವ ಕೆಲಸ | – ಹಾ.ಮಾ. ನಾಯಕ | ೧೦೬ |
| ೫. ಧಣಿಗಳ ಬೆಳ್ಳಿಲೋಟ | – ಎಚ್. ನಾಗವೇಣಿ | ೧೧೪ |
| ೬. ಬದುಕನ್ನು ಪ್ರೀತಿಸಿದ ಸಂತ | – ಎಚ್.ಆರ್. ರಾಮಕೃಷ್ಣರಾವ್ | ೧೨೪ |
| ೭. ತಿರುಳ್ಗನ್ನಡದ ಬೆಳ್ನುಡಿ | – ಮುದ್ದಣ | ೧೩೧ |
| ೮. ಹಳ್ಳಿಯ ಚಹಾ ಹೋಟೇಲುಗಳು | – ವೀರೇಂದ್ರ ಸಿಂಪಿ | ೧೩೮ |


## ದೀರ್ಘಗದ್ಯ :


| | | |
|---|---|---|
| ೧. ಕೃಷ್ಣೇಗೌಡನ ಆನೆ | – ಕೆ.ಪಿ. ಪೂರ್ಣಚಂದ್ರ ತೇಜಸ್ವಿ | ೧೪೯ |


## ಅನುಬಂಧಗಳು :


| | |
|---|---|
| ಮಾದರಿ ಪ್ರಶ್ನೆಪತ್ರಿಕೆ – ೧ | ೧೯೭ |
| ಮಾದರಿ ಪ್ರಶ್ನೆಪತ್ರಿಕೆ – ೨ | ೨೦೧ |

# ಪದ್ಯ ಭಾಗ

# ೧. ಕದಡಿದ ಸಲಿಲಂ ತಿಳಿವಂದದೆ

– *ನಾಗಚಂದ್ರ*

*ಜೈನ ಕವಿಗಳ ಕಾವ್ಯಚಿಂತನೆ ಕುತೂಹಲಕರವಾದದ್ದು. ಪ್ರಕೃತಿಯ ಎಲ್ಲ ವ್ಯಾಪಾರಗಳ ಹಿಂದೆ ಅಗೋಚರ ಶಕ್ತಿಯ ಕೈವಾಡವಿರುವುದನ್ನು ಜೈನಧಾರ್ಮಿಕ ಕೃತಿಗಳು ಚಿಂತಿಸಿವೆ. ನಾಗಚಂದ್ರನು ಚಿತ್ರಿಸಿರುವ ಉದಾತ್ತ ನಾಯಕನಾದ ರಾವಣನು ಕಟ್ಟುನಿಟ್ಟಿನಿಂದ ಪರಾಂಗನಾವಿರತಿ ವ್ರತಧಾರಿಯಾದವನು. ಖರದೂಷಣರ ನೆರವಿಗೆಂದು ಹೊರಟವನು ಸೀತೆಯ ರೂಪಕ್ಕೆ ಮಾರುಹೋಗಿ ತನ್ನ ವ್ಯಕ್ತಿತ್ವವನ್ನು ಅಧೋಗತಿಗೆ ಇಳಿಸಿಕೊಳ್ಳುವುದು ಕವಿಯ ಪ್ರಕಾರ ವಿಧಿಲಿಖಿತ. ದೃಢಚಿತ್ತ ವ್ಯಕ್ತಿಸಾಮರ್ಥ್ಯಕ್ಕೆ ಹೊರತಾದ ಅದೃಶ್ಯ ಶಕ್ತಿಯ ಕೈವಾಡ ರಾವಣನಂತಹ ಅಸಾಧಾರಣ ಪುರುಷನನ್ನೂ ಅವನತಿಯತ್ತ ನೂಕಿಬಿಡುತ್ತದೆ.*

*ಮಾನವತೆ ಮತ್ತು ದಾನವತೆಗಳೆರಡಕ್ಕೂ ಅವನ ಆಂತರ್ಯದಲ್ಲಿ ಜಾಗವಿದೆ. ಅವನತಿ ಮತ್ತು ಉನ್ನತಿಗಳೆರಡೂ ವ್ಯಕ್ತಿಯ ನಡೆಯನ್ನೇ ಅವಲಂಬಿಸಿರುತ್ತವೆ. ಉನ್ನತಿಯ ಶಿಖರದಲ್ಲಿರುವವನು ಅವನತಿಯಂಚಿಗೆ ಸರಿದುಬಿಡಬಲ್ಲ. ಅವನತಿಯಂಚಿನಲ್ಲಿರುವವನು ಉನ್ನತಿಗೇರಬಲ್ಲ. ಮರೆವಿನ ಪ್ರಕ್ರಿಯೆಯು ಸೀತಾಪಹರಣಕ್ಕೆ ಕಾರಣವಾದರೆ, ಅರಿವಿನ ಪ್ರಕ್ರಿಯೆಯು ಸೀತೆಯನ್ನು ರಾಘವನಿಗೊಪ್ಪಿಸುವ ಮನಃಪರಿವರ್ತನೆಗೆ ಕಾರಣವಾಗುತ್ತದೆ. ಸೀತೆಯನ್ನು ಅಪಹರಿಸಿದಾಗ ಕಲುಷಿತಗೊಂಡಿದ್ದ ರಾವಣನ ಮನವೆಂಬ ಕೊಳ, ಪಶ್ಚಾತ್ತಾಪಗೊಂಡಾಗ ತಿಳಿಯಾಗಿ ನಿರ್ಮಲಗೊಳ್ಳುವುದನ್ನೂ, ದುಷ್ಟತನ ಹುಟ್ಟಿನಿಂದ ಬರುವುದಿಲ್ಲ, ಕಡೆಯತನಕ ನಿಲ್ಲುವುದೂ ಇಲ್ಲ ಎಂಬುದನ್ನೂ, ನಾಗಚಂದ್ರ ಪ್ರಸ್ತುತ ಕಾವ್ಯಭಾಗದಲ್ಲಿ ಹೃದ್ಯವಾಗಿ ಚಿತ್ರಿಸಿದ್ದಾನೆ.*

ರಾವಣಂ ಧ್ರುವಮಂಡಲದಂತೆ ಚಲಿಯಿಸದೆ ಚಿತ್ತನಿರೋಧಂಗೆಯ್ದು ದಿವ್ಯಮಂತ್ರದಿಂ ವಿದ್ಯೆಯಂ ಸಾಧಿಸುವುದುಂ

ಪೊಸಗಾರ ಸಿಡಿಲ ಮಸಕಮ
ನಸಕಟಿದು ಕೃತಾಂತಜಿಹ್ವೆ ಪೊಡಕರಿಸುವವೋಲ್
ಬೆಸಸು ಬೆಸಸೆಂದು ಕರಮ
ರ್ವಿಸಿ ಸನ್ನಿದವಾಯ್ತು ವಿದ್ಯೆ ರಾವಣನಿದಿರೊಳ್ ॥ ೧ ॥

ಅಂತು ಸನ್ನಿಹಿತೆಯಾಗಿ ಚಕ್ರಧರನಪ್ಪ ಲಕ್ಷ್ಮೀಧರನುಂ ಚರಮದೇಹಧಾರಿಯಪ್ಪ ರಾಮಸ್ವಾಮಿಯುಮುಟಿಯಲುಟಿದರನುಟಿಯಲೀಯೆನೆನೆ ರಾವಣನುಟಿದವರಟಿವೆನಗೇವುದೆಂದು ವಿದ್ಯಾದೇವತೆಗೆ ಪೊಡೆವಟ್ಟು ಶಾಂತಿ ಜಿನಭವನಮಂ ಮೂಱು ಸೂೞ್ ಬಲಗೊಂಡು ಬರ್ಪನ್ನೆಗಮಂಗದಾದಿಗಳ್ ಪೊಱಮಟ್ಟು ಪೋಗಿ ತಮ್ಮ ಬೀಡಂ ಪುಗುವುದುಂ

ಇತ್ತ ದಶಾನನಂ ನಿಜವಧೂಜನಮಂ ಕೊಱಚಾಡಿ ಕಾಡಿದು
ದ್ವೃತ್ತವಿರೋಧಿ ಖೇಚರರನಿಕ್ಕುವ ಬಲ್ಮೆಳಿಸಿಂದೆ ಬಂದು ಪೊ
ಯ್ವೆತ್ತಿಭವೈರಿಯಂತೊದಱೆ ಕೆಂಗಱೆಮೂಡಿದ ಭೃಂಗಮಾಲೆ ನೀ
ಳ್ದತ್ತೆನೆ ನೋಡಿದಂ ಮಯತನೂಜೆಯ ಬಾಡಿದ ವಕ್ತ್ರಪದ್ಮಮಂ ॥ ೨ ॥

ಅಂತಾಕೆವೆರಸು ಸಮಸ್ತಾಂತಃಪುರಮಂ ನೋಡಿ ನಿಮಗಿನಿತು ಭಂಗಮಂ ಮಾಡಿದಂಗದಾದಿಗಳಂ ಭ್ರೂಭಂಗಮಾತ್ರದೊಳೆ ಸೆಱೆಗೆಯ್ದು ತಂದು ನಿಮ್ಮ ಮುಂದೆ ಬಹು ಪ್ರಕಾರದಿಂ ಪರಿಭವಿಸಿದಪ್ಪೆನೆಂದು ಸಂತೈಸಿ ಶಾಂತಿಜಿನಭವನದೊಳ್ ಮಹಾಪೂಜೆಯಂ ಮಾಡಿಸಿ ನಿರ್ವರ್ತಿತನಿಯಮನಮೃತಾಹಾರಮನಾರೋಗಿಸಿ ತದನಂತರಂ ಬಹುರೂಪಿಣೀ ವಿದ್ಯಾಪ್ರಭಾವಮಂ ಪರೀಕ್ಷಿಸಿ ಪ್ರಮೋದಮುದಿತಹೃದಯನಾಗಿ

ಸಮಧಿಕರಾರ್ ಜಗತ್ತ್ರಯದೊಳಿನ್ನೆನಗೆನ್ನೊಳಿದಿರ್ಚುವನ್ನರಾರ್
ಸಮರದೊಳೆಂದು ತನ್ನ ಭುಜದಂಡಮನೀಕ್ಷಿಸಿ ಜಾನಕೀಮುಖಾ
ಬ್ಜಮನವಲೋಕಿಸಲ್ ಕರಮೆ ಕಾತರನಾಗಿ ವಿಯಚ್ಚರಾಧಿಪಂ
ಪ್ರಮದವನಕ್ಕೆ ಬಂದನರಲಂಬುಗಳಿಲ್ಲದ ಕಾಮನೆಂಬಿನಂ ॥ ೩ ॥

ಅಂತು ಭೋಂಕನೆ ಬರ್ಪ ರಾವಣನ ಗಂಡಗಾಡಿಯಂ ಕೆಲದೊಳಿರ್ದ ಖಚರ ಕಾಂತೆಯರ್ ಸೀತಾದೇವಿಗೆ ತೋರ್ಪುದುಂ

ರಾವಣನ ರೂಪು ಸೀತಾ
ದೇವಿಗೆ ತೃಣಕಲ್ಪಮಾಯ್ತು ಪತಿಭಕ್ತಿಯೊಳಾ
ರೀ ವನಿತೆಯ ತೆಱದಿಂ ಸ
ದ್ಭಾವಮನೊಳಕೊಂಡ ಪುಣ್ಯವತಿಯರ್ ಸತಿಯರ್ ॥ ೪ ॥

ಏನಂ ಕೇಳ್ದಪೆನೋ ರಘು
ಸೂನುವ ಲಕ್ಷ್ಮಣನ ಪೊಲ್ಲವಾರ್ತೆಯನಿನ್ನೆಂ
ದಾ ನಳಿನಾನನೆ ಬರ್ಪ ದ
ಶಾನನನಂ ಕಂಡು ತಾಳ್ದಿದಳ್ ತಲ್ಲಣಮಂ ॥ ೫ ॥

ಅಂತು ತಲ್ಲಣಿಸುತಿರ್ದ ಮಾನಿನಿಯನೆಯ್ದೆವಂದು ದಶಾನನನಿಂತೆಂದಂ ಬಹುರೂಪಿಣೀವಿದ್ಯೆ ಸಾಧ್ಯಮಾದುದಿನ್ನಸಾಧ್ಯಮಪ್ಪ ಮಱುವಕ್ಕಮಿಲ್ಲ ನಿನ್ನ ನಚ್ಚಿನ ರಾಮನ ದೆಸೆಯಂ ಬಿಟ್ಟೆನಗೊಡಂಬಟ್ಟು ಸಾಮ್ರಾಜ್ಯಸುಖಮನನುಭವಿಸೆನೆ ಸೀತೆ ವಿಹ್ವಲೀಭೂತಚಿತ್ತೆಯಾಗಿ

ಕರುಣಿಸುವೊಡೆನಗೆ ದಶಕಂ
ಧರ ಧುರದೊಳ್ ರಘುತನೂಜನಾಯುಃಪ್ರಾಣಂ
ಬರೆಗಂ ಬಾರದಿರೆನುತುಂ
ಧರಿತ್ರಿಯೊಳ್ ಮೈಯನೊಕ್ಕು ಮೂರ್ಛೆಗೆ ಸಂದಳ್ ॥ ೬ ॥

ಜಾನಕಿ ಮೂರ್ಛಿತೆಯಾಗೆ ದ
ಶಾನನನನುಕಂಪೆ ಪುಟ್ಟಿ ಕರುಣಿಸಿ ತನ್ನಂ
ತಾನೆ ಪಳಿದುಳಿದು ಕರ್ಮಾ
ಧೀನಸಮುತ್ಪನ್ನದುರಘದುಷ್ಪರಿಣತಿಯಂ ॥ ೭ ॥

ಕದಡಿದ ಸಲಿಲಂ ತಿಳಿವಂ
ದದೆ ತನ್ನಿಂ ತಾನೆ ತಿಳಿದ ದಶವದನಂಗಾ
ದುದು ವೈರಾಗ್ಯಂ ಸೀತೆಯೊ
ಳುದಾತ್ತನೊಳ್ ಪುಟ್ಟದಲ್ತೆ ನೀಲೀರಾಗಂ ॥ ೮ ॥

ಪತ್ತುವಿಡದಿರ್ದನೇ ರವಿ
ಪತ್ತಿದ ಸಂಧ್ಯಾನುರಾಗಮಂ ಮನದಳಿಪಿಂ
ದೆತ್ತಾನುಂ ಪೊಲ್ಲೆನಿಪುದ
ನುತ್ತಮನಾಚರಿಸಿ ಪತ್ತುವಿಡದಿರ್ದಪನೇ ॥ ೯ ॥

ಅಂತು ಮನದೊಳೊಗೆದ ಕಾರುಣ್ಯರಸಮೆ ಸೀತೆಯೊಳಾದನುರಕ್ತತೆಯಂ ಕರ್ಚಿಕಳೆವುದುಂ ಸ್ವಭಾವಪರಿಣತಿಯೊಳ್ ನಿಂದು ಸ್ವಕೀಯಾಪ್ತಪುರುಷಪರಿಷಜ್ಜನಕ್ಕಿಂತೆಂದಂ

ಗುಣಪರಿಪಾಲನಾರ್ಥಮೆನಗಂ ಬಗೆದೋಜಿದಳಿಲ್ಲ ದಿವ್ಯಭೂ
ಷಣವಸನಾಂಗರಾಗಮುಮನೊಲ್ಲದೆ ಖೇಚರರಾಜ್ಯಲಕ್ಷ್ಮಿಯಂ
ತೃಣಸಮನಾಗೆ ಭಾವಿಸಿದಳೀ ಸತಿಯುಂ ಮೊದಲಾಗೆ ಪೌರುಷ
ಪ್ರಣಯಿಯೆನಿಂತಪೇಕ್ಷಿಸುವೆನೇ ಗುಣಹಾನಿಯನೆನ್ನ ಪಾಪದಿಂ ॥ ೧೦ ॥

ಇವರಂ ಪ್ರಾಣಪ್ರಿಯರಂ
ನೆವಮಿಲ್ಲದೆ ಕರ್ಮವಶಮೆ ನೆವಮೆನೆ ಕಂದ
ರ್ಪವಿಮೋಹದಿಂದಗಲ್ಚಿದೆ
ನವಿವೇಕಿಯೆನೆನ್ನ ಕುಲದ ಪೆಂಪಳಿವಿನೆಗಂ ॥ ೧೧ ॥

ರಾಮನಿನಗಲ್ಚಿ ತಂದಾ
ನೀ ಮಾನಿನಿಗಿನಿತು ದುಃಖಮಂ ಪುಟ್ಟಿಸಿದೆಂ
ಕಾಮವ್ಯಾಮೋಹದಿನಾ
ಶಾಮುಖಮಂ ಪುದಿಯೆ ದುರ್ಯಶಃಪಟಹರವಂ ॥ ೧೨ ॥

ಎನಗೆ ವಿಭೀಷಣಂ ಹಿತಮನಾದರದಿಂದಮೆ ಪೇೞೆ ಕೇಳದಾ
ತನನವಿನೀತನೆಂ ಗಜಱೆ ಗರ್ಜಿಸಿ ಬೈದನುಜಾತನಂ ವಿನೀ
ತನನಱೆಯಟ್ಟಿ ದುರ್ವ್ಯಸನಿಯೆಂ ಕಟಿದೆಂ ವ್ಯಸನಾಭಿಭೂತನಾ
ವನುಮನುರಾಗವೇಗದೆ ಹಿತಾಹಿತಚಿಂತೆಯನೇಕೆ ಮಾಡುವಂ ॥ ೧೩ ॥

ಜಸದಟಿವಂ ಪರಾಭವದ ಪತ್ತುಗೆಯಂ ದೊರೆವೆತ್ತ ತಮ್ಮ ಮಾ
ನಸಿಕೆಯ ಕೇಡನುನ್ನತಿಯ ಬನ್ನಮನನ್ಯಭವಾನುಬದ್ಧಮ
ಪ್ಪ ಸುಗತಿಯಂ ಸುಹೃಜ್ಜನದ ಬೇವಸಮಂ ಜನತಾಪವಾದಮಂ
ಬೆಸನಿಗಳಾರುಮೆತ್ತಲಱೆವರ್ ವಿಷಯಾಸವಮತ್ತಚೇತಸರ್ ॥ ೧೪ ॥

ಎಂದುದ್ವೇಗಪರನಾಗಿ ನುಡಿದಾತ್ಮಗತದೊಳಿಂತೆಂದಂ

ಇರದುಯ್ದೀಗಳೆ ಕೊಟ್ಟೊಡೆನ್ನ ಕಡುಪುಂ ಕಟ್ಟಾಯಮುಂ ಬೀರಮುಂ
ಬಿರುದುಂ ಬೀಸರಮಕ್ಕುಮೋಸರಿಸಿದಂತಾಗಿರ್ಕುಮಂತಾಗದಂ
ತಿರೆ ದೋರ್ಗರ್ವಮನಿರ್ವಲಂ ಪೊಗಟ್ವಿನಂ ಸೌಮಿತ್ರಿಯಂ ರಾಮನಂ
ವಿರಥರ್ಮಾಡಿ ರಣಾಗ್ರದೊಳ್ ಪಿಡಿದು ತಂದಾಂ ಕೊಟ್ಟಪೆಂ ಸೀತೆಯಂ ॥ ೧೫ ॥

ಎಂದು ನಿಶ್ಚಯಿಸಿ ನಿಜನಿವಾಸಕ್ಕೆ ವಂದಂ.

## ಕವಿ–ಕಾವ್ಯ ಪರಿಚಯ :

ಹಳಗನ್ನಡ ಸಾಹಿತ್ಯವು ಹತ್ತನೆಯ ಶತಮಾನದ ಪಂಪನಿಂದ ಶಿಖರಸ್ಥಿತಿಯನ್ನು ತಲುಪಿ ಅವನು ಹಾಕಿಕೊಟ್ಟ ಮಾರ್ಗದಲ್ಲಿಯೇ ಮುಂದುವರೆಯಿತು. ಈ ಪರಂಪರೆಯ ಕವಿಗಳಲ್ಲಿ ಪ್ರಮುಖನೆಂದರೆ ನಾಗಚಂದ್ರ. 'ಅಭಿನವ ಪಂಪ'ನೆಂದೇ ತನ್ನನ್ನು ಕರೆದುಕೊಂಡ ಈತ ಹನ್ನೊಂದನೆಯ ಶತಮಾನದ ಉತ್ತರಾರ್ಧ ಹಾಗೂ ಹನ್ನೆರಡನೆಯ ಶತಮಾನದ ಪೂರ್ವಾರ್ಧಗಳಲ್ಲಿ ಜೀವಿಸಿದ್ದನು. ವಿಜಯಪುರ (ಇಂದಿನ ಬಿಜಾಪುರ) ಈತನ ಸ್ಥಳ. ಅಲ್ಲಿನ ಮಲ್ಲಿಜಿನೇಂದ್ರ ಬಸದಿಯನ್ನು ತಾನು ಕಟ್ಟಿಸಿದ್ದಾಗಿ ಕವಿಯೇ ಹೇಳಿಕೊಂಡಿದ್ದಾನೆ. ಈತನ ಗುರುಗಳು ಬಾಲಚಂದ್ರ ಮೇಘಚಂದ್ರಯತಿಗಳು. ಚಾಲುಕ್ಯ ಚಕ್ರವರ್ತಿಯಾದ ನಾಲ್ವಡಿ ಸೋಮೇಶ್ವರನ

(ಕ್ರಿ.ಶ. ೧೧೦೦-೧೧೨೬) ಆಶ್ರಯದಲ್ಲಿ ನಾಗಚಂದ್ರ ಇದ್ದನೆಂದು ಕೆಲವು ವಿದ್ವಾಂಸರು ಹೇಳಿರುವರಾದರೂ ಅದಕ್ಕೆ ಆಧಾರಗಳಿಲ್ಲ.

'ಮಲ್ಲಿನಾಥ ಪುರಾಣ' ಮತ್ತು 'ರಾಮಚಂದ್ರಚರಿತ ಪುರಾಣ' ಎಂಬೆರಡು ಚಂಪೂಕಾವ್ಯಗಳನ್ನು ಈತ ರಚಿಸಿದ್ದಾನೆ. 'ಮಲ್ಲಿನಾಥ ಪುರಾಣ'ವು ೧೯ನೆಯ ತೀರ್ಥಂಕರನಾದ ಮಲ್ಲಿನಾಥನ ಕತೆಯನ್ನು ಒಳಗೊಂಡಿದೆ. 'ರಾಮಚಂದ್ರಚರಿತ ಪುರಾಣ'ವು 'ಪಂಪರಾಮಾಯಣ'ವೆಂಬ ಹೆಸರಿನಿಂದಲೇ ಪ್ರಸಿದ್ಧಿ ಪಡೆದಿದೆ. ಇದು ನಾಗಚಂದ್ರನಿಗೆ ಕೀರ್ತಿ ತಂದಿತ್ತ ಕಾವ್ಯ. ಭಾರತೀಕರ್ಣಪೂರ, ಕವಿತಾಮನೋಹರ, ಸಾಹಿತ್ಯ ವಿದ್ಯಾಧರ, ಚತುರಕವಿ, ಜನಸ್ಥಾನರತ್ನ ಪ್ರದೀಪ, ಸೂಕ್ತಿಮುಕ್ತಾವತಂಸ ಮುಂತಾದ ಬಿರುದುಗಳು ಈತನಿಗಿದ್ದವು.

## ಕಾವ್ಯಭಾಗವನ್ನು ಕುರಿತು :

'ಕದಡಿದ ಸಲಿಲಂ ತಿಳಿವಂದದೆ' ಎಂಬ ಪ್ರಸ್ತುತ ಕಾವ್ಯಭಾಗವು ರಾವಣನ ಮನಃಪರಿವರ್ತನೆಯನ್ನು ಕುರಿತ ಸಂದರ್ಭವನ್ನು ವರ್ಣಿಸುತ್ತದೆ. ಇದನ್ನು 'ರಾಮಚಂದ್ರಚರಿತ ಪುರಾಣ'ದ ಹದಿನಾಲ್ಕನೆಯ ಆಶ್ವಾಸದಿಂದ ಆಯ್ದುಕೊಳ್ಳಲಾಗಿದೆ. ಇದು ಲೌಕಿಕ ಕಾವ್ಯದಂತೆ ಭಾಸವಾದರೂ, ವಾಸ್ತವವಾಗಿ ಇದು ಕೂಡ ಧಾರ್ಮಿಕ ಪುರಾಣ. ಇದು ವಾಲ್ಮೀಕಿ ರಾಮಾಯಣ ಸಂಪ್ರದಾಯದ್ದಾಗಿರದೆ ಜೈನಧರ್ಮ ರಾಮಾಯಣ ಸಂಪ್ರದಾಯದ್ದಾಗಿದೆ. ಇಲ್ಲಿನ ರಾಮ ಲಕ್ಷ್ಮಣ ರಾವಣರು ಜೈನ ತ್ರಿಷಷ್ಠಿ ಶಲಾಕಾ ಪುರುಷರು. ರಾಮ-ಲಕ್ಷ್ಮಣರು ಬಲದೇವ-ವಾಸುದೇವರಾದರೆ, ರಾವಣ ಪ್ರತಿವಾಸುದೇವ. ವಾಲ್ಮೀಕಿ ರಾಮಾಯಣಕ್ಕೂ ಪಂಪ ರಾಮಾಯಣಕ್ಕೂ ಪ್ರಮುಖವಾದ ವ್ಯತ್ಯಾಸವಿರುವುದು ರಾವಣನ ಪಾತ್ರದಲ್ಲಿ.

ನಾಗಚಂದ್ರನ ರಾವಣ ಮೂಲತಃ ಸದ್ಗುಣೋಪೇತನಾದ ಮಹಾಪುರುಷ. ಅಂಥವನು ಕಾಲಕರ್ಮ ಸಂಯೋಗದಿಂದ ಅಲ್ಪದೌರ್ಬಲ್ಯವಶನಾಗಿ – ಆ ದೌರ್ಬಲ್ಯ ಆಕಸ್ಮಿಕವೆ ಹೊರತು ಸ್ವಭಾವ ಸಹಜವಾದುದಲ್ಲ – ವಿಧಿಸಂಕಲ್ಪ ಪ್ರೇರಿತನಾಗಿ ಪತನಾಭಿಮುಖನಾಗುತ್ತಾನೆ. ನಮ್ಮ ಸಹಾನುಭೂತಿ ಅನುಕಂಪೆಗಳಿಗೆ ಪಾತ್ರನಾಗುತ್ತಾನೆ. ಈ ರಾವಣ ಸತ್ಕುಲಪ್ರಸೂತ, ಜಿನಭಕ್ತ, ಅಹಿಂಸಾರತ, ಮಹಾ ಪರಾಕ್ರಮಿ. ವಾಸ್ತವವಾಗಿ ಆತ ಭಯಂಕರಾಕಾರದ ರಾಕ್ಷಸನಲ್ಲ. ಪರಾಂಗನಾವಿರತಿ ಎಂಬುದು ರಾವಣ ಕೈ ಹಿಡಿದ ವ್ರತ. ಅವನ ಅಂತಃಪುರದ ಹೆಣ್ಣುಗಳೆಲ್ಲ ಅವನಿಗೆ ಒಲಿದು ಬಂದವರೆ ವಿನಾ ಬಲಾತ್ಕಾರದಿಂದ ತಂದವರಲ್ಲ. ನಳಕೂಬರನ ಪತ್ನಿ ಉಪರಂಭೆಯೆಂಬುವಳು ತಾನಾಗಿಯೇ ಒಲಿದು ಬಂದಾಗ ಅವಳಿಗೆ ಸದುಪದೇಶ ನೀಡಿ ಕಳುಹಿಸಿದುದು ಅವನ ಉದಾತ್ತಚರಿತಕ್ಕೆ ನಿದರ್ಶನ. ಇಂತಹ ಮಹಾಸತ್ವನ ಬದುಕಿನಲ್ಲಿ ವಿಧಿ ಪ್ರವೇಶಿಸುತ್ತದೆ; ಅವನ ಅಧಃಪತನಕ್ಕೆ ಸಂಚು ಹೂಡುತ್ತದೆ. ಹಿಂದೆಂದೂ ಪರಸತಿಗೆ ಮನಸೋಲದವನು ಸೀತೆಗೆ ಮರುಳಾಗುತ್ತಾನೆ; ಅವಳನ್ನು ಅಪಹರಿಸುತ್ತಾನೆ; ಪ್ರಮದವನದಲ್ಲಿ ಸೆರೆಯಿಡುತ್ತಾನೆ. ಅವಳನ್ನು ಒಲಿಸಿಕೊಳ್ಳಲು ಮಾಡಿದ ಎಲ್ಲ ಪ್ರಯತ್ನಗಳೂ ವಿಫಲವಾಗುತ್ತವೆ.

ಮುಂದೆ ರಾಮಸೈನ್ಯ ಲಂಕೆಯನ್ನು ಮುತ್ತುತ್ತದೆ. ವಿಜಯಕ್ಕಾಗಿ ರಾವಣ ಬಹುರೂಪಿಣೀ ವಿದ್ಯೆಯನ್ನು ಸಾಧಿಸಲು ಜಿನಾಲಯದಲ್ಲಿ ಅನನ್ಯ ಭಕ್ತಿಯಿಂದ ಪೂಜಾಮಗ್ನನಾಗುತ್ತಾನೆ. ಆ ವಿದ್ಯೆಯು ಪ್ರತ್ಯಕ್ಷವಾಗಿ ರಾಮಲಕ್ಷ್ಮಣರನ್ನು ಮಾತ್ರ ತಾನು ಕೊಲ್ಲಲಾರೆನೆಂದು ಹೇಳುತ್ತದೆ. ಆದರೂ ರಾವಣ ಎದೆಗುಂದದೆ ಯುದ್ಧಸನ್ನದ್ಧನಾಗುತ್ತಾನೆ. ಅದಕ್ಕೆ ಮುನ್ನ ಸೀತೆಯನ್ನು ನೋಡಲು ಹೋಗುತ್ತಾನೆ. ತನಗೆ ಬಹುರೂಪಿಣೀ ವಿದ್ಯೆ ಸಿದ್ಧಿಸಿರುವುದಾಗಿಯೂ ಅದರ ಸಹಾಯದಿಂದ ರಾಮಲಕ್ಷ್ಮಣರನ್ನು ಕೊಲ್ಲುವುದಾಗಿಯೂ ತನಗವಳು ಒಲಿಯಬೇಕೆಂದೂ ಹೇಳುತ್ತಾನೆ. ಸೀತೆ ದುಃಖಭರದಿಂದ ಮೂರ್ಛೆ ಹೋಗುತ್ತಾಳೆ.

ಸೀತೆಯ ಮನೋದಾರ್ಢ್ಯವನ್ನೂ ದೀನಾವಸ್ಥೆಯನ್ನೂ ನೋಡಿದ ರಾವಣನ ಚಿತ್ತ ಪರಿವರ್ತನೆಗೊಳ್ಳುತ್ತದೆ; ಮಾಡಿದ ಅಕಾರ್ಯಕ್ಕಾಗಿ ತೀವ್ರ ಪಶ್ಚಾತ್ತಾಪದಗ್ಧವಾಗುತ್ತದೆ. ಸೀತೆಯ ಮೇಲಿನ ದುರ್ಮೋಹ ತೊಲಗಿ ವಿವೇಕೋದಯವಾಗುತ್ತದೆ. ವಿರಕ್ತಿ ಜನಿಸುತ್ತದೆ. ಅವನು ಆತ್ಮನಿಂದೆ ಮಾಡಿಕೊಂಡು ಪರಿಶುದ್ಧ ಹೃದಯನಾಗುತ್ತಾನೆ.

## ಶಬ್ದಾರ್ಥ :

**ವಚನ:** ಚಿತ್ತನಿರೋಧ–ಮನಸನ್ನು ನಿಗ್ರಹಿಸುವುದು.

೧. ಪೊಸಗಾರ್–ಮುಂಗಾರಿನ; ಮಸಕ–ಆವೇಶ, ಆರ್ಭಟಗಳು; ಅಸಕಟಿ–ಮೀರು; ಕೃತಾಂತ–ಯಮ; ಕೃತಾಂತಜಿಹ್ವೆ–ಯಮನ ನಾಲಗೆ; ಪೊಡಕರಿಸು–ಅಲ್ಲಾಡು, ಸ್ಫುರಿಸು, ಕಾಣು; ಬೆಸಸು–ಆಜ್ಞಾಪಿಸು; ಕರಂ – ಕೈಯನ್ನು; ಅರ್ವಿಸಿ–ವ್ಯಾಪಿಸಿ, ಹರಡಿ; ಸನ್ನಿದ–ಸಮೀಪ, ಪ್ರತ್ಯಕ್ಷ.

**ವಚನ:** ಸನ್ನಿಹಿತೆಯಾಗಿ–ಪ್ರತ್ಯಕ್ಷಗೊಂಡು; ಲಕ್ಷ್ಮೀಧರ–ಲಕ್ಷ್ಮಣ; ರಾಮಸ್ವಾಮಿ–ರಾಮ; ಚರಮದೇಹಧಾರಿ–ಕೊನೆಯ ಜನ್ಮದಲ್ಲಿರುವವ; ಉಟಿಯಲೀಯೆ–ಬದುಕಲು ಬಿಡೆನು; ಅಳಿವು–ನಾಶ; ಏವುದು–ಏತಕ್ಕೆ? ಏನು ಪ್ರಯೋಜನ? ಪೊಡೆವಟ್ಟು–ನಮಸ್ಕರಿಸಿ; ಮೂಱು ಸೂಟ್ – ಮೂರು ಭಾರಿ; ಪೊಱಮಟ್ಟು–ಹೊರಬಂದು; ಬೀಡು–ಪಾಳೆಯ; ಪುಗುವುದುಂ–ಪ್ರವೇಶಿಸಿದರು.

೨. ಆನನ–ಮುಖ; ನಿಜವಧೂಜನ–ಅಂತಃಪುರದ ಸ್ತ್ರೀಯರು; ಕೊಱಚಾಡು–ನಿಂದಿಸು, ಕೀಳುಮಾಡು; ಉದ್ವೃತ್ತ–ಸೊಕ್ಕಿದ, ಕೊಬ್ಬಿದ; ವಿರೋಧಿಖೇಚರ–ರಾವಣನ ವೈರಿಗಳಾದ ಅಂಗದ, ಹನುಮಂತ ಇತ್ಯಾದಿ ಖೇಚರರು; ಪೊಯ್ವೆತ್ತ–ಏಟುತಿಂದ; ಇಭವೈರಿ–ಸಿಂಹ; ಮುಳಿಸು–ಕೋಪ; ಕೆಂಗರಿ ಮೂಡಿದ ಭೃಂಗಮಾಲೆ–ಅತ್ತುಅತ್ತು ಕೆಂಪಾದ ಕಣ್ಣುಗಳನ್ನು ಹೊಂದಿದ; ಮಯತನೂಜೆ–ಮಯಪುತ್ರಿಯಾದ ಮಂಡೋದರಿ; ವಕ್ತ್ರ–ಮುಖ; ವಕ್ತ್ರಪದ್ಮ–ತಾವರೆಯಂತಹ ಮುಖ;

**ವಚನ:** ಭಂಗ–ತೊಂದರೆ; ಭ್ರೂಭಂಗ–ಹುಬ್ಬುಗಂಟಿಕ್ಕು, ಭ್ರೂಭ್ರಕುಟ; ಬಹುಪ್ರಕಾರದಿಂ–ಹಲವು ಬಗೆಯಿಂದ; ಪರಿಭವಿಸು–ತಿರಸ್ಕರಿಸು, ಅವಮಾನಿಸು, ಸೋಲಿಸು; ನಿರ್ವರ್ತಿತ–ಪೂರೈಸಿದ; ಆರೋಗಿಸು–ಸೇವಿಸು; ಬಹುರೂಪಿಣೀ–ಹಲವು ರೂಪಗಳನ್ನು ತಳೆಯಬಲ್ಲ ಒಂದು ವಿದ್ಯೆ, ವಿದ್ಯಾದೇವತೆ; ವಿದ್ಯಾಪ್ರಭಾವವಂ–ವಿದ್ಯೆಯ ಶಕ್ತಿಯನ್ನು; ಪ್ರಮೋದಮುದಿತಹೃದಯಿ–ಸಂತೋಷವನ್ನು ಹೃದಯದಲ್ಲಿ ತುಂಬಿಕೊಂಡವನು.

೩. ಸಮಧಿಕರಾರ್–ಸರಿಸಾಟಿ ಯಾರು? ಜಗತ್ತ್ರಯ–ಮೂರು ಲೋಕಗಳಲ್ಲಿ; ಇದಿರ್ಚು–ಎದುರಿಸು; ಸಮರ–ಯುದ್ಧ; ಭುಜದಂಡ–ನೀಳ ಬಾಹುಗಳು; ಜಾನಕಿ–ಸೀತೆ; ಮುಖಾಬ್ಜ–ತಾವರೆಯಂತಹ ಮುಖ; ಅವಲೋಕಿಸು–ಕಾಣಲು, ನೋಡಲು; ಕರಮೆ–ತುಂಬ; ಕಾತರ–ತವಕ; ವಿಯಚ್ಚರಾಧಿಪ–(ವಿಯಚ್ಚರ + ಅಧಿಪ) ರಾವಣ; ಪ್ರಮದವನ–ಸೀತೆಯನ್ನಿರಿಸಿದ್ದ ಉದ್ಯಾನವನ; ಅರಲಂಬು–ಪುಷ್ಪಬಾಣ; ಕಾಮನೆಂಬಿನಂ–ಮನ್ಮಥನಂತೆ.

**ವಚನ:** ಭೋಂಕನೆ–ಒಮ್ಮೆಲೆ, ಕೂಡಲೆ; ಬರ್ಪ–ಬರುತ್ತಿರುವ; ಗಂಡಗಾಡಿ–ಪೌರುಷದ ಬೆಡಗು; ಕೆಲ–ಪಕ್ಕ; ಖಚರ ಕಾಂತೆಯರ್–ರಾವಣನ ಪತ್ನಿಯರು.

೪. ತೃಣಕಲ್ಪ–ಹುಲ್ಲಿಗೆ ಸಮಾನ; ಸದ್ಭಾವ–ಒಳ್ಳೆಯ ಭಾವನೆ, ಅಭಿಪ್ರಾಯ; ಒಳಕೊಂಡಪುಣ್ಯವತಿ–ಸೀತೆ.

೫. ಪೊಲ್ಲವಾರ್ತೆ–ಕೆಟ್ಟಸುದ್ದಿ; ನಳಿನಾನನೆ–(ನಳಿನ+ಆನನೆ) ತಾವರೆಯಂತಹ ಮುಖವುಳ್ಳವಳು, ಸೀತೆ; ತಲ್ಲಣಿಮಂ–ತಲ್ಲಣವನ್ನು.

**ವಚನ:** ಮಾನಿನಿ–ಹೆಣ್ಣು, ಸೀತೆ; ಎಯ್ದೆವಂದು–ಸಮೀಪಿಸಿ; ಮಱುವಕ್ಕ–ಪ್ರತಿಪಕ್ಷ; ಒಡಂಬಟ್ಟು–ಒಪ್ಪಿಕೊಂಡು; ವಿಹ್ವಲ–ದು:ಖ; ಚಿತ್ತ–ಮನಸ್ಸು.

೬. ಧುರ–ಯುದ್ಧ; ಆಯುಃಪ್ರಾಣಂ–ಆಯುಷ್ಯ ಮತ್ತು ಪ್ರಾಣ; ಧರಿತ್ರಿ–ಭೂಮಿ; ಮೈಯನೊಕ್ಕು–ಮೈ ಚೆಲ್ಲಿ.

೭. ಅನುಕಂಪೆ–ಕರುಣೆ; ಕರ್ಮಾಧೀನ ಸಮುತ್ಪನ್ನ–ಕರ್ಮವಶದಿಂದ ಉತ್ಪನ್ನವಾಗುವ; ದುರಘ–ಕೆಟ್ಟಪಾಪ.

೮. ಕದಡಿದ–ಕಲಕಿಹೋದ; ಸಲಿಲ–ನೀರು; ತಿಳಿವಂದದೆ–ತಿಳಿಯಾಗುವಂತೆ; ಉದಾತ್ತರೊಳ್–ಶ್ರೇಷ್ಠರಾದವರಲ್ಲಿ; ಪುಟ್ಟದಲ್ತೆ–ಹುಟ್ಟುವುದಿಲ್ಲವೇ? ನೀಲೀರಾಗಂ–ಸ್ಥಿರವಾದ ಪ್ರೀತಿ ಅಥವಾ ಭಾವ (ನೀಲಿಬಣ್ಣದ ಆಕಾಶದಷ್ಟು ವಿಶಾಲವಾದ ಮನಸ್ಸು).

೯. ಪತ್ತುವಿಡು–ಕಳಚಿಕೊಳ್ಳು; ಪತ್ತು–ಅಂಟು, ಸೇರು; ಅಳಿಪು–ಮೋಹಕ್ಕೆ ಸಿಲುಕು; ಪೊಲ್ಲೆನಿಪುದು–ಕೆಟ್ಟದ್ದೆನಿಸುವುದು; ಉತ್ತಮನಾಚರಿಸಿ–ಒಳ್ಳೆಯದನ್ನು ಆಚರಿಸಿ.

**ವಚನ:** ಅನುರಕ್ತಿ–ಪ್ರೀತಿ; ಕರ್ಚಿಕಳೆ–ತೊಳೆದು ಹಾಕು; ಸ್ವಕೀಯ–ತನ್ನ; ಪರಿಷಜ್ಜನ–ಆಪ್ತವರ್ಗದವರಿಗೆ.

೧೦. ದಿವ್ಯಭೂಷಣವಸನಾಂಗರಾಗಮುಮನ್–ಶ್ರೇಷ್ಠವಾದ ಆಭರಣ, ವಸ್ತ್ರ, ದೇಹ ಪ್ರೀತಿ (ಮೈಕಾಂತಿ) ಗಳನ್ನು; ಒಲ್ಲದೆ–ಬಯಸದೆ; ಅಪೇಕ್ಷಿಸುವೆನೇ–ಬಯಸುವೆನೇ.

೧೧. ನೆವ–ನೆಪ; ಕಂದರ್ಪವಿಮೋಹ–ಕಾಮಾಸಕ್ತಿ; ಅಗಲ್ಚಿದೆ–ಅಗಲುವಂತೆ ಮಾಡಿದೆ; ಪೆಂಪು–ಹಿರಿಮೆ;

೧೨. ಆಶಾ–ಆಸೆ ; ದುರ್–ಕೆಟ್ಟ; ಪಟಹ–ಭೇರಿ; ರವ–ಶಬ್ದ.

೧೩. ಗಜಱೆ–ಬೆದರಿಸು; ಗರ್ಜಿಸಿ–ಹೆದರಿಸಿ; ಅನುಜಾತ–ಒಡಹುಟ್ಟಿದವನು;ಅವನೀತ–ಸೌಜನ್ಯವಂತ, ವಿಧೇಯಭಾವದ; ಅಱೆಯಟ್ಟು–ಹೊಡೆದೋಡಿಸು; ದುರ್ವ್ಯಸನಿ–ಕೆಟ್ಟಚಟಗಾರ; ಅಹಿತ–ಕೆಟ್ಟದ್ದು.

೧೪. ಜಸ–ಯಶಸ್ಸು; ಅಟೆವಂ–ನಾಶವು ; ಪರಾಭವ–ಸೋಲು; ಪತ್ತುಗೆ–ಸಂಪರ್ಕ; ಮಾನಸಿಕೆ–ಮನಃಸ್ಥಿತಿ; ಬನ್ನ–ಭಂಗ; ಬದ್ಧಮಪ್ಪ ಸುಗತಿ–ಸದ್ಗತಿಗೆ ಬದ್ಧವಾದ ನಡೆ; ಸುಹೃಜ್ಜನ–ಸಹೃದಯ ಜನ; ಬೇವಸಮಂ–ಚಿಂತೆ, ದು:ಖ; ಬೆಸನಿ–ಕೆಟ್ಟ ಚಟಗಳನ್ನುಳ್ಳವ; ವಿಷಯಾಸವ–ಇಂದ್ರಿಯಮೋಹವೆಂಬ ಮದ್ಯ; ಮತ್ತಸಚೇತಸರ್–ಮತ್ತರಾಗಿರುವ ಮನಸ್ಸಿನವರು.

**ವಚನ:** ಉದ್ವೇಗಪರ–ಆವೇಶದಿಂದ, ತಳಮಳದಿಂದ; ಆತ್ಮಗತದೊಳೆ–ಮನಸ್ಸಿನಲ್ಲೇ, ತನಗೆ ತಾನೆ ಹೇಳಿಕೊಳ್ಳುವುದು.

೧೫. ಉಯ್ದು–ಒಯ್ದು; ಕಡುಪುಂ–ಪರಾಕ್ರಮ; ಕಟ್ಟಾಯ–ಅಧಿಕ ಸಾಮರ್ಥ್ಯ; ಬೀಸರ–ವ್ಯರ್ಥ; ಓಸರಿಸು–ಓರೆಯಾಗಿಸು, ಬದಿಗೆ ಸರಿಸು; ದೋರ್ಗರ್ವ–ಬಾಹುಬಲದ ಹಮ್ಮು; ಇರ್ವಲಂ–ಎರಡೂ ಸೈನ್ಯ; ವಿರಥರ್–ರಥವನ್ನು ಕಳೆದುಕೊಂಡವರು.

## ಟಿಪ್ಪಣಿ :

### ೧. ಬಹುರೂಪಿಣೀ ವಿದ್ಯೆ:

ರಾವಣನು ಸಾಧಿಸಿ, ಒಲಿಸಿಕೊಂಡ ವಿದ್ಯೆಯಿದು. ಬಯಸಿದ ರೂಪವನ್ನು ಪಡೆಯಬಹುದಾದ ಒಂದು ಮಾಯಾ ವಿದ್ಯೆ, ಅಧಿದೇವತೆ. ರನ್ನನ ಅಜಿತಪುರಾಣದಲ್ಲಿಯೂ ಇದರ ಉಲ್ಲೇಖವಿದೆ. ಈ ವಿದ್ಯೆಯನ್ನು ಪಡೆದುಕೊಂಡ ರಾವಣನು ಮಾಯಾ ವಿಧಾನದಿಂದ ರಾಮ ಲಕ್ಷ್ಮಣರನ್ನು ವಂಚಿಸಿ ಯುದ್ಧದಲ್ಲಿ ಗೆಲ್ಲುವ ಸಂಚನ್ನು ರೂಪಿಸುತ್ತಾನೆ. ರಾಮ ಲಕ್ಷ್ಮಣರನ್ನು ಕೊಲ್ಲಲು ತನ್ನಿಂದ ಆಗದೆಂದು ಬಹುರೂಪಿಣೀ ತಿಳಿಸಿದರೂ ರಾವಣ ಈ ಸಾಹಸಕ್ಕೆ ಮುಂದಾಗುವುದು ಅವನ ಅಪಕ್ವ ನಿರ್ಧಾರವನ್ನು ಸೂಚಿಸುತ್ತದೆ. ಹಿಂದೆ ರಾವಣನು ಅವಲೋಕಿನಿ ವಿದ್ಯೆಯ ನೆರವು ಪಡೆದು ಸೀತೆಯನ್ನು ಅಪಹರಿಸಿರುತ್ತಾನೆ.

### ೨. ತ್ರಿಷಷ್ಠಿ ಶಲಾಕಾ ಪುರುಷರು:

ಚತುರ್ವಿಂಶತಿ (ಇಪ್ಪತ್ತನಾಲ್ಕು) ತೀರ್ಥಂಕರರು + ದ್ವಾದಶ ಚಕ್ರವರ್ತಿಗಳು + ಒಂಬತ್ತು ಜನ ಬಲದೇವರು (ವಿಜಯ, ಅಚಲ, ಸುಧರ್ಮ, ಸುಪ್ರಭ, ಸುದರ್ಶನ, ನಂದಿ, ನಂದಿಮಿತ್ರ, ರಾಮ, ಪದ್ಮ) + ಒಂಬತ್ತು ಜನ ವಾಸುದೇವರು (ತ್ರಿಪೃಷ್ಠ, ದ್ವಿಪೃಷ್ಠ, ಸ್ವಯಂಭೂ, ಪುರುಷೋತ್ತಮ, ಪುರುಷಸಿಂಹ, ಪುಂಡರೀಕ, ದತ್ತ, ಲಕ್ಷ್ಮಣ, ಕೃಷ್ಣ) + ಒಂಬತ್ತು ಜನ ಪ್ರತಿ ವಾಸುದೇವರು (ಅಶ್ವಗ್ರೀವ, ತಾರಕ, ಮೇರಕ, ಮಧುಕೈಟಭ, ನಿಶುಂಭ, ಬಲಿ, ಪ್ರಹರಣ, ರಾವಣ, ಜರಾಸಂಧ).

## ವಿಶೇಷ ವಿಚಾರ :

ಹೆಣ್ಣು ಮತ್ತು ಭೂಮಿಯನ್ನು ನಮ್ಮ ದೇಶದಲ್ಲಿ ಬೇರೆ ಬೇರೆ ಎಂದು ಭಾವಿಸಿಲ್ಲ. ಹೆಣ್ಣನ್ನು ಗೆಲ್ಲುವುದೆಂದರೆ ಭೂಮಿಯನ್ನು ಗೆದ್ದಂತೆಯೇ ಎಂಬ ದೃಷ್ಟಿ ಧೋರಣೆ ಬಹುತೇಕ ಕಥನಗಳಲ್ಲಿದೆ. 'ಖಚರ ಚಕ್ರವರ್ತಿ' ಎಂಬ ಬಿರುದಿಗೆ ಪಾತ್ರನಾಗಿದ್ದ ದಶಮುಖರಾವಣನು ನಳಕೂಬರನ ಪತ್ನಿ ಉಪರಂಭೆಯ ಮನಸ್ಸನ್ನು ಮೊದಲಿನಿಂದಲೂ ಗೆದ್ದಿದ್ದರಿಂದಲೇ 'ದುರ್ಲಂಘ್ಯಪುರ' ಕೈವಶವಾಗುತ್ತದೆ.

ಯಾವುದೇ ಹೆಣ್ಣು ಅಥವಾ ಭೂಮಿಯನ್ನು ಗೆಲ್ಲಬಲ್ಲೆನೆಂಬ ಪುರುಷ ಅಹಮಿಕೆಯಿಂದಾಗಿಯೇ ರಾವಣನು ಸೀತೆಯನ್ನು ಅಪಹರಿಸುತ್ತಾನೆ. ಆದರೆ, ವೈದೇಹಿಯು ರಾವಣನಿಗೆ ಒಲಿಯುವುದಿರಲಿ ಕಣ್ಣೆತ್ತಿಯೂ ನೋಡುವುದಿಲ್ಲ. ರಾವಣನ ಪ್ರಲೋಭನೆ ಮತ್ತು ಆಕರ್ಷಣೆಗಳಿಗೆ ಬಲಿಯಾಗುವುದಿಲ್ಲ. ಆಕೆ ರಾವಣನೊಡನೆ ಸಂಭಾಷಿಸುವಾಗೆಲ್ಲ ಹುಲ್ಲಿನ ದಳವನ್ನು ಎದುರಿಟ್ಟುಕೊಂಡು ಮಾತನಾಡುತ್ತಿದ್ದಳು. ಖಚರ ಚಕ್ರವರ್ತಿಯ ಸಾಮ್ರಾಜ್ಯಶಾಹಿ ವೈಭವ ತನಗೆ ತೃಣಸಮಾನವೆಂದು ತೋರಿಸುತ್ತಿದ್ದಳು.

'ಹುಲ್ಲಿನ ದಳವನ್ನು ಕೈಯ್ಯಲ್ಲಿ ಹಿಡಿದ ಸೀತೆ'ಯ ದಿಟ್ಟತನ ನನಗೆ ಸ್ಥಳೀಯ ಸಂಸ್ಕೃತಿಗಳ ಕೆಚ್ಚಿನ ಪ್ರತೀಕವಾಗಿ ಕಾಣುತ್ತಿದೆ. ಇಂದು ವಿಶ್ವವ್ಯಾಪಿಯಾಗುತ್ತಿರುವ ಖಚರ ಚಕ್ರವರ್ತಿಗಳೆಂದರೆ WASPಗಳೇ ಸರಿ! (WASP = ಕಣಜ ಮತ್ತು White Anglo Saxson Protestant). ಇಪ್ಪತ್ತೊಂದನೆಯ ಶತಮಾನದ ನವಸಾಮ್ರಾಜ್ಯಶಾಹಿಯ ವೈಭವ ಖಚರ ಚಕ್ರವರ್ತಿ ರಾವಣನಿದ್ದಂತೆ! ಸ್ಥಳೀಯ ಸಂಸ್ಕೃತಿಗಳು ಇಂದು ಉಪರಂಭೆಯ ಹಾದಿ ಹಿಡಿಯುತ್ತಿವೆ :

*ಪ್ರತಿವಿದ್ಯೆಯಂ, ಆಕೆ*
*ಕುಲಪತಿಯಂ ಪತಿಗಪ್ಪ ಹಾನಿಯಂ ಬಗೆಯದೆ*

*ದುರ್ಮತಿ ಕೊಟ್ಟಳ್*
*ಅದು ಎನ್ನರುಮಂ ಮತಿಗೆಡಿಪುದು*
*ಚೋದ್ಯಮಲ್ತು ಮದನೋನ್ಮಾದಂ.*

ಪ್ರಸ್ತುತ, ಭಾರತದ ರೀತಿ–ನೀತಿಗಳು 'ಮದನೋನ್ಮಾದ'ದಿಂದಲೇ ಕೂಡಿದೆ. 'ಖಚರ ಚಕ್ರವರ್ತಿ'ಯ ಎದುರಿನಲ್ಲಿ ಸೀತೆಯ ಹಾದಿ ಒಂದು ಆದರ್ಶವಾಗಿದೆ. ರಾವಣನ ಪಾಲಿಗೆ ಸ್ವತಃ ಸೀತೆಯೇ ದುರ್ಲಂಘ್ಯಪುರವಾಗಿದ್ದಳು; ಅವಳ ಮನಸ್ಸು ವಜ್ರಸಾಲ ಕೋಟೆಯಂತೆ ಅಭೇದ್ಯವಾಗಿತ್ತು. ಇಂಥ ಹದ ಮತ್ತು ಗತಿಮತಿ ಸ್ಥಳೀಯ ಸಂಸ್ಕೃತಿಗಳಿಗೆ ಬೇಡವೇನು?

– ಎ. ಚಂದ್ರಶೇಖರ ನಂಗಲಿ : ಹಸಿರು ಪಿರಮಿಡ್, ಪು. ೪೯–೫೦,
ಹೊನ್ನಾರು ಪ್ರಕಾಶನ, ತಿಪಟೂರು (೨೦೦೭)

## : ಅಭ್ಯಾಸ ಭಾಗ :

### ಅ) ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು:

೧. ಉಳಿದವರಳಿವೆನಗೇವುದು?
೨. ಸಮಧಿಕರಾರ್ ಜಗತ್ತ್ರಯದೊಳಿನ್ನೆನಗೆ?
೩. ಏನಂ ಕೇಳ್ದಪೆನೋ....ಪೊಲ್ಲವಾರ್ತೆಯನ್.
೪. ಅಸಾಧ್ಯಮಪ್ಪ ಮರುವಕ್ಕಮಿಲ್ಲ.
೫. ರಘುತನೂಜನಾಯುಃಪ್ರಾಣಂಬರೆಗಂ ಬಾರದಿರು.
೬. ಕದಡಿದ ಸಲಿಲಂ ತಿಳಿವಂದದೆ.
೭. ಉದಾತ್ತನೊಳ್ ಪುಟ್ಟದಲ್ತೆ ನೀಲೀರಾಗಂ.
೮. ಅಪೇಕ್ಷಿಸುವೆನೇ ಗುಣಹಾನಿಯನೆನ್ನ ಪಾಪದಿಂ.
೯. ಕಂದರ್ಪ ವಿಮೋಹದಿಂದಗಲ್ಚಿದೆ.
೧೦. ರಣಾಗ್ರದೊಳ್ ಪಿಡಿದು ತಂದಾಂ ಕೊಟ್ಟಪೆಂ.

### ಆ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):

೧. ರಾವಣನ ಎದುರು ಪ್ರತ್ಯಕ್ಷವಾದ ವಿದ್ಯಾದೇವತೆ ಯಾರು?
೨. ಯಾರನ್ನು ಕೊಲ್ಲುವುದಿಲ್ಲವೆಂದು ವಿದ್ಯಾದೇವತೆ ಹೇಳಿತು?
೩. ಮಯತನೂಜೆ ಎಂದರೆ ಯಾರು?
೪. ಸೀತೆಯನ್ನು ರಾವಣ ಎಲ್ಲಿರಿಸಿದ್ದನು?

೫. ರಾವಣನ ಆಗಮನವನ್ನು ಸೀತೆಗೆ ತೋರಿದವರು ಯಾರು?

೬. ಸೀತೆ ಯಾವುದನ್ನು ಹುಲ್ಲಿಗೆ ಸಮಾನವೆಂದು ಭಾವಿಸಿದಳು?

೭. ಸೀತೆ ರಾವಣನನ್ನು ಏನೆಂದು ಬೇಡಿಕೊಂಡಳು?

೮. ರಾವಣನಿಗೆ ಯಾರ ಬಗ್ಗೆ ವೈರಾಗ್ಯ ಮೂಡಿತು?

೯. ವಿಭೀಷಣ ಯಾರು?

೧೦. ಸೌಮಿತ್ರಿ ಎಂದರೆ ಯಾರು?

## ಇ) ಎರಡು ಅಂಕಗಳ ಪ್ರಶ್ನೆಗಳು (ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ):

೧. ಬಹುರೂಪಿಣಿ ವಿದ್ಯೆಯು ರಾವಣನಿಗೆ ಏನೆಂದು ಆಶ್ವಾಸನೆಯಿತ್ತಿತು?

೨. ರಾವಣ ತನ್ನ ಅಂತಃಪುರದ ಸ್ತ್ರೀಯರನ್ನು ಹೇಗೆ ಸಂತೈಸಿದನು?

೩. ಸೀತೆಯ ತಲ್ಲಣಕ್ಕೆ ಕಾರಣವೇನು?

೪. ರಾವಣನು ಸೊಕ್ಕಿನಿಂದ ಸೀತೆಯನ್ನುದ್ದೇಶಿಸಿ ಆಡಿದ ಮಾತುಗಳಾವುವು?

೫. ರಾವಣನಿಗೆ ಸೀತೆಯ ಬಗ್ಗೆ ವೈರಾಗ್ಯ ಮೂಡಿದ ಸಂದರ್ಭವನ್ನು ವಿವರಿಸಿ.

೬. ರಾವಣನು ತನ್ನ ಆಪ್ತರನ್ನು ಕುರಿತು ಏನೆಂದು ಹೇಳಿದನು?

೭. ಈಗಲೇ ಸೀತೆಯನ್ನು ರಾಮನಿಗೊಪ್ಪಿಸಲು ರಾವಣ ಬಯಸಲಿಲ್ಲವೇಕೆ?

೮. ರಾವಣನು ಅಂತಿಮವಾಗಿ ಯಾವ ನಿರ್ಧಾರಕ್ಕೆ ಬರುತ್ತಾನೆ?

## ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ) :

೧. ರಾವಣನು ಬಹುರೂಪಿಣೀ ವಿದ್ಯೆಯನ್ನು ಒಲಿಸಿಕೊಂಡ ಸಂದರ್ಭವನ್ನು ವಿವರವಾಗಿ ಬರೆಯಿರಿ.

೨. ಪ್ರಮದವನದಲ್ಲಿ ರಾವಣ-ಸೀತೆಯರ ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ.

೩. ರಾವಣನ ಮನಃಪರಿವರ್ತನೆಯ ಸಂದರ್ಭವನ್ನು ಕವಿ ಹೇಗೆ ಚಿತ್ರಿಸಿದ್ದಾನೆ? ವಿವರಿಸಿ.

೪. ರಾವಣನಲ್ಲಿ ಕಂಡುಬರುವ ಪಶ್ಚಾತ್ತಾಪವನ್ನು ಕವಿ ಹೇಗೆ ನಿರೂಪಿಸಿದ್ದಾನೆ?

೫. 'ಕದಡಿದ ಸಲಿಲಂ ತಿಳಿವಂದದೆ' ಕಾವ್ಯಭಾಗದಲ್ಲಿ ಕಂಡುಬರುವ ರಾವಣನ ವ್ಯಕ್ತಿತ್ವವನ್ನು ವಿಮರ್ಶಿಸಿ, ನಿಮ್ಮ ಮಾತುಗಳಲ್ಲಿ ಉತ್ತರಿಸಿರಿ.

## ಭಾಷಾಭ್ಯಾಸ :

೧. ಸೂಳ್, ಕರ, ರಾಗ, ಕಳೆ, ಬಗೆ, ದೊರೆ, ಗಂಡ – ಇವುಗಳ ನಾನಾರ್ಥ ಪದಗಳನ್ನು ಬರೆಯಿರಿ.

೨. ಜಸ, ಬನ್ನ, ಬೀರ, ಮೊಗ, ಪರಿಕಿಸು – ಇವುಗಳ ತತ್ಸಮ ರೂಪಗಳನ್ನು ತಿಳಿಸಿರಿ.

೩. ಪ್ರಮೋದ, ಸಲಿಲ, ವಕ್ತ್ರ, ನೀಲೀರಾಗ, ಪರಾಭವ, ಕಡುಪು – ಇವುಗಳಿಗೆ ಎರಡೆರಡು ಸಮಾನಾರ್ಥಕಗಳನ್ನು ಬರೆಯಿರಿ.

೪. ವಕ್ತ್ರಪದ್ಮ, ಮುಖಾಬ್ಜ, ನಳಿನಾನನೆ – ಈ ಮುಂತಾದ ಶಬ್ದಗಳು 'ತಾವರೆಯಂತಹ ಮುಖ' ಎಂಬರ್ಥವನ್ನು ನೀಡುತ್ತವೆ. ಈ ಪದಪ್ರಯೋಗಗಳನ್ನು ಗಮನಿಸಿ.

೫. ಪ್ರಸ್ತುತ ಕಾವ್ಯಭಾಗದಲ್ಲಿ ಬಂದಿರುವ ನಾಮಪದಗಳನ್ನು ಪಟ್ಟಿಮಾಡಿ.

೬. 'ಉದಾತ್ತನೊಳ್ ಪುಟ್ಟದಲ್ತೆ ನೀಲೀರಾಗಂ' – ಎಂಬ ಮಾತು ಪ್ರಸ್ತುತ ಕಾವ್ಯಭಾಗದಲ್ಲಿ ರಾವಣನನ್ನು ಉದ್ದೇಶಿಸಿರುವುದಾದರೂ ಯಾರಿಗೆ ಬೇಕಾದರೂ ಅನ್ವಯಿಸುವ ವಿಶಿಷ್ಟ ಮತ್ತು ಸಾಧಾರಣ ಅರ್ಥದಲ್ಲಿ ಬಳಕೆಯಾಗಿರುವುದನ್ನು ಗಮನಿಸಿ. ಇದನ್ನು ಅರ್ಥಾಂತರನ್ಯಾಸಾಲಂಕಾರವೆನ್ನುವರು. ವಿಮರ್ಶಕರು ನಾಗಚಂದ್ರನನ್ನು 'ಅರ್ಥಾಂತರ ನ್ಯಾಸಪ್ರಿಯ' ಎಂದೇ ಗುರುತಿಸಿರುವರು.

## ಚಟುವಟಿಕೆ :

೧. ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತಪಡುವ ಸಂದರ್ಭವೊಂದನ್ನು ಕುರಿತು ಲೇಖನ ರಚಿಸಿ.

೨. ವಿಧಿಲಿಖಿತ, ಹಣೆಬರಹ, ಪೂರ್ವಜನ್ಮದ ಪಾಪ – ಇಂತಹ ಕಲ್ಪನೆಗಳ ಬಗ್ಗೆ ನಿಮ್ಮ ಅನಿಸಿಕೆಗಳನ್ನು ಸ್ನೇಹಿತರೊಂದಿಗೆ ಚರ್ಚಿಸಿ.

೩. ನಾಗಚಂದ್ರನ ರಾವಣ ಮತ್ತು ವಾಲ್ಮೀಕಿಯ ರಾವಣರ ಪಾತ್ರಚಿತ್ರಣದಲ್ಲಿನ ವ್ಯತ್ಯಾಸಗಳನ್ನು ಅಧ್ಯಾಪಕರಿಂದ ಕೇಳಿ ತಿಳಿಯಿರಿ.

## ಆಕರ :

| | | |
|---|---|---|
| ಕೃತಿ | : | ಪಂಪರಾಮಾಯಣ ಸಂಗ್ರಹ |
| ಪ್ರಧಾನ ಸಂಪಾದಕ | : | ಕೆ.ವಿ. ಪುಟ್ಟಪ್ಪ |
| ಸಂಪಾದಕರು | : | ಆಸ್ಥಾನ ಮಹಾವಿದ್ವಾನ್ ತಿರುವಳ್ಳೂರ್ ಶ್ರೀನಿವಾಸ ರಾಘವಾಚಾರ್ ಮತ್ತು ಡಿ.ಎಲ್. ನರಸಿಂಹಾಚಾರ್ |
| ಪ್ರಕಾಶಕರು | : | ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು – ೫೭೦ ೦೦೨. |
| ವರ್ಷ | : | ೧೯೮೦. |

## ಹೆಚ್ಚಿನ ಓದಿಗೆ :

೧. ನಾಗಚಂದ್ರ : ಒಂದು ಅಧ್ಯಯನ
ಲೇಖಕರು : ಡಾ|| ವಿಜಯಾ ದಬ್ಬೆ
ಪ್ರಕಾಶಕರು : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨. ನಾಗಚಂದ್ರ : ಸಂ|| ವಿ. ಸೀತಾರಾಮಯ್ಯ
ಪ್ರಕಾಶಕರು : ಐಬಿಎಚ್ ಪ್ರಕಾಶನ, ಬೆಂಗಳೂರು.

೩. ಪಂಪರಾಮಾಯಣ : ಡಾ|| ಪಿ.ವಿ. ನಾರಾಯಣ
ಪ್ರಕಾಶಕರು : ವಸಂತ ಪ್ರಕಾಶನ, ಬೆಂಗಳೂರು.

## : ಸರಳ ಪಠ್ಯವಾಗಿಸಿಕೊಳ್ಳುವ ಬಗೆ :

ಹಳೆಗನ್ನಡ ಪದ್ಯಗಳು ವಿದ್ಯಾರ್ಥಿಗಳಿಗೆ ಕಬ್ಬಿಣದ ಕಡಲೆ ಎನಿಸಬಾರದು. ಮೂಲ ಪಠ್ಯವನ್ನು ಅರ್ಥಕ್ಕೆ ಲೋಪಬಾರದಂತೆ ಸರಳಪಠ್ಯವಾಗಿಸಿಕೊಂಡು ಕರಗತ ಮಾಡಿಕೊಳ್ಳುವ ಕ್ರಮವನ್ನು ತಿಳಿಸಿಕೊಡುವುದು ಅತ್ಯಂತ ಮಹತ್ವದ್ದು. ಮೂಲಪಠ್ಯ, ಸರಳಪಠ್ಯ ಮತ್ತು ಸರಳ ಗದ್ಯಾನುವಾದಗಳು ಹೊಸತಲೆಮಾರಿನಲ್ಲಿ ಹಳಗನ್ನಡದ ಬಗ್ಗೆ ಆಸಕ್ತಿಯನ್ನು ಕೆರಳಿಸಬಲ್ಲವು. ಈ ತ್ರಿವಿಧ ಪಠ್ಯದ ಚರ್ಚೆ ಇಂದು ಹೆಚ್ಚು ಪ್ರಸ್ತುತ. ಓದಲು ಅನುಕೂಲವಾಗುವಂತೆ ಸರಳಪಠ್ಯವನ್ನು ರೂಪಿಸಿಕೊಳ್ಳುವ ಮಾದರಿಗಾಗಿ ಕೆಲವು ಉದಾಹರಣೆಗಳು ಇಲ್ಲಿವೆ.

**ಮೂಲಪಠ್ಯ :**

ಪೊಸಗಾರ ಸಿಡಿಲ ಮಸಕಮ
ನಸಕಟಿದು ಕೃತಾಂತಜಿಹ್ವೆ ಪೊಡಕರಿಸುವವೋಲ್
ಬೆಸಸು ಬೆಸಸೆಂದು ಕರಮ
ರ್ಪಿಸಿ ಸನ್ನಿದವಾಯ್ತು ವಿದ್ಯೆ ರಾವಣನಿದಿರೊಳ್

**ಸರಳಪಠ್ಯ :**

ಪೊಸಗಾರ ಸಿಡಿಲ ಮಸಕಮಂ ಅಸಕಳಿದು।
ಕೃತಾಂತ ಜಿಹ್ವೆ ಪೊಡಕರಿಸುವವೋಲ್।
ಬೆಸಸು ಬೆಸಸು ಎಂದು ಕರಂ ಅರ್ಪಿಸಿ।
ಸನ್ನಿದವಾಯ್ತು ವಿದ್ಯೆ ರಾವಣನ ಇದಿರೊಳ್

**ಮೂಲಪಠ್ಯ :**

ಇತ್ತ ದಶಾನನಂ ನಿಜವಧೂಜನಮಂ ಕೊಱಚಾಡಿ ಕಾಡಿದು
ದ್ವೃತ್ತವಿರೋಧಿ ಖೇಚರರನಿಕ್ಕುವ ಬಲ್ಮೊಳಿಸಿಂದೆ ಬಂದು ಮೊ
ಯ್ವೆತ್ತಿಭವೈರಿಯಂತೊದಱೆ ಕೆಂಗಱೆಮೂಡಿದ ಭೃಂಗಮಾಲೆ ನೀ
ಳ್ದತ್ತೆನೆ ನೋಡಿದಂ ಮಯತನೂಜೆಯ ಬಾಡಿದ ವಕ್ತ್ರಪದ್ಮಮಂ

**ಸರಳಪಠ್ಯ :**

ಇತ್ತ ದಶಾನನಂ ನಿಜವಧೂಜನಮಂ ಕೊರಚಾಡಿ ಕಾಡಿದ ಉದ್ವೃತ್ತ ವಿರೋಧಿ ಖೇಚರರಂ
ಇಕ್ಕುವ ಬಲ್ ಮುಳಿಸಿಂದೆ ಬಂದು ಪೊಯ್ವೆತ್ತ ಇಭ ವೈರಿಯಂತೆ ಒದರಿ ಕೆಂಗರಿ
ಮೂಡಿದ ಭೃಂಗಮಾಲೆ ನೀಳ್ದತ್ತು ಎನೆ ನೋಡಿದಂ ಮಯತನೂಜೆಯ ಬಾಡಿದ ವಕ್ತ್ರಪದ್ಮಮಂ

**ಮೂಲಪಠ್ಯ :**

ಸಮಧಿಕರಾರ್ ಜಗತ್ತ್ರಯದೊಳಿನ್ನೆನಗೆನ್ನೊಳಿದಿರ್ಚುವನ್ನರಾರ್
ಸಮರದೊಳೆಂದು ತನ್ನ ಭುಜದಂಡಮನೀಕ್ಷಿಸಿ ಜಾನಕೀಮುಖಾ
ಬ್ಜಮನವಲೋಕಿಸಲ್ ಕರಮೆ ಕಾತರನಾಗಿ ವಿಯಚ್ಚರಾಧಿಪಂ
ಪ್ರಮದವನಕ್ಕೆ ಬಂದನರಲಂಬುಗಳಿಲ್ಲದ ಕಾಮನೆಂಬಿನಂ

**ಸರಳಪಠ್ಯ :**

ಸಮಧಿಕರಾರ್ ಜಗತ್ತ್ರಯದೊಳ್ ಇಂ ಎನಗೆ?
ಎನ್ನೊಳ್ ಇದಿರ್ಚುವನ್ನರ್ ಆರ್ ಸಮರದೊಳ್?
ಎಂದು ತನ್ನ ಭುಜದಂಡಮಂ ಈಕ್ಷಿಸಿ, ಜಾನಕೀ ಮುಖಾಬ್ಜಮಂ
ಅವಲೋಕಿಸಲ್ ಕರಮೆ ಕಾತರನಾಗಿ ವಿಯತ್ ಚರಾಧಿಪಂ ಪ್ರಮದವನಕ್ಕೆ ಬಂದಂ
ಅಲರಂಬುಗಳ್ ಇಲ್ಲದ ಕಾಮನೊ ಎಂಬಿನಂ

**'ಪಾಪಿಗುದ್ಧಾರಮಿಹುದು**
**ಸೃಷ್ಟಿಯ ಬೃಹತ್‌ವ್ಯೂಹ ರಚನೆಯೊಳ್'**

***– ಕುವೆಂಪು***

# ೨. ವಚನಗಳು

*ವಚನ ಸಾಹಿತ್ಯವು ತನ್ನ ಅನನ್ಯ ಸಾಮಾಜಿಕ ಕಳಕಳಿಯಿಂದಾಗಿ ವಿಶ್ವಸಾಹಿತ್ಯದಲ್ಲೇ ಪ್ರಮುಖವೆನಿಸಿರುವಂತಹದ್ದು. ಮನುಷ್ಯ ಕೇಂದ್ರಿತವಾದ ನೆಲೆಯಲ್ಲಿ ರಚಿತವಾಗಿರುವ ವಚನಗಳು ನಿಜವಾದ ಅರ್ಥದಲ್ಲಿ ಮಾನವನ ಸರ್ವತೋಮುಖ ವಿಕಸನದತ್ತ ತನ್ನ ಗಮನವನ್ನು ಕೇಂದ್ರೀಕರಿಸಿವೆ. ಸಮಾಜದಲ್ಲಿ ಬದುಕುವ ಜೀವಿ ನಡೆ–ನುಡಿಯಲ್ಲಿ ಹೊಂದಬೇಕಾಗಿರುವ ಸತ್ವವನ್ನು, ಅಂತರಂಗದ ಪರಿಶುದ್ಧತೆಯನ್ನು ವಚನಕಾರರು ಮತ್ತೆ ಮತ್ತೆ ಬಲವಾಗಿ ಪ್ರತಿಪಾದಿಸಿದ್ದಾರೆ. ಸತ್ಯಮುಖಿಯಾಗಿರುವ ಮತ್ತು ಢಾಂಬಿಕತೆಯಿಲ್ಲದ ಸರಳ ಅಧ್ಯಾತ್ಮದ ಪ್ರತಿಪಾದನೆ, ಮನುಷ್ಯನಲ್ಲಿ ಮನುಷ್ಯತ್ವವನ್ನು ಬೆಳೆಸುವ ಕಳಕಳಿ ವಚನಕಾರರಲ್ಲಿ ಗಾಢವಾಗಿರುವುದನ್ನು ಗಮನಿಸಿದರೆ ವಚನಗಳು ಸಾರ್ವಕಾಲಿಕವಾದ ಮಾನವೀಯ ಮೌಲ್ಯಗಳ ಪ್ರತಿಬಿಂಬವಾಗಿರುವುದನ್ನು ಮನಗಾಣಬಹುದಾಗಿದೆ.*

*ಪರಿಶುದ್ಧತೆಯು ವ್ಯಕ್ತಿಯ ಬದುಕನ್ನು ಮಾತ್ರವಲ್ಲದೆ ಒಟ್ಟಾರೆ ಸಮಾಜದ ಆರೋಗ್ಯಪೂರ್ಣ ಬದುಕನ್ನು ಪ್ರಭಾವಿಸಬಹುದೆಂಬ ಆಶಯಗಳನ್ನು ಇಲ್ಲಿನ ವಚನಗಳು ಒಳಗೊಂಡಿವೆ. ಬಸವಣ್ಣ ಮತ್ತು ಉರಿಲಿಂಗಪೆದ್ದಿಯವರ ವಚನಗಳು ಪ್ರತಿಪಾದಿಸಿರುವ ವಿಚಾರಗಳು ಸಾಮಾಜಿಕ ವಿಘಟನೆಗೆ ಪರಿಹಾರವನ್ನು ಸೂಚಿಸಬಲ್ಲ ಬೆಳಕಿನ ಕಿರಣಗಳೆನಿಸಿವೆ.*

## ೨.೧ ಬಸವಣ್ಣನವರ ವಚನಗಳು

ಮನಮನ ಬೆರೆಸಿದಲ್ಲಿ ತನು ಕರಗದಿದ್ದಡೆ,
ಸೋಂಕಿನಲ್ಲಿ ಪುಳಕಂಗಳು ಹೊರಹೊಮ್ಮದಿದ್ದಡೆ,
ಕಂಡಾಗಳಶ್ರುಜಲಂಗಳು ಸುರಿಯದಿದ್ದಡೆ,
ನುಡಿವಲ್ಲಿ ಗದ್ಗದಂಗಳು ಪೊಣ್ಮದಿದ್ದಡೆ;
ಕೂಡಲಸಂಗಮದೇವರ ಭಕ್ತಿಗಿದು ಚಿಹ್ನ?
ಎನ್ನಲ್ಲಿ ಇವಿಲ್ಲಾಗಿ, ಆನು ಡಂಬಕ ಕಾಣಿರೇ! ॥ ೧ ॥

ಅರ್ಥರೇಖೆಯಿದ್ದಲ್ಲಿ ಫಲವೇನು, ಆಯುಷ್ಯರೇಖೆ ಇಲ್ಲದನ್ನಕ್ಕರ
ಹಂದೆಯ ಕೈಯಲ್ಲಿ ಚಂದ್ರಾಯುಧವಿದ್ದಲ್ಲಿ ಫಲವೇನು?
ಅಂಧಕನ ಕೈಯಲ್ಲಿ ದರ್ಪಣವಿದ್ದು ಫಲವೇನು?
ಮರ್ಕಟನ ಕೈಯಲ್ಲಿ ಮಾಣಿಕವಿದ್ದು ಫಲವೇನು?
ನಮ್ಮ ಕೂಡಲಸಂಗನ ಶರಣರನರಿಯದವರ ಕೈಯಲ್ಲಿ
ಲಿಂಗವಿದ್ದು ಫಲವೇನು? ಶಿವಪಥವನರಿಯದನ್ನಕ್ಕ. ॥ ೨ ॥

ಒಲೆಹತ್ತಿ ಉರಿದಡೆ ನಿಲಬಹುದಲ್ಲದೆ
ಧರೆಹತ್ತಿ ಉರಿದಡೆ ನಿಲಲುಬಾರದು.
ಏರಿ ನೀರುಂಬಡೆ, ಬೇಲಿ ಕೆಯ್ಯ ಮೇವಡೆ,
ನಾರಿ ತನ್ನ ಮನೆಯಲ್ಲಿ ಕಳುವಡೆ,
ತಾಯ ಮೊಲೆವಾಲು ನಂಜಾಗಿ ಕೊಲುವಡೆ,
ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ! ॥ ೩ ॥

## ಕವಿ–ಕಾವ್ಯ ಪರಿಚಯ :

'ಭಕ್ತಿ ಭಂಡಾರಿ' ಎಂದು ಖ್ಯಾತರಾಗಿರುವ ಬಸವಣ್ಣನವರು ೧೨ನೇ ಶತಮಾನದ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಕ್ರಾಂತಿಯ ಕೇಂದ್ರ ಪುರುಷ. ಬಿಜಾಪುರ ಜಿಲ್ಲೆಯ ಬಾಗೇವಾಡಿಯಲ್ಲಿ ಮಾದಿರಾಜ, ಮಾದಾಂಬೆ ದಂಪತಿಗಳ ಮಗನಾಗಿ ಜನಿಸಿದರು. ಬಿಜ್ಜಳನ ಆಸ್ಥಾನದಲ್ಲಿ ಕೋಶಾಧಿಕಾರಿಯಾಗಿದ್ದರು. ಭಕ್ತಿ, ಜ್ಞಾನ, ಮಾನವೀಯತೆ ಹಾಗೂ ವೈರಾಗ್ಯ ಪರವಾದ ಬಸವಣ್ಣನವರ ವಚನಗಳು ಸುಲಭವಾದ, ಲಲಿತವಾದ, ಸರಳ ಭಾಷೆಯಿಂದ ಕೂಡಿವೆ. ಬಸವಣ್ಣನವರ ಮುಖ್ಯ ಕಾಳಜಿ ಸಮಾಜಸುಧಾರಣೆಯಾಗಿತ್ತು. ಜಾತಿ–ಕುಲ–ಲಿಂಗ ಭೇದಗಳಿಂದ ಹೊರತಾದ ಸಮಾಜ ನಿರ್ಮಿತಿ ಅವರ ಪ್ರಮುಖ ಗುರಿಯಾಗಿದ್ದಿತು. ಜನರ ಅಜ್ಞಾನ, ಕಂದಾಚಾರ, ಜಾತಿ ಸಂಕರಗಳನ್ನು ಕುರಿತು ಅವರ ವಚನಗಳು ಚಿಂತಿಸಿವೆ. ಉಪದೇಶ, ವಿಡಂಬನೆ ಮುಂತಾದ ಗುಣಗಳನ್ನು ಅಲ್ಲಿ ಕಾಣಬಹುದು. ಬಸವಣ್ಣ ಕಾಯಕದ ಮಹತ್ವವನ್ನು ಜಗತ್ತಿಗೆ ಸಾರಿದ ಮಹಾಪುರುಷ. ಮಹಾಮನೆಯಲ್ಲಿ ವಿವಿಧ ವರ್ಗದ ವಚನಕಾರರು ಒಂದೆಡೆ ಕಲೆಯುವಂತೆ ಮಾಡಿದ ಬಸವಣ್ಣನವರ ಸಂಘಟನಾ ಶಕ್ತಿಯ ಜೊತೆ ಜೊತೆಗೆ ಯುಗಪರಿವರ್ತನೆಗೆ ಶ್ರಮಿಸಿದ ಸಂಕಲ್ಪಬಲವೂ ಅತ್ಯಂತ ಗಮನಾರ್ಹ ವಾದುದು. ಅವರ ವಚನಗಳಲ್ಲಿ ಸಾರ್ವಕಾಲಿಕ ಗುಣವಿದೆ.

ಬಸವಣ್ಣನವರ ವಚನಗಳು ಮನುಷ್ಯನ ವ್ಯಕ್ತಿತ್ವ ವಿಕಸನಕ್ಕೆ ಪ್ರಾಮುಖ್ಯತೆಯನ್ನು ನೀಡಿವೆ. ಮನುಷ್ಯರ ನಡುವಿನಲ್ಲಿ ಹೊಮ್ಮಬೇಕಾದ ಮಾನವೀಯತೆ, ಹೃದಯ ವೈಶಾಲ್ಯತೆಯು ಗೈರು ಹಾಜರಾದಾಗ ನಮ್ಮ ಭಕ್ತಿಗೆ ಅರ್ಥವಿರುವುದಿಲ್ಲ. ಭಕ್ತನು ಶಿವಲಿಂಗದೊಂದಿಗೆ ಹೊಂದಬೇಕಾದ ಸಾಮರಸ್ಯವೂ ಈ ಬಗೆಯದೇ ಆಗಿದೆ.

ಮೂಲದಲ್ಲಿ ಸತ್ವವಿರದ ತೋರಿಕೆಯ ಭಕ್ತಿಯು ಮಂಗನ ಕೈಯೊಳಗಣ ಮಾಣಿಕ್ಯದಂತೆ, ಬೆಲೆ ತಿಳಿಯದೆ ಹೋದೀತು. ನಮ್ಮನ್ನು ಕಾಯಬೇಕಾದವರು ಕೊಲ್ಲಲು ಸಂಚುಹೂಡಿದಾಗ ಇನ್ಯಾರೂ ಕಾಯಲಾರ ರೆಂಬ ಸಂಗತಿಗಳನ್ನು ಇಲ್ಲಿನ ವಚನಗಳು ವಿವರಿಸಿವೆ. ಶಿವಪಥವನ್ನು ಅರಿಯುವ ಸಂಕಲ್ಪಬಲ ನಿಜಭಕ್ತನ ಮೂಲ ಗುಣವಾಗಬೇಕು ಎಂಬುದನ್ನು ಪ್ರತಿಪಾದಿಸುವಲ್ಲಿಯೂ ಎದ್ದು ಕಾಣುವ ಕಾವ್ಯಾತ್ಮಕ ಗುಣ ಬಸವಣ್ಣನವರ ಕವಿ ಹೃದಯವನ್ನು ಬಿಂಬಿಸಿದೆ. ಅಸ್ವಸ್ಥ ವ್ಯಕ್ತಿ ಮತ್ತು ಅಸ್ವಸ್ಥ ಸಮಾಜದ ಲಕ್ಷಣಗಳೆಂದರೆ ಆತ್ಮನಿಂದೆ–ಆತ್ಮಸ್ತುತಿ–ಆತ್ಮಹತ್ಯೆ–ಆತ್ಮರತಿ ಮುಂತಾದುವು. ಆತ್ಮವಿಮರ್ಶೆಯು ಆರೋಗ್ಯವಂತ ವ್ಯಕ್ತಿ ಮತ್ತು ಆರೋಗ್ಯವಂತ ಸಮಾಜಗಳ ಪ್ರತೀಕ. ಬಸವಣ್ಣನವರ ವಚನಗಳಲ್ಲಿರುವಷ್ಟು ಆತ್ಮವಿಮರ್ಶೆಯನ್ನು ಮತ್ತೊಬ್ಬ ವಚನಕಾರರಲ್ಲಿ ಕಾಣಲಾರೆವು. ಆತ್ಮವಿಮರ್ಶೆಯು ವ್ಯಕ್ತಿತ್ವದ ವರ್ಧಮಾನಕ್ಕೆ ಪ್ರೇರಕವಾಗುವ ಚೈತನ್ಯಶಕ್ತಿ.

## ಶಬ್ದಾರ್ಥ :

ತನು–ದೇಹ; ಸೋಂಕು–ಮುಟ್ಟು, ತಗಲು, ಸ್ಪರ್ಶಿಸು; ಪುಳಕ–ರೋಮಾಂಚನ; ಅಶ್ರುಜಲ–ಕಣ್ಣೀರು; ಗದ್ಗದ–ಗಂಟಲು ತೇವಗೊಳ್ಳುವುದು; ಪೊಣ್ಮು–ಹೊಮ್ಮು; ಚಿಹ್ನೆ–ಸಂಕೇತ; ಡಂಬಕ–ದೃಢಭಕ್ತಿಯಿಲ್ಲದವನು; ಅರ್ಥ–ಹಣ, ಸಂಪತ್ತು; ಫಲ–ಪ್ರಯೋಜನ; ಅಂಧಕ–ಕುರುಡ; ದರ್ಪಣ–ಕನ್ನಡಿ; ಮರ್ಕಟ–ಮಂಗ; ಮಾಣಿಕ–ಮಾಣಿಕ್ಯ, ನವರತ್ನಗಳಲ್ಲಿ ಒಂದು; ಶಿವಪಥ–ಲಿಂಗಾಚಾರದ ಮಾರ್ಗ; ಅರಿಯದನ್ನಕ್ಕ–ಅರಿತುಕೊಳ್ಳುವವರೆಗೆ; ಧರೆ–ಭೂಮಿ; ಉಂಬು–ತಿನ್ನು, ಸೇವಿಸು; ಕೆಯ್ಯ–ಬೆಳೆ; ನಾರಿ–ಹೆಣ್ಣು, ಗೃಹಿಣಿ; ನಂಜು–ವಿಷ.

## : ಅಭ್ಯಾಸ ಭಾಗ :

### ಅ) ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು:

೧. ಅರ್ಥರೇಖೆಯಿದ್ದಲ್ಲಿ ಫಲವೇನು, ಆಯುಷ್ಯರೇಖೆ ಇಲ್ಲದನ್ನಕ್ಕ.

೨. ಮರ್ಕಟನ ಕೈಯಲ್ಲಿ ಮಾಣಿಕ್ಯವಿದ್ದು ಫಲವೇನು?

೩. ಧರೆಹತ್ತಿ ಉರಿದಡೆ ನಿಲಲುಬಾರದು.

೪. ತಾಯ ಮೊಲೆವಾಲು ನಂಜಾಗಿ ಕೊಲುವಡೆ.

### ಆ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):

೧. ತನು ಯಾವಾಗ ಕರಗಬೇಕು?

೨. ಯಾರ ಕೈಯಲ್ಲಿ ದರ್ಪಣವಿದ್ದು ಫಲವಿಲ್ಲ?

೩. ಶಿವಪಥವನ್ನು ಅರಿಯದಿದ್ದರೇನಾಗುವುದು?

೪. ಬಸವಣ್ಣನವರ ವಚನಗಳ ಅಂಕಿತ ಯಾವುದು?

### ಇ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):

೧. ಯಾವ ಗುಣಗಳಿಲ್ಲದವನು ಡಾಂಭಿಕನೆನಿಸುತ್ತಾನೆ?

೨. ಶಿವಪಥವನ್ನರಿಯದವನನ್ನು ಹೇಗೆ ವಿಡಂಬಿಸಲಾಗಿದೆ?

೩. ಯಾವಾಗ ನಿಲಬಹುದು? ಯಾವಾಗ ನಿಲಲಾಗದು?

### ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ):

೧. ಬಸವಣ್ಣನವರ ಪ್ರಕಾರ ನೈಜಭಕ್ತಿಯ ಲಕ್ಷಣಗಳಾವುವು?

೨. ಶಿವಪಥವನ್ನರಿಯದವನ ಭಕ್ತಿ ನಿರರ್ಥಕವೆಂಬುದನ್ನು ಬಸವಣ್ಣ ಯಾವ ಯಾವ ಉದಾಹರಣೆಗಳ ಮೂಲಕ ವಿವರಿಸಿದ್ದಾರೆ?

೩. ರಕ್ಷಿಸಬೇಕಾದವರೆ ಭಕ್ಷಕರಾದರೆ ಒದಗುವ ವಿಘಟನೆಯನ್ನು ಬಸವಣ್ಣನವರು ಹೇಗೆ ಚಿತ್ರಿಸಿದ್ದಾರೆ?

## ಭಾಷಾಭ್ಯಾಸ :

೧. ಕರಗದಿದ್ದಡೆ, ಹೊಮ್ಮದಿದ್ದಡೆ, ಸುರಿಯದಿದ್ದಡೆ, ಪೊಣ್ಮದಿದ್ದಡೆ – ಈ ಬಗೆಯ ಪ್ರಯೋಗಗಳನ್ನು ಗಮನಿಸಿರಿ. ಇವುಗಳು ಬಳಕೆಯಾಗುವ ರೂಪಗಳನ್ನು ಚರ್ಚಿಸಿ.

೨. ಅರ್ಥರೇಖೆಯಿದ್ದು, ಚಂದ್ರಾಯುಧವಿದ್ದು, ದರ್ಪಣವಿದ್ದು, ಮಾಣಿಕವಿದ್ದು, ಲಿಂಗವಿದ್ದು – ಈ ಪದಗಳನ್ನು ಬಿಡಿಸಿ ಬರೆಯಿರಿ. ಇದ್ದು ಇಲ್ಲದಂತಾಗುವ ವೈರುಧ್ಯದ ಸ್ಥಿತಿಯು ವಚನದಲ್ಲಿ ಬಳಕೆಯಾಗಿರುವ ಬಗೆಯನ್ನು ಗಮನಿಸಿ.

೩. ರಕ್ಷಕರೇ ಭಕ್ಷಕರಾದಾಗ, ಬೇಲಿಯೇ ಎದ್ದು ಹೊಲ ಮೇಯ್ದಂತೆ – ಈ ಬಗೆಯ ಗಾದೆ ಮಾತನ್ನು ಬಳಸದೆಯೇ ಅದೇ ಅರ್ಥವನ್ನು ಬಸವಣ್ಣನವರು ವಚನಗಳಲ್ಲಿ ಬಳಸಿರುವುದನ್ನು ಗಮನಿಸಿರಿ.

೪. ಅರ್ಥ, ಹತ್ತಿ, ಏರಿ – ಇವುಗಳ ನಾನಾರ್ಥಗಳನ್ನು ಬರೆಯಿರಿ.

೫. ಡಂಬಕ, ಹಂದೆ, ಮರ್ಕಟ, ನಂಜು – ಇವುಗಳ ಸಮಾನಾರ್ಥಕಗಳನ್ನು ಬರೆಯಿರಿ.

# ೨.೨ ಉರಿಲಿಂಗಪೆದ್ದಿಯ ವಚನಗಳು

ಸೂರ್ಯನಿಲ್ಲದೆ ಹಗಲುಂಟೆ ಅಯ್ಯಾ?
ದೀಪ ಇಲ್ಲದೆ ಬೆಳಕುಂಟೆ ಅಯ್ಯಾ?
ಪುಷ್ಪವಿಲ್ಲದೆ ಪರಿಮಳವನರಿಯಬಹುದೆ ಅಯ್ಯಾ?
ಸಕಲವಿಲ್ಲದೆ ನಿಷ್ಕಲವ ಕಾಣಬಾರದು.
ಮಹಾಘನ ನಿರಾಳ ಪರಶಿವನಿಂದ ಲಿಂಗವು ತೋರಿತ್ತು,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ॥ ॥ ೧ ॥

ಪರುಷದ ಗೃಹದೊಳಗಿದ್ದು, ತಿರಿವನೆ ಮನೆಮನೆಯ?
ತೊರೆಯೊಳಗಿದ್ದವನು, ತೃಷೆಯಾಗಲರಸುವನೆ ಕೆರೆಯುದಕವ?
ಮಂಗಳಲಿಂಗ ಅಂಗದ ಮೇಲೆ ಇದ್ದು,
ಅನ್ಯಲಿಂಗಗಳ ನೆನೆವನೆ ನಿಮ್ಮ ಭಕ್ತನು
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ? ॥ ೨ ॥

ಲಘು ಗುರುವಪ್ಪನೆ? ಗುರುಲಘುವಪ್ಪನೆ? ಆಗದಾಗದು.
ಗುರುಗುರುವೆ, ಲಘುಲಘುವೆ.
ಶ್ರೀ ಗುರು ಲಘುವರ್ತನದಲ್ಲಿ ವರ್ತಿಸಿದಡೆ ಆಗದು ಆಚಾರ.
ಶ್ರೀ ಗುರು ಲಿಂಗ ಜಂಗಮ ಪ್ರಸಾದವನು
ತಾನೆ ಲಘು ಮಾಡಿ ಲಘುವಾದನಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. ॥ ೩ ॥

## ಕವಿ–ಕಾವ್ಯ ಪರಿಚಯ:

"ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ" ಎಂಬ ಅಂಕಿತದಲ್ಲಿ ಉರಿಲಿಂಗಪೆದ್ದಿಯ ೩೬೬ ವಚನಗಳು ಇದುವರೆಗೂ ದೊರೆತಿವೆ. ಈತ ಗೋದಾವರಿ ತೀರದ ಹಳ್ಳಿಯೊಂದರಲ್ಲಿ ವಾಸವಿದ್ದ. ತಂದೆ–ತಾಯಿಗಳು ಇವನಿಗೆ ಪೆದ್ದಣ್ಣ ಎಂಬ ಹೆಸರಿಟ್ಟರು. ಕಳ್ಳತನ ಮಾಡಿಕೊಂಡು ಜೀವಿಸುತ್ತಿದ್ದ ಈತ ಒಮ್ಮೆ ಉರಿಲಿಂಗದೇವರ ಮನೆಗೆ ಕನ್ನ ಹಾಕಿದ. ಆಗ ಉರಿಲಿಂಗದೇವರು ನಂದವಾಡ ಗ್ರಾಮದ ಸೂರಯ್ಯನಿಗೆ ದೀಕ್ಷೆ ನೀಡುತ್ತಿದ್ದರು. ಇದನ್ನು ಕಂಡು ಮನಃಪರಿವರ್ತನೆ ಹೊಂದಿದ ಪೆದ್ದಣ್ಣ ದಿನವೂ ಉರಿಲಿಂಗಪೆದ್ದಿಗಳ ಮಠಕ್ಕೆ ಒಂದು ಹೊರೆ ಸೌದೆ ತಂದು ಹಾಕುತ್ತಿದ್ದ. ಕೊನೆಗೊಂದು ದಿನ ಗುರುವನ್ನು ಕಾಡಿ ಬೇಡಿ ದೀಕ್ಷೆಯನ್ನು ಪಡೆದು, 'ಉರಿಲಿಂಗಪೆದ್ದಿ' ಎಂಬ ಹೆಸರನ್ನು ಧರಿಸಿ ಗುರುವಿಗೆ ತಕ್ಕ ಶಿಷ್ಯನಾದನು. ಗುರುವಿನ ನಂತರ ಸಕಲಶಾಸ್ತ್ರ ಪಾರಂಗತನಾಗಿ ತಾನೇ ಆ ಪೀಠಕ್ಕೆ ಒಡೆಯನಾದ ಮಹಾನುಭವಿ ಈತ.

ಚಿಂತೆಯಿಲ್ಲದ ಅತಿಶ್ರೇಷ್ಠವಾದ ಮನಸ್ಥಿತಿಯನ್ನು ಶಿವಧ್ಯಾನದಿಂದ ಸಾಧಿಸಬಹುದೆಂಬುದನ್ನು ಮಂಗಳಕರವಾದ ಅಂಗದ ಸಾಂಗತ್ಯವುಳ್ಳವನೆಂದೂ ಬೇರೆಯವರ ಬಗ್ಗೆ ಚಿಂತಿಸನೆಂಬುದನ್ನೂ, ಗುರುವಿನ ನಡತೆಯು ಘನತೆಯುಳ್ಳದ್ದಾಗಿರಬೇಕೆಂಬುದನ್ನೂ ಉರಿಲಿಂಗಪೆದ್ದಿಯ ವಚನಗಳು ನಿರೂಪಿಸುತ್ತವೆ. ತನ್ನ ವಿಚಾರಗಳನ್ನು ಮಂಡಿಸುವಾಗ ಬಳಸುವ ಹೋಲಿಕೆಗಳ ಔಚಿತ್ಯವನ್ನು ವಚನಬಂಧುರದಲ್ಲಿ ಹಿಡಿದಿಡುವ ಕುಶಲತೆ, ಕಲೆಗಾರಿಕೆಗಳಿಂದಾಗಿ ಈ ವಚನಗಳು ಗಮನಾರ್ಹವೆನಿಸಿವೆ.

## ಶಬ್ದಾರ್ಥ :

ಸಕಲ–ಸಮಗ್ರವಾದುದು, ಪರಿಪೂರ್ಣವುಳ್ಳದ್ದು (ಸಕಲತತ್ತ್ವವೆಂದರೆ ಪರಶಿವನ ಸ್ವರೂಪವೇ ಆಗಿದೆ. ಸಕಲ–ನಿಷ್ಕಲವೆಂಬವು ವಚನಕಾರರ ಆಕಾರ ಮತ್ತು ನಿರಾಕಾರ ಸ್ವರೂಪವನ್ನು ಕುರಿತ ಜಿಜ್ಞಾಸೆಯಾಗಿದೆ); ನಿಷ್ಕಲ–ನಿರಾಕಾರವಾದ, ಅಖಂಡವಾದ, ಕಲಾರಹಿತವಾದ (ನಿರಾಕಾರ ಸ್ವರೂಪವಾದ ಪರವಸ್ತು, ಶಿವಲಿಂಗ); ಮಹಾಘನ–ಅತಿಶ್ರೇಷ್ಠವಾದ, ಉನ್ನತವಾದ; ನಿರಾಳ–ಚಿಂತೆಯಿಲ್ಲದ; ಪರುಷ–ಮುಟ್ಟಿದ್ದನ್ನು ಚಿನ್ನವಾಗಿಸುವ (ಮಣಿ) ಶಿಲೆ; ಗೃಹ–ಮನೆ; ತಿರಿ–ಬೇಡು; ತೊರೆ–ನದಿ; ತೃಷೆ–ಬಾಯಾರಿಕೆ; ಉದಕ–ನೀರು; ಲಘು–ಸಣ್ಣದು; ಗುರು–ದೊಡ್ಡದು, ಬೋಧಕ.

## ಟಿಪ್ಪಣಿ:

೧. **ನಿಷ್ಕಲ:** ಕಲಾರಹಿತನಾದ ಪರಶಿವ. ಸೃಷ್ಟಿಪೂರ್ವದಲ್ಲಿ ಪರಶಿವನು ಕಲಾಶಕ್ತಿರಹಿತನಾಗಿರುತ್ತಾನೆ. ಸೃಷ್ಟಿಸಬೇಕೆಂಬ ಇಚ್ಛೆ ಅವನಲ್ಲಿ ಉಂಟಾದಾಗಲೂ ಶಕ್ತಿ (ಕಲೆ) ಇನ್ನೂ ಅವ್ಯಕ್ತ ಸ್ಥಿತಿಯಲ್ಲೇ ಇರುತ್ತದೆ. ಶಕ್ತಿಯ ಅಂತಹ ಸ್ಥಿತಿಯನ್ನು ಚಿತ್ತು (ಚಿತ್‌ಶಕ್ತಿ) ಅಥವಾ ನೆನಹು ಎಂದು ಕರೆಯಲಾಗಿದೆ. ಶಕ್ತಿಯು ಈ ಸ್ಥಿತಿಯಲ್ಲಿದ್ದಾಗ ಅದನ್ನೊಳಗೊಂಡ ಶಿವನು ನಿಷ್ಕಲ ಲಿಂಗನೆನಿಸಿಕೊಳ್ಳುತ್ತಾನೆ. ಆದರೆ ನವಿಲಿನ ಮೊಟ್ಟೆಯಲ್ಲಿ ಹೇಗೆ ಮುಂದೆ ಹುಟ್ಟಲಿರುವ ನವಿಲಿನ ವಿವಿಧ ವರ್ಣಗಳು ಇತ್ಯಾದಿಗಳಿರುತ್ತವೋ ಹಾಗೆಯೇ ನಿಷ್ಕಲ ತತ್ತ್ವದಲ್ಲಿ ಮುಂದೆ ಆಗುವ ವೈವಿಧ್ಯಮಯ ಸೃಷ್ಟಿಯೆಲ್ಲವೂ ಅವ್ಯಕ್ತವಾಗಿ ಅಡಗಿರುತ್ತವೆ.

೨. **ಸಕಲ:** ಕಲಾಸಹಿತನಾದ ಪರಶಿವ. ಸೃಷ್ಟಿಯಾದಾಗ ಪರಶಿವನ ಶಕ್ತಿಯು ವ್ಯಕ್ತವಾಗುತ್ತದೆ. ಆಗ ಶಿವನು ಸಕಲನೆನಿಸಿಕೊಳ್ಳುತ್ತಾನೆ.

*(ಸೂಚನೆ: ಮೇಲಿನ ವಿವರಗಳನ್ನು ವಚನ ಪಾರಿಭಾಷಿಕ ಕೋಶದಿಂದ ಓದುಗರ ಮಾಹಿತಿಗಾಗಿ ಒದಗಿಸಲಾಗಿದೆ.)*

## : ಅಭ್ಯಾಸ ಭಾಗ :

### ಅ) ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು:

೧. ಪುಷ್ಪವಿಲ್ಲದೆ ಪರಿಮಳವನರಿಯಬಹುದೆ.
೨. ಅನ್ಯ ಲಿಂಗಗಳ ನೆನೆವನೆ ನಿಮ್ಮ ಭಕ್ತನು.
೩. ತಾನೆ ಲಘುಮಾಡಿ ಲಘುವಾದನಯ್ಯ.

### ಆ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):

೧. ಉರಿಲಿಂಗಪೆದ್ದಿಯ ವಚನಗಳ ಅಂಕಿತ ಯಾವುದು?
೨. ಯಾವುದರಿಂದ ಪರಿಮಳವನ್ನು ಅರಿಯಬಹುದು?
೩. ಯಾರು ಅನ್ಯಲಿಂಗವನ್ನು ನೆನೆಯುವುದಿಲ್ಲ?
೪. ಗುರು ಹೇಗೆ ವರ್ತಿಸಬಾರದು?

## ಇ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):

೧. ಸೂರ್ಯ ಮತ್ತು ದೀಪಗಳಿಂದಾಗುವ ಉಪಯೋಗಗಳಾವುವು?
೨. ಯಾರು ಮನೆಮನೆಯನ್ನು ತಿರಿಯನು? ಕೆರೆಯುದಕವನ್ನರಸದವನು ಯಾರು?
೩. ಗುರುವಿನ ಲಕ್ಷಣಗಳೇನು?

## ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ):

೧. ಮಂಗಳಲಿಂಗದ ಮಹತ್ವವನ್ನು ಹೇಗೆ ವಿವರಿಸಲಾಗಿದೆ?
೨. ಗುರು ಲಘುವರ್ತನದಲ್ಲಿ ವರ್ತಿಸಬಾರದೇಕೆ?
೩. ಉರಿಲಿಂಗಪೆದ್ದಿಯ ವಚನಗಳಲ್ಲಿನ ಆಶಯವೇನು?

## ಭಾಷಾಭ್ಯಾಸ :

೧. ಇವುಗಳ ನಾನಾರ್ಥಗಳನ್ನು ಬರೆಯಿರಿ: ತೊರೆ, ನೆನೆ, ಲಘು, ಗುರು.
೨. ಸಮಾನಾರ್ಥಕಗಳನ್ನು ಬರೆಯಿರಿ: ಸೂರ್ಯ, ದೀಪ, ಪುಷ್ಪ, ಗೃಹ.
೩. ಕಾಣಬಾರದು, ಆಗದಾಗದು – ಈ ನಿಷೇಧಾರ್ಥಕಗಳನ್ನು ಗಮನಿಸಿ.

## ಚಟುವಟಿಕೆ :

೧. ಬಸವಣ್ಣ ಮತ್ತಿತರ ಪ್ರಮುಖ ವಚನಕಾರರ ಬಗೆಗೆ ಮಾಹಿತಿ ಸಂಗ್ರಹಿಸಿ.
೨. ಬಸವಣ್ಣನವರನ್ನು ಕುರಿತು ಕನ್ನಡದಲ್ಲಿ ಬಂದಿರುವ ನಾಟಕಗಳನ್ನು ಗಮನಿಸಿ.
೩. ಉರಿಲಿಂಗಪೆದ್ದಿ ಮತ್ತಿತರ ಅಲಕ್ಷಿತ ವಚನಕಾರರ ಜೀವನ ವಿವರಗಳನ್ನು ಸಂಗ್ರಹಿಸಿ.
೪. ಉರಿಲಿಂಗಪೆದ್ದಿಯ ಇತರ ವಚನಗಳನ್ನು ಸಂಗ್ರಹಿಸಿರಿ.
೫. ೧೨ನೇ ಶತಮಾನದ ವಚನಕಾರರೊಂದಿಗೆ ಆಧುನಿಕ ವಚನಕಾರರ ರಚನೆಗಳನ್ನು ಹೋಲಿಸಿ ನೋಡಿ.

## ಆಕರ :

೧. ಕೃತಿ : ಬಸವಣ್ಣನವರ ವಚನಗಳು : ಶಿವಶರಣರ ಸಮಗ್ರ ವಚನ ಸಂಪುಟ.
೨. ಕೃತಿ : ಉರಿಲಿಂಗಪೆದ್ದಿಯ ವಚನಗಳು : ಶಿವಶರಣರ ಸಮಗ್ರ ವಚನ ಸಂಪುಟ.
ಪ್ರಕಾಶಕರು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ.

## ಹೆಚ್ಚಿನ ಓದಿಗೆ :

೧. ವಚನಶಾಸ್ತ್ರಸಾರ : ಫ.ಗು. ಹಳಕಟ್ಟಿ
೨. ವಚನಧರ್ಮಸಾರ : ಎಂ.ಆರ್. ಶ್ರೀನಿವಾಸಮೂರ್ತಿ
೩. ಕನ್ನಡ ಸಾಹಿತ್ಯ ಚರಿತ್ರೆ : ಡಾ॥ ರಂ.ಶ್ರೀ. ಮುಗಳಿ
೪. ವಚನ ಸಾಹಿತ್ಯ : ಡಾ॥ ಎಲ್. ಬಸವರಾಜು
೫. ವಚನಕಾರರ ವಿಚಾರಕ್ರಾಂತಿ : ಡಾ॥ ಜಿ.ಎಸ್. ಶಿವರುದ್ರಪ್ಪ (ಪರಿಶೀಲನ)

# ೩. ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು

*– ಕುಮಾರವ್ಯಾಸ*

*ಭಾರತೀಯ ಪರಂಪರೆಯಲ್ಲಿ ಹೆಣ್ಣು ಶಕ್ತಿಯ ಪ್ರತೀಕವಾಗಿದ್ದಾಳೆ. ಆಕೆ ಭೂಮಿಯಷ್ಟೇ ಸಹನಾಮೂರ್ತಿಯಾಗಿದ್ದರೂ ಆತ್ಮಾಭಿಮಾನಕ್ಕೆ ಭಂಗವುಂಟಾಗುತ್ತಿದ್ದಂತೆ ಸಿಡಿದೆದ್ದು ಪ್ರತಿಭಟಿಸಿರುವ ಎಷ್ಟೋ ಪ್ರಸಂಗಗಳನ್ನು ಪುರಾಣೇತಿಹಾಸಗಳಲ್ಲಿ ಕಂಡಿದ್ದೇವೆ. ಅಪಾರ ಜಾಣ್ಮೆ ಹಾಗೂ ಬುದ್ಧಿಮತ್ತೆಗಳನ್ನು ತನ್ನಲ್ಲಿ ಸುಪ್ತವಾಗಿ ಹುದುಗಿಸಿಕೊಂಡಿರುವ ಹೆಣ್ಣು ಔಚಿತ್ಯವರಿತು ಸೂಕ್ತ ಸಮಯದಲ್ಲಿ, ಚಾಕಚಕ್ಯತೆಯಿಂದ ಅದನ್ನು ಬಳಸಿ ಕೆಲಸ ಸಾಧಿಸುತ್ತಾಳೆ. ಆ ಮೂಲಕ ತನಗೆ, ತನ್ನ ಕುಟುಂಬಕ್ಕೆ ಒದಗಿರುವ ಅಪಾಯವನ್ನು ನಿವಾರಿಸಿಕೊಳ್ಳುತ್ತಾಳೆ.*

ಆರಿಗುಸುರುವೆನಾರ ಸಾರುವೆ
ನಾರಿಗೊರಲುವೆನಾರಿಗರುಹುವೆ
ನಾರ ಬೇಡುವೆನಕಟ ಹೆಂಗಸು ಜನ್ಮವನು ಸುಡಲಿ
ಘೋರ ಪಾತಕಿಯೆನ್ನವೊಲು ಮು
ನ್ನಾರು ನವೆದವರುಂಟು ಮರಣವು
ಬಾರದೆಂದೊರಲಿದಳು ಬಸುರನು ಹೊಯ್ದು ಶಶಿವದನೆ ॥ ೧ ॥

ಯಮಸುತಂಗರುಹುವೆನೆ ಧರ್ಮ
ಕ್ಷಮೆಯ ಗರ ಹೊಡೆದಿಹುದು ಪಾರ್ಥನು
ಮಮತೆಯುಳ್ಳವನೆಂಬೆನೇ ತಮ್ಮಣ್ಣನಾಜ್ಞೆಯಲಿ
ಭ್ರಮಿತನಾಗಿಹನುಳಿದರಿಬ್ಬರು
ರಮಣರಿವರೀ ನಾಯ ಕೊಲಲ
ಕ್ಷಮರು ನಿಸ್ಸಂದೇಹವೆಂದಳು ತನ್ನ ಮನದೊಳಗೆ ॥ ೨ ॥

ಎಲ್ಲರೊಳು ಕಲಿಭೀಮನೇ ಮಿಡು
ಕುಳ್ಳ ಗಂಡನು ಹಾನಿ ಹರಿಬಕೆ
ನಿಲ್ಲದಂಗೈಸುವನು ಕಡು ಹೀಹಾಳಿಯುಳ್ಳವನು
ಖುಲ್ಲನಿವನುಪಟಳವನಾತಂ
ಗೆಲ್ಲವನು ಹೇಳುವೆನು ಬಳಿಕವ
ನಲ್ಲಿ ಹುರುಳಿಲ್ಲದೊಡೆ ಕುಡಿವೆನು ಘೋರತರ ವಿಷವ ॥ ೩ ॥

ಎಬ್ಬಿಸಲು ಭುಗಿಲೆಂಬನೋ ಮೇ
ಣೊಬ್ಬಳೇತಕೆ ಬಂದೆ ಮೋರೆಯ
ಮಬ್ಬಿದೇಕೆಂದೆನ್ನ ಸಂತೈಸುವನೊ ಸಾಮದಲಿ
ತುಬ್ಬುವುದೊ ತಾ ಬಂದ ಬರವಿದು
ನಿಬ್ಬರವಲಾ ಜನದ ಮನಕಿ
ನ್ನೆಬ್ಬಿಸಿಯೆ ನೋಡುವೆನೆನುತ ಸಾರಿದಳು ವಲ್ಲಭನ ॥ ೪ ॥

ಮೆಲ್ಲಮೆಲ್ಲನೆ ಮುಸುಕ ಸಡಿಲಿಸಿ
ಗಲ್ಲವನು ಹಿಡಿದಲುಗಲಪ್ರತಿ
ಮಲ್ಲನೆದ್ದನು ನೋಡಿದನು ಪಾಂಚಾಲ ನಂದನೆಯ
ವಲ್ಲಭೆಯೆ ಬರವೇನು ಮುಖದಲಿ
ತಲ್ಲಣವೆ ತಲೆದೋರುತಿದೆ ತಳು
ವಿಲ್ಲದುಸುರಿರುಳೇಕೆ ಬಂದೆ ಲತಾಂಗಿ ಹೇಳೆಂದ ॥ ೫ ॥

ನಿನ್ನೆ ಹಗಲರೆಯಟ್ಟಿ ಕೀಚಕ
ಕುನ್ನಿಯೊದೆದನು ರಾಜಸಭೆಯಲಿ
ನಿನ್ನ ವಂದಿಗರಿರಲು ಪರಿಭವವುಚಿತವೇ ತನಗೆ
ಎನ್ನನವ ಬೆಂಬಳಿಯ ಬಿಡ ನಾ
ನಿನ್ನು ಬದುಕುವಳಲ್ಲ ಪಾತಕ
ನಿನ್ನ ತಾಗದೆ ಮಾಣದೆನಲಾ ಭೀಮ ಖತಿಗೊಂಡ ॥ ೬ ॥

ರಮಣ ಕೇಳುಳಿದವರು ತನ್ನನು
ರಮಿಸುವರು ಮಾನಾರ್ಥವೆನೆ ನಿ
ರ್ಗಮಿಸುವರು ನೀನಲ್ಲದುಳಿದವರುಚಿತ ಬಾಹಿರರು
ಮಮತೆಯಲಿ ನೀ ನೋಡು ಚಿತ್ತದ
ಸಮತೆಯನು ಬೀಳ್ಕೊಡು ಕುಠಾರನ
ಯಮನ ಕಾಣಿಸಿ ಕರುಣಿಸೆಂದಳು ಕಾಂತೆ ಕೈಮುಗಿದು ॥ ೭ ॥

ಕಲಹಕಾದೊಡೆ ನಾವು ರಮಿಸುವ
ರುಳಿದವರು ಬಳಿಕೇನು ಗಾದೆಯ
ಬಳಕೆ ಕೆಲಬರು ಗಳಿಸಿದೊಡೆ ಕೆಲರುಂಡು ಜಾರುವರು

ಅಳುಕಿ ನಡೆವವರಲ್ಲ ನಿನ್ನಯ
ಹಳಿವು ಹರಿಬವ ಹೇಳಿ ಚಿತ್ತವ
ತಿಳುಹಿಕೊಂಬುದು ನಾವು ಭೀತರು ಧರ್ಮಜನ ಹೊರೆಗೆ ॥ ೮ ॥

ಹೆಂಡತಿಯ ಹರಿಬದಲಿಯೊಬ್ಬನೆ
ಗಂಡುಗೂಸೆ ವೈರಿಯನು ಕಡಿ
ಖಂಡವನು ಮಾಡುವನು ಮೇಣ್ ತನ್ನೊಡಲನಿಕ್ಕುವನು
ಗಂಡರೈವರು ಮೂರುಲೋಕದ
ಗಂಡರೊಬ್ಬಳನಾಳಲಾರಿರಿ
ಗಂಡರೋ ನೀವ್ ಭಂಡರೊ ಹೇಳೆಂದಳಿಂದುಮುಖಿ ॥ ೯ ॥

ಹೆಣ್ಣು ಹರಿಬಕ್ಕೋಸುಗವೆ ತ
ಮ್ಮಣ್ಣನಾಜ್ಞೆಯ ಮೀರಿ ಕುಂತಿಯ
ಚಿಣ್ಣ ಬದುಕಿದನೆಂದು ನುಡಿವರು ಕುಜನರಾದವರು
ಅಣ್ಣನವರಿಗೆ ದೂರುವುದು ನಾ
ವುಣ್ಣದುರಿಯಿವು ರಾಯನಾಜ್ಞೆಯ
ಕಣ್ಣಿಯಲಿ ಬಿಗಿವಡೆದು ಕೆಡೆದೆವು ಕಾಂತೆ ಕೇಳೆಂದ ॥ ೧೦ ॥

ಇನ್ನು ಹುಟ್ಟದೆಯಿರಲಿ ನಾರಿಯ
ರೆನ್ನವೊಲು ಭಂಗಿತರು ಭುವನದೊ
ಳಿನ್ನು ಜನಿಸಲುಬೇಡ ಗಂಡರು ಭೀಮಸನ್ನಿಭರು
ಎನ್ನವೊಲು ಪಾಂಡವರವೊಲು ಸಂ
ಪನ್ನ ದುಃಖಿಗಳಾರು ನವೆದರು
ಮುನ್ನಿನವರೊಳಗೆಂದು ದ್ರೌಪದಿ ಹಿರಿದು ಹಲುಬಿದಳು ॥ ೧೧ ॥

ಮಂದೆಗೆಳೆಸಿದ ಪಾಪಿ ಕೌರವ
ನಂದು ಮುಂದಲೆವಿಡಿದು ಸೈಂಧವ
ಬಂದು ಬಳಿಕಾರಣ್ಯವಾಸದೊಳೆನ್ನನೆಳದೊಯ್ದು
ಇಂದು ಕೀಚಕ ನಾಯ ಕಾಲಲಿ
ನೊಂದೆ ನಾನೀ ಮೂರು ಬಾರಿಯೆ
ಬಂದ ಭಂಗವೆ ಸಾಕೆನುತೆ ಬಸವಳಿದಳಿಂದುಮುಖಿ ॥ ೧೨ ॥

ಕಾಲಯಮು ಕೆರಳಿದೊಡೆ ಮುರಿವೆ
ಚ್ಚಾಳುತನದವರೆನ್ನನೊಬ್ಬಳ
ನಾಳಲಾರಿರಿ ಪಾಪಿಗಳಿರಪಕೀರ್ತಿಗಳುಕಿರಲ
ತೋಳಹೊರೆ ನಿಮಗೇಕೆ ಭೂಮಿೊ
ಪಾಲ ವಂಶದೊಳುದಿಸಲೇತಕೆ
ಕೂಳುಗೇಡಿಂಗೊಡಲ ಹೊರುವಿರಿಯೆಂದಳಿಂದುಮುಖಿ ॥ ೧೩ ॥

ಎನಲು ಕಂಬನಿದುಂಬಿದನು ಕಡು
ನೆನೆದುದಂತಃಕರಣ ರೋಷದ
ಘನತೆ ಹೆಚ್ಚಿತು ಹಗೆಗಳನು ಹಿಂಡಿದನು ಮನದೊಳಗೆ
ತನುಪುಳಕವುಬ್ಬರಿಸಿ ಮೆಲ್ಲನೆ
ವನಿತೆಯನು ತೆಗೆದಪ್ಪಿದನು ಕಂ
ಬನಿಯದೊಡೆದನು ಸೆರಗಿನಲಿ ಕಲಿಭೀಮ ಮಾನಿನಿಯ ॥ ೧೪ ॥

ಕುರುಳ ನೇವರಿಸಿದನು ಗಲ್ಲವ
ನೊರೆಸಿ ಮುಂಡಾಡಿದನು ಮಂಚದ
ಹೊರೆಯ ಗಿಂಡಿಯ ನೀರಿನಲಿ ತೊಳೆದನು ಮುಖಾಂಬುಜವ
ಅರಸಿ ಬಿಡು ಬಿಡು ಖಾತಿಯನು ವಿ
ಸ್ತರಿಸಲೇಕೆಮ್ಮಣ್ಣನಾಜ್ಞೆಯ
ಗೆರೆಯ ದಾಂಟಿದೆ ದಾಂಟಿದೆನು ಹೋಗೆಂದನಾ ಭೀಮ ॥ ೧೫ ॥

ಬಸುರ ಬಗೆವೆನು ಕೀಚಕನ ನಸು
ಮಿಸುಕಿದೊಡೆ ವೈರಾಟ ವಂಶದ
ಹೆಸರ ತೊಡೆವೆನು ನಮ್ಮನರಿದೊಡೆ ಕೌರವವ್ರಜವ
ಕುಸುರಿದರಿವೆನು ಭೀಮ ಕಷ್ಟವ
ನೆಸಗಿದನು ಹಾಯೆಂದರಾದೊಡೆ
ಮುಸುಡನಮರಾದ್ರಿಯಲಿ ತೇವೆನು ದೇವಸಂತತಿಯ ॥ ೧೬ ॥

## ಕವಿ–ಕಾವ್ಯ ಪರಿಚಯ :

ಯುಗಪ್ರವರ್ತಕ ಕವಿಯೆನಿಸಿದ **ಕುಮಾರವ್ಯಾಸ** ಭಾಗವತ ಭಕ್ತಕವಿಯೂ ಹೌದು. ಈತನ ಕಾಲ ಕ್ರಿ.ಶ. ೧೪೦೦. ಗದುಗಿನ ಹತ್ತಿರದ ಕೋಳಿವಾಡ ಈತನ ಹುಟ್ಟೂರು. ನಾರಣಪ್ಪ ಈತನ ನಿಜ ನಾಮಧೇಯ. ವ್ಯಾಸರ ಮೇಲಿನ ಪ್ರೀತಿ ಗೌರವಾದರಗಳಿಂದಾಗಿ ತನ್ನನ್ನು ಕುವರವ್ಯಾಸ, ಕುಮಾರವ್ಯಾಸ ಎಂಬುದಾಗಿ ಕರೆದು ಕೊಂಡಿದ್ದಾನೆ. ಸ್ಮಾರ್ಥ ವೈದಿಕ ಬ್ರಾಹ್ಮಣರಾದ ಈತನ ಹಿರಿಯರು ಕೋಳಿವಾಡ ಗ್ರಾಮದ ಶ್ಯಾನುಭೋಗ ವೃತ್ತಿಯಲ್ಲಿದ್ದರು. ಹರಿಭಕ್ತನಾದ ಈತನ ಆರಾಧ್ಯದೈವ ಗದುಗಿನ ವೀರನಾರಾಯಣ. ಆ ದೈವದ ಸನ್ನಿಧಿಯಲ್ಲಿಯೇ ಕುಳಿತು ಈತ ಕಾವ್ಯ ರಚಿಸಿದನೆಂಬ ಐತಿಹ್ಯವಿದೆ.

ಕುಮಾರವ್ಯಾಸನ ಕೃತಿಯ ಹೆಸರು 'ಕರ್ಣಾಟ ಭಾರತ ಕಥಾಮಂಜರಿ'. ಕುಮಾರವ್ಯಾಸ ಭಾರತ, ಗದುಗಿನ ಭಾರತ ಎಂದೆಲ್ಲ ಹೆಸರುವಾಸಿಯಾದ ಈ ಕೃತಿಯು ಪಂಡಿತ–ಪಾಮರರಿಬ್ಬರಿಂದಲೂ ಮೆಚ್ಚುಗೆ ಗಳಿಸಿ ಕನ್ನಡಿಗರ ಜನಮಾನಸದಲ್ಲಿ ಚಿರಸ್ಥಾಯಿಯಾಗಿದೆ. ವ್ಯಾಸರ ಮೂಲ ಸಂಸ್ಕೃತ ಭಾರತದ ೧೮ ಪರ್ವಗಳಲ್ಲಿ, ಮೊದಲ ೧೦ ಪರ್ವಗಳನ್ನು ಕುಮಾರವ್ಯಾಸನು ಭಾಮಿನಿ ಷಟ್ಪದಿಯಲ್ಲಿ ಅನುವಾದಿಸಿದ್ದಾನೆ. ಮೂಲಕೃತಿಯನ್ನನುಸರಿಸಿದರೂ ಕವಿಯು ತನ್ನ ಕಾವ್ಯದಲ್ಲಿ ಅಪಾರವಾದ ಪ್ರತಿಭಾಶಕ್ತಿಯನ್ನು ಮೆರೆದಿದ್ದಾನೆ. ಕನ್ನಡ 'ದೇಸಿ'ಯ ಸೊಗಡು, ಔಚಿತ್ಯಪೂರ್ಣವಾದ ರೂಪಕಗಳು ಕಾವ್ಯಕ್ಕೆ ಅಪೂರ್ವವಾದ ಕಳೆಯನ್ನು ತಂದುಕೊಟ್ಟಿವೆ. ರೂಪಕ ಸಾಮ್ರಾಜ್ಯದ ಚಕ್ರವರ್ತಿ ಎನಿಸಿದ 'ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು, ಭಾರತ ಕಣ್ಣಲಿ ಕುಣಿಯುವುದು' ಎಂಬುದಾಗಿ ಕುವೆಂಪು ಅವರು ಮೆಚ್ಚುಗೆ ಸೂಚಿಸಿದ್ದರಲ್ಲಿ ಅತಿಶಯೋಕ್ತಿಯಿಲ್ಲ.

ಪ್ರಸ್ತುತ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಪಠ್ಯಭಾಗದಲ್ಲಿ ಕೀಚಕನಿಂದ ಅವಮಾನಿತಳಾದ ದ್ರೌಪದಿಯು, ಆತನ ಕಿರುಕುಳದಿಂದ ತನ್ನನ್ನು ಪಾರು ಮಾಡುವಂತೆ – ಭೀಮನಲ್ಲಿ ಬಂದು ಬೇಡಿಕೊಳ್ಳುವ ಪ್ರಸಂಗವು ಇಲ್ಲಿ ವರ್ಣಿತವಾಗಿದೆ.

## ಕಾವ್ಯಭಾಗದ ಹಿನ್ನೆಲೆ :

ಪ್ರಸ್ತುತ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಪಠ್ಯಭಾಗವನ್ನು 'ಕರ್ಣಾಟ ಭಾರತ ಕಥಾಮಂಜರಿ' ಕೃತಿಯ ವಿರಾಟಪರ್ವದ ೩ನೆಯ ಸಂಧಿಯಿಂದ ಆಯ್ದುಕೊಂಡಿದೆ. ಪಾಂಡವರು ಒಂದು ವರ್ಷದ ಅಜ್ಞಾತವಾಸದ ಅವಧಿಯನ್ನು ವಿರಾಟರಾಜನ ಆಶ್ರಯದಲ್ಲಿ ವೇಷಮರೆಸಿಕೊಂಡು ಬೇರೆಬೇರೆ ಹೆಸರುಗಳಿಂದ ವಿವಿಧ ವೃತ್ತಿಗಳಲ್ಲಿ ತೊಡಗಿಸಿಕೊಂಡು ಕಾಲಕಳೆಯುತ್ತಿರುತ್ತಾರೆ. ದ್ರೌಪದಿ ಕೂಡ 'ಸೈರಂಧ್ರಿ' ಎಂಬ ಹೆಸರಿನಲ್ಲಿ ವಿರಾಟರಾಜನ ರಾಣಿ ಸುದೇಷ್ಣೆಯ ದಾಸಿಯಾಗಿರುತ್ತಾಳೆ. ಸುಧೇಷ್ಣೆಯ ತಮ್ಮನಾದ ಕೀಚಕನು ಒಮ್ಮೆ ದಾಸಿ ಸೈರಂಧ್ರಿಯನ್ನು ಕಂಡು ಮೋಹಿತನಾಗುತ್ತಾನೆ. ಆಗಾಗ ಪದೇಪದೇ ಅವಳನ್ನು ಕೆಣಕುತ್ತಾ ಪೀಡಿಸುತ್ತಿರುತ್ತಾನೆ. ಒಮ್ಮೆಯಂತೂ ವಿರಾಟರಾಜನ ಓಲಗದಲ್ಲಿ ದ್ರೌಪದಿಯನ್ನು ಹಿಡಿದೆಳೆಯಲೆತ್ನಿಸಿ, ಸಾಧ್ಯವಾಗದಿದ್ದಾಗ ಕಾಲಿನಿಂದ ಒದೆದು ಅವಮಾನಿಸುತ್ತಾನೆ. ಹೀಗೆ ಕೀಚಕನ ನಿರಂತರವಾದ ಉಪಟಳದಿಂದ ನೊಂದು–ದುಃಖಿತೆಯಾದ ದ್ರೌಪದಿಯು, ಆತನನ್ನು ಕೊಲ್ಲುವಂತೆ ಭೀಮನಲ್ಲಿಗೆ ಬೇಡಿಕೊಳ್ಳಲು ಬರುವ ಪ್ರಸಂಗದೊಂದಿಗೆ ಪ್ರಸ್ತುತ ಪಠ್ಯಭಾಗ ಆರಂಭವಾಗುತ್ತದೆ. ಕೀಚಕನಿಂದಾದ ಅವಮಾನವನ್ನು ದ್ರೌಪದಿ ಭೀಮನಲ್ಲಿ ಹೇಳಿಕೊಳ್ಳುವುದು, ಆತನ ಪ್ರತ್ಯುತ್ತರ, ಕೊನೆಗೆ ಭೀಮನನ್ನು ಕೆಣಕಿ ಅವನ ಶೌರ್ಯವನ್ನು ಬಡಿದೆಬ್ಬಿಸಿ – ಅಣಿಗೊಳಿಸುವ – ರೀತಿ ಮುಂತಾದವುಗಳು ನಾಟಕೀಯತೆಯಿಂದ ಕೂಡಿ, ಹೃದ್ಯವಾಗಿ ಮೂಡಿಬಂದಿದೆ.

## ಶಬ್ದಾರ್ಥ :

೧. ಉಸುರು–ಹೇಳು; ಸಾರು–ಹತ್ತಿರ ಬರು, ಸಮೀಪಿಸು; ಒರಲು–ಕೂಗಿ ಹೇಳು; ನವೆ–ನರಳು; ಹೊಯ್ದು–ಹೊಡೆದುಕೊಂಡು; ಶಶಿವದನೆ–ದ್ರೌಪದಿ, ಚಂದ್ರನಂತೆ ಮುಖವುಳ್ಳವಳು.

೨. ಯಮಸುತ–ಧರ್ಮರಾಯ; ಗರ–ಗ್ರಹ, ದೆವ್ವ; ಭ್ರಮಿತ–ಭ್ರಮೆಗೆ ಸಿಲುಕಿದ, ಕಂಗೆಟ್ಟ; ಪಾರ್ಥ–ಅರ್ಜುನ; ಅಕ್ಷಮರು–ಅಸಮರ್ಥರು; ನಾಯ–ನಾಯಿಯನ್ನು (ಕೀಚಕನನ್ನು); ರಮಣರು–ಪತಿಗಳು.

೩. ಮಿಡುಕುಳ್ಳ–ಮಿಡಿಯುವವನು; ಹರಿಬ–ಕಾರ್ಯ, ಪಾಲನೆ, ಸಂಕಷ್ಟ, ತೊಂದರೆ; ಅಂಗೈಸು–ಕಾಳಜಿ ತೋರು; ಹೀಹಾಳಿ–ಸ್ವಾಭಿಮಾನದ ಜಿದ್ದು; ಹುರುಳು–ಕೆಚ್ಚು, ಸಾಮರ್ಥ್ಯ; ಖುಲ್ಲ–ದುಷ್ಟ, ಕ್ಷುಲ್ಲಕ (ಕೀಚಕ).

೪. ಮೋರೆ–ಮುಖ; ಮಬ್ಬು–ಕಳಾಹೀನತೆ (ಸಪ್ಪಗಿನ ಮುಖ); ಸಾಮು–ಸಮಾಧಾನ, ತಾಳ್ಮೆ; ತುಬ್ಬುವುದೋ–ಅರಿಯುವುದೋ (ಅವನ ಮನಸ್ಸನ್ನು); ನಿಬ್ಬರವು–ಅಕಾಲಿಕ ಆಗಮನ, ಬರವಲ್ಲದ ಬರವು; ವಲ್ಲಭ–ಗಂಡ, ನಲ್ಲ, ಒಡೆಯ.

೫. ಅಪ್ರತಿಮಲ್ಲ–ಸರಿಸಾಟಿಯಿಲ್ಲದ ಜಟ್ಟಿ, ಧೀರ, ಭೀಮ; ಪಾಂಚಾಲನಂದನೆ–ಪಾಂಚಾಲ ದೇಶದ ಅರಸುಪುತ್ರಿ, ದ್ರೌಪದಿ; ವಲ್ಲಭೆ–ಪ್ರಿಯೆ, ಪತ್ನಿ; ತಲ್ಲಣ–ಹೆದರಿಕೆ, ಕಳವಳ; ಲತಾಂಗಿ–ಬಾಗಿ ಬಳುಕುವ ಅಂಗಾಂಗವುಳ್ಳವಳು, ದ್ರೌಪದಿ; ತಳವು–ತಡ.

೬. ಅರೆಯಟ್ಟಿ–ಬೆನ್ನಟ್ಟಿ; ವಂದಿಗರು–ಜತೆಯವರು; ಪರಿಭವ–ಅವಮಾನ, ಅನಾದರ; ಪಾತಕ–ಪಾಪ; ಖತಿ–ಕೋಪ; ಮಾಣದು–ಬಿಡದು; ಬೆಂಬಳಿಯ ಬಿಡ–ಬೆನ್ನು ಹತ್ತದೆ ಬಿಡಲಾರನು.

೭. ಮಾನಾರ್ಥ–ಮಾನದ ವಿಷಯ; ಬಾಹಿರ–ಅದಕ್ಕೆ ಹೊರತಾದ; ಸಮತೆ–ಶಾಂತಸ್ಥಿತಿ; ಕುಠಾರ–ಕ್ರೂರಿ, ಕೊಡಲಿ.

೮. ಹಳಿವು–ಕೆಟ್ಟಮಾತು; ಹೊರೆ–ಜೊತೆ, ಪಕ್ಕ.

೯. ಹರಿಬ–ಕರ್ತವ್ಯ, ರಕ್ಷಣೆ; ಕಡಿಖಂಡ–ಕಡಿದು ತುಂಡು ಮಾಡು.

೧೦. ಕುಜನ–ಕೆಟ್ಟಜನ; ಕಣ್ಣಿ–ಬಂಧನ, ಹಗ್ಗದ ಗಂಟು.

೧೧. ಭೀಮಸನ್ನಿಭರು–ಭೀಮಸದೃಶ್ಯರು, ಭೀಮನಂತೆ ಬಲಶಾಲಿಗಳು (ಹೆಂಡತಿಯನ್ನು ಕಾಪಾಡಲಾಗದ ಭೀಮನಂಥವರು ಹುಟ್ಟಿ ಏನು ಪ್ರಯೋಜನ? ಎಂಬುದು ದ್ರೌಪದಿಯ ಮಾತಿನ ಅಭಿಪ್ರಾಯ); ನವೆ–ನರಳು; ಭಂಗಿತರು–ಅವಮಾನಕ್ಕೊಳಗಾದವರು.

೧೨. ಮಂದೆಗೆಳೆಸು–ತುಂಬಿದ ಸಭೆಗೆ ಎಳೆದುತರಿಸಿದ; ಮುಂದಲೆ–ತಲೆಯ ಮುಂಭಾಗದ ಕೂದಲು; ಬಸವಳಿ–ಬಳಲು; ಭಂಗ–ಅವಮಾನ.

೧೩. ಕಾಲ–ಯಮ; ಎಚ್ಚಾಳುತನ–ಬಿಲ್ವಿದ್ಯಾ ಜಾಣ್ಮೆ; ತೋಳಹೊರೆ–ತೋಳಬಲ; ಕೂಳುಗೇಡಿಂಗೊಡಲ ಹೊರುವಿರಿ–ತಿನ್ನುವುದಕ್ಕೆ ಮಾತ್ರ ಹುಟ್ಟಿರುವ ನಿಷ್ಪ್ರಯೋಜಕರಂತೆ ಬದುಕಿರುವಿರಿ?

೧೪. ಘನತೆ–ಗುರುತ್ವ; ಉಬ್ಬರಿಸು–ಹೆಚ್ಚಾಗಿ; ಮಾನಿನಿ–ಹೆಣ್ಣು(ದ್ರೌಪದಿ); ಹಿಂಡು–ತಿರುಚಿಕೊಲ್ಲು.

೧೫. ಮುಂಡಾಡು–ಮುದ್ದುಮಾಡು; ಹೊರೆ–ಸಮೀಪ, ಬಳಿಯಲ್ಲಿ; ಗಿಂಡಿ–ಚಿಕ್ಕ ತಂಬಿಗೆ; ಖಾತಿ–ಸಿಟ್ಟು, ಕೋಪ; ವಿಸ್ತರಿಸಲೇಕೆ–ಹೆಚ್ಚಿಗೆ ಮಾತೇಕೆ?

೧೬. ಬಗೆ–ಸೀಳು; ನಸುಮಿಸುಕು–ಅಲ್ಪ ಅಲುಗಾಡಿದರೂ; ನಮ್ಮನರಿದೊಡೆ–ಈಗ ಅಜ್ಞಾತದಲ್ಲಿರುವ ನಮ್ಮನ್ನು ಗುರುತಿಸಿದರೆ; ವ್ರಜ–ಸಮೂಹ; ಕುಸುರಿದರಿ–ಚೂರಾಗಿ ಕತ್ತರಿಸು; ಮುಸುಡೆ–ಮುಖ, ಮೋರೆ; ತೇವೆನು–ತಿಕ್ಕುವೆನು, ಅರೆವೆನು.

## ಟಿಪ್ಪಣಿ:

೧. **ಸೈಂಧವ:**

ದುರ್ಯೋಧನನ ತಂಗಿಯಾದ ದುಶ್ಶಳೆಯ ಗಂಡ. ಜಯದ್ರಥ ಎಂಬುದು ಈತನ ಇನ್ನೊಂದು ಹೆಸರು. ಮುಂದೆ ಮಹಾಭಾರತ ಯುದ್ಧದಲ್ಲಿ ದ್ರೋಣರು ಚಕ್ರವ್ಯೂಹ ರಚಿಸಿದಾಗ ಅಭಿಮನ್ಯು ಆ ವ್ಯೂಹವನ್ನು ಭೇದಿಸಿ ಒಳನುಗ್ಗುತ್ತಾನೆ. ಆತನ ಬೆಂಗಾವಲಿಗೆ ಬಂದ ಭೀಮನನ್ನು ತಡೆದ ಸೈಂಧವ ಅಭಿಮನ್ಯುವಿನ ಸಾವಿಗೆ ಕಾರಣನಾಗುತ್ತಾನೆ. ಇದನ್ನರಿತ ಅರ್ಜುನ ಮರುದಿನದ ಸೂರ್ಯಾಸ್ತದೊಳಗೆ ಸೈಂಧವನನ್ನು ಕೊಲ್ಲುವುದಾಗಿ ಪ್ರತಿಜ್ಞೆ ಮಾಡಿ ಕೃಷ್ಣನ ಸಹಾಯದಿಂದ ಕೊಲ್ಲುತ್ತಾನೆ. ಈತ ದುರ್ಯೋಧನನನ್ನು ಮೆಚ್ಚಿಸಲು ಪಾಂಡವರು ವನವಾಸದಲ್ಲಿರುವಾಗ ದ್ರೌಪದಿಯನ್ನು ಅಪಹರಿಸುವ ವಿಫಲ ಪ್ರಯತ್ನ ಮಾಡಿರುತ್ತಾನೆ.

೨. **ಕೀಚಕ :**

ಕೇಕಯ ರಾಜನಿಂದ ಮಾಲವಿಯಲ್ಲಿ ಜನಿಸಿದವ. ಇವನಿಗೆ ೧೦೫ ಮಂದಿ ಒಡಹುಟ್ಟಿದವರೂ ಸುದೇಷ್ಣೆಯೆಂಬ ಸೋದರಿಯೂ ಇದ್ದರು. ಸುದೇಷ್ಣೆ ವಿರಾಟ ರಾಜನ ರಾಣಿ. ಕೀಚಕ ಬಾಣಾಸುರನ ಅಂಶದಿಂದ ಜನಿಸಿದವ. ಇವನೂ ಇವನ ತಮ್ಮಂದಿರಾದ ೧೦೫ ಮಂದಿ ಉಪಕೀಚಕರೂ ವಿರಾಟರಾಜನಲ್ಲಿಯೇ ಇರುತ್ತಿದ್ದರು. ಮಹಾಬಲಶಾಲಿಯಾಗಿದ್ದ ಕೀಚಕ ವಿರಾಟನ ಸೇನಾಪತಿಯಾಗಿದ್ದ. ಅಜ್ಞಾತವಾಸದ ಅವಧಿಯಲ್ಲಿ ದ್ರೌಪದಿಯು ಸೈರಂಧ್ರಿಯ ವೇಷದಲ್ಲಿ ರಾಣಿಯಾದ ಸುದೇಷ್ಣೆಯ ಅಂತಃಪುರದಲ್ಲಿ ಕೇಶಶೃಂಗಾರ ಮಾಡಿಕೊಂಡಿರುವಾಗ ಅಕ್ಕನ ಮನೆಗೆ ಬಂದ ಕೀಚಕ ಸೈರಂಧ್ರಿಯಲ್ಲಿ ಮೋಹವನ್ನು ತಾಳಿ; ಆಕೆಯನ್ನು ಹೊಂದಲು ನಾನಾ ಬಗೆಯಿಂದ ಪ್ರಯತ್ನಿಸಿ, ಸೋತು ತನ್ನ ಅಕ್ಕನಲ್ಲಿ ಮನೋಗತವನ್ನರುಹಿ ಸಹಾಯ ಯಾಚಿಸುತ್ತಾನೆ. ಕೀಚಕನ ಉಪಟಳವನ್ನು ತಾಳಲಾಗದೆ ದ್ರೌಪದಿಯು ಭೀಮನ ಮೊರೆಹೋಗುತ್ತಾಳೆ. ನಾಟ್ಯಶಾಲೆಯಲ್ಲಿ ಸ್ತ್ರೀ ವೇಷದಲ್ಲಿ ಅವಿತುಕೊಂಡಿದ್ದ ಭೀಮನು ಕೀಚಕನನ್ನು ಮುಷ್ಟಿಯುದ್ಧದಲ್ಲಿ ಕೊಲ್ಲುತ್ತಾನೆ. ಮೇಲೆರಗಿ ಬಂದ ೧೦೫ ಉಪಕೀಚಕರನ್ನೂ ಕೊಂದು ದ್ರೌಪದಿಯನ್ನು ಸಂಕಷ್ಟದಿಂದ ಪಾರುಮಾಡುತ್ತಾನೆ.

## : ಅಭ್ಯಾಸ ಭಾಗ :

### ಅ) ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು:

೧. ಎನ್ನವೊಲು ಮುನ್ನಾರು ನವೆದವರುಂಟು.

೨. ಯಮಸುತಂಗರುಹುವೆನೆ ಧರ್ಮಕ್ಷಮೆಯ ಗರಹೊಡೆದಿಹುದು.

೩. ಕಲಿ ಭೀಮನೇ ಮಿಡುಕುಳ್ಳ ಗಂಡನು.

೪. ಹುರುಳಿಲ್ಲದೊಡೆ ಕುಡಿವೆನು ಘೋರತರ ವಿಷವ.

೫. ನೀನಲ್ಲದುಳಿದವರುಚಿತ ಬಾಹಿರರು.

೬. ಕೆಲಬರು ಗಳಿಸಿದೊಡೆ ಕೆಲರುಂಡು ಜಾರುವರು.

೭. ಒಬ್ಬಳನಾಳಲಾರಿರಿ ಗಂಡರೋ ನೀವ್ ಭಂಡರೋ.

೮. ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು ಭಂಗಿತರು.

೯. ಕೂಳುಗೇಡಿಂಗೊಡಲ ಹೊರುವಿರಿ.

೧೦. ಹಗೆಗಳನು ಹಿಂಡಿದನು ಮನದೊಳಗೆ.

## ಆ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿರಿ):

೧. ಧರ್ಮರಾಯನಿಗೆ ಎಂಥ ಗರ ಹೊಡೆದಿದೆ?

೨. ಅಣ್ಣನಾಜ್ಞೆಯಲಿ ಭ್ರಮಿತನಾದವನು ಯಾರು?

೩. ಪಾಂಚಾಲನಂದನೆ ಯಾರು?

೪. ರಾಜಸಭೆಯೊಳಗೆ ದ್ರೌಪದಿಯನ್ನು ಒದೆದವರು ಯಾರು?

೫. ಯಾರನ್ನು ಯಮಲೋಕಕ್ಕೆ ಕಳಿಸಲು ದ್ರೌಪದಿ ಭೀಮನಿಗೆ ಹೇಳುತ್ತಾಳೆ?

೬. 'ಗಂಡರೋ ನೀವ್ ಭಂಡರೊ' ಎಂದು ಕೇಳಿದವರಾರು?

೭. ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು ಎಂದವರಾರು?

೮. ಅರಣ್ಯವಾಸದಲ್ಲಿದ್ದಾಗ ದ್ರೌಪದಿಯನ್ನು ಎಳೆದೊಯ್ದವರಾರು?

೯. ಮನದೊಳಗೆ ಹಗೆಗಳನು ಹಿಂಡಿದವರಾರು?

೧೦. ಯಾರ ಬಸುರನ್ನು ಬಗೆಯುವುದಾಗಿ ಭೀಮ ಹೇಳುತ್ತಾನೆ?

## ಇ) ಎರಡು ಅಂಕಗಳ ಪ್ರಶ್ನೆಗಳು (ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ):

೧. ಕೊಲಲಕ್ಷಮರೆಂದು ದ್ರೌಪದಿ ಯಾರನ್ನು ಕುರಿತು ಹೇಳಿದ್ದಾಳೆ?

೨. ಮಲಗಿರುವ ಭೀಮನನ್ನು ದ್ರೌಪದಿ ಹೇಗೆ ಎಬ್ಬಿಸಿದಳು?

೩. ತಾನು ಘೋರತರ ವಿಷ ಕುಡಿಯುವುದಾಗಿ ದ್ರೌಪದಿ ಏಕೆ ಹೇಳುತ್ತಾಳೆ?

೪. ಉಳಿದ ನಾಲ್ವರು ಪಾಂಡವರ ಭಿನ್ನ ಸ್ವಭಾವಗಳ ಬಗ್ಗೆ ದ್ರೌಪದಿಯ ಅಭಿಪ್ರಾಯವೇನು?

೫. ಗಂಡರೈವರು ಮೂರುಲೋಕದ ಗಂಡರಾರು? ಹೆಸರಿಸಿ.

೬. ಹೆಂಡತಿಯ ಹರಿಬಕ್ಕಾಗಿ ಗಂಡುಗೂಸು ಏನು ಮಾಡುತ್ತಾನೆ?

## ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):

೧. ತನಗೊದಗಿದ ಸಂಕಟವನ್ನು ಹೇಳಿಕೊಳ್ಳುವ ದ್ರೌಪದಿಯ ಸ್ವಗತದ ನುಡಿಗಳಾವುವು?

೨. ತನಗಾದ ಅವಮಾನವನ್ನು ದ್ರೌಪದಿ ಭೀಮನಿಗೆ ಹೇಳಿಕೊಂಡ ಬಗೆಯನ್ನು ವಿವರಿಸಿರಿ.

೩. ಭೀಮನು ದ್ರೌಪದಿಯನ್ನು ಹೇಗೆ ಸಂತೈಸಿದನು?

೪. ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿರಿ.

೫. ಈ ಕಾವ್ಯಭಾಗದಲ್ಲಿ ಮೂಡಿಬಂದಿರುವ ಭೀಮ–ದ್ರೌಪದಿಯರ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.

## ಭಾಷಾಭ್ಯಾಸ :

**೧. ಇವುಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ:**
ಕಲಹ, ರಮಣ, ಹರಿ, ಕುಂದು, ವಲ್ಲಭೆ, ಮೊರೆ, ಖತಿ, ಚಿತ್ತ, ಕಾಂತೆ, ಕಾಲ, ನಾರಿ, ಗಂಡ.

**೨. ಈ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ:**
ಪರಿಭವ, ಭ್ರಮಿತನಾಗು, ಹುರುಳು, ಬಸವಳಿ, ಬಸುರಬಗೆ, ಗಂಡುಗೂಸು, ಕಡಿಖಂಡ.

೩. ಕೆಲಬರು ಗಳಿಸಿದೊಡೆ ಕೆಲರುಂಡು ಜಾರುವರು – **ಈ ಗಾದೆಮಾತನ್ನು ವಿಸ್ತರಿಸಿ ಬರೆಯಿರಿ.**

## ಚಟುವಟಿಕೆ :

೧. ಪಠ್ಯಭಾಗದಲ್ಲಿ ಬಂದಿರುವ ದ್ರೌಪದಿ ಮತ್ತು ಕೀಚಕರುಗಳ ಹೆಸರುಗಳನ್ನು ಸೂಚಿಸುವ ಬೇರೆ ಬೇರೆ ಪದಗಳನ್ನು ಪಟ್ಟಿಮಾಡಿ.

೨. ದ್ರೌಪದಿಯು ಜಾಣ್ಮೆಯಿಂದ ಭೀಮನನ್ನು ಕೆರಳಿಸುವ ಸಂದರ್ಭವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

## ಆಕರ :

ಕೃತಿ : ಕರ್ಣಾಟ ಭಾರತ ಕಥಾಮಂಜರಿ

ಸಂಪಾದಕರು : ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್

ಪ್ರಕಾಶಕರು : ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ

## ಹೆಚ್ಚಿನ ಓದಿಗೆ :


೧. ದ್ರೌಪದಿಯ ಶ್ರೀಮುಡಿ – ಕುವೆಂಪು

೨. ಕುಮಾರವ್ಯಾಸ ಮತ್ತು ಕರ್ನಾಟಕ ಸಂಸ್ಕೃತಿ – ಕಿ.ರಂ. ನಾಗರಾಜ

೩. ವಿರಾಟಪರ್ವ ಸಂಗ್ರಹ – ತ.ಸು. ಶಾಮರಾಯ

೪. ಮಹಾಭಾರತ ವ್ಯಾಖ್ಯಾನ ಪಂಚಕ – ಮತ್ತೂರು ಕೃಷ್ಣಮೂರ್ತಿ

೫. ಕುಮಾರವ್ಯಾಸ ಭಾರತದ ನಿಘಂಟು – ತ.ಸು. ಶಾಮರಾಯ

೬. ಕುಮಾರವ್ಯಾಸ ಭಾರತ–ಕೆಲವು ಮರುಚಿಂತನೆಗಳು – ಡಾ॥ ಜಿ.ಎಸ್. ಶಿವರುದ್ರಪ್ಪ

೭. ಕನ್ನಡ ಸಾಹಿತ್ಯದಲ್ಲಿ ದ್ರೌಪದಿ – ಡಾ॥ ಎಸ್.ವಿ. ಪ್ರಭಾವತಿ

೮. ಕುಮಾರವ್ಯಾಸಭಾರತ : ಕಥಾಮಿತ್ರ – ಅ.ರಾ. ಮಿತ್ರ

೯. ಕುಮಾರವ್ಯಾಸಭಾರತ – ಅ.ರಾ. ಸೇತೂರಾಮರಾವ್, ಪ್ರ : ಕಾಮಧೇನು ಪ್ರಕಾಶನ, ಬೆಂಗಳೂರು.

೧೦.ಕಲ್ಲು ಬೆಂಕಿಗಳಿಂದ ನಲಿವು ಬೆಳಕಿನೆಡೆಗೆ' ಡಾ. ಲತಾ ಅಭಯ್ ಕುಮಾರ್


**ಸೂಕ್ತಿ**

**ಹೆಣ್ಣು ಮುನಿದರೆ ನಾವು ತಿನಬೇಕು ಮಣ್ಣು**
**ಹೆಣ್ಣು ಅಂದರೆ ತಾಯಿ, ಜೀವನದ ತವರು**

*– ದಿನಕರ ದೇಸಾಯಿ*

# ೪. ಪಗೆಯಂ ಬಾಲಕನೆಂಬರೇ

*– ಪುಲಿಗೆರೆ ಸೋಮನಾಥ*

*ನಡೆನುಡಿ, ಆಚಾರ ವಿಚಾರಗಳಲ್ಲಿ ಮೌಲ್ಯಗಳನ್ನು ಮೇಳವಿಸಿಕೊಂಡಾಗಲೇ ಬದುಕಿಗೊಂದು ಅರ್ಥ ಪ್ರಾಪ್ತವಾಗುತ್ತದೆ. ಮೌಲ್ಯಗಳಿಗೆಲ್ಲ ನೀತಿಯೇ ಮೂಲ ಬೀಜ. ನೈತಿಕತೆ ಎಲ್ಲಾ ಧರ್ಮ ತತ್ವಸಿದ್ಧಾಂತಗಳ ಹಾಗೆಯೇ ಎಲ್ಲ ದಾರ್ಶನಿಕರ, ಕವಿಗಳ ಉತ್ಕಟೇಚ್ಛೆಯಾಗಿದೆ. ಇವೆಲ್ಲದರಿಂದಲೂ ಮಾನವಮತಿಗೆ ನೀತಿಬೋಧೆ ಆಗುತ್ತದೆ. ಲೋಕದ ಡೊಂಕು ತಿದ್ದುವುದರೊಂದಿಗೆ ತಮ್ಮ ತಮ್ಮ ಡೊಂಕನ್ನೂ ತಿದ್ದಿಕೊಳ್ಳುವ ನೈತಿಕ ಅನುಸಂಧಾನವಿದ್ದವರು ಮಹಾತ್ಮರಾದರು. ಅವರ ಮಾತು ಮತ್ತು ಕೃತಿಗಳು ಸಮಾಜದಲ್ಲಿ ಆದರ್ಶವಾಗಿ ನೆಲೆನಿಂತು ನೀತಿಯ ಸೂಕ್ತಿಯಾದವು.*

*ಪುಲಿಗೆರೆ ಸೋಮನಾಥನ ಶತಕವು ಕನ್ನಡ ನಾಡಿನಲ್ಲಿ ಕವಿವಾಣಿಯಾಗಿ, ಜನವಾಣಿಯಾಗಿ ಹಬ್ಬಿ ಹರಡಿ ನೀತಿಯ ಹಂದರದಲ್ಲಿ ಬದುಕಿನ ತನಿವಣ್ಣುಗಳನ್ನು ತುಂಬಿ ತಂದಿದೆ. ಈ ನೀತಿ ಅಮೃತದ ಸವಿಯುಂಡವರು ಸಂಸ್ಕೃತಿ ಮತ್ತು ಸಜ್ಜನಿಕೆಯ ವಾರಸುದಾರರಾಗಿ ಲೋಕಪ್ರಿಯವಾಗುವುದರಲ್ಲಿ ಸಂದೇಹವಿಲ್ಲ. ಭಕ್ತಿ, ಜ್ಞಾನ, ವೈರಾಗ್ಯ, ನೀತಿಗಳನ್ನು ಪ್ರತಿಪಾದಿಸುವ ಇಲ್ಲಿನ ಪದ್ಯಗಳು ಪುಲಿಗೆರೆ ಸೋಮನಾಥನ ಹೆಸರನ್ನು ಜನಮಾನಸದಲ್ಲಿ ಸ್ಥಿರವಾಗಿಸಿದೆ.*

ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ।
ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂ ನೋಡುತಂ॥
ಕೆಲವಂ ಸಜ್ಜನ ಸಂಘದಿಂದಲರಿಯಲ್ ಸರ್ವಜ್ಞನಪ್ಪಂ ನರಂ।
ಪಲವುಂ ಪಳ್ಳ ಸಮುದ್ರವೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೧ ॥

ಉಣದಿರ್ಪಾ ಧನಮಿರ್ದೊಡೇನು ಸುತನಿರ್ದೇಂ ಮುಪ್ಪಿನಲ್ಲಾಗದಾ।
ಒಣಗಲ್ಪೈರಿಗೆ ಬಾರದಿರ್ದ ಮಳೆ ತಾಂ ಬಂದೇನಾಪತ್ತಿನೊಳ್॥
ಮಣಿದುಂ ನೋಡದ ಬಂಧುವೇತಕೆಣಿಸಲ್ ಕಾಲೋಚಿತಕ್ಕೈದಿದಾ।
ತೃಣವೇ ಪರ್ವತವಲ್ಲವೇ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೨ ॥

ಚಿಗುರೆಂದುಂ ಮೆಲೆ ಬೇವು ಸ್ವಾದವಹುದೇ ಚೇಳ್ ಚಿಕ್ಕದೆಂದಳ್ಕರಿಂ।
ತೆಗೆಯಲ್ ಕಚ್ಚದೆ ಪಾಲನೂಡಿ ಫಣಿಯಂ ಸಾಕಲ್ಕೆ ವಿಶ್ವಾಸಿಯೇ॥
ಖಗಮಂ ಸಾಕುವೆನೆಂದು ಗೂಗೆಮರಿಯಂ ಸಂಪ್ರೀತಿಯಂದೋವರೇ।
ಪಗೆಯಂ ಬಾಲಕನೆಂಬರೇ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೩ ॥

ಅರೆಯಂ ಸೀಳುವೊಡಾನೆ ಮೆಟ್ಟಲಹುದೇ ಚಾಣಂಗಳಿಂದಲ್ಲದೇ।
ಕಿರುದಾಗಿರ್ದೊಡದೇನುಪಾಯಪರನೋರ್ವಂ ಕೋಟಿಗೀಡಕ್ಕು ಹೆ॥
–ಮ್ಮರನಿರ್ದೇನದರಿಂದಲೆತ್ತಬಹುದೇ ಬಲ್ಭಾರಮಂ ಸನ್ನೆ ಸಾ।
ವಿರ ಕಾಲಾಳಿನ ಸತ್ವವೈ ಹರಹರಾ ಶ್ರೀಚನ್ನಸೋಮೇಶ್ವರಾ ॥ ೪ ॥

ಇರಿಯಲ್ಬಲ್ಲೊಡೆ ವೀರನಾಗು ಧರೆಯೊಳ್ ನಾನಾ ಚಮತ್ಕಾರಮಂ ।
ಅರಿಯಲ್ಬಲ್ಲೊಡೆ ಮಂತ್ರಿಯಾಗು ವಿಭುವಾಗಾರೆಂದೊಡಂ ಕೋಪಮಂ ॥
ತೊರೆಯಲ್ಬಲ್ಲೊಡೆ ಯೋಗಿಯಪ್ಪುದರಿ ಷಡ್ವರ್ಗಂಗಳಂ ಗೆಲ್ವೊಡೇ ।
ತೆರ ಬಲ್ಲರ್ಪೊಣೆಯಪ್ಪುದೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೫ ॥

ಪೊಡೆಯೊಳ್ ತುಂಬಿರೆ ಪಂಕ ಮೇಲೆ ತೊಳೆಯಲ್ ತಾಂ ಶುದ್ಧನೇನಪ್ಪನೇ ।
ಕಡುಪಾಪಂ ಬಲು ಮೀಯಲಾತ ಶುಚಿಯೇ ಕಾಕಾಳಿ ತಾಂ ಮೀಯದೆ ॥
ಗುಡಪಾನಂಗಳೊಳದ್ದೆ ಬೇವಿನ ಫಲಂ ಸ್ವಾದಪ್ಪುದೇ ಲೋಕದೊಳ್ ।
ಮಡಿಯೇ ನಿರ್ಮಲ ಚಿತ್ತವೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೬ ॥

## ಕವಿ–ಕಾವ್ಯ ಪರಿಚಯ :

**ಪುಲಿಗೆರೆ ಸೋಮನಾಥ** ಸುಮಾರು ಹದಿನಾರನೆಯ ಶತಮಾನದಲ್ಲಿದ್ದ ವೀರಶೈವ ಕವಿ. 'ಸೋಮೇಶ್ವರ ಶತಕ' ಎಂಬ ಗ್ರಂಥದ ಕರ್ತೃ. ಧಾರವಾಡ ಜಿಲ್ಲೆಯ ಪುಲಿಗೆರೆ (ಈಗಿನ ಲಕ್ಷ್ಮೇಶ್ವರ) ಇವನ ಜನ್ಮಸ್ಥಳವಿರಬಹುದೆಂದು ವಿದ್ವಾಂಸರು ಊಹಿಸಿದ್ದಾರೆ. ತನ್ನ ಕೃತಿಯಲ್ಲಿ ಈತ ತನ್ನ ಸ್ವಂತ ವಿಚಾರವಾಗಿ ಏನನ್ನೂ ಹೇಳಿಕೊಂಡಿಲ್ಲ. ಸೋಮೇಶ್ವರ ಶತಕದಲ್ಲಿ 'ಹರಹರಾ ಶ್ರೀಚೆನ್ನಸೋಮೇಶ್ವರ' ಎಂಬ ಅಂಕಿತವನ್ನು ಕವಿ ಕಾಣಿಸಿರುವನು. ಮೊದಲ ಹಾಗೂ ಕೊನೆಯ ಪದ್ಯಗಳನ್ನು ಸ್ರಗ್ಧರಾ ವೃತ್ತದಲ್ಲಿ ರಚಿಸಿರುವ ಕವಿಯು ಮಿಕ್ಕವನ್ನು ಮತ್ತೇಭವಿಕ್ರೀಡಿತದಲ್ಲಿ ರಚಿಸಿದ್ದಾನೆ. ಪ್ರತಿಯೊಂದು ಪದ್ಯವೂ ಒಂದು ಮುಕ್ತಕ, ಸ್ವಯಂಪೂರ್ಣ ಭಾವವುಳ್ಳ ಸ್ವತಂತ್ರ ಪದ್ಯಗಳಾಗಿವೆ. ಲವಲವಿಕೆಯ ಶೈಲಿ ಉಪಮೆಗಳ ಸೊಗಸಿನಿಂದಾಗಿ ಸೋಮೇಶ್ವರ ಶತಕ ಕನ್ನಡಿಗರ ಮನಗೆದ್ದಿದೆ.

ಪುಲಿಗೆರೆ ಸೋಮನಾಥನ 'ಸೋಮೇಶ್ವರ ಶತಕ'ವು ಕನ್ನಡದ ಅತ್ಯಂತ ಜನಪ್ರಿಯ ಶತಕ ಗ್ರಂಥವಾಗಿದ್ದು ಇದರಲ್ಲಿ ಒಟ್ಟು ನೂರಾಮೂರು ವೃತ್ತಗಳಿವೆ. ಕನ್ನಡಿಗರಲ್ಲಿ ಬಳಕೆಯಲ್ಲಿದ್ದ ಹಲವು ಜಾಣ್ನುಡಿಗಳೂ ಗಾದೆಯ ಮಾತುಗಳೂ ಈ ವೃತ್ತಗಳಲ್ಲಿ ಹಾಸುಹೊಕ್ಕಾಗಿ ಬಂದಿವೆ. ನೀತಿಬೋಧೆ ಈ ಶತಕದ ಮೂಲೋದ್ದೇಶ. ಸಂಸ್ಕೃತ ಸುಭಾಷಿತಗಳ ಛಾಯೆ ಈ ಶತಕಗಳಲ್ಲಿ ಕಂಡು ಬರುವುದಾದರೂ ಸ್ವತಂತ್ರ ಲೋಕಾನುಭವ, ಸ್ವೋಪಜ್ಞ ಕವಿತಾಶಕ್ತಿ, ಮಾರ್ಮಿಕತೆ ಮೊದಲಾದ ಉನ್ನತ ಗುಣಗಳು ಕಂಡುಬರುತ್ತವೆ. ಶತಕದ ಭಾಷೆ ಸರಳವಾಗಿದ್ದು ಎಲ್ಲರಿಗೂ ಎಟುಕುವಂತಿದೆ.

## ಶಬ್ದಾರ್ಥ :

೧. ಕೆಲವಂ–ಕೆಲವನ್ನು; ಬಲ್ಲವ–ಬಲ್ಲಿದ, ಪಂಡಿತ; ಕಲ್ತು–ಕಲಿತು; ಶಾಸ್ತ್ರ–ಸಂಪ್ರದಾಯ, ಆಚರಣೆ, ನಿಯಮ, ಮತ, ವಿಜ್ಞಾನ ಮುಂತಾದುವುಗಳ ಬಗೆಗೆ ಬರೆದ ಗ್ರಂಥ; ಮಾಳ್ಪವ–ಆಚರಿಸುವವ, ಮಾಡುವವ; ಸುಜ್ಞಾನ–ಉತ್ತಮವಾದ ತಿಳಿವಳಿಕೆ; ಸಜ್ಜನರ ಸಂಘ–ಒಳ್ಳೆಯವರ, ವಿವೇಕವುಳ್ಳವರ ಸಹವಾಸ; ಅರಿಯಲ್–ತಿಳಿದುಕೊಳ್ಳಲು; ಸರ್ವಜ್ಞನಪ್ಪಂ–ಎಲ್ಲವನ್ನೂ ತಿಳಿಯಬಲ್ಲವನಾಗುವ; ನರ–ಮನುಷ್ಯ; ಪಲವು–ಹಲವು; ಪಳ್ಳ–ಹಳ್ಳ, ಸಣ್ಣ ಜಲಪ್ರದೇಶ.

೨. ಉಣದಿರ್ಪ–ಅನುಭೋಗಿಸಲಾಗದ; ಧನ–ಹಣ, ಸಂಪತ್ತು; ಸುತನಿರ್ದೇಂ–ಮಗನಿದ್ದರೇನು; ಆಪತ್ತಿನೊಳ್–ಕಷ್ಟಕಾಲದಲ್ಲಿ; ಮಣಿದು–ಸೋತು; ಎಣಿಸಲ್–ಲೆಕ್ಕಮಾಡಿ ನೋಡಲು, ಆಲೋಚನೆ ಮಾಡಿ ನೋಡಲು; ಕಾಲೋಚಿತಕ್ಕೆ–ಸಮಯಕ್ಕೆ ಸರಿಯಾಗಿ; ಐದಿದಾ–ಒದಗಿ ಬಂದ; ತೃಣ–ಹುಲ್ಲು.

೩. ಚಿಗುರು–ಕುಡಿ, ಪಲ್ಲವ; ಮೆಲೆ–ತಿನ್ನಲು; ಸ್ವಾದ–ರುಚಿ, ಸವಿ, ಸ್ವಾರಸ್ಯ; ಅಳ್ಕರಿಂ–ಅಕ್ಕರೆಯಿಂದ, ಪ್ರೀತಿಯಿಂದ; ಪಾಲಮಾಡು–ಹಾಲನ್ನು ಉಣಿಸಲು; ಫಣಿ–ಸರ್ಪ (ಫಣ ಎಂದರೆ ಹೆಡೆ, ಫಣಿ ಎಂದರೆ ಹೆಡೆಯುಳ್ಳ ಹಾವು); ಖಗ–ಪಕ್ಷಿ; ಗೂಗೆ–ಗೂಬೆ; ಸಂಪ್ರೀತಿ–ಮುದ್ದಿನಿಂದ; ಓವರೇ–ಸಲಹುವರೇ; ಪಗೆ–ಹಗೆ.

೪. ಅರೆ–ಬಂಡೆ; ಸೀಳುವೊಡೆ–ಸೀಳಬೇಕಾದರೆ; ಆನೆ ಮೆಟ್ಟಲಹುದೇ–ಆನೆ ತುಳಿದರಾದೀತೇ? ಚಾಣ–ಉಳಿ, ಟಂಕ; ಕಿರು–ಚಿಕ್ಕದಾದ; ಉಪಾಯಪರ–ಉಪಾಯವನ್ನು ಬಲ್ಲವನು; ಓರ್ವಂ–ಒಬ್ಬನು; ಈಡು–ಸಮಾನ; ಹೆಮ್ಮರ–ಹಿರಿದಾದ ಮರ; ಬಲ್ಭಾರಮಂ–ಬಲು ಭಾರವಾದುದನ್ನು; ಸನ್ನೆ–ಮೀಟುಗೋಲು; ಕಾಲಾಳು–ಚತುರಂಗ ಬಲದಲ್ಲಿ ಒಂದು, ಸೈನ್ಯ.

೫. ಇರಿ–ಕೊಲ್ಲು, ಚುಚ್ಚು, ತಿವಿ; ಧರೆ–ಭೂಮಿ; ಚಮತ್ಕಾರ–ಸೋಜಿಗ, ವಿಸ್ಮಯ, ಚತುರತೆ; ಅರಿ–ತಿಳಿದುಕೋ; ವಿಭು–ಪ್ರಭು; ತೊರೆ–ತ್ಯಜಿಸು; ಯೋಗಿ–ಚಿತ್ತವೃತ್ತಿ ನಿರೋಧ ಮಾಡಬಲ್ಲವನು, ಯತಿ; ಅರಿಷಡ್ವರ್ಗಗಳು–ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳು; ಪೊಣೆ–ಹೊಣೆ.

೬. ಪೊಡೆ–ಹೊಟ್ಟೆ; ಪಂಕ–ಕೆಸರು; ಮೀಯ್–ಸ್ನಾನಮಾಡು; ಕಾಕಾಳಿ–ಕಾಗೆಗಳು; ಗುಡಪಾನಂ–ಬೆಲ್ಲದ ಪಾನಕ; ಮಡಿ–ನೈರ್ಮಲ್ಯ, ಪರಿಶುದ್ಧತೆ; ಚಿತ್ತ–ಮನಸ್ಸು.

## ಟಿಪ್ಪಣಿ:

**ಶತಕ ಸಾಹಿತ್ಯ:** ನೂರು ಪದ್ಯಗಳಿಂದ ಕೂಡಿದ ಗ್ರಂಥವನ್ನು ಶತಕ ಎಂಬ ಹೆಸರಿನಿಂದ ಕರೆಯುತ್ತಾರೆ. ಕನ್ನಡದ ಚಂಪೂ, ಷಟ್ಪದಿ, ವಚನ, ತ್ರಿಪದಿ, ಸಾಂಗತ್ಯ, ಮೊದಲಾದ ಸಾಹಿತ್ಯ ಪ್ರಕಾರಗಳಂತೆ ಶತಕ ಸಾಹಿತ್ಯವೂ ಒಂದು ಪ್ರಕಾರ. ಇದು ಕಂದ, ವೃತ್ತ, ಷಟ್ಪದಿ, ಸಾಂಗತ್ಯ ಮುಂತಾದ ಛಂದಸ್ಸಿನಲ್ಲಿ ರಚಿತವಾಗಿರುತ್ತವೆ. ಇದೊಂದು ಆತ್ಮನಿಷ್ಠವಾದ, ಭಾವನಿಷ್ಠವಾದ ಒಂದು ಕಾವ್ಯ ಪ್ರಕಾರ. ಮಹಾಕಾವ್ಯ, ಖಂಡಕಾವ್ಯಗಳಂತೆ ವಸ್ತುನಿಷ್ಠವಲ್ಲ.

ಕಥಾವಸ್ತುವನ್ನೊಳಗೊಂಡಿರುವುದಿಲ್ಲ. ಕವಿಯ ಮನೋಲಹರಿ ಹರಿದಂತೆ ಹಲವಾರು ಸಂದರ್ಭಗಳಲ್ಲಿ ರಚಿತವಾದ ಪದ್ಯಗಳು ಒಂದು ವಿಷಯದ ಏಕಸೂತ್ರಕ್ಕೆ ಒಳಗಾಗಿರುತ್ತವೆ. ಈ ಕಾರಣದಿಂದಲೇ ಶತಕಗಳನ್ನು ಪ್ರಾಚೀನಕಾಲದ ಭಾವಗೀತೆಗಳೆಂದು ವಿದ್ವಾಂಸರು ಗುರುತಿಸಿದ್ದಾರೆ.

ಭಕ್ತಿ, ಜ್ಞಾನ, ವೈರಾಗ್ಯ, ನೀತಿಗಳನ್ನು ಪ್ರತಿಪಾದಿಸುವುದು ಶತಕಗಳ ಸಾಮಾನ್ಯ ಲಕ್ಷಣವೆನ್ನಬಹುದು. ನೂರು ಪದ್ಯಗಳಿಂದ ಕೂಡಿದ ಗ್ರಂಥವನ್ನು ಶತಕವೆಂದು ಕರೆಯುವ ವಾಡಿಕೆ ಇದ್ದರೂ ಕನ್ನಡದಲ್ಲಿ ನೂರರಿಂದ ನೂರಿಪ್ಪತ್ತೆಂಟು ಪದ್ಯಗಳಿರುವ ಶತಕಗಳೂ ಕಂಡುಬರುತ್ತವೆ. ಕನ್ನಡದಲ್ಲಿ ನಾನೂರಕ್ಕೂ ಹೆಚ್ಚು ಶತಕಗಳಿವೆಯೆಂದು ಸಾಹಿತ್ಯ ಚರಿತ್ರಕಾರರು ಅಭಿಪ್ರಾಯಪಟ್ಟಿದ್ದಾರೆ. ನಾಗವರ್ಮಾಚಾರ್ಯನ (ಸು. ೧೦೭೧) ಚಂದ್ರಚೂಡಾಮಣಿ ಶತಕ ಕನ್ನಡದ ಮೊತ್ತಮೊದಲನೆಯ ಶತಕ ಗ್ರಂಥ. ಎಷ್ಟೋ ಶತಕಗಳ ಕರ್ತೃ ಯಾರೆಂಬ ವಿಚಾರ ತಿಳಿದುಬಂದಿಲ್ಲ. ಹರಿಹರ, ಪುಲಿಗೆರೆ ಸೋಮನಾಥ, ದೇವರಾಜ, ರತ್ನಾಕರವರ್ಣಿ ಮುಂತಾದ ಕವಿಗಳು ಜನಪ್ರಿಯವಾದ ಶತಕಗಳನ್ನು ರಚಿಸಿದವರು. ಬಹುಪಾಲು ಕನ್ನಡ ಶತಕಗಳು ಸ್ತೋತ್ರ, ದೈವನಾಮಾವಳಿಯಿಂದ ತುಂಬಿ ಸಾಹಿತ್ಯದ ಪರಿಧಿಯಿಂದಾಚೆ ಉಳಿದಿವೆ.

## : ಅಭ್ಯಾಸ ಭಾಗ :

### ಅ) ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು:

೧. ಕೆಲವಂ ಬಲ್ಲವರಿಂದ ಕಲ್ತು.

೨. ಆಪತ್ತಿನೊಳ್ ಮಣಿದುಂ ನೋಡದ ಬಂಧುವೇತಕೆ.

೩. ತೃಣವೇ ಪರ್ವತವಲ್ಲವೇ.

೪. ಚೇಳ್ ಚಿಕ್ಕದೆಂದಳ್ಕರಿಂ ತೆಗೆಯಲ್ ಕಚ್ಚದೇ.

೫. ಪಗೆಯಂ ಬಾಲಕನೆಂಬರೆ.

೬. ಲೋಕದೊಳ್ ಮಡಿಯೇ ನಿರ್ಮಲ ಚಿತ್ತವೈ.

### ಆ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):

೧. ಹಲವು ಹಳ್ಳಗಳು ಸೇರಿ ಏನಾಗುತ್ತದೆ?

೨. ನಿಷ್ಪ್ರಯೋಜಕನಾದ ಮಗ ಯಾರು?

೩. ಹಗೆಯನ್ನು ಏನೆಂದು ಉಪೇಕ್ಷಿಸಬಾರದೆಂದು ಸೋಮನಾಥನು ಹೇಳಿದ್ದಾನೆ?

೪. ವೀರನಾದವನು ಏನನ್ನು ಬಲ್ಲವನಾಗಿರಬೇಕೆಂದು ಸೋಮನಾಥನು ಹೇಳಿದ್ದಾನೆ?

೫. ಯಾರನ್ನು ಯೋಗಿ ಎನ್ನಬಹುದು?

## ಇ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):

೧. ಯಾರಿಂದ ಯಾವುದನ್ನು ಹೇಗೆ ಕಲಿಯಬೇಕೆಂದು ಸೋಮನಾಥನು ಹೇಳಿದ್ದಾನೆ?

೨. ಧನ ಮತ್ತು ಸುತನ ವಿಷಯದಲ್ಲಿ ಸೋಮನಾಥನ ಅಭಿಪ್ರಾಯವೇನು?

೩. ರಾಜ ಮತ್ತು ಮಂತ್ರಿಗಳಿಗೆ ಯಾವ ಅರ್ಹತೆಗಳಿರಬೇಕೆಂದು ಸೋಮನಾಥನು ಹೇಳಿದ್ದಾನೆ?

೪. ಶುಚಿ ಮತ್ತು ಸ್ವಾದಗಳನ್ನು ಕುರಿತು ಸೋಮನಾಥನ ಅಭಿಪ್ರಾಯವೇನು?

## ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):

೧. ಜ್ಞಾನವನ್ನು ಹೊಂದುವ ಮಾರ್ಗ ಯಾವುದೆಂಬುದನ್ನು ಕವಿ ಹೇಗೆ ವಿವರಿಸಿದ್ದಾನೆ?

೨. ಸಕಾಲಕ್ಕೆ ಒದಗುವ ಸಹಾಯವೇ ಶ್ರೇಷ್ಠ ಎಂಬುದನ್ನು ಕವಿ ಹೇಗೆ ತಿಳಿಸಿದ್ದಾನೆ?

೩. ಯಾವ ಯಾವ ಸಂಗತಿಗಳನ್ನು ಉಪೇಕ್ಷಿಸಬಾರದಾಗಿ ಸೋಮನಾಥನು ತಿಳಿಸಿದ್ದಾನೆ?

೪. ವೀರ, ಮಂತ್ರಿ, ರಾಜ ಮತ್ತು ಯೋಗಿಗಳಿಗೆ ಇರಬೇಕಾದ ಅರ್ಹತೆಗಳೇನು?

೫. ನಿರ್ಮಲಚಿತ್ತದ ಅಗತ್ಯವನ್ನು ಸೋಮನಾಥ ಹೇಗೆ ನಿರೂಪಿಸಿದ್ದಾನೆ?

## ಭಾಷಾಭ್ಯಾಸ :

೧. 'ಪ'ಕಾರವು 'ಹ'ಕಾರವಾಗುವುದಕ್ಕೆ ಉದಾಹರಣೆಗಳು:

ಪಲವು > ಹಲವು; ಪಳ್ಳ > ಹಳ್ಳ; ಪಾಲು > ಹಾಲು; ಪೊಣೆ > ಹೊಣೆ; ಪಗೆ > ಹಗೆ ಮೊದಲಾದ ಪ್ರಯೋಗಗಳಲ್ಲಿ ಇದನ್ನು ಗಮನಿಸಬಹುದು.

೨. ಇವುಗಳ ತತ್ಸಮ ರೂಪಗಳನ್ನು ತಿಳಿಸಿ:

ಗೂಗೆ, ಜೋಗಿ, ಬೀರ, ಧರೆ.

೩. ನಾನಾರ್ಥಗಳನ್ನು ಗಮನಿಸಿ:

ನರ – ಮನುಷ್ಯ, ದೇಹದ ನರ(ಸಂಜ್ಞಾ ವಾಹಕ); ತೊರೆ – ಹೊಳೆ, ತ್ಯಜಿಸು; ಅರಿ – ವೈರಿ, ತಿಳಿ; ಮಡಿ – ನಿರ್ಮಲ, ಸಾಯಿ; ತೆರ – ತೆರಿಗೆ, ರೀತಿ, ದಂಡ, ಕನ್ಯಾಶುಲ್ಕ.

೪. ಇವುಗಳ ಗುಣವಾಚಕಗಳನ್ನು ಗುರುತಿಸಿ:

ಗೂಗೆಮರಿ, ಹೆಮ್ಮರ, ಕಡುಪಾಪ.

೫. ವಿಭಕ್ತಿ ಪ್ರತ್ಯಯಗಳು: ಹಳಗನ್ನಡ ನಡುಗನ್ನಡದಲ್ಲಿ ಸಾಮಾನ್ಯವಾಗಿ ಬಳಕೆಯಾಗುವ ವಿಭಕ್ತಿ ಪ್ರತ್ಯಯಗಳು: ಮ್, ಅಮ್, ಇಮ್, ಕೆ, ಅತ್, ಅ, ಒಳ್ ಮೊದಲಾದವು ಈ ಶತಕದಲ್ಲಿ ಬಳಕೆಯಾಗಿರುವುದನ್ನು ಗಮನಿಸಬಹುದು.

*ಉದಾ:* ಕೆಲವಂ, ಶಾಸ್ತ್ರಂಗಳಂ (ಅಮ್–ದ್ವಿತಿಯಾ ವಿಭಕ್ತಿ ಪ್ರತ್ಯಯ)

ಸುಜ್ಞಾನದಿಂ (ಇಮ್–ತೃತಿಯಾ ವಿಭಕ್ತಿ ಪ್ರತ್ಯಯ)

ಧರೆಯೊಳ್ (ಒಳ್–ಸಪ್ತಮೀ ವಿಭಕ್ತಿ ಪ್ರತ್ಯಯ)

೬. ಸಮುಚ್ಚಯ ಪದ: ಎರಡು ಪದ ಮತ್ತು ವಾಕ್ಯಗಳನ್ನು ಜೋಡಿಸುವ ಉಂ, ಊ, ಮತ್ತು, ಹಾಗೂ, ವ – ಇತ್ಯಾದಿಗಳು ಸಮುಚ್ಚಯದ ಪದಗಳೆನಿಸುತ್ತವೆ. ಈ ಶತಕದಲ್ಲಿ,

*ಸಮುಚ್ಚಯದ 'ಉಂ' ಪದದ ಬಳಕೆ:* ಶತಕದ ಪದ್ಯದಲ್ಲಿ ಬಳಕೆಯಾಗಿರುವ 'ನುಡಿದುಂ' ಎಂಬ ಪದದಲ್ಲಿ ಸಮುಚ್ಚಯದ ಪದವಾದ 'ಉಂ' ಬಳಕೆಯಾಗಿರುವುದನ್ನು ಗಮನಿಸಬಹುದು (ನುಡಿದು+ಉಂ–ನುಡಿದುಂ). ಹೊಸಗನ್ನಡದಲ್ಲಿ 'ಊ' ಎಂದು ಬಳಸಿಕೊಂಡು ಸಮುಚ್ಚಯದ ಪದವನ್ನು ಉಪಯೋಗಿಸುತ್ತಾರೆ. ಹಾಗೂ, ಮತ್ತು, ವ ಎಂಬ ಪದಗಳನ್ನು ಸಮುಚ್ಚಯ ಪದವಾಗಿ ಬಳಸುವುದುಂಟು.

*ಉದಾ:* ನಾನೂ–ನೀನೂ, ಮಲ್ಲಿಗೆ ಹಾಗೂ ಸಂಪಿಗೆ, ಸಿಹಿ ಮತ್ತು ಕಹಿ, ಕಲೆ ಮತ್ತು ವಿಜ್ಞಾನ ಇತ್ಯಾದಿ.

೭. ನಡುಗನ್ನಡದ ರೂಪಗಳು: ಈ ಪದ್ಯಗಳಲ್ಲಿ ಸಮುದ್ರವೈ, ಚಿತ್ತವೈ, ಬಲ್ಲೊಡೆ, ಉಳ್ಳೊಡೆ, ಗೆಲ್ದೊಡೆ, ಅಹುದೇ ಮೊದಲಾದ ನಡುಗನ್ನಡ ರೂಪಗಳು ಬಳಕೆಯಾಗಿರುವುದನ್ನು ಗಮನಿಸಬಹುದು.

## ಆಕರ:

ಕೃತಿ : ಸೋಮೇಶ್ವರ ಶತಕ (೧೯೮೫ರ ಆವೃತ್ತಿ)
ಕರ್ತೃ : ಪುಲಿಗೆರೆ ಸೋಮನಾಥ
ಪ್ರಕಾಶಕರು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ.

## ಹೆಚ್ಚಿನ ಓದಿಗೆ :

೧. ನಾಗವರ್ಮಾಚಾರ್ಯನ ಚಂದ್ರಚೂಡಾಮಣಿ ಶತಕ

೨. ಹರಿಹರನ ರಕ್ಷಾ ಶತಕ, ಪಂಪಾ ಶತಕ

೩. ರತ್ನಾಕರವರ್ಣಿಯ ಶತಕತ್ರಯಗಳು

೪. ದೇವಲಾಪುರದ ನಂಜುಂಡ ಕವಿಯ ಶೃಂಗಾರ ಶತಕ

೫. ಕನ್ನಡ ಸಾಹಿತ್ಯ ಪರಿಷತ್ತಿನ ಸೋಮೇಶ್ವರ ಶತಕ ಸಂಗ್ರಹ

**ಅರಿವೇ ಗುರು, ಆಚಾರವೇ ಶಿಷ್ಯ,**
**ಜ್ಞಾನವೇ ಲಿಂಗ, ಪರಿಣಾಮವೇ ತಪ,**
**ಸಮತೆ ಎಂಬುದೇ ಯೋಗ ನೋಡಾ.**

*– ಹಾವಿನಹಾಳ ಕಲ್ಲಯ್ಯ, ಕ್ರಿ.ಶ. ೧೧೫೦*

# ೫. ಜಾಲಿಯ ಮರದಂತೆ

– *ಪುರಂದರದಾಸರು*

*ಸಮಾಜದಲ್ಲಿ ಅಪಾತ್ರರಾದವರಿಗೆ ದೊರೆಯುತ್ತಿರುವ ಮಹತ್ತ್ವ, ಗೌರವಗಳು ಸತ್ಪಾತ್ರರಿಗೆ ದೊರಕುತ್ತಿಲ್ಲ. 'ಜಾಲಿಯ ಮರವು ನೆರಳಲ್ಲ' ಎಂದು ಜಾನಪದರೂ ಹಾಡಿದ್ದಾರೆ. ಆದರೂ ಜಾಲಿಮರದಂತಿರುವವರ ವಿಜೃಂಭಣೆಯು ಸಮಾಜ ಜೀವನದಲ್ಲಿ ಎಲ್ಲೆಂದರಲ್ಲಿ ಉಗ್ರವಾಗಿ ಬೆಳೆಯುತ್ತಾ ನಡೆದಿದೆ.*

*ಜಾಲಿಮರ–ದುರ್ಜನರ ವೃಂದ ಎರಡನ್ನೂ ಸಮೀಕರಿಸಿ ಪುರಂದರದಾಸರು ರಚಿಸಿರುವ ಈ ರಚನೆಯಲ್ಲಿ ಹೂವಿಲ್ಲದ, ಹಣ್ಣಿಲ್ಲದ, ನೆರಳಿಲ್ಲದ ರಸಹೀನವಾದ ಜಾಲಿಯ ಮರವು ಸಮಾಜ ಕಂಟಕರ ಇದೇ ಬಗೆಯ ಅವಗುಣಗಳನ್ನು ಧ್ವನಿಸುತ್ತದೆ. ಸತ್ಪುರುಷರಿಗೆ ದುರ್ಜನರು ಆಶ್ರಯ ಕೊಡುವುದಿಲ್ಲ. ದುರ್ಬಲರಿಗೆ ಸಹಾಯ ಮಾಡುವುದಿಲ್ಲ. ಜ್ಞಾನಗಂಧವಾಗಲೀ, ಸ್ನೇಹರಸವಾಗಲೀ ಅವರಲ್ಲಿಲ್ಲ. ಆಮೂಲಾಗ್ರವಾಗಿ ಕಂಟಕ ವೃತ್ತಿಯನ್ನೇ ಮೆರೆಸುವ ದುರ್ಜನರ ಸ್ವಭಾವ ಚಿತ್ರಣ ಈ ಕೀರ್ತನೆಯಲ್ಲಿ ಸಮರ್ಥವಾಗಿ ರೂಪಿತವಾಗಿದೆ.*

ಜಾಲಿಯ ಮರದಂತೆ ಧರೆಯೊಳು ದುರ್ಜನರು ॥ ಪ ॥
ಮೂಲಾಗ್ರ ಪರಿಯಂತ ಮುಳ್ಳು ಕೂಡಿಪ್ಪಂತೆ ॥ ಅ ॥

ಬಿಸಿಲಲ್ಲಿ ಬಳಲಿ ಬಂದವರಿಗೆ ನೆರಳಿಲ್ಲ
ಹಸಿದು ಬಂದವರಿಗೆ ಹಣ್ಣು ಇಲ್ಲ
ಕುಸುಮ ವಾಸನೆಯಿಲ್ಲ ಕೂಡಲು ಸ್ಥಳವಿಲ್ಲ
ರಸದಲ್ಲಿ ಸ್ವಾದವು ವಿಷದಂತೆ ಇರುತಿಹ ॥ ೧ ॥

ಊರಹಂದಿಗೆ ಷಡ್ರಸಾನ್ನವನಿಕ್ಕಲು
ನಾರುವ ದುರ್ಗಂಧ ಬಿಡಬಲ್ಲುದೆ
ಘೋರಪಾಪಿಗೆ ತತ್ವಜ್ಞಾನವ ಪೇಳಲು
ಕ್ರೂರ ಕರ್ಮವ ಬಿಟ್ಟು ಸುಜನನಾಗುವನೆ ॥ ೨ ॥

ತನ್ನಿಂದ ಉಪಕಾರ ತೊಟಕಾದರೂ ಇಲ್ಲ
ಬಿನ್ನಾಣದ ಮಾತಿಗೆ ಕೊನೆಯಿಲ್ಲ
ಅನ್ನಕ್ಕೆ ಸೇರಿದ ಕುನ್ನಿ ಮಾನವರಂತೆ
ಇನ್ನಿವರ ಕಾರ್ಯವು ಪುರಂದರವಿಠಲ ॥ ೩ ॥

## ಕವಿ–ಕಾವ್ಯ ಪರಿಚಯ :

'ಪುರಂದರವಿಠಲ' ಎಂಬ ಅಂಕಿತದಿಂದ ಪ್ರಸಿದ್ಧರಾಗಿರುವ **ಪುರಂದರದಾಸರು** ಸುಮಾರು ೧೪೮೪ರಲ್ಲಿ ಜನಿಸಿದರೆಂದು ಸಾಹಿತ್ಯ ಚರಿತ್ರಕಾರರು ಅಭಿಪ್ರಾಯಪಟ್ಟಿದ್ದಾರೆ. ಇವರ ಪೂರ್ವದ ಹೆಸರು ಶ್ರೀನಿವಾಸನಾಯಕ ಎಂಬುದು. ಮುತ್ತುರತ್ನಗಳ ವ್ಯಾಪಾರಿಗಳಾಗಿದ್ದ ಇವರು ಐಹಿಕಾಸಕ್ತಿಗಳಲ್ಲಿ ವೈರಾಗ್ಯ ಉಂಟಾದ ಕಾರಣ ತಮ್ಮ ಸಮಸ್ತ ಐಶ್ವರ್ಯವನ್ನೂ ದಾನಮಾಡಿ ಹರಿದಾಸರಾದರು, ಶ್ರೀ ವ್ಯಾಸರಾಯರನ್ನು ಆಶ್ರಯಿಸಿದರು. ಶ್ರೀ ವ್ಯಾಸರಾಯರೇ ಇವರಿಗೆ 'ಪುರಂದರವಿಠಲ' ಎಂಬ ಅಂಕಿತವನ್ನು ನೀಡಿದರಂತೆ. ಕೀರ್ತನೆ, ಪದ, ಸುಳಾದಿ, ಉಗಾಭೋಗ ಮುಂತಾದ ಪ್ರಕಾರಗಳಲ್ಲಿ ಲಕ್ಷಾಂತರ ಹಾಡುಗಳನ್ನು ರಚಿಸಿರುವೆನೆಂದು ತಾವೇ ತಮ್ಮ ದೇವರನಾಮವೊಂದರಲ್ಲಿ ಹೇಳಿಕೊಂಡಿರುವರಾದರೂ ನಮಗೆ ಸಿಕ್ಕಿರುವ ಅವರ ಕೀರ್ತನೆಗಳ ಸಂಖ್ಯೆ ಎಂಟುನೂರರಷ್ಟು ಮಾತ್ರ. ಪಕ್ವವಾದ ಜೀವನಾನುಭವ, ಸಮಾಜದ ಹಿತ, ಅಧ್ಯಾತ್ಮದ ಅಗತ್ಯಗಳನ್ನು ಪುರಂದರದಾಸರು ತಮ್ಮ ರಚನೆಗಳಲ್ಲಿ ಒತ್ತಿ ಹೇಳಿದ್ದಾರೆ. ಇವರ ಕೀರ್ತನೆಗಳು ಕರ್ನಾಟಕ ಸಂಗೀತವನ್ನು ಉಜ್ವಲಗೊಳಿಸಿದ್ದರಿಂದ 'ಕರ್ನಾಟಕ ಸಂಗೀತ ಪಿತಾಮಹ' ಎಂಬ ಹೆಗ್ಗಳಿಕೆಯೂ ಇವರದಾಗಿದೆ. 'ದಾಸರೆಂದರೆ ಪುರಂದರ ದಾಸರಯ್ಯ' ಎಂದು ವ್ಯಾಸರಾಯರಿಂದ ಹೊಗಳಿಸಿಕೊಂಡ ಪುರಂದರದಾಸರ ಸಾಹಿತ್ಯ ಕೃಷಿ ಅತ್ಯಂತ ಜನಪ್ರಿಯವಾದುದು. ೧೫೬೪ ಪುಷ್ಯ ಬಹುಳ ಅಮಾವಾಸ್ಯೆಯಂದು ಇವರು ಕಾಲವಾದರೆಂದು ನಂಬಲಾಗಿದೆ.

ಪುರಂದರದಾಸರು ಸಮಾಜ ವಿಮರ್ಶೆಯನ್ನು ಕುರಿತು ರಚಿಸಿರುವ ಬಹುಪಾಲು ಕೀರ್ತನೆಗಳಲ್ಲಿ ಅನೀತಿ, ಅನಾಚಾರ, ಸುಳ್ಳು, ಕಪಟ, ಬೂಟಾಟಿಕೆ, ಡಾಂಬಿಕತೆಗಳನ್ನು ಕಟುವಾಗಿ ಟೀಕಿಸಿದ್ದಾರೆ. ಸತ್ಯಧರ್ಮ, ನೈಜನೀತಿ, ಜೀವನ ನಿಷ್ಠೆ, ಪ್ರಾಮಾಣಿಕತೆಯ ಮೌಲ್ಯಗಳನ್ನು ಅನುಸರಿಸಿ ಬದುಕುತ್ತಿರುವವರಿಗಿಂತಲೂ ದುರ್ಜನರಿಗೆ ಸಿಗುವ ಪ್ರಾಶಸ್ತ್ಯವನ್ನು ಪ್ರಸ್ತುತ ಕೀರ್ತನೆಯಲ್ಲಿ ಲೇವಡಿ ಮಾಡಿದ್ದಾರೆ. ಸಮಾಜಕ್ಕೆ ನಿಷ್ಪ್ರಯೋಜಕರಾದವರನ್ನು ಜಾಲಿಯ ಮರಕ್ಕೆ ಹೋಲಿಸಿರುವುದು ಔಚಿತ್ಯಪೂರ್ಣವಾಗಿದೆ. ಈ ಹೋಲಿಕೆಯ ಹಿಂದೆ 'ಮುಳ್ಳಾಗಬೇಡ, ಹೂವಾಗು' ಎಂಬ ಆಶಯವಿರುವುದನ್ನು ಗಮನಿಸಿದರೆ ಪುರಂದರದಾಸರ ಸಾಮಾಜಿಕ ಕಳಕಳಿ, ನೀತಿಬೋಧೆಯ ಸತ್ವ ಅರಿವಾಗಬಹುದು.

## ಶಬ್ದಾರ್ಥ:

ಧರೆ–ಭೂಮಿ; ದುರ್ಜನ–ಕೆಟ್ಟ ಜನ; ಮೂಲಾಗ್ರ ಪರಿಯಂತ–ಬುಡದಿಂದ ತುದಿಯವರೆಗೆ; ಬಳಲಿ–ಆಯಾಸಗೊಂಡು, ದಣಿದು; ಕುಸುಮ–ಹೂವು; ಸ್ವಾದ–ರುಚಿ; ಷಡ್ರಸಾನ್ನ–ಉಪ್ಪು, ಕಾರ, ಸಿಹಿ, ಕಹಿ, ಹುಳಿ ಮತ್ತು ಒಗರುಗಳೆಂಬ ಆರು ಬಗೆಯ ರುಚಿಭೇದಗಳುಳ್ಳ ಆಹಾರ; ನಾರು–ವಾಸನೆ ಬೀರು; ಕರ್ಮ–ಕೆಲಸ; ತೊಟಕು–ಸ್ವಲ್ಪವಾದರೂ; ಬಿನ್ನಾಣ–ಒನಪು, ಒಯ್ಯಾರ, ಸೊಬಗು, ಹಾಸ್ಯ, ಗೇಲಿ; ಕುನ್ನಿ–ನಾಯಿ.

## : ಅಭ್ಯಾಸ ಭಾಗ :

### ಅ) ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು:

೧. ಮೂಲಾಗ್ರ ಪರಿಯಂತ ಮುಳ್ಳು ಕೂಡಿಪ್ಪಂತೆ.

೨. ಕುಸುಮವಾಸನೆಯಿಲ್ಲ ಕೂಡಲು ಸ್ಥಳವಿಲ್ಲ.

೩. ನಾರುವ ದುರ್ಗಂಧ ಬಿಡಬಲ್ಲುದೆ.

೪. ಬಿನ್ನಾಣದ ಮಾತಿಗೆ ಕೊನೆಯಿಲ್ಲ.

## ಆ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):

೧. ಜಾಲಿಯ ಮರದಂತಿರುವವರು ಯಾರು?

೨. ಯಾರಿಗೆ ನೆರಳು ಸಿಗುವುದಿಲ್ಲ?

೩. ಜಾಲಿಯ ರಸಸ್ವಾದ ಹೇಗಿರುತ್ತದೆ?

೪. ದುರ್ಗಂಧ ಬಿಡದಿರುವುದು ಯಾವುದು?

೫. ಯಾವ ಮಾತಿಗೆ ಕೊನೆಯಿಲ್ಲವೆಂದು ಪುರಂದರದಾಸರು ಹೇಳಿದ್ದಾರೆ?

೬. ಜಾಲಿಯ ಮುಳ್ಳು ಹೇಗೆ ಆವರಿಸಿರುತ್ತದೆ?

೭. ತತ್ವಜ್ಞಾನವನ್ನು ಕೇಳದವರಾರು?

## ಇ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):

೧. ಜಾಲಿಯ ಮರದ ನಿರರ್ಥಕತೆಯನ್ನು ಪುರಂದರದಾಸರು ಹೇಗೆ ತಿಳಿಸಿದ್ದಾರೆ?

೨. ಯಾರಿಗೆ ಷಡ್ರಸಾನ್ನವನಿಕ್ಕಿ ಉಪಯೋಗವಿಲ್ಲ? ಏಕೆ?

೩. ಯಾರಿಗೆ ತತ್ವಜ್ಞಾನ ಹೇಳಿ ಪ್ರಯೋಜನವಿಲ್ಲ?

೪. ದುರ್ಜನರ ಕಾರ್ಯ ಯಾವ ಬಗೆಯದು?

## ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):

೧. ಜಾಲಿಯ ಮರವು ನಿರುಪಯುಕ್ತವೆಂಬುದನ್ನು ಪುರಂದರದಾಸರು ಹೇಗೆ ನಿರೂಪಿಸಿದ್ದಾರೆ?

೨. ಜಾಲಿಮರ ಮತ್ತು ದುರ್ಜನರನ್ನು ಸಮೀಕರಿಸಿರುವುದರ ಔಚಿತ್ಯವನ್ನು ಚರ್ಚಿಸಿ.

೩. ಸಮಾಜ ಕಂಟಕರ ಬಗೆಗೆ ಪುರಂದರದಾಸರ ಅಭಿಪ್ರಾಯಗಳನ್ನು ಸಂಗ್ರಹಿಸಿರಿ.

## ಭಾಷಾಭ್ಯಾಸ :

೧. ದುರ್ಜನರು – ಸುಜನರು, ಸ್ವಾದ – ವಿಷ ಈ ಮುಂತಾದ ಪದಗಳ ವೈರುಧ್ಯವನ್ನು ಗಮನಿಸಿರಿ.

೨. ಘೋರಪಾಪಿ, ದುರ್ಜನ, ದುರ್ಗಂಧ – ಈ ಪದಗಳಲ್ಲಿರುವ ಗುಣವಾಚಕಗಳನ್ನು ಗುರುತಿಸಿರಿ.

೩. ರಸ, ಪರಿ, ಕೊನೆ, ನಾರು – ಇವುಗಳಿಗೆ ನಾನಾರ್ಥಗಳನ್ನು ಬರೆಯಿರಿ.

೪. ಧರೆ, ಕುಸುಮ, ಕರ್ಮ, ಬಿನ್ನಾಣ, ಕುನ್ನಿ – ಇವುಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

೫. ದುರ್ಜನರು, ಬಿಸಿಲಲ್ಲಿ, ಪಾಪಿಗೆ, ಹಣ್ಣಿನಲ್ಲಿ – ಇವುಗಳ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ.

## ಚಟುವಟಿಕೆ :

೧. ದುರ್ಜನರ ಸ್ವಭಾವ ವಿಶ್ಲೇಷಣೆಯನ್ನು ಪುರಂದರದಾಸರು ನಿರೂಪಿಸಿರುವ ಬಗೆಯನ್ನು ಸಹಾಧ್ಯಾಯಿಗಳೊಂದಿಗೆ ಚರ್ಚಿಸಿ.

೨. ಸಮಾಜಘಾತುಕ ಶಕ್ತಿಗಳಿಗೇ ಸಮಾಜದಲ್ಲಿ ಗೌರವಾದರಗಳು ದೊರಕುವ ಬಗ್ಗೆ ಕಳಕಳಿ–ಕಳವಳವನ್ನು ಕವಿ ವ್ಯಕ್ತಪಡಿಸಿರುವುದನ್ನು ಗಮನಿಸಿ.

೩. ಸಮಾಜದಲ್ಲಿ ಬದುಕುವವರ ಸ್ವಭಾವ ವಿಶ್ಲೇಷಣೆ ಮಾಡಿರುವ ಇತರ ಹರಿದಾಸರ ಕೀರ್ತನೆಗಳೊಂದಿಗೆ ಪ್ರಸ್ತುತ ಕೀರ್ತನೆಯನ್ನು ಹೋಲಿಸಿರಿ.

೪. ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯಗಳನ್ನು ತುಲನಾತ್ಮಕವಾಗಿ ಅಭ್ಯಾಸ ಮಾಡಿ. ಅವುಗಳ ಆಶಯಗಳಲ್ಲಿ ಸಾಮ್ಯತೆ ಇರುವುದನ್ನು ಗಮನಿಸಿ.

## ಆಕರ :

ಕೃತಿ : ಪುರಂದರ ಸಾಹಿತ್ಯ ದರ್ಶನ, ಸಂಪುಟ–೪

ಸಂಪಾದಕರು : ಸಾ.ಕೃ. ರಾಮಚಂದ್ರರಾವ್

ಪ್ರಕಾಶಕರು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ.

## ಹೆಚ್ಚಿನ ಓದಿಗೆ :

೧. ಜನರ ನಡತೆ ಕೇಳಿರಯ್ಯ – ಪುರಂದರದಾಸರ ಕೀರ್ತನೆ.

೨. ಪ್ರಮುಖ ವಚನಕಾರರು – ಹರಿದಾಸರು ಮಾಡಿರುವ ಸಮಾಜ ವಿಮರ್ಶೆಯ ರಚನೆಗಳು.

**ಕತ್ತೆಗೆ ಕರ್ಪೂರ ಯೋಗ್ಯವೆ?**

**ಮರ್ಕಟಂಗೆ ಮುಕುರ ಸಾಮ್ಯವೆ?**

– **ಆದಯ್ಯ**, ಕ್ರಿ. ಶ. ೧೧೩೦

# ೬. ಹಬ್ಬಲಿ ಅವರ ರಸಬಳ್ಳಿ

– *ಜನಪದ*

*ಜನಪದ ಸಾಹಿತ್ಯದಲ್ಲಿ 'ತ್ರಿಪದಿ'ಯು ಪದ್ಯ ಪ್ರಕಾರಕ್ಕೆ ಸಂಬಂಧಿಸಿದುದಾಗಿದೆ. ಜನಪದ ಗೀತ ಪ್ರಕಾರ ತುಂಬಾ ಜನಪ್ರಿಯವಾದುದು. ತ್ರಿಪದಿಗಳಲ್ಲಿ ಬಡತನ–ಸಿರಿತನ; ನಡೆನುಡಿ; ನೆರೆಹೊರೆಯ ಸಂಬಂಧ; ಬಡತನದ ಬದುಕಿನ ಸಿಹಿ–ಕಹಿ ಹಾಗೂ ತವರು ಮನೆಯ ತಣ್ಣನೆಯ ನೆನಪಿದೆ. ಇದರೊಳಗೆ ಜನಪದರು ಕಂಡ ತಾಯಿಯ ರೂಪ–ಸ್ವರೂಪ; ತೋರಿದ ಪ್ರೀತಿ, ಮಕ್ಕಳನ್ನು ಬೆಳೆಸಿದ ರೀತಿ ಇದೆ. ಜನಪದ ಲೋಕದ ಸುತ್ತೆಲ್ಲ ಇಂತಹ ಸಂಸ್ಕೃತಿ, ಬಿತ್ತರಿಸುವ ಹಾಡು–ಪಾಡಿನೊಂದಿಗೆ ತಾಯಿ ಮತ್ತು ತವರಿನ ಬಗೆಗಿನ ಪ್ರೀತಿ ಇಲ್ಲಿ ಅಭಿವ್ಯಕ್ತಗೊಂಡಿದೆ. ಜನಪದ ಸಾಂಸ್ಕೃತಿಕ ಪರಂಪರೆಯ ಮೌಲ್ಯಗಳು ಇಲ್ಲಿ ಅಡಕವಾಗಿವೆ.*

ಬಂಗಾರ ಬಳೆಯಿಟ್ಟು ಬೈಬ್ಯಾಡ ಬಡವರನ।
ಬಂಗಾರ ನಿನಗ ಸ್ಥಿರವಲ್ಲ। ಮಧ್ಯಾನದ।
ಬಿಸಿಲು ಹೊಳ್ಳೋದು ತಡವಲ್ಲ॥ ॥ ೧ ॥

ಬಡತನ ಬಂದರ ಬಡಿಬ್ಯಾಡ ಬಾಲರನ।
ಆಡ್ಯಾಡಿ ಬಂದು ತೊಡಿಮ್ಯಾಲ। ಆಡಿದರ।
ಬಡತನವೆಲ್ಲ ಬಯಲಾಗೆ॥ ॥ ೨ ॥

ಉತ್ತಮರ ಗೆಳೆತನ ಪುತ್ಥಳಿ ಬಂಗಾರ।
ಮತ್ತಹೀನರ ಗೆಳೆತನ। ಮಾಡಿದರ।
ಹಿತ್ತಾಳೆಗಿಂತ ಬಲುಹೀನ॥ ॥ ೩ ॥

ಮಂದಿಮಕ್ಕಳೊಳಗ ಛಂದಾಗೊಂದಿರಬೇಕ।
ನಂದೀಯ ಶಿವನ ದಯದಿಂದ। ಹೋಗಾಗ।
ಮಂದಿ ಬಾಯಾಗ ಇರಬೇಕ॥ ॥ ೪ ॥

ಇದ್ದರ ಇರಬೇಕು ಬುದ್ಧಿವಂತರ ನೆರೆಯ।
ಖುದ್ದರಗೇಡಿ ಕುಲಗೇಡಿ। ನೆರೆಯಿದ್ದು।
ಇದ್ದುಟ್ಟು ಬುದ್ಧಿ ಕಳಕೊಂಡ॥ ॥ ೫ ॥

ಹುಟ್ಟುವಾಗ ತರಲಿಲ್ಲ ಹೋಗುವಾಗೊಯ್ಯಲಾರೆ।
ಸುಟ್ಟು ಸುಟ್ಟು ಸುಣ್ಣದ್ಹರಳಾಯ್ತು। ದೇಹವು।
ಕಷ್ಟವನು ಬಿಡಿಸೊ ಸೃಷ್ಟಿಗೊಡೆಯ॥ ॥ ೬ ॥

ಬ್ಯಾಸಗಿ ದಿವಸಕ ಬೇವಿನ ಮರ ತಂಪ।
ಭೀಮರತಿಯೆಂಬ ಹೊಳಿ ತಂಪ। ಹಡೆದಮ್ಮ।
ನೀ ತಂಪ ನನ್ನ ತವರೀಗಿ॥ ॥ ೭ ॥

ಕಣ್ಣೆಂಜಲ ಕಾಡೀಗಿ ಬಾಯೆಂಜಲವೀಳ್ಯಾವ।
ಯಾರೆಂಜಲುಂಡು ನನಮನವ। ಹಡೆದೌವ್ನ।
ಬಾಯೆಂಜಲುಂಡು ಬೆಳೆದೇನ॥ ॥ ೮ ॥

ಯಾರು ಇದ್ದರು ನನ್ನ ತಾಯವ್ವನ್ಹೋಲರ।
ಸಾವಿರಕೊಳ್ಳಿ ಒಲಿಯಾಗ। ಇದ್ದರ।
ಜ್ಯೋತಿ ನಿನ್ಹ್ಯಾರ ಹೋಲರ॥ ॥ ೯ ॥

ಹೆಣ್ಣು ಮಕ್ಕಳ ದುಃಖ ಹೆತ್ತವ್ವ ಬಲ್ಲಳು।
ಹುತ್ತದ ಒಳಗಿರೋ ಸರುಪನ। ಬೇಗೆಯ।
ನೆತ್ತಿ ಮೇಲಿರುವ ಶಿವಬಲ್ಲ॥ ॥ ೧೦ ॥

ತಾಯೌವ್ನ ನೆನೆಯೂದು ಯಾಯಾಳಿ ಯಾಹೊತ್ತ।
ಊರೆಲ್ಲ ಉಂಡು ಮಲಗಾನ। ಬೆಳ್ಳಿಚಿಕ್ಕಿ।
ಹೊಂಡಾಗ, ಹಡೆದವ್ನ ನೆನದೇನ॥ ॥ ೧೧ ॥

ತಾಯವ್ವ ಬೈಬ್ಯಾಡ ತಿಳಿಗೇಡಿ ನನ ತಮ್ಮ।
ಬಾಳದಿನದಾಕಿ ಹಡೆದವ್ವನ। ಬೈದರ।
ಭಾಳ ಮರುಗ್ಯಾಳ ಮನದಾಗ॥ ॥ ೧೨ ॥

ತಾಯಿಲ್ಲದ ತವರೀಗಿ ಹೋಗದಿರು ನನ ಮನವ।
ನೀರಿಲ್ಲದ ಕೆರಿಗೆ ಕರು ಬಂದು। ತಿರುಗಾಗ।
ಆಗ ನೋಡವರ ದುಃಖಗಳ॥ ॥ ೧೩ ॥

ಉಂಗೂರ ಉಡದಾರ ಮುರಿದರ ಮಾಡಿಸಬಹುದು।
ಮಡದಿ ಸತ್ತರ ತರಬಹುದು। ಹಡೆದಂಥ।
ತಂದಿ ತಾಯೆಲ್ಲಿ ಸಿಕ್ಕಾರ॥ ॥ ೧೪ ॥

ಹಾಲುಂಡ ತವರೀಗಿ ಏನೆಂದು ಹರಸಲಿ।
ಹೊಳೆದಂಡಿಲಿರುವ ಕರಕೀಯ। ಕುಡಿಯಂಗ।
ಹಬ್ಬಲಿ ಅವರ ರಸಬಳ್ಳಿ॥ ॥ ೧೫ ॥

## ಕವಿ–ಕಾವ್ಯ ಪರಿಚಯ :

ಜನಪದ ಸಾಹಿತ್ಯ ಸಾಮೂಹಿಕ ಸೃಷ್ಟಿ. ಅದು ಅನಕ್ಷರಸ್ಥ ಜನಪದರ ನಾಲಗೆಯ ಮೇಲೆ ಜೀವಂತವಾಗಿರುವ ಕಂಠಸ್ಥ ಸಾಹಿತ್ಯ. ಕ್ರಿಯಾಮೂಲ ಸಾಹಿತ್ಯ. ನಮ್ಮ ಸಂಸ್ಕೃತಿಯ ಸಾರ ರೂಪವಾದ ಜನಪದ ಸಾಹಿತ್ಯ ಒಂದು ದೇಶದ ಬಹುಸಂಖ್ಯಾತರ ಆಶೋತ್ತರಗಳ ಪ್ರತೀಕವೂ ಹೌದು. ಜನಸಂಸ್ಕೃತಿಯ ಅಂತರಾಳದಲ್ಲಿ ಅವುಗಳ ಬೇರುಗಳಿರುತ್ತವೆ.

ಜನಪದ ಗೀತೆಗಳು ಜನಪದ ಸಾಹಿತ್ಯದ ಒಂದು ಮುಖ್ಯ ಪ್ರಕಾರ. ಇದರಲ್ಲಿ ಹೆಂಗಸರ ಹಾಡು, ಗಂಡಸರ ಹಾಡು, ಮಕ್ಕಳ ಹಾಡುಗಳೆಂದು ವಿಭಾಗಿಸಲಾಗಿದೆ. ಇವು ಬಾಯಿಂದ ಬಾಯಿಗೆ, ಪೀಳಿಗೆಯಿಂದ ಪೀಳಿಗೆಗೆ ಕಂಠಸ್ಥವಾಗಿ ಸಾಗಿಬಂದ ಸಾಹಿತ್ಯ. ಇದರಲ್ಲಿ ತ್ರಿಪದಿಗಳದ್ದು ಸಿಂಹಪಾಲು. ಜನಪದ ಕಾವ್ಯಛಂದಸ್ಸಿನಲ್ಲಿ ತ್ರಿಪದಿಗೆ ಪ್ರಥಮ ಸ್ಥಾನ. ಮೂರು ಸಾಲುಗಳುಳ್ಳ ಹಾಡುಗಬ್ಬ ಸಾಹಿತ್ಯವಿದು. ಅತ್ಯಂತ ಸರಳ, ಸುಂದರ ಪದಲಾಲಿತ್ಯದಿಂದ ಕೂಡಿದ ಪದ್ಯ ಸಾಹಿತ್ಯ ಇದಾಗಿದೆ.

'ಹಬ್ಬಲಿ ಅವರ ರಸಬಳ್ಳಿ' ಎಂಬ ಪ್ರಸ್ತುತ ಪದ್ಯಭಾಗದಲ್ಲಿ ಜನಪದರು ಬಾಳಿಬದುಕಿದ ರೀತಿ–ನೀತಿ, ತಾಯಿ ಮತ್ತು ತವರಿನ ಬಗೆಗೆ ಜನಪದರು ಇಟ್ಟುಕೊಂಡ ಅಪಾರವಾದ ಪ್ರೀತಿ ಅಭಿಮಾನಗಳು ವ್ಯಕ್ತವಾಗಿವೆ.

## ಶಬ್ದಾರ್ಥ :

ಬಯಲಾಗೆ–ಕಡಿಮೆಯಾಗು; ಪುತ್ಥಳಿ–ವಿಗ್ರಹ, ಬೊಂಬೆ; ನೆರೆಯ–ಅಕ್ಕಪಕ್ಕದ; ಎಂಜಲು–ಉಂಡುಬಿಟ್ಟ ಆಹಾರ; ಹೋಲು–ಹೋಲಿಕೆ; ಕೊಳ್ಳಿ–ಉರಿಯುವ ಕಟ್ಟಿಗೆಯ ತುಂಡು; ನೆನೆ–ಸ್ಮರಿಸು; ಯಾಳಿ–ಸಮಯ; ಸಂಪದ–ಸಂಪತ್ತು; ಖುದ್ದರಗೇಡಿ–ಮಹಾದುಷ್ಟ.

## : ಅಭ್ಯಾಸ ಭಾಗ :

### ಅ) ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು:

೧. ಬಂಗಾರ ನಿನಗ ಸ್ಥಿರವಲ್ಲ.
೨. ಹಿತ್ತಾಳೆಗಿಂತ ಬಲುಹೀನ.

೩. ನೀ ತಂಪ ನನ್ನ ತವರೀಗಿ.

೪. ಜ್ಯೋತಿ ನಿನ್ಯ್ಹಾರ ಹೋಲರ.

೫. ಹಬ್ಬಲಿ ಅವರ ರಸಬಳ್ಳಿ.

## ಅ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):

೧. ಉತ್ತಮರ ಗೆಳೆತನ ಹೇಗೆ ಇರಬೇಕು?

೨. ಮಂದಿ ಮಕ್ಕಳೊಂದಿಗೆ ಹೇಗಿರಬೇಕು?

೩. ಎಂತಹ ನೆರೆಯವರು ಇರಬೇಕು?

೪. ಬ್ಯಾಸಗಿ ದಿವಸಕ್ಕೆ ಯಾವ ಮರ ತಂಪು?

೫. ತಾಯಿಯನ್ನು ಯಾವುದಕ್ಕೆ ಹೋಲಿಸಲಾಗಿದೆ?

೬. ಹೆಣ್ಣು ಮಕ್ಕಳ ದುಃಖವನ್ನು ಬಲ್ಲವರು ಯಾರು?

೭. ಗರತಿಯು ಹಾಲುಂಡ ತವರಿಗೆ ಏನೆಂದು ಹರಸುತ್ತಾಳೆ?

## ಇ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):

೧. ಬಡತನ ಹೇಗೆ ಬಯಲಾಯಿತು?

೨. ಇದ್ದಷ್ಟು ಬುದ್ಧಿಯನ್ನು ಹೇಗೆ ಕಳೆದುಕೊಳ್ಳುತ್ತಾರೆ?

೩. ಹಿತ್ತಾಳೆಗಿಂತ ಬಲುಹೀನ ಯಾವುದು?

೪. ಹಡೆದವ್ವನನ್ನು ಯಾವಾಗ ನೆನೆಯಬೇಕು?

೫. ಹಡೆದ ತಂದೆ–ತಾಯಿಯರ ಮಹತ್ವ ತಿಳಿಸಿರಿ.

## ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):

೧. 'ಬಂಗಾರ ನಿನಗ ಸ್ಥಿರವಲ್ಲ' ಎಂಬ ಮಾತಿನ ಸ್ವಾರಸ್ಯವನ್ನು ವಿವರಿಸಿರಿ.

೨. ಜನಪದರು ಹೇಳುವಂತೆ ನಮ್ಮ ನೆರೆಹೊರೆ ಹೇಗಿರಬೇಕು? ವಿವರಿಸಿರಿ.

೩. ಹೆಣ್ಣು ಮಕ್ಕಳ ದುಃಖವನ್ನು ಬಲ್ಲವರು ಯಾರು? ಹೇಗೆ?

೪. ಗರತಿ ತವರಿಗೆ ಏನೆಂದು ಹರಸುತ್ತಾಳೆ?

## ಭಾಷಾಭ್ಯಾಸ :

೧. **ನಾನಾರ್ಥ:** ನೆರೆ–ಚೆನ್ನಾಗಿ, ಸೇರು; ಹೊಳೆ–ನದಿ, ಕಾಂತಿ; ನೆನೆ–ಸ್ಮರಿಸು, ತೊಯ್ಯು – ಮುಂತಾದ ಪದಗಳನ್ನು ಗಮನಿಸಿ.

೨. **ಸಮಾನಾರ್ಥಕ ಪದ :** ದೇಹ–ಶರೀರ, ಕಾಯ; ಸರ್ಪ–ಹಾವು, ಉರಗ – ಇವುಗಳಂತೆ ಪಠ್ಯವನ್ನಾಧರಿಸಿ ಐದು ಪದಗಳಿಗೆ ಸಮಾನಾರ್ಥಕಗಳನ್ನು ಬರೆಯಿರಿ.

## ಚಟುವಟಿಕೆ :

೧. ಕನ್ನಡ ಸಾಹಿತ್ಯದಲ್ಲಿ ತಾಯಿಯನ್ನು ಕುರಿತ ಕವನಗಳನ್ನು ಸಂಗ್ರಹಿಸಿ ಓದಿರಿ.

೨. ನೀತಿಯನ್ನು ಕುರಿತ ಸರ್ವಜ್ಞನ ತ್ರಿಪದಿಗಳನ್ನು ಸಂಗ್ರಹಿಸಿ ಓದಿರಿ.

## ಆಕರ :

ಕೃತಿ : ಗರತಿಯ ಹಾಡು (ತ್ರಿಪದಿಗಳ ಸಂಗ್ರಹ)

ಸಂಪಾದಕರು : ಹಲಸಂಗಿ ಗೆಳೆಯರು.

ಪ್ರಕಾಶಕರು : ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು. ಮರುಮುದ್ರಣ – ೨೦೦೨.

## ಹೆಚ್ಚಿನ ಓದಿಗೆ :

೧. ಜಾನಪದ ತ್ರಿಪದಿಗಳು – (ಸಂ) ಶಾಂತಾದೇವಿ ಇಮ್ರಾಪುರ

೨. ಗ್ರಾಮ ಗೀತಗಳು – (ಸಂ) ಮೈದುನ ರಾಮಣ್ಣ

೩. ಕಾಡು ಹೂ – (ಸಂ) ಜಿ.ಬಿ. ಖಾಡೆ

೪. ಹಳ್ಳಿಯ ಹಾಡುಗಳು – (ಸಂ) ಗೊರೂರು ರಾಮಸ್ವಾಮಿ ಅಯ್ಯಂಗಾರ್

**ಒಬ್ಬ ಆದರ್ಶ ಮಾತೆಯು ನೂರು ಜನ ಗುರುಗಳಿಗಿಂತ ಶ್ರೇಷ್ಠಳು**

*– ಬೈಬಲ್*

# ೭. ಬೆಳಗು ಜಾವ

*– ದ.ರಾ. ಬೇಂದ್ರೆ*

*ಬದುಕಿಗೆ ಅದಮ್ಯ ಚೈತನ್ಯವನ್ನು ನೀಡುವ ವಿಶಿಷ್ಟ ಕಾಲ ಬೆಳಗು ಜಾವ. ಇದು ಪ್ರಕೃತಿ ನಮಗೆ ನೀಡಿದ ವರ. ಈ ಭಾವಕ್ಷಣಗಳ ಜತೆಗಿನ ಅನುಬಂಧದಲ್ಲೇ ವ್ಯಕ್ತಿಯ, ಜಗತ್ತಿನ ವಿಕಾಸವೂ ಇದೆ. ಆದರೆ ಆಧುನಿಕತೆ, ಯಂತ್ರವಿಜ್ಞಾನದ ಬೆಳವಣಿಗೆ, ಹೊಸ ಬಗೆಯ ಕಲಿಕೆಯ ಕ್ರಮ ಇವೆಲ್ಲವೂ ಮನುಷ್ಯನನ್ನು ಈ ಸುಂದರ ಅನುಭವದಿಂದ ವಂಚಿತನನ್ನಾಗಿ ಮಾಡುತ್ತಿವೆ. ಹಾಗಾಗಿ ಪ್ರಕೃತಿಯ ಜತೆಗಿನ ನಿರಂತರ ಅನುಸಂಧಾನದ ಮೂಲಕ ಬದುಕಿನ ಬೆಳಗು ಜಾವವಾಗಿರುವ ಯೌವನವನ್ನು ಸಾರ್ಥಕಪಡಿಸಿಕೊಳ್ಳಬೇಕು ಎಂಬ ಸಂದೇಶವನ್ನು ಇಲ್ಲಿ ಕವಿ ನಿರೂಪಿಸಿರುವ ರೀತಿ ವಿಶಿಷ್ಟವಾದುದು. ಇಂಗ್ಲಿಷಿನ ಸಾನೆಟ್‌ಗೆ ಸಂವಾದಿಯಾಗಿ ಬಂದ ಕನ್ನಡದ ಸುನೀತ ಪ್ರಕಾರದಲ್ಲಿ ಈ ಕವನ ಅರಳಿದೆ.*

ಏಳು ಚಿನ್ನ, ಬೆಳಗಾಯ್ತು ಅಣ್ಣ, ಮೂಡಲವು ತೆರೆಯೆ ಕಣ್ಣ,
ನಕ್ಷತ್ರ ಜಾರಿ, ತಮವೆಲ್ಲ ಸೋರಿ, ಮಿಗಿಲಹುದು ಬಾನ ಬಣ್ಣ
ಜೇನ್ನೊಣದ ಹೆದೆಗೆ, ಹೂಬಾಣ ಹೂಡಿ, ಝುಂ ಎಂದು ಬಿಟ್ಟ ಮಾರ
ಗುಡಿಗೋಪುರಕ್ಕು, ಬಲೆ ಬೀಸಿ ಬಂದ, ಅಗೊ ಬೆಳಕು–ಬೇಟೆಗಾರ.

ನಿಶೆಯಿಳಿದ ಉಷೆಯ, ಎಳನಗೆಯ ಬಗೆಗೆ, ಸೋತಿರಲು ಜಗವು ಸವಿಗೆ
ಕಣ್ಣಿದಿರು ಒಂದು, ಕಟ್ಟಿತ್ತು ಕನಸು; ಕೂಗೊಂದು ಬಂತು ಕಿವಿಗೆ.
ಮಕ್ಕಳಿರ ಕೇಳಿ, ರಸ ಕುಡಿಯಲೇಳಿ, ಹುಸಿನಿದ್ದೆಗಿದ್ದೆ ಸಾಕು
ಈ ತುಂಬಿಬಾಳು, ತುಂಬಿರುವ ತನಕ, ತುಂತುಂಬಿ ಕುಡಿಯಬೇಕು.

ಯಾವಾಗೊ ಕೋಳಿ ಕೂಗಿಹುದು ಏಳಿ, ತಡವೇಕೆ ಪಾನಕೇಳಿ
ಮೊದಲಾಗಲೀಗ, ಅಂಗಡಿಯ ಕದವ ಈ ಕ್ಷಣಕೆ ತೆರೆಯ ಹೇಳಿ
ಜೀವನದ ನದಿಗೆ ಸೆಳವಿಹುದು, ಮರಣ ಬಂದೀತು ಕ್ಷಣವು ಉರುಳಿ
ಹೋದವರು ತಿರಗಿ ಬಂದಾರೆ, ಅವರು ಬರಲಿಕ್ಕು ಇಲ್ಲ ಮರಳಿ.

ಬಾನ್ ಹೊಗರಲುಂಟು, ಮರ ಚಿಗುರಲುಂಟು, ಬರಲುಂಟೆ ಸುಗ್ಗಿ ಮತ್ತೆ?
ಮುಳುಗಿರಲಿ ಮುಪ್ಪು ಚಿಂತನದಿ, ತಾನು ಹರೆಯಕ್ಕೆ ಬೇರೆ ಹೊತ್ತೆ?

## ಕವಿ-ಕಾವ್ಯ ಪರಿಚಯ :



**ದ.ರಾ. ಬೇಂದ್ರೆ** (೧೮೯೬-೧೯೮೧) ಎಂಬ ಹೆಸರಿನ ಮೂಲಕ ಖ್ಯಾತರಾದ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಕನ್ನಡ ನಾಡು ಕಂಡ ಶ್ರೇಷ್ಠ ಕವಿಗಳಲ್ಲಿ ಒಬ್ಬರು. ಅಂಬಿಕಾತನಯದತ್ತ ಇವರ ಕಾವ್ಯನಾಮ. 'ಸಾಧನಕೇರಿ' ಬೇಂದ್ರೆಯವರ ಕಾವ್ಯಕ್ಕೆ ಪ್ರೇರಣೆ ನೀಡಿದ ವಾಸವಾಗಿದ್ದ ಊರು. ಕಲಿತದ್ದು ಮರಾಠಿ ಪರಿಸರದಲ್ಲಾದರೂ ಬರೆದದ್ದು ಕನ್ನಡದಲ್ಲಿ. ಧಾರವಾಡದಲ್ಲಿ ಗೆಳೆಯರ ಗುಂಪನ್ನು ಕಟ್ಟಿ ಸಾಹಿತ್ಯ ವಾತಾವರಣ ಬೆಳೆಯುವಂತೆ ಮಾಡಿದ್ದು ಅವರಿಗಿದ್ದ ಸಾಹಿತ್ಯ ಪ್ರೀತಿಯ ದ್ಯೋತಕ.

ಕೃಷ್ಣಾಕುಮಾರಿ, ಗರಿ, ಸಖೀಗೀತ, ಉಯ್ಯಾಲೆ, ನಾದಲೀಲೆ, ಗಂಗಾವತರಣ, ನಾಕುತಂತಿ ಮೊದಲಾದ ಇಪ್ಪತ್ತಕ್ಕೂ ಹೆಚ್ಚು ಕವನಸಂಕಲನಗಳನ್ನು, ಹುಚ್ಚಾಟ, ಹೊಸಸಂಸಾರ ಮತ್ತು ಇತರ ನಾಟಕಗಳು ಮೊದಲಾದ ನಾಟಕ ಕೃತಿಗಳನ್ನು ಬೇಂದ್ರೆ ರಚಿಸಿದ್ದಾರೆ. 'ಸಾಹಿತ್ಯದ ವಿರಾಟ್ ಸ್ವರೂಪ' ಬೇಂದ್ರೆಯವರ ವಿದ್ವತ್‌ಪ್ರತಿಭೆಯನ್ನು ಸಾರುವ ವಿಮರ್ಶಾಗ್ರಂಥ. ಇವಲ್ಲದೆ ಅರವಿಂದರ ಅನೇಕ ಕೃತಿಗಳನ್ನು, ಠಾಗೋರ್, ಕಬೀರ್ ಮೊದಲಾದ ಕವಿಗಳ ಕವಿತೆಗಳನ್ನು ಬೇಂದ್ರೆ ಕನ್ನಡಕ್ಕೆ ಅನುವಾದಿಸಿದ್ದಾರೆ. ೧೯೪೩ರಲ್ಲಿ ಶಿವಮೊಗ್ಗದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದ ಬೇಂದ್ರೆಯವರಿಗೆ ೧೯೬೮ರಲ್ಲಿ ಪದ್ಮಶ್ರೀ ಪ್ರಶಸ್ತಿಯೂ, ೧೯೭೩ರಲ್ಲಿ ಭಾರತೀಯ ಜ್ಞಾನಪೀಠ ಪ್ರಶಸ್ತಿಯೂ ಲಭಿಸಿದೆ.

ಬೇಂದ್ರೆಯವರದು ನವನವೋನ್ಮೇಷಶಾಲಿನಿಯಾದ ಪ್ರತಿಭೆ. ಉತ್ತರಕರ್ನಾಟಕದ ಆಡುಭಾಷೆಯ ಲಯ, ಶಬ್ದ ಸಂಪತ್ತು, ಗಾದೆಮಾತು, ಧ್ವನಿಶಕ್ತಿ ಪೂರ್ಣರೂಪದಲ್ಲಿ ಬಳಸಿಕೊಂಡು ಕಾವ್ಯಕ್ಕೆ ಹೊಸರೂಪ ಕೊಟ್ಟವರು ಬೇಂದ್ರೆ. ಜಾನಪದಲಯ, ಗತ್ತಿನ ಮೂಲಕ ನವೋದಯ ಕಾವ್ಯವನ್ನು ಉಚ್ಛ್ರಾಯಸ್ಥಿತಿಗೆ ಒಯ್ದವರು. ವ್ಯಕ್ತಿಯ ಬದುಕಿನ, ಸಂಸಾರದ, ನಿಸರ್ಗದ, ಮನುಷ್ಯನೊಬ್ಬನ ಬದುಕಿನಲ್ಲಿ ದೊರೆಯಬಹುದಾದ ಭಾವಸಂಕೀರ್ಣಗಳನ್ನೆಲ್ಲ ಅನನ್ಯವಾದ ರೀತಿಯಲ್ಲಿ ಬೇಂದ್ರೆ ಕಟ್ಟಿಕೊಟ್ಟಿದ್ದಾರೆ.

'ಬೆಳಗು ಜಾವ' ಬೇಂದ್ರೆಯವರ ವಿಶಿಷ್ಟ ರಚನೆಗಳಲ್ಲೊಂದು. ನಿಸರ್ಗದ ಸೊಬಗಿನಲ್ಲಿ ಆನಂದವನ್ನು ಪಡೆಯುತ್ತಲೇ ಅದರ ಭವ್ಯತೆ, ದಿವ್ಯತೆಗಳ ಅರಿವನ್ನೂ ತಂದುಕೊಡುವುದು ಬೇಂದ್ರೆಯವರ ನಿಸರ್ಗಗೀತೆಗಳ ಮುಖ್ಯಗುಣ. ಇಲ್ಲಿ ಬೆಳಗು ಬೆಳಕೂ ಹೌದು. ಬೆಳಕು ಅವರ ಕಾವ್ಯದಲ್ಲಿ ಒಂದು ಸ್ಥಾಯಿ ಕಲ್ಪನೆ. ಈ ಕವಿತೆಯಲ್ಲಿ ಬೆಳಗಿನ ಸೌಂದರ್ಯವನ್ನು ವರ್ಣಿಸುತ್ತಲೇ ಯೌವನವು ಮಾನವ ಜೀವನದ ಬೆಳಗುಜಾವ, ನಿರಂತರವಾದ ಕ್ರಿಯೆಗಳ ಮೂಲಕ ಯೌವನವನ್ನು ದುಡಿಸಿ, ದಣಿಸಿ ಸಫಲತೆಯನ್ನು ಪಡೆಯಬೇಕು ಎಂದು ಬೇಂದ್ರೆ ಕರೆಕೊಟ್ಟಿದ್ದಾರೆ.

ಇಂಗ್ಲಿಷಿನ ಸಾನೆಟ್ ಪ್ರಕಾರಕ್ಕೆ ಸಂವಾದಿಯಾಗಿ ಬಂದ ಸುನೀತ ಪ್ರಕಾರದಲ್ಲಿರುವ ಈ ಕವಿತೆ ಷೇಕ್ಸ್‌ಪೀರಿಯನ್ ಮಾದರಿಯಲ್ಲಿದೆ. ಈ ಮಾದರಿಯ ಸುನೀತಗಳಲ್ಲಿ ಹನ್ನೆರಡು ಚರಣಗಳು ಮೂರು ಚೌಪದಿಗಳಿಂದ ಕೂಡಿದ್ದು ಕೊನೆಯ ಎರಡು ಚರಣಗಳು ದ್ವಿಪದಿಯ ರೂಪದಲ್ಲಿದ್ದು ವಸ್ತುವಿನ ಒಟ್ಟು ತಿರುಳನ್ನು ಕಟ್ಟಿಕೊಡುತ್ತವೆ. ಹಾಗೆಯೇ ಚೌಪದಿಯ ಮೊದಲ ಎರಡು ಪಂಕ್ತಿಗಳು ಒಂದು ಪ್ರಾಸದಿಂದ ಕೂಡಿದ್ದರೆ ಕೊನೆಯ ಎರಡು ಪಂಕ್ತಿಗಳು ಇನ್ನೊಂದು ಪ್ರಾಸವನ್ನು ಹೊಂದಿರುತ್ತವೆ. ಕಡೆಯ ದ್ವಿಪದಿ ಒಂದೇ ಪ್ರಾಸದಲ್ಲಿ ಮುಕ್ತಾಯವಾಗುತ್ತದೆ. ಈ ಪ್ರಾಸ ವಿನ್ಯಾಸದಲ್ಲಿ ರಚನೆಯಾದ ವಿಶಿಷ್ಟ ಕವನವಿದು.

## ಶಬ್ದಾರ್ಥ :

ಮೂಡಲ–ಪೂರ್ವ; ತಮ–ಕತ್ತಲು; ಮಿಗಿಲು–ಅಧಿಕ; ಹೆದೆ–ಬಿಲ್ಲಿನ ಹಗ್ಗ; ಮಾರ–ಮನ್ಮಥ, ಕಾಮ; ನಿಶೆ–ಕತ್ತಲು; ಉಷೆ–ಮುಂಜಾವು; ಬಗೆ–ರೀತಿ; ತುಂಬಿ–ದುಂಬಿ, ಪೂರ್ಣವಾದ; ಸೆಳವು–ರಭಸ; ಹೊಗರು–ಪ್ರಕಾಶ, ಕಾಂತಿ.

## ಟಿಪ್ಪಣಿ :

**ಮಾರ:** ಇವನು ಬ್ರಹ್ಮನ ಮಗ. ಮನ್ಮಥ, ಮದನ, ಕಾಮದೇವ ಇವು ಈತನ ಇತರ ಹೆಸರುಗಳು. ಈತನ ಪತ್ನಿ ರತಿ. ಅರವಿಂದ, ಅಶೋಕ, ಚೂತ, ನವಮಲ್ಲಿಕಾ, ನೀಲೋತ್ಪಲ ಎಂಬ ಹೂಬಾಣಗಳು ಈತನಲ್ಲಿರುವ ಪಂಚಶರಗಳು. ಒಮ್ಮೆ ಈತ ಶಿವನನ್ನು ಸಂಸಾರಕ್ಕೆಳೆಯಲು ಮಾಡಿದ ಪ್ರಯತ್ನದಿಂದ ಶಿವನ ಸಿಟ್ಟಿಗೆ ಒಳಗಾಗಿ ಆತನ ಹಣೆಗಣ್ಣಿನ ಕಿಚ್ಚಿನಿಂದ ಸುಟ್ಟುಹೋದನು. ಇದರಿಂದಾಗಿಯೇ ಮನ್ಮಥನಿಗೆ ಅನಂಗ ಎಂಬ ಹೆಸರೂ ಇದೆ.

## : ಅಭ್ಯಾಸ ಭಾಗ :

### ಅ) ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು:

೧. ಬಲೆಬೀಸಿ ಬಂದ, ಅಗೋ ಬೆಳಕು–ಬೇಟೆಗಾರ.

೨. ತುಂಬಿರುವ ತನಕ ತುಂತುಂಬಿ ಕುಡಿಯಬೇಕು.

೩. ಮರಣ ಬಂದೀತು ಕ್ಷಣವು ಉರುಳಿ.

೪. ಬರಲುಂಟೆ ಸುಗ್ಗಿ ಮತ್ತೆ?

೫. ಮುಳುಗಿರಲಿ ಮುಪ್ಪು ಚಿಂತನದಿ.

### ಆ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):

೧. ಜೇನ್ಮೊಣದ ಹೆದೆಗೆ ಹೂಬಾಣ ಹೂಡಿದವರು ಯಾರು?

೨. ಬೇಟೆಗಾರ ಯಾರು?

೩. ಹುಸಿನಿದ್ದೆ ಸಾಕು ಎಂದು ಕವಿ ಯಾರಿಗೆ ಹೇಳುತ್ತಾರೆ?

೪. ಯಾವುದಕ್ಕೆ ಸೆಳವಿದೆಯೆಂದು ಕವಿ ಹೇಳುತ್ತಾರೆ?

೫. ಕವಿಯ ಪ್ರಕಾರ ಯಾವುದು ಮತ್ತೆ ಚಿಗುರುತ್ತದೆ?

೬. ಯಾವುದು ಚಿಂತನದಿ ಮುಳುಗಿರಲಿ ಎಂದು ಕವಿ ಆಶಿಸುತ್ತಾರೆ?

### ಇ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯದಲ್ಲಿ ಉತ್ತರಿಸಿ):

೧. ಬೆಳಕು–ಬೇಟೆಗಾರ ಹೇಗೆ ಬರುತ್ತಾನೆ?

೨. ಕವಿ ಬೇಂದ್ರೆ ಮಕ್ಕಳಿಗೆ ಬಾಳಿನ ಬಗ್ಗೆ ಕೊಡುವ ಸಂದೇಶವೇನು?

೩. ಹುಸಿನಿದ್ದೆ ಸಾಕು, ಎದ್ದೇಳಿ ಎಂದು ಕವಿ ಮಕ್ಕಳಿಗೆ ಹೇಳಲು ಕಾರಣವೇನು?

೪. ಕವಿಯ ಪ್ರಕಾರ ಮುಪ್ಪು ಮತ್ತು ಹರೆಯದ ನಡುವಿನ ವ್ಯತ್ಯಾಸವೇನು?

೫. ಬಾನು ಮತ್ತು ಮರದ ನಿತ್ಯನೂತನತೆಯ ಬಗ್ಗೆ ಕವಿ ಏನು ಹೇಳಿದ್ದಾರೆ?

### ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):

೧. ಮಾನವನ ಜೀವನದ ಸಾರ್ಥಕತೆ ಎಲ್ಲಿದೆಯೆಂದು ಕವಿ ಬೇಂದ್ರೆ ಹೇಳಿದ್ದಾರೆ?

೨. ಜೀವನದ ಉದ್ದೇಶ ಮತ್ತು ಆದರ್ಶಗಳನ್ನು ಹೇಗೆ ಸಫಲಗೊಳಿಸಿಕೊಳ್ಳಬೇಕು ಎಂದು ಬೇಂದ್ರೆ ಕರೆಕೊಡುತ್ತಾರೆ?

೩. 'ಬೆಳಗು ಜಾವ' ಕವನದ ಮೂಲಕ ಕವಿ ಬೇಂದ್ರೆ ಹೇಳಿರುವ ವಿಚಾರಗಳಾವುವು?

೪. ಬಾಳಿನ ಅಶಾಶ್ವತೆ ಮತ್ತು ಪ್ರಕೃತಿಯ ನಿತ್ಯನೂತನತೆಯ ಗುಣವನ್ನು 'ಬೆಳಗು ಜಾವ' ಕವನದಲ್ಲಿ ಕವಿ ಹೇಗೆ ವಿವರಿಸಿದ್ದಾರೆ?

### ಭಾಷಾಭ್ಯಾಸ :

೧. ಈ ಕವನದಲ್ಲಿ ಬರುವ ಪ್ರಾಸಪದಗಳನ್ನು ಗಮನಿಸಿ.

ಉದಾ: ಕಣ್ಣ–ಬಣ್ಣ, ಸವಿಗೆ–ಕಿವಿಗೆ, ಕೇಳಿ–ಹೇಳಿ, ಉರುಳಿ–ಮರಳಿ.

೨. ಕವನದಲ್ಲಿ ಬರುವ ಜೋಡುನುಡಿಗಳನ್ನು ಆರಿಸಿ ಬರೆಯಿರಿ.

ಉದಾ: ಹೂಬಾಣ.

### ಚಟುವಟಿಕೆ :

೧. ಬೆಳಗಿನ ಬಗ್ಗೆ ಇತರ ಕವಿಗಳು ಬರೆದ ಕವನಗಳನ್ನು ಸಂಗ್ರಹಿಸಿ ಅವುಗಳ ವಿಶಿಷ್ಟತೆಯನ್ನು ಗುರುತಿಸಿ.

೨. ಪ್ರಸಿದ್ಧ ಪ್ರಕೃತಿ ತಾಣಗಳಿಗೆ ಭೇಟಿಕೊಟ್ಟು ಅಲ್ಲಿನ ಸೂರ್ಯೋದಯದ ಅನುಭವದ ಬಗ್ಗೆ ಬರೆಯಿರಿ.

## ಆಕರ :

ಕೃತಿ : ಮುಕ್ತಕಂಠ
ಲೇಖಕರು : ದ.ರಾ. ಬೇಂದ್ರೆ
ಪ್ರಕಾಶಕರು : ಶ್ರೀಮಾತಾ ಪ್ರಕಾಶನ
ಅಂಬಿಕಾತನಯದತ್ತ ವೇದಿಕೆ
ಗೋಕುಲ ರಸ್ತೆ, ಹುಬ್ಬಳ್ಳಿ – ೫೮೦ ೦೩೦

## ಹೆಚ್ಚಿನ ಓದಿಗೆ :

೧. ಭೃಂಗದ ಬೆನ್ನೇರಿ – ಪ್ರೊ. ಕೀರ್ತಿನಾಥ ಕುರ್ತಕೋಟಿ

೨. ಭುವನದ ಭಾಗ್ಯ – ಪ್ರೊ. ಜಿ.ಎಸ್. ಆಮೂರ

೩. ಶಕ್ತಿಶಾರದೆಯ ಮೇಳ – ಡಾ. ಡಿ.ಆರ್. ನಾಗರಾಜ

೪. ಇಳಿದು ಬಾ ತಾಯಿ (ಅಭಿನಂದನ ಗ್ರಂಥ) – ಸಂ: ಡಾ. ಬುದ್ದಣ್ಣ ಹಿಂಗಮಿರೆ.

೫. ಹಾಡೆ ಹಾದಿಯ ತೋರಿತು – ಪ್ರೊ. ಎಚ್.ಎಸ್. ರಾಘವೇಂದ್ರರಾವ್.

**ಉದಯದೊಳೇನ್ ಹೃದಯವ ಕಾಣ್**
**ಅದೆ ಅಮೃತದ ಹಣ್ಣೊ**
**ಶಿವನಿಲ್ಲದ ಕವಿ ಕುರುಡನೊ**
**ಕವಿ ಕಾವ್ಯದ ಕಣ್ಣೊ**

*– ಕುವೆಂಪು*

# ೮. ಮುಂಬೈ ಜಾತಕ

– *ಜಿ.ಎಸ್. ಶಿವರುದ್ರಪ್ಪ*

*ಮುಂಬೈ–ಬೆಂಗಳೂರು ಮುಂತಾದ ಬೃಹತ್ ನಗರಗಳಲ್ಲಿ ವಾಸಿಸುವವರ ಅತಂತ್ರ ಸ್ಥಿತಿ ಮರುಕ ಹುಟ್ಟಿಸುವಂಥದ್ದು. ಇಂತಹ ನಗರಗಳಲ್ಲಿ ಹುಟ್ಟುವ ಮಕ್ಕಳು ಕಣ್ತೆರೆದಾಗ ಕಾಣುವುದು ಅವಸರದಿಂದ ಸರಿಯುವ ವಾಹನಗಳನ್ನು ಮಾತ್ರ. ಬಾಲ್ಯಾವಸ್ಥೆಯನ್ನು ಹೆತ್ತವರೊಂದಿಗೆ, ಒಡಹುಟ್ಟಿದವರೊಂದಿಗೆ ಸಮೃದ್ಧಗೊಳಿಸಿಕೊಳ್ಳುವ ಅವಕಾಶದಿಂದ ಈ ಮಕ್ಕಳು ವಂಚಿತರು.*

*ಯಾಂತ್ರಿಕ ಬದುಕಿನ ಆವರಣಕ್ಕೆ ಎಳೆತನದಲ್ಲೇ ಸಿಲುಕಿ ನಲುಗುವ ಧಾರುಣತೆಯನ್ನು ಪ್ರಸ್ತುತ ಕವಿತೆ ಹಿಡಿದಿಟ್ಟಿದೆ. ಇಡೀ ಕವಿತೆಯ ರಚನಾಕ್ರಮವು ಅರ್ಜಿನಮೂನೆಯ ರೀತಿಯಲ್ಲಿದ್ದು ನೀಡುವ ವಿವರಗಳಲ್ಲಿಯೂ ದನಿಯಿಲ್ಲದಿರುವುದನ್ನು ಸಂಕೇತಿಸಿದೆ. ನಗರ ಸಂಸ್ಕೃತಿಯಲ್ಲಿ ಜೀವನದ ರಸಾನುಭವ ಅಸಾಧ್ಯವೆಂಬ ಧ್ವನಿ ಇಲ್ಲಿದೆ. ತಂದೆ–ತಾಯಿಯರ ಕರುಳುಬಳ್ಳಿಯ ಪ್ರೀತಿ ಮಮತೆ ಆರೈಕೆಗಳಲ್ಲೂ ಕೃತಕವಾದ ಹೊಣೆಗಾರಿಕೆಯನ್ನು ಕವಿ ಚಿತ್ರಿಸಿದ್ದಾರೆ. ನಗರ ಜೀವನದ ಭೂತ, ವರ್ತಮಾನ ಮತ್ತು ಭವಿಷ್ಯತ್ತಿನ ಬದುಕಿನ ಸ್ವರೂಪವನ್ನು ಮುಂಬೈ ಜಾತಕ ಸಮರ್ಥವಾಗಿ ಹಿಡಿದಿಟ್ಟಿದೆ. ಯಾರ ಹೆಸರನ್ನೂ ಸೂಚಿಸದೆ ಯಾರದಾದರೂ ಆಗಬಹುದಾದ ಪರಕೀಯತೆ ಕವಿತೆಗೊಂದು ಸುಂದರ ಚೌಕಟ್ಟನ್ನು ಒದಗಿಸಿದೆ.*

ಹುಟ್ಟಿದ್ದು : ಆಸ್ಪತ್ರೆಯಲ್ಲಿ;
ಬೆಳೆದದ್ದು : ಬಸ್ಸು ಟ್ರಾಂ ಕಾರು ಟ್ಯಾಕ್ಸಿ ಎಲೆಕ್ಟ್ರಿಕ್ ಟ್ರೇನುಗಳಲ್ಲಿ
ಕುಡಿದದ್ದು : ಕಾಣದೆಮ್ಮೆಯ ಕೆಚ್ಚಲು ಕರೆದು ಕಳುಹಿಸಿದ
ಬಾಟ್ಲಿಯ ಹಾಲು, ಗ್ರೈಪ್ ಸಿರಪ್ ಹಾರ್ಲಿಕ್ಸ್ ಇತ್ಯಾದಿ
ಕಂಡದ್ದು : ಬೆಳಗಿನಿಂದ ಸಂಜೆಯತನಕ ಲಕ್ಷ ಚಕ್ರದ ಉರುಳು
ಅವಸರದ ಹೆಜ್ಜೆಯ ಮೇಲೆ ಸರಿವ ಸಾವಿರ ಕೊರಳು
ಕಲಿತದ್ದು : ಕ್ಯೂ ನಿಲ್ಲು; ಫುಟ್‌ಪಾತಿನಲ್ಲೇ ಸಂಚರಿಸು;
ರಸ್ತೆದಾಟುವಾಗೆಚ್ಚರಿಕೆ; ಓಡು, ಎಲ್ಲಿಯೂ
ನಿಲ್ಲದಿರು; ಹೇಗೋ ಅವರಿವರ ತಳ್ಳಿ ಮುನ್ನುಗ್ಗು;
ಎಲ್ಲಾದರೂ ಸರಿಯೆ, ಬೇರೂರು, ಹೀರು.
ತಾಯಿ : ಸಾವಿರ ಗಾಲಿ ಉರುಳಿ ಹೊರಳುವ ರಸ್ತೆಯಂಚಿನಲ್ಲೇ
ಕೈ ಹಿಡಿದು ನಡೆಸಿದವಳು. ಇರುವ ಒಂದಿಂಚು
ಕೋಣೆಯಲ್ಲೇ ಹೊರಲೋಕವನು ಪರಿಚಯಿಸಿ
ಎಚ್ಚರಿಕೆ ಕೊಟ್ಟವಳು.

ತಂದೆ : ಬೆಳಗಿಂದ ಸಂಜೆಯ ತನಕ ಕಣ್ಮರೆಯಾಗಿ
ಒಮ್ಮೊಮ್ಮೆ ರಜಾ ದಿನಗಳಲ್ಲಿ ಕಣ್ಣಿಗೆ ಕಂಡು
ಕುಳಿತು ಕೆಮ್ಮುವ ಪ್ರಾಣಿ

ವಿದ್ಯೆ : ಶಾಲೆ ಕಾಲೇಜುಗಳು ಕಲಿಸಿದ್ದು; ದಾರಿ ಬದಿ
ನೂರಾರು ಜಾಹೀರಾತುಗಳು ತಲೆಗೆ ತುರುಕಿದ್ದು;
ರೇಡಿಯೊ ಸಿಲೋನ್ ವ್ಯಾಪಾರ ವಿಭಾಗ ಶಿಫಾರಸು ಮಾಡಿದ್ದು,
ನೀನಾಗಿ ಕಲಿತದ್ದು ಬಲು ಕಡಿಮೆ, ಬಸ್‌ಸ್ಟಾಪಿನಲಿ ನಿಂತ
ಬಣ್ಣಗಳ ಕಡೆಗೆ ಕಣ್ಣಾಡಿಸುವುದೊಂದನ್ನು ಹೊರತು

ಜೀವನ : ಈ ಲಕ್ಷ ದಾರಿಗಳ ಚದುರಂಗದಾಟದಲಿ, ನೂರು
ಬೆಳಕಿನ ಕೆಳಗೆ ಯಾರದೋ ಕೈಗೊಂಬೆಯಾಗಿ
ಮುಂದುವರಿಯುವುದು; ಏಳುವುದು, ಬಟ್ಟೆಯಲಿ
ಮೈ ತುರುಕಿ ಓಡುವುದು; ರೈಲನೋ ಬಸ್ಸನೋ
ಹಿಡಿಯುವುದು; ಸಾಯಂಕಾಲ ಸೋತು ಸುಸ್ತಾಗಿ
ರೆಪ್ಪೆಯ ಮೇಲೆ ಹತ್ತು ಮಣ ಆಯಾಸವನು ಹೊತ್ತು
ಹನ್ನೊಂದು ಘಂಟೆ ಹೊಡೆವಾಗ ಮನೆಯಲ್ಲಿ
ಕಾದೂ ಕಾದೂ ತೂಕಡಿಸಿ ಮಂಕಾದ ಮಡದಿಯನು
ಎಚ್ಚರಿಸುವುದು; ತಣ್ಣಗೆ ಕೊರೆವ ಕೂಳುಂಡು
ಬಾಡಿಗೆ ಮನೆಯ ನೆರಳಿನ ಕೆಳಗೆ, ಮತ್ತೆ
ಸಾವಿರ ಗಾಲಿಯುಜ್ಜುವ ಕನಸು ಬಂಡಿಯ ಕೆಳಗೆ
ಹಾಸುಗಂಬಿಯ ಹಾಗೆ ತತ್ತರಿಸುತ್ತ ಮಲಗುವುದು.

## ಕವಿ–ಕಾವ್ಯ ಪರಿಚಯ :



**ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ** (೧೯೨೬–೨೦೧೩) ಅವರ ಪೂರ್ಣ ಹೆಸರು ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪ ಎಂಬುದು. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಈಸೂರು ಗ್ರಾಮ ಇವರ ಹುಟ್ಟೂರು. ಮೈಸೂರಿನ ಮಹಾರಾಜ ಕಾಲೇಜು, ಹೈದ್ರಾಬಾದಿನ ಉಸ್ಮಾನಿಯ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಂತರ ಬೆಂಗಳೂರು ವಿ.ವಿ.ಯ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ನಿವೃತ್ತರಾದರು. ಕುವೆಂಪು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **'ಸೌಂದರ್ಯ ಸಮೀಕ್ಷೆ'** ಎಂಬ ಸಂಶೋಧನಾ ಪ್ರಬಂಧಕ್ಕೆ ಪಿಎಚ್.ಡಿ. ಪದವಿಯನ್ನು ಪಡೆದರು.

ಪ್ರಮುಖ ಕವಿ, ವಿದ್ವಾಂಸ ಮತ್ತು ವಿಮರ್ಶಕರೆಂದು ಪ್ರಸಿದ್ಧರಾಗಿರುವ ಜಿ.ಎಸ್. ಶಿವರುದ್ರಪ್ಪನವರು ಸಾಮಗಾನ, ಚೆಲುವು–ಒಲವು, ದೇವಶಿಲ್ಪ, ದೀಪದ ಹೆಜ್ಜೆ, ಕಾರ್ತೀಕ, ತೆರೆದ ದಾರಿ, ಪ್ರೀತಿಯಿಲ್ಲದ ಮೇಲೆ, ವ್ಯಕ್ತ–ಮಧ್ಯ ಮಂತಾದ ಕವಿತಾ ಸಂಕಲನಗಳನ್ನೂ ಪರಿಶೀಲನ, ಗತಿಬಿಂಬ, ವಿಮರ್ಶೆಯ ಪೂರ್ವ–ಪಶ್ಚಿಮ, ಕಾವ್ಯಾರ್ಥ ಚಿಂತನ, ಗಂಗೆಯ ಶಿಖರಗಳಲ್ಲಿ, ಕರ್ಮಯೋಗಿ, ಮಾಸ್ಕೋದಲ್ಲಿ ಇಪ್ಪತ್ತೆರಡು ದಿನಗಳು ಇತ್ಯಾದಿ ಕೃತಿಗಳನ್ನೂ ರಚಿಸಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ದಾವಣಗೆರೆಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಶ್ರೀಯುತರ 'ಕಾವ್ಯಾರ್ಥ ಚಿಂತನ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಲಭಿಸಿದೆ. ನಾಡೋಜ, ಪಂಪ ಪ್ರಶಸ್ತಿ, ನೃಪತಂಗ ಪ್ರಶಸ್ತಿಗೆ ಬಾಜನರಾಗಿರುವ ಶಿವರುದ್ರಪ್ಪನವರನ್ನು ಕರ್ನಾಟಕ ಸರ್ಕಾರವು 'ರಾಷ್ಟ್ರಕವಿ' ಎಂದು ಗೌರವಿಸಿದೆ.

ಶಿವರುದ್ರಪ್ಪನವರ 'ಮುಂಬೈ ಜಾತಕ' ನಗರಕ್ಕೆ ವಲಸೆ ಬರುವವರ ಸಂಖ್ಯೆ ವೃದ್ಧಿಸುತ್ತಿರುವ ಇಂದಿನ ದಿನಕ್ಕೆ ಹೆಚ್ಚು ಪ್ರಸ್ತುತವೆನಿಸಿದೆ. ಪ್ರಕೃತಿಯಿಂದ ದೂರ ಸರಿಯುತ್ತ ನಾಗರಿಕರಾದಂತೆಲ್ಲ ನಿಸ್ಸಾರವೂ ನಿರ್ವೀರ್ಯವೂ ಆಗಿಬಿಡುವ ನಾಗರಿಕ ಬದುಕಿನ ದುರಂತವನ್ನು ಈ ಕವಿತೆಯು ದೃಶ್ಯವತ್ತಾಗಿ ಕಣ್ಮುಂದೆ ಇಡುತ್ತದೆ. ಇಂದು ಶಿಕ್ಷಿತರಾಗುವುದೆಂದರೆ ಭಾಷಾವಲಯದಿಂದ ದೂರಸರಿಯುವುದು, ಸ್ವೈರಿಕರಾಗುವುದೆಂದರೆ ಜನಸಮೂಹದಿಂದ ದೂರಾಗುವುದು ಎಂಬಂತಾಗಿದೆ. ಪ್ರಸ್ತುತ ಕವಿತೆಯಲ್ಲಿ ನೆರೆಹೊರೆಯವರಲ್ಲಾಗಲೀ, ಕರುಳುಬಳ್ಳಿಗಳೊಂದಿಗಾಗಲಿ ವಾತ್ಸಲ್ಯ–ಮಮಕಾರಗಳನ್ನು ವ್ಯಕ್ತಪಡಿಸಲೂ ವ್ಯವಧಾನವಿಲ್ಲದ ಅವಸರದ, ಯಾಂತ್ರಿಕ ಬದುಕು ಹೊಸ ಬಗೆಯಲ್ಲಿ ಅನಾವರಣಗೊಂಡಿದೆ.

## ಶಬ್ದಾರ್ಥ :

ಸರಿವ–ಸಾಗುವ; ಕ್ಯೂ–ಸಾಲು; ಹೀರು–ಕುಡಿ; ಗಾಲಿ–ಚಕ್ರ; ಶಿಫಾರಸು–ಪ್ರಭಾವ; ಬಣ್ಣ–ವರ್ಣ (ಇಲ್ಲಿ ಹುಡುಗಿಯರು ಎಂಬ ಅರ್ಥ); ಕಣ್ಣಾಡಿಸು–ನೋಡು; ಚದುರಂಗದಾಟ–ಬುದ್ಧಿವಂತಿಕೆ ಪ್ರದರ್ಶನದ ಒಂದು ಬಗೆಯ ಆಟ; ಮಣ–ತೂಕದ ಒಂದು ಪ್ರಮಾಣ; ಕೂಳು–ಅನ್ನ, ಆಹಾರ; ಹಾಸುಗಂಬಿ–ರೈಲುಹಳಿ; ತತ್ತರಿಸು–ನಡುಗು, ಕಂಪಿಸು.

## ಟಿಪ್ಪಣಿ :

**ಟ್ರಾಂ** – ಸಾರ್ವಜನಿಕ ರಸ್ತೆಯ ಮೇಲೆ ಹಾಕಿದ ಕಂಬಿಗಳ ಮೇಲೆ ವಿದ್ಯುಚ್ಛಕ್ತಿಯ ಸಹಾಯದಿಂದ ಓಡುವ ಪ್ರಯಾಣಿಕರ ವಾಹನ. (ಗಣಿಯ ಬಂಡಿ ಎಂಬರ್ಥವೂ ಇದೆ)

## : ಅಭ್ಯಾಸ ಭಾಗ :

### ಅ) ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು:

೧. ಅವಸರದ ಹೆಜ್ಜೆಯ ಮೇಲೆ ಸರಿವ ಸಾವಿರ ಕೊರಳು.

೨. ರಸ್ತೆ ದಾಟುವಾಗೆಚ್ಚರಿಕೆ.

೩. ರಸ್ತೆಯಂಚಿನಲ್ಲೇ ಕೈ ಹಿಡಿದು ನಡೆಸಿದವಳು.

೪. ಕುಳಿತು ಕೆಮ್ಮುವ ಪ್ರಾಣಿ.

೫. ನೂರಾರು ಜಾಹೀರಾತುಗಳು ತಲೆಗೆ ತುರುಕಿದ್ದು.

೬. ಬಟ್ಟೆಯಲಿ ಮೈ ತುರುಕಿ ಓಡುವುದು.

## ಆ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿರಿ):

೧. ಮಗು ಹುಟ್ಟಿದ್ದು ಎಲ್ಲಿ?

೨. ಮುಂಬೈಯಲ್ಲಿ ಬೆಳಗಿನಿಂದ ಸಂಜೆಯತನಕ ಕಾಣುವುದೇನು?

೩. ಹೊರಲೋಕವನ್ನು ಪರಿಚಯಿಸಿ ಎಚ್ಚರಿಕೆ ಕೊಟ್ಟವಳು ಯಾರು?

೪. ಕುಳಿತು ಕೆಮ್ಮುವ ಪ್ರಾಣಿ ಯಾರು?

೫. ತಾನಾಗಿ ಕಲಿತದ್ದು ಏನನು?

೬. ಲಕ್ಷದಾರಿಗಳ ಚದುರಂಗದಾಟ ಯಾವುದು?

೭. ಕನಸು ಬಂಡಿಯ ಕೆಳಗೆ ನಿದ್ರಿಸುವುದು ಹೇಗೆ?

## ಇ) ಎರಡು ಅಂಕಗಳ ಪ್ರಶ್ನೆಗಳು (ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ):

೧. ಮಗು ಹುಟ್ಟಿ, ಬೆಳೆದುದು ಎಲ್ಲಿ?

೨. ಮಗು ಏನನ್ನು ಕುಡಿದು ಬೆಳೆಯುವುದು?

೩. ಮಗು ಏನೇನು ಕಲಿಯಿತು?

೪. ಮಗುವಿನ ಪಾಲಿಗೆ ತಾಯಿ ಹೇಗಿದ್ದಾಳೆ?

೫. ತಂದೆ ಮಗುವಿಗೆ ಕಾಣಿಸಿಕೊಳ್ಳುವ ಬಗೆ ಹೇಗೆ?

೬. ಮಗು ಕಲಿತ ವಿದ್ಯೆಗಳಾವುವು?

೭. ಮುಂಬೈನ ಅವಸರದ ಜೀವನ ಚಿತ್ರಕ್ಕೆ ಎರಡು ಉದಾಹರಣೆ ನೀಡಿ.

## ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):

೧. ಮುಂಬೈ ಜಾತಕದಲ್ಲಿ ಮಕ್ಕಳ ಬಾಲ್ಯದ ಚಿತ್ರಣ ಹೇಗೆ ನಿರೂಪಿತವಾಗಿದೆ?

೨. ತಂದೆ-ತಾಯಿಗಳು ಮಗುವಿಗೆ ಗೋಚರಿಸುವ ಬಗೆಯನ್ನು ವಿವರಿಸಿ.

೩. ಮಗು ಕಲಿತದ್ದನ್ನು ಮತ್ತು ವಿದ್ಯಾಭ್ಯಾಸ ಮಾಡುವ ವಿವರಗಳನ್ನು ವಿಶ್ಲೇಷಿಸಿ.

೪. ನಗರ ಜೀವನದ ಯಾಂತ್ರಿಕ ವಿವರಗಳು ಕವಿತೆಯಲ್ಲಿ ಹೇಗೆ ಚಿತ್ರಿತಗೊಂಡಿದೆ? ವಿವರಿಸಿ.

## ಭಾಷಾಭ್ಯಾಸ :

೧. ನಿಲ್ಲದಿರು, ತಳ್ಳದಿರು, ಕಾಣದಿರು – ಮುಂತಾದ ನಿಷೇಧಾರ್ಥಕ ಪದಗಳನ್ನು ಗಮನಿಸಿರಿ.

೨. ಬಸ್ಸು, ಟ್ರಾಂ, ಕಾರು, ಟ್ಯಾಕ್ಸಿ, ಎಲೆಕ್ಟ್ರಿಕ್ ಟ್ರೇನು, ಬಾಟ್ಲಿ – ಮುಂತಾದ ಅನ್ಯದೇಶ್ಯ ಪದಗಳನ್ನು ಗಮನಿಸಿರಿ. ಕವಿತೆಯಲ್ಲಿರುವ ಇಂತಹ ಪದಗಳನ್ನು ಪಟ್ಟಿಮಾಡಿರಿ.

೩. ಬೆಳಗಿಂದ, ನಡೆಸಿದವಳು, ಬಸ್‌ಸ್ಟಾಪಿನಲ್ಲಿ – ಇವುಗಳ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ, ವಿಭಕ್ತಿಯನ್ನು ಹೆಸರಿಸಿ.

೪. ಕಳುಹಿಸಿದ, ಹಿಡಿಯುವುದು, ತತ್ತರಿಸುತ್ತಾ – ಇವುಗಳ ಕಾಲಸೂಚಕಗಳನ್ನು ಗುರುತಿಸಿ.

೫. ನಿಲ್ಲು, ಸಂಚರಿಸು, ಓಡು, ಬೇರೂರು, ಹೀರು – ಈ ಕ್ರಿಯಾಸೂಚಿಗಳ ವ್ಯಾಕರಣ ವಿಶೇಷವನ್ನು ಅಧ್ಯಾಪಕರಿಂದ ಕೇಳಿ ತಿಳಿಯಿರಿ.

## ಚಟುವಟಿಕೆ :

೧. ಕವಿತೆಯಲ್ಲಿ ಬಳಕೆಯಾಗಿರುವ ಟ್ರಾಂ, ಟ್ರೇನು, ಗ್ರೈಪ್ ಸಿರಪ್ ಮುಂತಾದ ಅನ್ಯದೇಶ್ಯ ಪದಗಳು ಉಂಟುಮಾಡುವ ಯಾಂತ್ರಿಕ ಕರ್ಕಶತೆಯನ್ನು, ಶಬ್ದಮಾಲಿನ್ಯವನ್ನು ಗಮನಿಸಿ.

೨. ನಗರಕ್ಕೆ ವಲಸೆ ಬರುವವರ ಸಂಖ್ಯೆ ವೃದ್ಧಿಸುತ್ತಿರುವ ವಿಚಾರದ ಬಗ್ಗೆ ಒಂದು ಪ್ರಬಂಧ ರಚಿಸಿ.

೩. ನಿಮ್ಮ ಬಾಲ್ಯದ ಸಮೃದ್ಧ ನೆನಪುಗಳನ್ನು ಬಿಂಬಿಸುವ ಲೇಖನವೊಂದನ್ನು ಬರೆಯಿರಿ.

೪. ನಗರಗಳ ಅವಸರದ ಜೀವನ – ಹಳ್ಳಿಯ ಪ್ರಶಾಂತ ಪರಿಸರಗಳನ್ನು ಹೋಲಿಸಿ, ಒಂದು ಕವಿತೆ ಬರೆಯಿರಿ.

೫. ಶಬ್ದಮಾಲಿನ್ಯದಿಂದುಂಟಾಗುವ ಅನನುಕೂಲಗಳ ಬಗ್ಗೆ ಲೇಖನ ರಚಿಸಿ.

## ಆಕರ :

ಕೃತಿ : ತೆರೆದ ದಾರಿ (೧೯೬೬)

ಲೇಖಕರು : ಜಿ.ಎಸ್. ಶಿವರುದ್ರಪ್ಪ

ಪ್ರಕಾಶನ : ಕಾಮಧೇನು ಪ್ರಕಾಶನ, ಬೆಂಗಳೂರು.

## ಹೆಚ್ಚಿನ ಓದಿಗೆ :

೧. ಸ್ನೇಹ–ಕಾರ್ತಿಕ : ಜಿಎಸ್‌ಎಸ್ ಅಭಿನಂದನ ಗ್ರಂಥ.

೨. ಜಿಎಸ್‌ಎಸ್ ೭೫ : ಜಿಎಸ್‌ಎಸ್ ಗೌರವ ಗ್ರಂಥ.

೩. ಬೇರು ಕಾಂಡ ಚಿಗುರು : ಕೆ.ವಿ. ನಾರಾಯಣ

೪. ಸಂಸ್ಕೃತಿ ಕಥನ : ಡಿ.ಆರ್. ನಾಗರಾಜ

೫. ಗ್ರಾಮೀಣ ಜನರ ಪಟ್ಟಣ ವಲಸೆ – ಒಂದು ಚಿಂತನೆ : ಡಾ॥ ಮೂಡ್ನಾಕೂಡು ಚಿನ್ನಸ್ವಾಮಿ.

**ಬಾಲ್ಯದ ಸ್ಮೃತಿ ಅಜಂತದ ಗವಿ – *ರಾಕು.***

# ೯. ಶಿಲುಬೆ ಏರಿದ್ದಾನೆ

– ಕೆ.ಎಸ್. ನಿಸಾರ್ ಅಹಮದ್

*ಜಗತ್ತಿಗೆ ಪ್ರೀತಿ, ದಯೆ, ಕರುಣೆಯ ಸಂದೇಶವನ್ನು ಸಾರಿದ ಮಹಾನ್ ವ್ಯಕ್ತಿಗಳಲ್ಲಿ ಜೀಸಸ್ ಪ್ರಮುಖರು. ಸಾವಿನ ಸಂಕಟದಲ್ಲೂ ವಿಚಲಿತನಾಗದೆ ಲೋಕಕಲ್ಯಾಣಕ್ಕಾಗಿ ಮಿಡಿದ ಜೀಸಸ್‌ನ ವ್ಯಕ್ತಿತ್ವ ಇಂದು ಪ್ರಸ್ತುತ. ಹಿಂಸೆ ಆಧುನಿಕ ಸಮಾಜದ ಗುಣವೆಂಬಂತೆ ವಿಶ್ವವ್ಯಾಪಿಯಾಗಿ ಹಬ್ಬುತ್ತಿರುವ ಈ ಸಂದರ್ಭದಲ್ಲಿ ಜೀಸಸ್‌ನ ಪ್ರೀತಿ, ಕರುಣೆ, ಔದಾರ್ಯ ನಮ್ಮೊಳಗೆ ಅನುರಣನಗೊಳ್ಳಬೇಕಾದ ಅಗತ್ಯವಿದೆ. ಕವಿ ನಿಸಾರ್ ಅವರು ಜೀಸಸ್‌ನ ವ್ಯಕ್ತಿತ್ವದ ಬಗ್ಗೆ ಬರೆದಿರುವ ಈ ಕವಿತೆ ಪರಧರ್ಮ ಸಹಿಷ್ಣುತೆ ಹಾಗೂ ವಿಶ್ವಭ್ರಾತೃತ್ವಕ್ಕೆ ಬರೆದ ಹೊಸ ಭಾಷ್ಯದಂತಿದೆ.*

೧

ಕ್ರಿಸ್ಮಸ್ ಹೊತ್ತು ತಂದಿದೆ ಈ ಮನೆಗೆ,
ಕೇಕು, ಚಳಿ, ನಕ್ಷತ್ರ ದೀಪ;
ಪ್ಲಾಸ್ಟಿಕ್ ನಕಲಿನ ಕುಬ್ಜತೆಗೆ
ಕರುಣಿಸಿದೆ ಗಿಡದ ರೂಪ;
ಅದಕ್ಕೆ ಮಂಜಿನ ಕೆಲಸ ಮಾಡಿದೆ ಹತ್ತಿ,
ಸ್ಕರ್ಟಿನ ಹುಡುಗಿಯ ಮೊಣಕಾಲಲ್ಲಿ
ಬೆಚ್ಚಗಾಗಿದೆ ಮೋಂಬತ್ತಿ.

ಶಿಲುಬೆಯೇರಿದ್ದಾನೆ ಜೀಸಸ್ ಗೋಡೆಯಲ್ಲಿ;
ಬಾಗಿದ ಶಿರ
ಕುತ್ತಿಗೆಯಲಿ ಉಬ್ಬಿದೊಂದು ನರ,
ಯಾತನೆಗೂ ನಲ್ವಾತನೇ ನುಡಿವ ಮುಖ ಮುದ್ರೆ;
ತೆರೆದೆದೆ
ಎನ್ನುವಂತಿದೆ;
ಕೊಲೆಗಡುಕ ಬರಬ್ಬನ ವಕಾಲತ್ತು ನಡೆಸಿದವರೆ,
ಎಡಕ್ಕೊಬ್ಬ ಬಲಕ್ಕೊಬ್ಬ ಕಳ್ಳನ ತೂಗಿ ಸನ್ಮಾನಿಸಿದವರೆ,
ಮನ್ನಿಸಲಿ ನಿಮ್ಮನ್ನ–ಆ ದೇವರೆ!

ನೀವು ಬಡಿದ ಸುತ್ತಿಗೆಗಳು
ಮೊಳೆಗಳು
ಮಕುಟ ಹೆಣೆದ ಮುಳ್ಳುಗಳು
ಹಬ್ಬಿಸಿದ ಸುಳ್ಳುಗಳು
ರೋಮನರ ಕಿವಿಡೆಬ್ಬಿಸುವ ಕೊಂಬುಗಳು
ಕಾಲರಾಯನ ಗುಜರಿ ಸೇರಿಲ್ಲ–
ವೇಷ ಮರೆಸಿವೆ ಅಷ್ಟೆ, ಈ ಎಲ್ಲ ಕೇಡುಗಳು:
ರೈಫಲ್ಲು, ಟ್ಯಾಂಕು, ಬಾಂಬು, ಗ್ರನೇಡುಗಳು.
–ಅವಕ್ಕೆ ಚಲನೆಯೊದಗಿಸಿವೆ:
ನಿಮ್ಮವೇ ಬಲಿಷ್ಠ ಕೈಯಿಗಳು,
ಎದೆಯಾಳದ ಮುಯ್ಯಿಗಳು.

೨

ಇರುವತನಕ ನಿಮ್ಮ ಸಾಮ್ರಾಜ್ಯ
ಆಗುತ್ತೇನೆ ಕ್ರೋಧ, ತಿಳಿಗೇಡಿತನಕ್ಕೆ ಆಜ್ಯ.
ಬಂದೇ ತೀರುತ್ತದೆ ದೈವೀರಾಜ್ಯ
ಎನ್ನುವಂತೆ ಏರಿದ್ದಾನೆ ಶಿಲುಬೆ–
ಇಗರ್ಜಿ ಮಸಜೀದು ದೇವಸ್ಥಾನ ಮಠಗಳಲ್ಲಿ
ಮತಮತದ ಮತಿರಹಿತ ಹಟಗಳಲ್ಲಿ;
ಕೋರ್ಟು ಕಾರ್ಖಾನೆ ಠಾಣೆ ಠಾಣೆಗಳಲ್ಲಿ,
ಕಣ್ಬೆಳಕ ಕಿತ್ತೆಸೆದು ಕುರುಡುಗೊಳಿಸುವ
ನಮ್ಮ ಬಂದಿಖಾನೆಗಳಲ್ಲಿ,
ದವಾಖಾನೆಗಳ ಕೋಣೆ ಕೋಣೆಗಳಲ್ಲಿ;
ಮಾಹೆಗೊಂದಾವರ್ತಿ ಹಣತೆ ಹೊತ್ತಿಸಿಕೊಳದ
ದಲಿತ ವಾಸದ ಸೋಗೆ ಬಿಲಗಳಲ್ಲಿ–
ದಿನ ನಿತ್ಯ ಶಿಲುಬೆಯೇರಿದ್ದಾನೆ ಜೀಸಸ್;
ಅಸಂಖ್ಯ ಕ್ರಿಸ್ಮಸ್ಸುಗಳ ಹರಸಿ,
ಶೋಷಿತರ ಕಂಬನಿಯನೊರೆಸಿ,
ಸತ್ಯಕ್ಕೆ ಹೊಸ ಕವಲುಗಳ ತೆರೆಸಿ.

## ಕವಿ–ಕಾವ್ಯ ಪರಿಚಯ :



**ಕೆ.ಎಸ್. ನಿಸಾರ್ ಅಹಮದ್** (ಜನನ : ೫.೨.೧೯೩೬) ಅವರು ಪ್ರಯೋಗ ಶೀಲತೆ ಮತ್ತು ವಿಭಿನ್ನ ಸಂವೇದನೆಯ ಮೂಲಕ ಕನ್ನಡ ಕಾವ್ಯಕ್ಕೆ ಹೊಸ ಆಯಾಮ ನೀಡಿದವರು. ಹುಟ್ಟಿದ್ದು ದೇವನಹಳ್ಳಿಯಲ್ಲಿ. ಓದಿದ್ದು ಭೂಗರ್ಭ ವಿಜ್ಞಾನ. ಹಲವು ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ಸದ್ಯ ಬೆಂಗಳೂರಿನಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ.

ವಿಭಿನ್ನ ಸಂಸ್ಕೃತಿಯ ಅರಿವು, ವೈಚಾರಿಕ ದೃಷ್ಟಿಕೋನ, ಲವಲವಿಕೆಯ ಭಾಷೆ, ಅನುಭವವನ್ನು ಹದವರಿತ ವ್ಯಂಗ್ಯ, ಕಟೋಕ್ತಿಗಳ ಮೂಲಕ ಹೇಳುವ ಜಾಣ್ಮೆ ನಿಸಾರರ ಕಾವ್ಯದ ಮುಖ್ಯ ಲಕ್ಷಣಗಳು. ಸಂಜೆ ಐದರ ಮಳೆ, ಅನಾಮಿಕ ಆಂಗ್ಲರು, ನೆನೆದವರ ಮನದಲ್ಲಿ, ಸುಮುಹೂರ್ತ, ನಾನೆಂಬ ಪರಕೀಯ, ಆಕಾಶಕ್ಕೆ ಸರಹದ್ದುಗಳಿಲ್ಲ, ಸ್ವಯಂಸೇವೆಯ ಗಿಳಿಗಳು, ಬಹಿರಂಗ ಮೊದಲಾದ ಕವನಸಂಕಲಗಳನ್ನು ನಿಸಾರ್ ಪ್ರಕಟಿಸಿದ್ದಾರೆ. ಹಾಗೆಯೇ ಕನ್ನಡದ ಮೊಟ್ಟಮೊದಲ ಭಾವಗೀತೆಗಳ ಜನಪ್ರಿಯ ಕ್ಯಾಸೆಟ್ 'ನಿತ್ಯೋತ್ಸವ'ವನ್ನು ಹೊರತಂದು ಧ್ವನಿಸುರುಳಿ ಪರಂಪರೆ ಬೆಳೆಯಲು ನಿಸಾರ್ ಕಾರಣರಾಗಿದ್ದಾರೆ. ಕಾವ್ಯಕ್ಷೇತ್ರ ಮಾತ್ರವಲ್ಲದೆ ಶ್ರೇಷ್ಠ ಅನುವಾದಕರೂ, ವೈಚಾರಿಕ ಲೇಖನಕರ್ತರೂ ಆಗಿರುವ ನಿಸಾರ್ ೨೦೦೬ರಲ್ಲಿ ಶಿವಮೊಗ್ಗದಲ್ಲಿ ನಡೆದ ೭೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಭಾರತ ಸರ್ಕಾರದ ಪದ್ಮಶ್ರೀ ಪುರಸ್ಕಾರ, ಹಂಪಿ ಕನ್ನಡ ವಿ.ವಿ.ಯ ನಾಡೋಜ ಪುರಸ್ಕಾರ, ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಅನಕೃ ಪ್ರಶಸ್ತಿ, ಇತ್ಯಾದಿ ಗೌರವಗಳು ಇವರಿಗೆ ಸಂದಿವೆ.

'ಶಿಲುಬೆ ಏರಿದ್ದಾನೆ' ಕವನ ಜೀಸಸ್ ಬಗ್ಗೆ ಗೋವಿಂದ ಪೈಯವರ 'ಗೊಲ್ಗೊಥಾ' ಕವನದ ನಂತರ ಬಂದ ವಿಶಿಷ್ಟ ಕವನ. ಜೀಸಸ್‌ನ ವ್ಯಕ್ತಿತ್ವ, ಆದರ್ಶಗಳನ್ನು ಅಪೂರ್ವವಾಗಿ ಚಿತ್ರಿಸಿರುವ ಕವಿ ಆ ಕಾಲದ ಹಿಂಸೆ, ಕ್ರೌರ್ಯ ಈ ಕಾಲದಲ್ಲಿಯೂ ಹೊಸರೂಪದಲ್ಲಿ ಮುಂದುವರೆಯುತ್ತಿರುವ ದುರಂತವನ್ನು ಕಟ್ಟಿಕೊಟ್ಟಿದ್ದಾರೆ. ಜೀಸಸ್‌ನ ಸಾವನ್ನು ವಿಷಾದದಿಂದ ನೋಡುವ ಕವಿ, ಆತ ಇಂದು ಅಸಂಖ್ಯ ಹೃದಯಗಳಲ್ಲಿ ಮಾನವತೆಯ ಕಿಡಿಯನ್ನು ಹಚ್ಚಿಹೋಗುವ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದ್ದಾರೆ.

## ಶಬ್ದಾರ್ಥ :

ಶಿಲುಬೆ–ಕ್ರೈಸ್ತರಲ್ಲಿ ಹಿಂದೆ ತಪ್ಪಿತಸ್ಥರನ್ನು ಕೊಲ್ಲಲು ನಿರ್ಮಿಸಿದ ಮರದ ಸಾಧನ, ಕ್ರೈಸ್ತರ ಧಾರ್ಮಿಕ ಲಾಂಛನ; ನಲ್ವಾತು–ಒಳ್ಳೆಯ ಮಾತು; ಮಕುಟ–ಕಿರೀಟ; ಕೊಂಬು–ವಾಲಗ (ಊದುವ ಸಾಧನ); ಗುಜರಿ–ಹಳೆಯ ಸಾಮಾನುಗಳನ್ನು ಮಾರುವ ಸ್ಥಳ; ರೈಫಲ್ಲು–ಪಿಸ್ತೂಲು; ಟ್ಯಾಂಕು, ಗ್ರನೇಡು–ಯುದ್ಧ ಸಾಧನಗಳು; ಮುಯ್ಯಿ–ಸೇಡು; ಆಜ್ಯ–ತುಪ್ಪ; ಮಸಜೀದು–ಮಸೀದಿ; ಇಗರ್ಜಿ–ಚರ್ಚು; ಮತಿರಹಿತ–ಬುದ್ಧಿರಹಿತ; ಮಾಹೆ–ತಿಂಗಳು; ಒಂದಾವರ್ತಿ–ಒಂದು ಸಲ; ಸೋಗೆ ಬಿಲ–ಗುಡಿಸಲು; ಅಸಂಖ್ಯ–ಲೆಕ್ಕವಿಲ್ಲದಷ್ಟು; ಕವಲು–ಟಿಸಿಲು, ಭಿನ್ನತೆ, ಬದಲಾವಣೆ.

## ಟಿಪ್ಪಣಿ :

**೧. ಸ್ಕರ್ಟಿನ ಹುಡುಗಿಯ ಮೊಣಕಾಲಲ್ಲಿ ಬೆಚ್ಚಗಾಗಿದೆ ಮೋಂಬತ್ತಿ :**

ಈ ಸಾಲುಗಳು ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದ ಹುಡುಗಿಯರು ಸಾಮಾನ್ಯವಾಗಿ ಧರಿಸುವ ದಿರಿಸನ್ನು ಮತ್ತು ಅವರು ಮಂಡಿಯೂರಿ ಮೋಂಬತ್ತಿ ಹಚ್ಚಿ ಪ್ರಾರ್ಥನೆ ಸಲ್ಲಿಸುವ ರೀತಿಯನ್ನು ನೆನಪಿಸುತ್ತವೆ. ಮೋಂಬತ್ತಿ ಬೆಳಕಿನ ಸಂಕೇತ. ಪ್ರಾರ್ಥನೆಯ ಮೂಲಕವೇ ಬೆಚ್ಚಗಾಗಿದೆ ಮೋಂಬತ್ತಿ ಎಂದು ಹೇಳುವ ಮೂಲಕ ಕವಿ ಬೆಚ್ಚನೆಯ ಪ್ರಾರ್ಥನೆಯ ದಿವ್ಯ ಅನುಭವವನ್ನು ಕಟ್ಟಿಕೊಡುತ್ತಾರೆ.

**೨. ಕೊಲೆಗಡುಕ ಬರಬ್ಬನ ವಕಾಲತ್ತು ನಡೆಸಿದವರೆ**
**ಎಡಕ್ಕೊಬ್ಬ ಬಲಕ್ಕೊಬ್ಬ ಕಳ್ಳನ ತೂಗಿ ಸನ್ಮಾನಿಸಿದವರೆ :**

ಈ ಸಾಲುಗಳು ಜೀಸಸ್‌ನ ಸಾವಿನ ಸಂದರ್ಭವನ್ನು ಕಣ್ಣೆದುರು ತರುತ್ತವೆ. ಯೇಸುವನ್ನು ಶಿಲುಬೆಗೇರಿಸಲು ಆಗ್ರಹಿಸಿದ ರೋಮ್‌ನ ಯಾಜಕರು ಆ ಪವಿತ್ರ ದಿನದಂದು ಕೊಲೆಗಡುಕ ಬರಬ್ಬನನ್ನು ಕ್ಷಮಿಸಲು ಆಗ್ರಹಿಸುತ್ತಾರೆಯೇ ವಿನಾ ಜೀಸಸ್‌ನನ್ನು ಕ್ಷಮಿಸಲು ಒಪ್ಪುವುದಿಲ್ಲ. ಇವರ ಒತ್ತಡಕ್ಕೆ ಮಣಿದು ಇಬ್ಬರು ಕಳ್ಳರ ಮಧ್ಯೆ ಜೀಸಸ್‌ನನ್ನು ಗಲ್ಲಿಗೇರಿಸಲಾಯಿತು.

**೩. ನೀವು ಬಡಿದ ಸುತ್ತಿಗೆಗಳು**
**ಮೊಳೆಗಳು**
**ಮಕುಟ ಹೆಣೆದ ಮುಳ್ಳುಗಳು...**

ಈ ಸಾಲುಗಳು ಯೇಸುವನ್ನು ಚಿತ್ರಹಿಂಸೆ ಕೊಟ್ಟು ಕೊಲ್ಲುವ ಹೃದಯವಿದ್ರಾವಕ ಘಟನೆಗೆ ಸಾಕ್ಷಿಯಾಗಿವೆ. ಜೀಸಸ್‌ನನ್ನು ಶಿಲುಬೆಗೇರಿಸಿ ಮೊಳೆ ಬಡಿಯುವ, ಮುಳ್ಳಿನ ಕಿರೀಟ ತೊಡಿಸಿ ಅವಮಾನ ಮಾಡುವ ಕರುಣಾಜನಕ ಸಂದರ್ಭವನ್ನು ಕವಿ ಇಲ್ಲಿ ಚಿತ್ರಿಸಿದ್ದಾರೆ.

## : ಅಭ್ಯಾಸ ಭಾಗ :

### ಅ) ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು:

೧. ಯಾತನೆಗೂ ನಲ್ವಾತನೇ ನುಡಿವ ಮುಖಮುದ್ರೆ.

೨. ಮನ್ನಿಸಲಿ ನಿಮ್ಮನ್ನ ಆ ದೇವರೆ!

೩. ವೇಷ ಮರೆಸಿವೆ ಅಷ್ಟೆ – ಈ ಎಲ್ಲ ಕೇಡುಗಳು.

೪. ಬಂದೇ ತೀರುತ್ತದೆ ದೈವೀ ರಾಜ್ಯ.

೫. ದಿನನಿತ್ಯ ಶಿಲುಬೆಯೇರಿದ್ದಾನೆ ಜೀಸಸ್.

## ಆ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):

೧. ಕ್ರಿಸ್ಮಸ್ ಪ್ಲಾಸ್ಟಿಕ್ ನಕಲಿನ ಕುಬ್ಜತೆಗೆ ಯಾವ ರೂಪ ಕರುಣಿಸಿದೆ?

೨. ಕ್ರಿಸ್ಮಸ್ ಸಂದರ್ಭದಲ್ಲಿ ಹತ್ತಿ ಯಾವ ಕೆಲಸ ಮಾಡಿದೆ?

೩. ಶಿಲುಬೆಯೇರಿದವರು ಯಾರು?

೪. ಜೀಸಸ್‌ನ ಮುಖಮುದ್ರೆ ಏನನ್ನು ನುಡಿವಂತಿದೆ?

೫. ಜೀಸಸ್‌ನ ಶಿಲುಬೆಗೇರಿಸಿದವರು ಯಾರ ವಕಾಲತ್ತು ನಡೆಸಿದವರಾಗಿದ್ದಾರೆ?

೬. ಏನು ಬಂದೇ ತೀರುತ್ತದೆ ಎಂಬ ನಂಬಿಕೆಯಲ್ಲಿ ಜೀಸಸ್ ಶಿಲುಬೆ ಏರಿದ್ದಾನೆ?

೭. ಕವಿಯ ಪ್ರಕಾರ ತಿಂಗಳಿಗೊಂದು ಸಲವೂ ದೀಪಹಚ್ಚದ ಸ್ಥಳ ಯಾವುದು?

೮. ಯಾರ ಕಂಬನಿಯನ್ನೊರೆಸಿ ಜೀಸಸ್ ದಿನನಿತ್ಯ ಶಿಲುಬೆ ಏರಿದ್ದಾನೆ?

## ಇ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯದಲ್ಲಿ ಉತ್ತರಿಸಿ):

೧. ಕ್ರಿಸ್ಮಸ್ ಮನೆಗೆ ಏನನ್ನು ಹೊತ್ತು ತಂದಿದೆ?

೨. ಶಿಲುಬೆಗೇರಿದ ಯೇಸುವಿನ ದೇಹ ಯಾರಿಗೆ, ಏನನ್ನು ಅನ್ನುವಂತಿದೆ?

೩. ಶಿಲುಬೆಗೇರಿಸಿದವರ ಗುಣಗಳು ಇಂದು ಯಾವ ವೇಷ ತಾಳಿವೆ?

೪. ಯಾವ ಸಂದೇಶವನ್ನು ನೀಡುವ ರೀತಿಯಲ್ಲಿ ಜೀಸಸ್ ಶಿಲುಬೆಯೇರಿದ್ದಾನೆ?

## ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):

೧. ಶಿಲುಬೆಗೇರಿದ ಜೀಸಸ್‌ನ ದೇಹ ಏನನ್ನು ಹೇಳುವಂತಿದೆ? ವಿವರಿಸಿ.

೨. ಯಾವ ಸ್ಥಳಗಳಲ್ಲಿ ಜೀಸಸ್ ದಿನನಿತ್ಯ ಶಿಲುಬೆ ಏರಿದ್ದಾನೆ? ಚರ್ಚಿಸಿ.

೩. 'ಶಿಲುಬೆ ಏರಿದ್ದಾನೆ' ಕವನದಲ್ಲಿ ಜೀಸಸ್ ವ್ಯಕ್ತಿತ್ವ ಮತ್ತು ಆತನ ಮಹತ್ವವನ್ನು ಕವಿ ಯಾವ ರೀತಿ ನಿರೂಪಿಸಿದ್ದಾರೆ? ವಿವರಿಸಿ.

## ಭಾಷಾಭ್ಯಾಸ :

೧. ಈ ಕವಿತೆಯಲ್ಲಿ ಬಂದಿರುವ ಅನ್ಯದೇಶ್ಯ ಪದಗಳನ್ನು ಸಂಗ್ರಹಿಸಿರಿ. ಉದಾ: ರೈಫಲ್ಲು, ಟ್ಯಾಂಕು.

೨. ಈ ಕವಿತೆಯಲ್ಲಿ ಬಂದಿರುವ ತತ್ಸಮ ತದ್ಭವ ಪದಗಳನ್ನು ಗುರುತಿಸಿರಿ. ಉದಾ: ಶಿರ.

## ಚಟುವಟಿಕೆ :

೧. ಯೇಸುಕ್ರಿಸ್ತನ ಜೀವನಚರಿತ್ರೆಯನ್ನು ಓದಿ ನಿಮ್ಮದೇ ಮಾತುಗಳಲ್ಲಿ ಪ್ರಬಂಧ ಬರೆಯಿರಿ.

೨. ಕನ್ನಡದಲ್ಲಿ ಬಂದಿರುವ ಬುದ್ಧ, ಬಸವ, ಅಂಬೇಡ್ಕರ್, ಗಾಂಧಿ ಇವರ ಬಗೆಗಿನ ಕವಿತೆಗಳನ್ನು ಸಂಗ್ರಹಿಸಿ.

## ಆಕರ :

ಕೃತಿ : ವ್ಯಕ್ತಿಪರ ಕವನಗಳು
ಲೇಖಕರು : ಕೆ.ಎಸ್. ನಿಸಾರ್ ಅಹಮದ್
ಪ್ರಕಾಶಕರು : ಸಪ್ನ ಬುಕ್‌ಹೌಸ್, ಬೆಂಗಳೂರು.

## ಹೆಚ್ಚಿನ ಓದಿಗೆ :

೧. ಗೋವಿಂದ ಪೈಯವರ 'ಗೊಲ್ಗೊಥಾ' ಕವನ ಮತ್ತು 'ಯೇಸು–ಕೃಷ್ಣ' ಕವನ.

೨. ಸು.ರಂ. ಎಕ್ಕುಂಡಿಯವರ 'ಕಳ್ಳರು ಮತ್ತು ಸಂತ' ಕವನ.

**ಕ್ರೌರ್ಯಗಳ ಆಚೆಗೂ ಉಂಟಲ್ಲ, ಸ್ವರ್ಗಕ್ಕೆ**
**ಕರೆದೊಯ್ಯಬಲ್ಲದು ಕ್ಷಮೆಯ ಏಣಿ**

*– ಸು.ರಂ. ಎಕ್ಕುಂಡಿ*

# ೧೦. ಒಂದು ಹೂ ಹೆಚ್ಚಿಗೆ ಇಡುತೀನಿ

– *ಲಲಿತಾ ಸಿದ್ಧಬಸವಯ್ಯ*

*ವಯೋವೃದ್ಧ ತಂದೆತಾಯಿಯರನ್ನು ಜವಾಬ್ದಾರಿಯ ನಿಭಾವಣೆಯ ನೆಪದಲ್ಲಿ ಹಂಚಿಕೊಂಡು, ಹಿರಿಯ ಜೀವಗಳ ತಲ್ಲಣಗಳನ್ನು ಅಲಕ್ಷಿಸುವಷ್ಟು ವ್ಯಾವಹಾರಿಕವಾಗಿದೆ ಕರುಳುಬಳ್ಳಿಯ ಸಂಬಂಧಗಳು. ಮಮತೆಯಿಂದ ಸಾಕಿಬೆಳೆಸಿದ ಹೆತ್ತವರನ್ನು ತಾತ್ಸಾರದಿಂದ ಕಾಣುವ ಮನೋಭಾವವಿಂದು ಎಲ್ಲೆಲ್ಲೂ ಸಾಮಾನ್ಯವಾಗಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ.*

*ಬೇರ್ಪಟ್ಟಿರುವ ಕಾರಣಕ್ಕೆ ಪರಸ್ಪರ ತಳಮಳ ವ್ಯಕ್ತಪಡಿಸುವ ಹಿರಿಯ ಜೀವಗಳೆರಡರ ತುಯ್ದಾಟವನ್ನು ಚಿತ್ರಿಸುವ ಪ್ರಸ್ತುತ ಕವಿತೆಯು ನಾವು ಕಳೆದುಕೊಳ್ಳುತ್ತಿರುವ ಮಾನವೀಯ ಮೌಲ್ಯಗಳಿಗೆ ಕನ್ನಡಿ ಹಿಡಿಯುವಂತಿವೆ. ಗದ್ಯಗಂಧಿಯಾದ ನಿರೂಪಣೆಯುಳ್ಳ ಈ ಕವಿತೆ ವರ್ತಮಾನದ ಚಲನೆಯ ದಿಕ್ಕನ್ನು ಸಶಕ್ತವಾಗಿ ಬಿಂಬಿಸಿದೆ.*

೧

ಮುದುಕಿಗೆ ಭಯ, ಫೋನು ಝಣಗುಟ್ಟುತ್ತಿದೆ ಎಡಬಿಡದೆ
ಎತ್ತಿಕೊಳ್ಳಲೋ ಬೇಡವೋ ಏನೆನ್ನುವಳೋ ಸೊಸೆ ಜೊತೆಗೆ
ಮಗ ಗದರಬಹುದು 'ಎಷ್ಟುಸಲವಮ್ಮ ಹೇಳುವುದು ನಿನಗೆ?'
ಫೋನು ಮಣೆಯವರೆಗೂ ಬರುತ್ತಾಳೆ ನಿಂತು ನೋಡುತ್ತಾಳೆ
ಒಂದುಸಲ ಕಿಚನ್ನಿನ ಕಡೆಗೆ ಇನ್ನೊಂದು ಸಲ ಸ್ಟಡಿರೂಮಿನೆಡೆಗೆ
ನಿಂತುಬಿಡುತ್ತೇನೋ ಇದು, ಯಾರಾದರೂ ಬರಬಾರದೇ ಬೇಗ
ಆ ಕಡೆಗೆ ಮುದುಕನಿರಬಹುದು ಎಳೆಯುತ್ತಿದೆ ಅವಳ ಜೀವ

ಹಂಚಿಕೊಂಡಿದ್ದಾರೆ ಅಪ್ಪ ಅಮ್ಮನನ್ನು
ಇಲ್ಲಿ ದೊಡ್ಡಮಗನ ತಾವಲ್ಲಿ ಮುದುಕಿ, ಸದ್ಯ ಕನ್ನಡ ದೇಶ
ಮಗ ಸೊಸೆ ಹೊರಗೆ ಹೋದಾಗಲಾದರೂ ನಾಲ್ಕು ಮಾತಾಡಿ
ತೀರಿಸಿಕೊಳ್ಳುತ್ತಾಳೆ ಬಾಯತುರಿಕೆ, ಪಾಪ ಮುದುಕ ದೂರದ
ಅಸ್ಸಾಮಿನಲ್ಲಿ, ಅಲ್ಲಿಯ ಮಾತು ಅವನಿಗೆ ಸಸೇಮಿರ ಬರದು

ಕಿರಿಮಗ ಮತ್ತವನ ಹೆಂಡತಿ
ಒಂಭತ್ತಕೆ ಗುಡ್ಡದ ಕ್ವಾರ್ಟರ್ಸು ಬಿಟ್ಟರೆ

ಮತ್ತೆ ಮನೆ ಸೇರುವುದು ಹೊತ್ತು ತಿರುಗಿದ ಮೇಲೆ
ಮಾತೇ ಮರೆತು ಹೋಗಿದೆ ಕಣೆ ಎನ್ನುತ್ತಾನೆ ಫೋನು ಮಾಡಿ
ದಾಗಲೆಲ್ಲ; ಮಾತಾಡು ಮಾತಾಡು ಆಡು ಮಾತಾಡುತ್ತಿರು
ನಿಲ್ಲಿಸಬೇಡ ಗೋಗರೆಯುತ್ತಾನೆ; ಫೋನು ಗೂಡನ್ನೇ ತಬ್ಬಿ
ಹಿಡಿದಿದ್ದಾನೆನ್ನುವುದು ಇಲ್ಲಿಂದಲೇ ಗೊತ್ತಾಗುತ್ತದೆ ಮುದುಕಿಗೆ
ಮೆಲ್ಲಗೆ ಅಳುತ್ತಾಳೆ ಸುಯ್ಲು ಸೋರದ ಹಾಗೆ ನುಂಗುತ್ತಾಳೆ
ಒಳಗೊಳಗೆ ದಿಗಿಲು ಅವಳಿಗೆ, ಅತ್ತ ಮುದುಕನಿಗೆ ಗೊತ್ತಾದರೆ
ಪಾಪ ಕೊರಗುತ್ತಾನೆ ಇತ್ತ ಮಗನಿಗೆ ಕೇಳಿಸಿದರೆ ಗದರುತ್ತಾನೆ
'ಸುಮ್ಮನಿರಮ್ಮ ಈಗ ಅಳುವಂಥದ್ದೇನಾಗಿದೆಯಮ್ಮ ನಿನಗೆ?'

೨

ಇನ್ನು ತಡೆಯಲಾಗದು ಸೋಪಾನಕದ್ದಿರುವ ಗಾಜುಬಿಲ್ಲೆ
ಜಾರಿಸದ ಹಾಗೆ ಮೊಣಕಾಲಚಿಪ್ಪ ಮೇಲೆ ಭಾರ ಹೇರುತ್ತ
ಹೇರಿದ ಭಾರಕ್ಕೆ ಅದುರುವ ಮಂಡಿಗಳ ಅಂಗೈಯಲ್ಲಿ
ಅದುಮುತ್ತ ಒಂದೊಂದೇ ಮೆಟ್ಟಿಲುಹತ್ತಿ ಕಾಡಿ ಕರೆಯುತ್ತಾಳೆ
ಮೊಮ್ಮಗಳನ್ನು; ಜಾಣೆ ಮೊಮ್ಮಗಳು ಮೂಜಗವನ್ನೆ
ಆವಾಹಿಸಿ ಕುಂತಿದ್ದಾಳೆ ಸ್ವಂತ ಕಂಪ್ಯೂಟರಿನ ಮೇಲೆ;
ರಸಾತಳಗಳೆದ್ದೆದ್ದು ಕುಣಿಯುತಿವೆ ಪರದೆ ಮೇಲೆ, ನಡುವೆ
ಈ ಅಜ್ಜಿ ಇಡಬಹುದೆ ಕಡುಬಿನ ಸೋರೆ

ಚಿಟುಗುಡುತ್ತಲೇ ಅಟ್ಟವಿಳಿದು ಬಂದ ಹುಡುಗಿ ಧಡ್ಡನೆ
ಫೋನೆತ್ತಿ ಕುಕ್ಕಿ "ರಾಂಗ್ ನಂಬರ್" ಕ್ಷಣಾರ್ಧದಲ್ಲಿ ಅಂತರ್ಧಾನ
ಮುದುಕಿಗೆ ಅನುಮಾನ, ಈ ಹುಡುಗಿ ಸರಿಯಾಗಿ ಕೇಳಿಸಿ
ಕೊಂಡಳೋ ಗಡಿಬಿಡಿಯಲ್ಲಿ ಬಿಡುಗಡೆಗೆ ಹಾತೊರೆದು
ರೈಟನ್ನೆ ರಾಂಗೆಂದಳೋ, ಬಚ್ಚಲಿಗೆಹೋಗಿ ನಿಮಿಷ ನಿಂತಿದ್ದು
ಮತ್ತೆ ಹೊರಗೆ ತಲೆಯಿಕ್ಕಿ ಅತ್ತಿತ್ತ ನೋಡಿ ಮೆತ್ತಗೆ ಫೋನಿನ
ಬಳಿಗೇ ಬರುತ್ತಾಳೆ; ಅಗೋ ಅದು ಮತ್ತೆ ಝುಣಝುಣತ್ಕರಿಸಿ
ಅವಳ ಜೀವ ಬಾಯಿಗೆ ಬಂದು ತಡವರಿಸಿ ಎರಡೂ ಕೈಯಲ್ಲಿ
ರಿಸೀವರನೆತ್ತಿ "ಹಲೋ ನಾನೇ ಕಣ್ರೀ ಮಾತಾಡ್ರಿ ಮಾತಾಡ್ರಿ"

ಮಗನ ಕಾರು ಸ್ಟಾರ್ಟಾಯಿತು ಹಿಂದೆಯೇ ಮೊಮ್ಮಗಳ ಸ್ಕೂಟಿ
ಮೊಮ್ಮಗನ ವ್ಯಾನೂ ಬಂದಾಯಿತು; ಸೊಸೆಯೊಬ್ಬಳಿಗೆ ಈ ಹೊತ್ತು
ದೇವರೇ ಹೊರಗಿನ ಕೆಲಸ ಸಮ್ಮಿಲಿಸಲಿ, ಅಷ್ಟು ಮಾಡಪ್ಪ ನನ್ನಪ್ಪ
ಗುಟ್ಟೆಮಲ್ಲಪ್ಪ ಒಂದು ಹೂ ಹೆಚ್ಚಿಗೆ ಇಡುತೀನಿ ನಿನ್ನ ಗಟ್ಟಿಪಾದಕ್ಕೆ;
ಇವರೆಲ್ಲ ಹೊರಟರೆ ಆಚೆಗೆ ಒಂದಿಷ್ಟುಹೊತ್ತು ನಿರಾಳ ಮಾತಾಡು
ತ್ತೇನೆ ನನ್ನ ಮುದುಕನ ಕೂಡೆ

ಒಳಗೊಳಗೆ ಪ್ರಾರ್ಥಿಸುತ್ತಿದೆ ಮುದುಕಿ
ಈಗಾಗಲೇ ಬಂದು ಬಿದ್ದಿರುವ ಅಗಣಿತ ಮೊರೆಗಳ ಒಟ್ಟಲಿಗೆ ಈಗ
ಇನ್ನೊಂದು ಸೇರ್ಪಡೆ ಆ ಲೀಲಾಮಾತ್ರನಿಗೆ

## ಕವಿ–ಕಾವ್ಯ ಪರಿಚಯ :

**ಶ್ರೀಮತಿ ಲಲಿತಾ ಸಿದ್ಧಬಸವಯ್ಯ** (ಜನನ : ೨೭.೦೨.೧೯೫೫) ವರ್ತಮಾನದ ಸರಳ ಸಾಮಾನ್ಯ ಸಂಗತಿಗಳನ್ನು, ಅವುಗಳ ಒಳವಿವರಗಳೊಂದಿಗೆ ಕವಿತೆಯನ್ನಾಗಿ ಕಟ್ಟುವ ಕೌಶಲವನ್ನು ಕರಗತವಾಗಿಸಿಕೊಂಡಿರುವ ಅಪರೂಪದ ಕವಯಿತ್ರಿ. ಇವರು ತುಮಕೂರು ಜಿಲ್ಲೆಯ ಕೊರಟಗೆರೆಯಲ್ಲಿ ಜನಿಸಿದರು. ಇವರ ತಂದೆ ಡಿ.ಎಸ್. ಸಿದ್ಧಲಿಂಗಯ್ಯ, ತಾಯಿ ಶ್ರೀಮತಿ ಆರ್. ಪುಟ್ಟಮ್ಮಣ್ಣಿ. ಕೊರಟಗೆರೆ–ತುಮಕೂರುಗಳಲ್ಲಿ ವ್ಯಾಸಂಗ ಮುಗಿಸಿ, ಬಿ.ಎಸ್ಸಿ. ಪದವೀಧರೆಯಾದರು. ೨೮ ವರ್ಷಗಳ ಕಾಲ ಸರ್ಕಾರಿ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿ ಪಡೆದ ನಂತರ ಬರವಣಿಗೆಯಲ್ಲೇ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. ಮೊದಲಸಿರಿ, ಇಹದಸ್ವರ, ಕೆಬ್ಬೆನೆಲ, ದಾರಿನೆಂಟ ಮತ್ತು ಬಿಡಿ ಹರಳು ಎಂಬ ಕವಿತಾ ಸಂಕಲನಗಳನ್ನೂ, ಆನೆಘಟ್ಟ ಎಂಬ ಕಥಾಸಂಕಲನವನ್ನೂ, ಇನ್ನೊಂದು ಸಭಾಪರ್ವ ಎಂಬ ನಾಟಕವನ್ನೂ, ಮಿ. ಛತ್ರಪತಿ ಎಂಬ ನಗೆಬರಹವನ್ನೂ ಪ್ರಕಟಿಸಿರುವ ಇವರಿಗೆ ಸಾಹಿತ್ಯ ಅಕಾಡೆಮಿ ಬಹುಮಾನ, ಬಿಎಂಶ್ರೀ ಕಾವ್ಯ ಪ್ರಶಸ್ತಿ, ಮುತಿನ ಕಾವ್ಯ ಪ್ರಶಸ್ತಿ, ಕಾವ್ಯಾನಂದ ಪ್ರಶಸ್ತಿ ಮುಂತಾದ ಪುರಸ್ಕಾರಗಳು ಸಂದಿವೆ.



ತನ್ನ ಜೀವನ ಸಂಗಾತಿಯಿಂದ ದೂರವಾಗಿ ಮಗನ ಆಶ್ರಯದಲ್ಲಿರುವ ಮುದುಕಿಯೊಬ್ಬಳ ತಳಮಳವನ್ನು ಈ ಕವಿತೆ ಚಿತ್ರಿಸಿದೆ. ಮತ್ತೊಬ್ಬ ಮಗನ ಬಳಿಯಿರುವ ಮುದುಕನ ಬಗೆಗೆ ಅವಳಲ್ಲಿ ಕಳಕಳಿ–ಚಿಂತೆಗಳು ತುಂಬಿವೆ. ದೂರವಾಣಿಯ ಮೂಲಕ ಪರಸ್ಪರರ ದನಿ ಕೇಳಲು ಚಡಪಡಿಸುವ ಈ ಹಿರಿಯ ಜೀವಗಳು ಇಂದಿನ ಕೃತಕ ಸಂಬಂಧಗಳನ್ನು ಕುಟುಕುವಂತಿವೆ. ವೃದ್ಧರನ್ನು ಗೌರವ, ಪ್ರೀತಿ, ಆದರಗಳಿಂದ ಕಾಣುವ ಮನೋಭಾವ 'ಕರ್ತವ್ಯ'ಕಷ್ಟೇ ಸೀಮಿತವಾಗಿರುವುದನ್ನು ಈ ಕವಿತೆ ಹೃದ್ಯವಾಗಿ ನಿರೂಪಿಸಿದೆ. ಕವಿತೆಯ ಗದ್ಯಗಂಧಿ ಶೈಲಿ ಗಮನ ಸೆಳೆಯುವಂತಿದೆ.

## ಶಬ್ದಾರ್ಥ :

ತಾವು–ಸ್ಥಳ; ಬಾಯತುರಿಕೆ–ಬಾಯಿಯ ಚಪಲ; ಸಸೇಮಿರ–ಚೂರೂ; ಗೋಗರೆ–ದೈನ್ಯದಿಂದ ಬೇಡಿಕೊಳ್ಳು; ಸುಯ್ಲು–ನಿಟ್ಟುಸಿರು; ದಿಗಿಲು–ಭಯ; ಕಾಡಿ–ಪೀಡಿಸಿ; ಆವಾಹಿಸು–ನೆಲೆಗೊಳಿಸು; ಅಟ್ಟ–ಮಹಡಿ; ಅಂತರ್ಧಾನ–ಕಣ್ಮರೆಯಾಗು; ಸಮ್ಮಿಲಿಸು–ಒಂದುಗೂಡು; ನಿರಾಳ–ನೆಮ್ಮದಿ, ಚಿಂತೆಯಿಲ್ಲದೆ; ಕೂಡೆ–ಜೊತೆಗೆ; ಅಗಣಿತ–ಲೆಕ್ಕವಿಲ್ಲದಷ್ಟು; ಮೊರೆ–ಆರ್ತನಾದ, ಗೋಳಾಟ; ಒಟ್ಟಲಿಗೆ–ರಾಶಿಗೆ, ಗುಂಪಿಗೆ; ಲೀಲಾಮಾತ್ರ–ದೇವರು.

## ಟಿಪ್ಪಣಿಗಳು :

**೧. ಸಸೇಮಿರ.**

'ಸಸೇಮಿರ' ಎಂಬ ಪದವು ತುಮಕೂರು ಮುಂತಾದ ಪ್ರದೇಶದಲ್ಲಿ ಬಳಕೆಯಾಗುತ್ತಿದೆ. 'ಸ್ವಲ್ಪವೂ ಬರದು', 'ಏನೂ ತಿಳಿದಿಲ್ಲ' ಎಂಬರ್ಥದಲ್ಲಿ ಬಳಕೆಯಾಗುವ ಈ ಪದದ ಮೂಲ ತೆಲುಗು. ಬಳಕೆಯಿಂದ ದೂರ ಸರಿಯುತ್ತಿರುವ ಇಂತಹ ಪದಗಳನ್ನು ಕವಯಿತ್ರಿ ಕವಿತೆಯಲ್ಲಿ ಬಳಸಿರುವುದು ವಿಶೇಷವಾಗಿದೆ.

**೨. ಕಡುಬಿನ ಸೋರೆ.**

ಸೋರೆ ಎಂದರೆ ಅಡುಗೆ ಮಾಡಲು, ಮಾಡಿದ ಅಡುಗೆ ಎತ್ತಿಡುವುದಕ್ಕೆ, ಕೆಲವೊಮ್ಮೆ ಕಾಳುಕಡಿ ಎತ್ತಿಡುವುದಕ್ಕೆ ಅಡುಗೆಮನೆಯಲ್ಲಿ ಬಳಸುವ ಮಣ್ಣಿನ ಪಾತ್ರೆ. ಕುಡಿಕೆ, ಗಡಿಗೆ, ಮೊಗೆ, ಹರುವಿ, ಗುಡಾಣ, ವಾಡೆ ಇತ್ಯಾದಿಗಳ ಹಾಗೆ ಸೋರೆ ಕೂಡಾ ಮನೆಬಳಕೆಯ ಮಣ್ಣಿನ ಪಾತ್ರೆ. ಈಗಲೂ ಕೆಲವು ಗ್ರಾಮಗಳಲ್ಲಿ ಇವುಗಳ ಬಳಕೆಯುಂಟು.

ಹಿಟ್ಟು ಮಾಡಲು ಬಳಸುವ ಲಾಗಾಯ್ತಿನ ಸೋರೆಗೆ ಹಿಟ್ಟಿನ ಸೋರೆ, ಎಸರು ಅಂದರೆ ಸಾರಿಗೆ ಬಳಸಿದರೆ ಎಸರಿನ ಸೋರೆ, ಮಜ್ಜಿಗೆ ಕಡೆಯಲು ಪಳಗಿಸಿದರೆ ಮಜ್ಜಿಗೆ ಸೋರೆ ಹಾಗೆ ಕಡುಬು ಎತ್ತಿಡಲು ಮೀಸಲಿಟ್ಟದ್ದು ಕಡುಬಿನ ಸೋರೆ.

ಸೋರೆ ಎತ್ತಿಡುವ ಸ್ಥಳವಾದರೂ ಯಾವುದು – ಅಡುಗೆಮನೆ. ಅದರಲ್ಲಿ ಕೇಳುವಂಥದ್ದೇನಿದೆ? ಮಣ್ಣಿನ ಪಾತ್ರೆಯನ್ನೇನು ಬೀರುವಲ್ಲಿಟ್ಟು ಬೀಗ ಹಾಕುತ್ತಾರೆಯೆ, ಇಲ್ಲ, ಆದರೂ ಕೆಲವೊಮ್ಮೆ ಅಧಿಕ ಪ್ರಸಂಗಿಗಳು ಮನೆಯಲ್ಲಿನ ಗಹನ ಸಮಸ್ಯೆಗಳನ್ನು ಬಿಟ್ಟು ಕಡುಬಿನ ಸೋರೆ ಎಲ್ಲಿಡಲಿ ಅಂತ ಕೇಳುತ್ತ ಅಡ್ಡಾಡುವುದುಂಟು. ಅಂಥವರಿಗಾಗಿ ಹುಟ್ಟಿಕೊಂಡ ವ್ಯಂಗ್ಯದ ಗಾದೆ ಇದು – ಬಂದ ನೋಡಪ್ಪ ನಂದೆಲ್ಲಿಡಲಿ ಕಡುಬಿನ ಸೋರೆ ಅಂದು – ಈಗಲೂ ಹಳೆಮೈಸೂರಿನ ಹಳ್ಳಿಗಳಲ್ಲಿ ಗಂಭೀರ ಮಾತುಕತೆ ನಡುವೆ ತಲೆ ತೂರಿಸಿ ಅವಿವೇಕದ ಅಸಂಬದ್ಧದ ಪ್ರಶ್ನೆಗಳನ್ನೆತ್ತುವ ವ್ಯಕ್ತಿಗಳನ್ನು ಹೀಗೆ ಆಡಿಕೊಳ್ಳುವುದುಂಟು.

ಈ ಕವಿತೆಯಲ್ಲಿ ಮುದುಕಿಯ ಗಹನ ಸಮಸ್ಯೆ ಮೊಮ್ಮೊಗಳ ಕಣ್ಣಿನಲ್ಲಿ ಜುಜುಬಿಯದು. ತಾನು ಗಹನವಾದ ಕಂಪ್ಯೂಟರ್ ಸ್ಕ್ರೀನ್ ಮೇಲೆ ತಲ್ಲೀನಳಾಗಿರುವಾಗ ಅಜ್ಜಿ ಯಕಃಶ್ಚಿತ್ ಅಜ್ಜನ ಫೋನ್ ವಿಷಯ ತರುತ್ತಾಳಲ್ಲ ಅಂತ ಅವಳಿಗೆ ಸಿಡುಕು. ಅದಕ್ಕಾಗಿ ಈ ಗಾದೆ ಮಾತನ್ನು ಇಲ್ಲಿ ಬಳಸಿದೆ. ವಯೋವೃದ್ಧರ ಸಮಸ್ಯೆ ಆಲಿಸಲು ಗಮನಿಸಲು ನಮಗಾರಿಗೂ ಬಿಡುವು ಇಲ್ಲ, ಸಹನೆಯೂ ಇಲ್ಲ, ಬಾಧ್ಯತೆ ಮೊದಲೆ ಇಲ್ಲ. ಅವರ ಗಂಭೀರ ತೊಂದರೆ ನಮಗೆ ಕಡುಬಿನ ಸೋರೆಯಂತಾ ಜುಜುಬಿಯದ್ದು.

**೩. ಗುಟ್ಟೆಮಲ್ಲಪ್ಪ.**

ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ನಾಗೇನಹಳ್ಳಿಯಲ್ಲಿ 'ಗುಟ್ಟೇಮಲ್ಲಪ್ಪ' ದೇವಾಲಯವಿದೆ. ಗ್ರಾಮದೈವದ ಉಲ್ಲೇಖವನ್ನು ಮುದುಕಿಯ ಮೂಲಕ ಮಾಡಿರುವ ಕವಯತ್ರಿ ಪ್ರಾದೇಶಿಕ ಸೊಬಗನ್ನು ಕವಿತೆಯಲ್ಲಿ ಮೂಡಿಸಿದ್ದಾರೆ.

## : ಅಭ್ಯಾಸ ಭಾಗ :

### ಅ) ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು:

೧. 'ಎಷ್ಟುಸಲವಮ್ಮ ಹೇಳುವುದು ನಿನಗೆ?'

೨. ಅಲ್ಲಿಯ ಮಾತು ಅವನಿಗೆ ಸಸೇಮಿರ ಬರದು.

೩. ಮಾತೇ ಮರೆತು ಹೋಗಿದೆ ಕಣೆ.

೪. ಬಿಡುಗಡೆಗೆ ಹಾತೊರೆದು ರೈಟನ್ನೆ ರಾಂಗೆಂದಲೋ.

೫. ಒಂದು ಹೂ ಹೆಚ್ಚಿಗೆ ಇಡುತೀನಿ ನಿನ್ನ ಗಟ್ಟಿಪಾದಕ್ಕೆ.

೬. ಇನ್ನೊಂದು ಸೇರ್ಪಡೆ ಆ ಲೀಲಾಮಾತ್ರನಿಗೆ.

## ಆ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿರಿ):

೧. ಮುದುಕಿಯ ಭಯಕ್ಕೆ ಕಾರಣವೇನು?

೨. ಮುದುಕಿಗೆ ಯಾರಿಂದ ಫೋನ್ ಕರೆ ಬಂದಿತ್ತು?

೩. ಮುದುಕ ಇರುವುದೆಲ್ಲಿ?

೪. ಮೊಮ್ಮಗಳು ಏನು ಮಾಡುತ್ತಿದ್ದಳು?

೫. ಮುದುಕಿಯು ಯಾವ ದೇವರಿಗೆ ಹರಕೆ ಹೊತ್ತಳು?

೬. ಮುದುಕಿಯು ಏನೆಂದು ಹರಕೆ ಹೊತ್ತಳು?

## ಇ) ಎರಡು ಅಂಕಗಳ ಪ್ರಶ್ನೆಗಳು (ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ):

೧. ಮುದುಕಿಯ ಜೀವ ಎಳೆಯುತ್ತಿರುವುದೇಕೆ?

೨. ಮುದುಕ ಏನೆಂದು ಗೋಗರೆಯುತ್ತಾನೆ?

೩. ಮೊಮ್ಮಗಳ ಆತುರಕ್ಕೆ ಮುದುಕಿ ಏನೆಂದುಕೊಂಡಳು?

೪. ಸೊಸೆಗೆ ಹೊರಗಿನ ಕೆಲಸ ಬರಲೆಂದು ಮುದುಕಿ ಬಯಸಿದ್ದೇಕೆ?

೫. ಮುದುಕಿಯು ಯಾರನ್ನು ಏನೆಂದು ಪ್ರಾರ್ಥಿಸುವಳು?

## ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):

೧. ಮಗ, ಸೊಸೆ ಮತ್ತು ಮೊಮ್ಮಗಳು ಮುದುಕಿಯನ್ನು ಹೇಗೆ ನಡೆಸಿಕೊಳ್ಳುವರು?

೨. ಮುದುಕನ ಕುರಿತು ಮುದುಕಿಯ ನೆನಕೆಗಳೇನು?

೩. ಮುದುಕಿಯ ತಳಮಳ ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ?

೪. ವೃದ್ಧರ ತವಕ-ತಲ್ಲಣಗಳನ್ನು ಕವಯಿತ್ರಿ ಹೇಗೆ ಚಿತ್ರಿಸಿದ್ದಾರೆ?

## ಭಾಷಾಭ್ಯಾಸ :

೧. ಫೋನು, ಕಿಚನ್ನು, ಸ್ಟಡಿರೂಮು, ಕ್ವಾರ್ಟರ್ಸು - ಮುಂತಾದ ಅನ್ಯದೇಶ್ಯ ಶಬ್ದಗಳು ಕವಿತೆಯಲ್ಲಿ ಬಳಕೆಯಾಗಿರುವುದನ್ನು ಗಮನಿಸಿ, ಪಟ್ಟಿಮಾಡಿರಿ.

೨. ಬಾಯತುರಿಕೆ, ಕಡುಬಿನ ಸೋರೆ - ಈ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.

೩. ದಿಗಿಲು, ಕೊರಗು, ಅದುರು, ಅಟ್ಟ - ಇವುಗಳಿಗೆ ಸಮಾನಾರ್ಥಕಗಳನ್ನು ಬರೆಯಿರಿ.

## ಚಟುವಟಿಕೆ :

೧. ಹೆಚ್ಚುತ್ತಿರುವ ವೃದ್ಧಾಶ್ರಮಗಳ ಬಗ್ಗೆ ಒಂದು ಪ್ರಬಂಧ ರಚಿಸಿರಿ.

೨. ಕೌಟುಂಬಿಕ ಸಾಮರಸ್ಯದ ಬಗ್ಗೆ ಲೇಖನ ಬರೆಯಿರಿ.

೩. ಮನೆಯಲ್ಲಿರುವ ಅಜ್ಜ-ಅಜ್ಜಿಯರೊಂದಿಗಿನ ನಿಮ್ಮ ಬಾಂಧವ್ಯದ ಚಿತ್ರಣ ನೀಡಿ.

೪. ಈ ಕವಿತೆಯ ವಸ್ತುವನ್ನು ಕುರಿತು ನಿಮ್ಮ ಆಲೋಚನೆಗಳನ್ನು ಚರ್ಚಿಸಿ.

೫. ಕಣ್ಮರೆಯಾಗುತ್ತಿರುವ ಅವಿಭಕ್ತ ಕುಟುಂಬದ ವಿಶೇಷತೆಯ ಬಗ್ಗೆ ಕೇಳಿ ತಿಳಿಯಿರಿ.

## ಆಕರ :

೧. ಪ್ರಸ್ತುತ 'ಒಂದು ಹೂ ಹೆಚ್ಚಿಗೆ ಇಡುತೀನಿ' ಎಂಬ ಲಲಿತಾ ಸಿದ್ಧಬಸವಯ್ಯ ಅವರ ಕವಿತೆಯನ್ನು ಕರ್ನಾಟಕ ಸಾಹಿತ್ಯ ಆಕಾಡೆಮಿಯ 'ಕವಿತೆ: ೨೦೦೬' ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

೨. ಕೃತಿ : ಕವಿತೆ : ೨೦೦೬
ಸಂಪಾದಕರು : ಡಾ॥ ಶ್ರೀಧರ ಪಿಸ್ಸೆ
ಪ್ರಕಾಶಕರು : ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು.

## ಹೆಚ್ಚಿನ ಓದಿಗೆ :

೧. ತೀನಂಶ್ರೀಯವರ 'ಒಲುಮೆ'.

೨. ಬೇಂದ್ರೆಯವರ 'ಸಖೀಗೀತ'.

೩. ಕೆ.ಎಸ್. ನರಸಿಂಹಸ್ವಾಮಿಯರ 'ಮೈಸೂರು ಮಲ್ಲಿಗೆ'.

೪. ಸುಮತೀಂದ್ರ ನಾಡಿಗರ 'ದಾಂಪತ್ಯಗೀತ'.

**ಕಿಸೆಯಲಿ ಹಣವಿದೆ, ತಿರುಗಲು ಕಾರಿದೆ**
**ತಿಂಡಿ ತಿನಿಸುಗಳ ಸಾಲು**
**ಪೆನ್ನಿದೆ ಗನ್ನಿದೆ ಶಿಸ್ತಿನ ಸ್ಕೂಲಿದೆ**
**ಎಲ್ಲಿದೆ ಪ್ರೀತಿಯ ನೆರಳು?**

*– ಸುಬ್ರಾಯ ಚೊಕ್ಕಾಡಿ*

# ೧೧. ಹತ್ತಿ... ಚಿತ್ತ... ಮತ್ತು...

*– ಟಿ. ಯಲ್ಲಪ್ಪ*

*ಒಂದು ಬೆಳಗುತ್ತಿರುವ ಹಣತೆ, ಮತ್ತೊಂದು ಜೀವಂತ ದೇಹ, ಭೌತಿಕವಾಗಿ ಅವೆರಡರ ಕಾರ್ಯ ಬೇರೆಬೇರೆಯಾಗಿ ಕಂಡರೂ ತಾತ್ತ್ವಿಕವಾಗಿ ಒಂದೇ ಆಶಯವನ್ನುಳ್ಳದ್ದೆನಿಸುತ್ತದೆ. ಆತ್ಮರೂಪಿಯಾದ ದೇಹ ಹಾಗೂ ಜ್ಞಾನರೂಪಿಯಾದ ಹಣತೆಗಳು ಒಂದೇ ತಾತ್ತ್ವಿಕತೆಯನ್ನು ಸಾದರಪಡಿಸುತ್ತವೆ. ದೇಹ ಜೀವಾತ್ಮನ ಆಲಯದಂತೆಯೂ ಹಣತೆಯು ಬೆಳಕಿನ ಸ್ವರೂಪದ ಜ್ಞಾನದ ಭೌತಿಕ ರೂಪದಂತೆಯೂ ಕಾಣುತ್ತದೆ. ಭೌತವಾದಿಗಳಿಗೆ ದೇಹವು ರಕ್ತಮಾಂಸಗಳಿಂದ ಕೂಡಿದ ಹಲವು ಅಂಗಾಂಗಗಳ ಸಮುಚ್ಚಯ ಮಾತ್ರ. ಈಶ್ವರವಾದಿಗಳಿಗೆ ಅದು ಆತ್ಮದ ಆಲಯ. ಇಲ್ಲಿ ಹತ್ತಿಯ ಬೀಜ ಬೆಳಕಿನ ಬೀಜವೂ, ದೀಪದ ಬೆಳಕಿಗೆ ಬೇಕಾದ ತೈಲರೂಪದ ಜೀವ ದ್ರವ್ಯವೂ, ದೀಪ ಹೊತ್ತಿಕೊಳ್ಳಲು ಬೇಕಾದ ಬತ್ತಿಯೂ ಆಗಿ ಅಂತಿಮವಾಗಿ ಇಲ್ಲವಾಗುತ್ತದೆ. ಆದರೆ ಅದು ಉಂಟುಮಾಡಿದ ಬೆಳಕು ಬೆಳಕಿನ ಬೀಜ ಜಗದ ಕತ್ತಲನ್ನು ಸ್ವಲ್ಪವಾದರೂ ನೀಗುತ್ತದೆ. ದೇಹ ಮಾಡುವುದೂ ಇದೇ ಪ್ರಕ್ರಿಯೆಯನ್ನೇ. ಜೀವಜೀವಾತ್ಮಗಳ ಪರಿಕಲ್ಪನೆಗೆ ವಾಹಕವಾಗುವ ಮೂಲಕ ಇಡೀ ಭಾರತೀಯ ದ್ವೈತ-ಅದ್ವೈತಗಳ ಪರಿಕಲ್ಪನೆಗೆ ಪ್ರತೀಕವಾಗುತ್ತದೆ.*

*ಒಂದು ಹತ್ತಿಯ ಬೀಜ ಕವಿಯ ತಾತ್ತ್ವಿಕತೆಯನ್ನು ಪ್ರತಿಪಾದಿಸಿರುವಂತೆ ಕಾಣಬರುತ್ತಿದ್ದರೂ ಭಾರತೀಯ ತತ್ವಶಾಸ್ತ್ರ ಪ್ರತಿಪಾದಿಸಿದ ಆತ್ಮ-ಪರಮಾತ್ಮಗಳ ಸಂಗತಿಯನ್ನು ಇಲ್ಲಿ ಹತ್ತಿ ಮತ್ತು ಚಿತ್ತದ ಮೂಲಕ ಸರಳವಾಗಿ ಪ್ರತಿಪಾದಿಸಲಾಗಿದೆ.*

ಹಚ್ಚಿಟ್ಟ ಹಣತೆಯಲ್ಲಿ
ಹೊಸೆದು ಬತ್ತಿಯಾಗಿರುವ ಹತ್ತಿ
ಮಿಂದು ಮಡಿಯುಟ್ಟ ಭಕ್ತನಂತೆ
ತೈಲದಲಿ ಮುಳುಗಿ
ತಮದ ಕತ್ತಲ ಸುಡುತ
ಬೆಳಕ ಬಟ್ಟೆಯ ತೊಡುವ
ಯೋಗಿಯಂತೆ!
ತನ್ನೊಡಲ ನೂಲಿನಲೇ ಜೇಡ
ತನ್ನ ಜೀವಜಾಲದ ಕೇಡ
ತಾನೇ ಬಗೆದು ಪ್ರಾಣ ನೀಗುವಂತೆ

ಹತ್ತಿಯ ಬೀಜದಂತೆ
ಚಿತ್ತ ಹತ್ತಿ ಉರಿಯುವ ಬತ್ತಿಯಾಗಿ
ಬತ್ತಿಯನೇ ಸುಡುವ

ತೈಲವೂ ಆಗಿ
ಹೊತ್ತಿ ಉರಿಯುವ
ಬೆಳಕೂ ಆಗಿ
ಮಾಗುವ ಜೀವದ ಪಯಣ
ಸಾಗುತ್ತಿದೆ ಜಗದೊಳು ಸದ್ದಿಲ್ಲದೆ

ಇದ್ದುದಿದ್ದೇ ಇತ್ತು
ನಿದ್ದೆ ತಿಳಿದೆದ್ದ ಮಗು
ಅತ್ತದ್ದು ಹಾಲಿಗೋ ಅಮ್ಮನಿಗೋ
ಅಮ್ಮನಿದ್ದೂ ಬಾಟಲಿನ ಹಾಲಿಗೆ
ಬಾಯೊಡ್ಡುವ ಮಗುವ
ಅನಾಥವೆಂದು ಕರೆಯಲಾಗದ ಭಾವ
ಇದ್ದೂ ಇಲ್ಲದಂತೆ ಸಂತೈಸುತ್ತಿದೆ ಇನ್ನೂ.

ತೈಲ ತೀರಿದೆಯೆಂದು
ತಿಳಿದೇ ತಿಳಿದೀತು
ದೀಪ ಆರಿದ ಮೇಲೆ
ಆತ್ಮಕ್ಕೆ ಕಮಟು ಹತ್ತುವ ತನಕ
ಬತ್ತಿ ಮುಗಿದಿದೆ ಎಂದು
ತಿಳಿವುದಾದರೂ ಹೇಗೆ?

ಎಣ್ಣೆ ತೀರಿರುವ ದೀಪಗಳಿಗೆ
ಬತ್ತಿ ಹೊಸೆಯುವ ಕೆಲಸ
ವ್ಯರ್ಥವೇನಲ್ಲ
ಹತ್ತಿಗೆ ಮೆತ್ತಿಕೊಂಡೇ
ಇರುವ ಬೀಜಕ್ಕೆ
ಬೆಣ್ಣೆಯಾಗುವ ಕರ್ಮ ತಪ್ಪಿದ್ದಲ್ಲ
ತಪ್ಪೂ ಅಲ್ಲ!

ಹತ್ತಿ ಬತ್ತಿಯಾಗಿ
ಬೆಳಕಿನ ಬಿತ್ತವಾಗಿ
ತೈಲವಾಗುರಿದು ಇಲ್ಲವಾಗುವ
ಆತ್ಮಪರಿನಿರ್ವಾಣದ
ಈ ಪರಿಯ ಸೊಬಗ
ಇನ್ನಾವ ಜೀವದೊಳು
ಕಾಣಲರಿಯೆ!

## ಕವಿ–ಕಾವ್ಯ ಪರಿಚಯ :



**ಪ್ರೊ. ಟಿ. ಯಲ್ಲಪ್ಪ** (ಜನನ: ೨.೧೦.೧೯೭೦) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎ. ನಾರಾಯಣಪುರದಲ್ಲಿ ಶ್ರೀಮತಿ ಮುನಿಯಮ್ಮ – ಶ್ರೀ ತಾಯಪ್ಪ ಎಂಬ ಕೃಷಿಕಾರ್ಮಿಕ ದಂಪತಿಗಳ ಮಗನಾಗಿ ದಲಿತ ಕುಟುಂಬದಲ್ಲಿ ಜನಿಸಿದರು.

ಪ್ರೌಢಶಾಲಾ ದಿನಗಳಿಂದಲೇ ಕವಿತಾ ರಚನೆಯಲ್ಲಿ ಆಸಕ್ತಿ ಬೆಳೆಸಿಕೊಂಡ ಯಲ್ಲಪ್ಪ ಅನೇಕ ಪ್ರತಿಷ್ಠಿತ ಕಾವ್ಯಸ್ಪರ್ಧೆಗಳಲ್ಲಿ ಬಹುಮಾನ ಪಡೆದ ಪ್ರತಿಭಾವಂತ. ಇಪ್ಪತ್ತೆರಡರ ಅಳಲು (ಲಲಿತ ಪ್ರಬಂಧ), ಕಡಲಿಗೆ ಕಳಿಸಿದ ದೀಪ, ಚಿಟ್ಟೆ ಮತ್ತು ಜೀವಯಾನ, ನವಿಲಿಗೆ ಬಿದ್ದ ಕತ್ತಲ ಕನಸು (ಕವಿತಾ ಸಂಕಲನಗಳು) ಇತ್ಯಾದಿ ಕೃತಿಗಳನ್ನು ಹೊರತಂದಿದ್ದಾರೆ. 'ಕಡಲಿಗೆ ಕಳಿಸಿದ ದೀಪ' ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪುರಸ್ಕಾರ ಪಡೆದಿರುವ ಶ್ರೀಯುತರು ಜಿ.ಎಸ್.ಶಿವರುದ್ರಪ್ಪ ಕಾವ್ಯ ಪ್ರಶಸ್ತಿ, ಚೆನ್ನವೀರ ಕಣವಿ ಕಾವ್ಯ ಪ್ರಶಸ್ತಿಗಳನ್ನೂ ಪಡೆದಿರುವರು. ಇವರ 'ಕಡಲಿಗೆ ಕಳಿಸಿದ ದೀಪ' ಕೃತಿಯು "ANKLETS" ಎಂಬ ಶೀರ್ಷಿಕೆಯಲ್ಲಿ ಇಂಗ್ಲಿಷಿಗೆ ಭಾಷಾಂತರಗೊಂಡಿದೆ. 'ಚಿಟ್ಟೆ ಮತ್ತು ಜೀವಯಾನ' ಕೃತಿಗೆ ವೀಚೀ ಕಾವ್ಯ ಪುರಸ್ಕಾರ ಮತ್ತು ಹರಿಹರಶ್ರೀ ಕಾವ್ಯ ಪುರಸ್ಕಾರಗಳು ಲಭಿಸಿವೆ. ಪ್ರಸ್ತುತ ಬೆಂಗಳೂರಿನ ಕೆ.ಆರ್. ಪುರಂನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಸಹಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಆತ್ಮ–ಪರಮಾತ್ಮಗಳ ಅಸ್ತಿತ್ವವನ್ನು ಹತ್ತಿ ಮತ್ತು ಚಿತ್ತಗಳ ಮೂಲಕ ಸಂಕೇತಿಸಲಾಗಿದೆ. ಜೀವಾತ್ಮದ ಸಾರ್ಥಕತೆಯಿರುವುದು ತನ್ನ ಅಹಂಕಾರವನ್ನು ಸುಟ್ಟುಕೊಂಡು ಬೆಳಕನ್ನು–ಜ್ಞಾನವನ್ನು ಹೊಂದುವುದರಲ್ಲಿ. ಇಲ್ಲಿ ಹತ್ತಿಯ ಬೀಜವು ದೀಪದ ಬೆಳಕಿಗೆ ಜೀವದ್ರವ್ಯವಾಗಿದೆ. ಹತ್ತಿಯು ತನ್ನನ್ನು ತಾನೇ ಸುಟ್ಟುಕೊಂಡು ಬೆಳಕನ್ನು ನೀಡಿ ಜಗದ ಕತ್ತಲನ್ನು ನೀಗುವುದಕ್ಕೆ ಯತ್ನಿಸುತ್ತವೆ. ಜೀವಾತ್ಮವೂ ಇದೇ ರೀತಿ ಕಾರ್ಯಪ್ರವೃತ್ತವಾಗಬೇಕೆಂಬ ಆಶಯ ಕವಿಯದಾಗಿದೆ. ಹಾಗೆಯೇ ಸದ್ದಿಲ್ಲದೆ ದುಡಿದು ಲೋಕಕ್ಕೆ ದೊಡ್ಡ ಕೊಡುಗೆ, ಅರಿವಿನ ಬೆಳಕನ್ನು ಕೊಟ್ಟು ಹೋದ ಸಾಧಕರ ಸಾರ್ಥಕ ಬದುಕನ್ನು ವಿಶಿಷ್ಟ ರೀತಿಯಲ್ಲಿ ಕವಿತೆ ಧ್ವನಿಸುತ್ತದೆ.

## ಶಬ್ದಾರ್ಥ :

ತಮ–ಕತ್ತಲು, ಅಂಧಕಾರ; ಬೆಳಕಬಟ್ಟೆ–ಜ್ಞಾನವೆಂಬ ಬಟ್ಟೆಯನ್ನು ಧರಿಸಿದವನು; ಯೋಗಿ–ಯೋಗಶಾಸ್ತ್ರ ಬಲ್ಲಾತ, ದೇಹ ಮತ್ತು ಮನಸ್ಸುಗಳ ನಿಯಂತ್ರಣ ಸಾಧಿಸಿದವನು; ಕೇಡು–ನಾಶ, ಕೆಡುಕು, ಅಳಿವು; ಕರ್ಮ–ಕೆಲಸ; ಆತ್ಮಪರಿನಿರ್ವಾಣ–ಮೋಕ್ಷ, ಮುಕ್ತಿ, ಆತ್ಮದ ಬಿಡುಗಡೆ; ಬಿತ್ತ–ಬೀಜ.

## ವಿಶೇಷ ಪ್ರಯೋಗಗಳು :

೧. *ತನ್ನ ಜೀವಜಾಲದ ಕೇಡು* : ತನ್ನ ಜೀವಕ್ಕೆ ಬಲೆಯಾಗಿರುವ ಆಪತ್ತುಗಳ ಅಳಿವಿಗಾಗಿ ಎಂಬರ್ಥ.

೨. *ಆತ್ಮಕ್ಕೆ ಕಮಟು ಹತ್ತು* : ಆತ್ಮನಾಶ ಎಂಬುದರ ಸೂಚನೆ.

೩. *ಎಣ್ಣೆ ತೀರಿದ ದೀಪ* : ಆಯುಸ್ಸು ಮುಗಿದ ಜೀವಕ್ಕೆ ಬಳಕೆಯಾಗಿರುವ ರೂಪಕ.

೪. *ಕರ್ಮ* : ಕಾರ್ಯ, ಕೆಲಸ ಅಥವಾ ಪೂರ್ವಜನ್ಮದ ಬಳುವಳಿ ಎಂಬ ಅರ್ಥದಲ್ಲಿ.

## : ಅಭ್ಯಾಸ ಭಾಗ :

### ಅ) ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು:

೧. ಬೆಳಕ ಬಟ್ಟೆಯ ತೊಡುವ ಯೋಗಿಯಂತೆ!

೨. ಮಾಗುವ ಜೀವದ ಪಯಣ ಸಾಗುತ್ತಿದೆ ಸದ್ದಿಲ್ಲದೆ.

೩. ನಿದ್ದೆ ತಿಳಿದೆದ್ದ ಮಗು ಅತ್ತದ್ದು ಹಾಲಿಗೋ ಅಮ್ಮನಿಗೋ.

೪. ಎಣ್ಣೆ ತೀರಿರುವ ದೀಪಗಳಿಗೆ ಬತ್ತಿ ಹೊಸೆಯುವ ಕೆಲಸ.

೫. ಬೆಣ್ಣೆಯಾಗುವ ಕರ್ಮ ತಪ್ಪಿದ್ದಲ್ಲ.

### ಆ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):

೧. ಎಣ್ಣೆಯಲ್ಲಿ ನೆನೆದ ಬತ್ತಿ ಹೇಗೆ ಕಾಣುತ್ತದೆ?

೨. ಚಿತ್ತವನ್ನು ಯಾವುದಕ್ಕೆ ಹೋಲಿಸಲಾಗಿದೆ?

೩. ಅನಾಥ ಭಾವವನ್ನು ಸೂಚಿಸುವ ಪದ ಯಾವುದು?

೪. ಹತ್ತಿಯ ಬೀಜಕ್ಕೆ ಯಾವುದು ತಪ್ಪದ ಕರ್ಮ?

೫. ವ್ಯರ್ಥವಲ್ಲದ ಕೆಲಸವು ಯಾವುದು?

೬. ತೈಲ ತೀರಿದ್ದು ಹೇಗೆ ತಿಳಿಯುತ್ತದೆ?

### ಇ) ಎರಡು ಅಂಕಗಳ ಪ್ರಶ್ನೆಗಳು (ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ):

೧. ಎಣ್ಣೆಯಲ್ಲಿ ನೆನೆದು ಉರಿವ ಬತ್ತಿಯನ್ನು ಯಾವ ಯಾವುದಕ್ಕೆ ಹೋಲಿಸಲಾಗಿದೆ?

೨. ಮಾಗುವ ಜೀವದ ಪಯಣ ಹೇಗೆ ಸಾಗುತ್ತಿದೆ?

೩. ಆತ್ಮಕ್ಕೆ ಕಮಟು ಹತ್ತುವುದು ಎಂದರೇನು?

೪. ಎಣ್ಣೆ ತೀರಿದ ದೀಪಗಳು ಏನನ್ನು ಸೂಚಿಸುತ್ತವೆ?

೫. ಹತ್ತಿಯ ಬೀಜ ಲೋಕದ ಹಿತಕ್ಕೆ ತನ್ನನ್ನು ಹೇಗೆ ಸುಟ್ಟುಕೊಳ್ಳುತ್ತದೆ?

## ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):

೧. ಹತ್ತಿಯ ಬೀಜದ ಮತ್ತು ಮಾನವ ಜೀವದ ಪಯಣವನ್ನು ಕವಿ ಹೇಗೆ ಸಮೀಕರಿಸಿದ್ದಾರೆ?

೨. ಬತ್ತಿ, ಎಣ್ಣೆ, ಭಕ್ತ, ಯೋಗಿ, ಜೇಡ – ಇವುಗಳ ಆತ್ಮ ಸಮರ್ಪಣೆಯ ಆಶಯವನ್ನು ಕವಿತೆ ಹೇಗೆ ಚಿತ್ರಿಸಿದೆ?

೩. 'ಹತ್ತಿ... ಚಿತ್ತ... ಮತ್ತು...' ಕವಿತೆಯ ಸ್ವಾರಸ್ಯವನ್ನು ಚರ್ಚಿಸಿರಿ.

## ಭಾಷಾಭ್ಯಾಸ :

೧. ಬೀಜ, ಯೋಗಿ – ಮುಂತಾದ ಪದಗಳ ತದ್ಭವ ರೂಪಗಳನ್ನು ಬರೆಯಿರಿ.

೨. ತೈಲ–ಎಣ್ಣೆ. ಇಲ್ಲಿ ಎಣ್ಣೆ ಎಂಬ ಪದವು ಎಳ್+ನೆಯ್ > ಎಳ್ನೆಯ್ > ಎಣ್ಣೈ > ಎಣ್ಣೆ ಎಂದಾಗಿದೆ. ಇದೇ ರೀತಿ ತಿಲ(ಎಳ್ಳಿನಿಂದ)ದಿಂದ ಬಂದದ್ದು ತೈಲ ಎಂದಾಗಿರುವುದನ್ನು ಗಮನಿಸಿ.

೩. ಮಾಗು, ಚಿತ್ತ, ಮಿಂದು, ಹಣತೆ, ಸಂತೈಸು – ಇವುಗಳಿಗೆ ಸಮಾನಾರ್ಥಕಗಳನ್ನು ಬರೆಯಿರಿ.

೪. ಮಿಂದು ಎಂಬುದರ ಮೂಲರೂಪ, 'ಮೀ' ಅಥವಾ 'ಮೊಯ್' ಎಂಬುದು. ಇದೇ ರೀತಿ ಹೊಸೆಯುವ, ತಿಳಿದೆದ್ದು ಮುಂತಾದವುಗಳ ಮೂಲರೂಪವನ್ನು ಬರೆಯಿರಿ.

೫. ಆತ್ಮ, ಜೀವಾತ್ಮ, ಪರಮಾತ್ಮ, ಭಕ್ತಿ, ಮೋಕ್ಷ, ನಿರ್ವಾಣ, ಬಯಲು, ಮುಕ್ತಿ – ಇಂತಹ ಪಾರಿಭಾಷಿಕ ಪದಗಳ ಅರ್ಥವನ್ನು ಅಧ್ಯಾಪಕರಿಂದ ಕೇಳಿ ತಿಳಿಯಿರಿ.

## ಚಟುವಟಿಕೆ :

೧. ಪುರಂದರದಾಸರ 'ಗಿಳಿಯು ಪಂಜರದೊಳಿಲ್ಲ', 'ಅಲ್ಲಿದೆ ನಮ್ಮನೆ ಇಲ್ಲಿ ಬಂದೆ ಸುಮ್ಮನೆ' ಕೀರ್ತನೆಗಳೊಂದಿಗೆ ಪ್ರಸ್ತುತ ಕವಿತೆಯನ್ನು ಹೋಲಿಸಿ ಬರೆಯಿರಿ.

೨. ಶಿಶುನಾಳ ಷರೀಫರ – 'ಸೋರುತಿಹುದು ಮನೆಯ ಮಾಳಿಗೆ' ಕವಿತೆಯನ್ನು ಗಮನಿಸಿ.

೩. ಅಕ್ಕಮಹಾದೇವಿಯ 'ತೆರಣಿಯ ಹುಳು' ಎಂದು ಆರಂಭಗೊಳ್ಳುವ ವಚನ ಅಭ್ಯಾಸಮಾಡಿ.

## ಆಕರ :

ಕೃತಿ : ಚಿಟ್ಟೆ ಮತ್ತು ಜೀವಯಾನ (ಕವನ ಸಂಕಲನ) ೨೦೧೨
ಲೇಖಕರು : ಪ್ರೊ. ಟಿ. ಯಲ್ಲಪ್ಪ
ಪ್ರಕಾಶಕರು : ಅಭಿನವ ಪ್ರಕಾಶನ, ಬೆಂಗಳೂರು.

**ಅಪರಿಮಿತದ ಕತ್ತಲೆಯೊಳಗೆ**
**ವಿಪರೀತದ ಬೆಳಗನಿಕ್ಕಿದವರಾರೋ?**
**ಬೆಳಗೂ ಅದೆ! ಕತ್ತಲೆಯೂ ಅದೆ!!**

– *ಅಲ್ಲಮಪ್ರಭು*

# ೧೨. ಒಮ್ಮೆ ನಗುತ್ತೇವೆ

*– ಸುಕನ್ಯಾ ಮಾರುತಿ*

*ನಮ್ಮದು ಸಮೃದ್ಧ ದೇಶವಾದರೂ ಸಮಾನತೆಗಾಗಿ ಸಮೃದ್ಧತೆಯ ಬದುಕಿಗಾಗಿ ನಿರಂತರ ಹೋರಾಟ ನಡದೇ ಇದೆ. ಶತಶತಮಾನಗಳಿಂದ ಶೋಷಣೆಗೆ ಒಳಗಾದ ಜನ ಸಮಪಾಲು–ಸಮಬಾಳು ಪಡೆಯಲು ಅವಿರತ ಪ್ರಯತ್ನದಲ್ಲಿದ್ದಾರೆ. ಆದರೂ ಇಲ್ಲಿ ಎಲ್ಲ ಇದ್ದರೂ 'ಯಾರಿಗುಂಟು ಯಾರಿಗಿಲ್ಲ' ಎನ್ನುವ ವಾತಾವರಣ ಇದೆ. ಬಡವರ, ನಿರ್ಗತಿಕರ ಬದುಕಿನ ಆರ್ತ ನೋವಿಗೆ ಮನಮಿಡಿಯುವ ಅಂಶ ಇಲ್ಲಿದೆ.*

*ತಿನ್ನಲು ತುತ್ತನ್ನವೂ ಸಿಗದ ಜನಸಮುದಾಯದಲ್ಲಿ ನಗೆ ಎಲ್ಲಿಂದ ಬರಬೇಕು? ಅವರ ದುಗುಡ–ದುಮ್ಮಾನ ದೂರಮಾಡಿ, ಹೊಗೆ ಸರಿಸಿ, ಅವರ ಬಾಳಲ್ಲಿ ನಗೆ ಮೂಡಿಸುವ ಪ್ರಯತ್ನ ಈ ಕವಿತೆಯಲ್ಲಿದೆ. ಶೋಷಿತರ ಪರವಾದ ಬಂಡಾಯದ ಧ್ವನಿ ಇಲ್ಲಿ ಸಶಕ್ತವಾಗಿ ಅಭಿವ್ಯಕ್ತಗೊಂಡಿದೆ.*

ದನಗಳಿಗೆ ಮೇವಿಲ್ಲ
ಜನಗಳಿಗೆ ನೀರಿಲ್ಲ
ಗಂಜಿಗೂ ಗತಿಯಿಲ್ಲ,
ನನ್ನವರು
ಸತ್ತ ದನಗಳ
ಕಿತ್ತು ತಿನ್ನುವುದನ್ನು
ಕಣ್ಣಾರೆ ಕಾಣುತ್ತ
ಕತಕತನೆ ಕುದಿವ
ಅಗ್ನಿಪರ್ವತವಾಗಿದ್ದೇನೆ.

ಏನೂ ಮಾಡಲಾಗದೆ
ಅವರ ಸ್ಥಿತಿ ನೋಡಲಾಗದೆ
ಅವರಿಗಾಗಿ
ಮುಗಿಲತ್ತ ಕೈಚಾಚಿ
ನಿಂತಿದ್ದೇನೆ,
ಧಗಧಗಿಸಿ ಉರಿವ
ಜ್ವಾಲಾಮುಖಿಯಾಗಿದ್ದೇನೆ.

ನನ್ನವರಿಗಾಗಿ
ನಾನೆಂದೂ ನಂಬಿರದ
ದೇವರಲ್ಲಿ
ಮೊರೆಯಿಡುತ್ತೇನೆ,
ಕಂಡೇ ಇರದ
ದೈವದ
ಸಹಾಯ ಬೇಡುತ್ತೇನೆ.
ಯಾರೂ ನನ್ನವರ
ಕೈ ಹಿಡಿಯದಾಗ
ನನ್ನ ಕಂಬನಿಯ
ಲಾವಾರಸದಲ್ಲಿ
ವಿಶ್ವವನ್ನೇ
ಮುಳುಗಿಸಿ ಬಿಡುವ
ಛಲ ಮೂಡುತ್ತದೆ.
ಬೆಂಕಿ ನಾಲಗೆ ಚಾಚಿ
ನನ್ನವರ ದಾರಿದ್ರ್ಯವನ್ನೇ
ಆಪೋಶನ ಮಾಡುತ್ತೇನೆ.
ಅವರ ದೀನ
ದಲಿತತನಕ್ಕೆ ಧಿಕ್ಕಾರವಿರಲಿ!
ಅವರ ನೋವನ್ನೇ
ಸರ್ವನಾಶ ಮಾಡುತ್ತೇನೆ.

ನನ್ನವರನ್ನು
ನನ್ನ ಪ್ರೀತಿಯ
ಜನರನ್ನು
ಎಲ್ಲರೂ ನಾನೇ
ಆದವರನ್ನು
ನಾನು ನಗಿಸುತ್ತೇನೆ,
ಧಗೆಯಿಂದ
ಹೊರನುಗಿಸುತ್ತೇನೆ

ಹೊಗೆಯಿಂದ
ಪಾರುಮಾಡುತ್ತೇನೆ
ಅವರನ್ನು ನಗಿಸುತ್ತೇನೆ.

ಆಗ ನಾನು ನಗುತ್ತೇನೆ
ಕೊನೆಯಿಲ್ಲದ ನಗು
ಮೊನೆಯಿಲ್ಲದ ನಗು
ಆಕಾಶದಲ್ಲಿ
ಕಾರ್ಮೋಡ ಕವಿಸುವ ನಗು
ಮಳೆ ಸುರಿಸುವ ನಗು
ಹೊಳೆ ಹರಿಸುವ ನಗು
ಬೆಳೆ ಬೆಳೆಸುವ ನಗು
ದನ, ಜನ ಎಲ್ಲ ಕೂಡಿ
ನಗುತ್ತೇವೆ,
ಒಮ್ಮೆ ನಕ್ಕೇ ನಗುತ್ತೇವೆ.

## ಕವಿ-ಕಾವ್ಯ ಪರಿಚಯ :

ಧಾರವಾಡದ ಜೆ.ಎಸ್.ಎಸ್. ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿರುವ **ಪ್ರೊ. ಬಿ. ಸುಕನ್ಯಾ ಮಾರುತಿ** (ಜನನ: ೧.೩.೧೯೫೭) ಅವರು ಮೂಲತಃ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಕೊಟ್ಟೂರಿನವರು. ಬಂಡಾಯ ಸಾಹಿತ್ಯ-ಸಂಘಟನೆ, ಮಹಿಳಾ ಸಾಹಿತ್ಯದಲ್ಲಿ ಕೃಷಿ ಮಾಡಿದ್ದಾರೆ.



ಇದುವರೆಗೆ ಪರಿಸರದಲ್ಲಿ, ಪಂಚಾಗ್ನಿ ಮಧ್ಯೆ, ನಾನು ನನ್ನವರು, ತಾಜಮಹಲಿನ ಹಾಡು, ಬಿಂಬದೊಳಗಣ ಮಾತು, ಎಂಬ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. 'ನಾನೆಂಬ ಮಾಯೆ' ಎಂಬ ಸಮಗ್ರ ಕಾವ್ಯ ೨೦೦೭ರಲ್ಲಿ ಪ್ರಕಟವಾಗಿದೆ. ಪ್ರಣಯಿನಿ, ಸಂಕೃತಿ, ಪ್ರಶಾಂತ ಎಂಬ ಕೃತಿಗಳನ್ನು ಇತರರೊಂದಿಗೆ ಸಂಪಾದಿಸಿದ್ದಾರೆ. ಕರ್ನಾಟಕ ವಿ.ವಿ. ಸಿಂಡಿಕೇಟ್ ಸದಸ್ಯೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯೆಯಾಗಿ ಕೆಲಸ ನಿರ್ವಹಿಸಿರುವ ಇವರು ಗೋಕಾಕ್ ಚಳುವಳಿ, ದಲಿತ ಬಂಡಾಯ ಚಳುವಳಿ, ಕುಲಕಸುಬು ದೇಶೀಕಲೆಗಳ ಅಭಿವೃದ್ಧಿಗಾಗಿ ಸಂಸ್ಕೃತಿ ಸಂಗ್ರಾಮ ಪ್ರತಿಷ್ಠಾನದ ಸ್ಥಾಪನೆ - ಮುಂತಾದ ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿ ಕೊಂಡವರು. ಇವರ ಸಾಹಿತ್ಯ ಸಾಧನೆಗಾಗಿ ನಾಲ್ಕನೆಯ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದ 'ಗೌರವ ಪ್ರಶಸ್ತಿ', 'ಅಂಬೇಡ್ಕರ್' ಪುರಸ್ಕಾರಗಳನ್ನು ನೀಡಿ ಗೌರವಿಸಲಾಗಿದೆ.

ಹೊಟ್ಟೆಗೆ ಅನ್ನವಿಲ್ಲದೆ ಬಳಲುವವರಲ್ಲಿ ನಗು ಎಲ್ಲಿಂದ ಬಂದೀತು? ಸಾಮಾಜಿಕ ಅಸಮಾನತೆಯು ಬಡವರನ್ನು ಹಸಿವಿನ ಸುಳಿಯಲ್ಲಿ ಸಿಲುಕಿಸಿ ನರಳಿಸುತ್ತಿದೆ. ಅವರ ಮೊಗದಲ್ಲಿ ನಗೆ ಅರಳಬೇಕಾದರೆ ಮೂಲಭೂತ

ಸೌಕರ್ಯಗಳನ್ನು ಮೊದಲು ಒದಗಿಸಬೇಕು. ಆ ಮೂಲಕ ಹೊಗೆಯಾಗಿರುವ ಅವರ ಬದುಕಿನಲ್ಲಿ ನಗೆ ಮೂಡಿಸಬೇಕು ಎಂಬ ಕಳಕಳಿ ಇಲ್ಲಿದೆ. ಕವಯಿತ್ರಿ ಶೋಷಿತರ ಪರವಾಗಿ ಹೊಮ್ಮಿಸಿರುವ ಪ್ರತಿಭಟನೆಯ ಧ್ವನಿ ಇಲ್ಲಿ ಸಶಕ್ತವಾಗಿ ಮೂಡಿಬಂದಿದೆ.

## ಶಬ್ದಾರ್ಥ :

ಕುದಿ–ಬೇಯು; ಮೊರೆಯಿಡು–ಬೇಡು, ಯಾಚಿಸು; ಕಂಬನಿ–ಕಣ್ಣೀರು; ಲಾವಾರಸ–ಭೂಮಿಯಿಂದ ಹೊರಬರುವ ಜ್ವಾಲಾಮುಖಿ; ಧಗೆ–ಹೊಗೆ; ಹೊಳೆ–ಕಾಂತಿ; ಆಪೋಶನ–ಊಟದ ಮೊದಲು ಮತ್ತು ನಂತರ ಅಂಗೈಯಲ್ಲಿ ಹಾಕಿಕೊಂಡು ಕುಡಿಯುವ ನೀರು/ಹಾಲು.

## : ಅಭ್ಯಾಸ ಭಾಗ :

### ಅ) ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು:

೧. ಗಂಜಿಗೂ ಗತಿಯಿಲ್ಲ.

೨. ಧಗಧಗ ಉರಿವ ಜ್ವಾಲಾಮುಖಿಯಾಗಿದ್ದೇನೆ.

೩. ದೀನದಲಿತತನಕ್ಕೆ ಧಿಕ್ಕಾರವಿರಲಿ!

೪. ಒಮ್ಮೆ ನಕ್ಕೇ ನಗುತ್ತೇವೆ.

### ಆ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):

೧. ದನಗಳಿಗೆ ಏನಿಲ್ಲ?

೨. ಜನರಿಗೆ ಯಾವುದಕ್ಕೆ ಗತಿಯಿಲ್ಲ?

೩. ಕವಯಿತ್ರಿ ಯಾರಲ್ಲಿ ಮೊರೆ ಇಡುತ್ತಾರೆ?

೪. ಕವಯಿತ್ರಿ ಯಾವುದಕ್ಕೆ ಧಿಕ್ಕಾರವಿರಲಿ ಎನ್ನುತ್ತಾರೆ?

೫. ಜನರನ್ನು ಯಾವುದರಿಂದ ಪಾರು ಮಾಡುತ್ತೇನೆಂದು ಕವಯಿತ್ರಿ ಹೇಳುವರು?

### ಇ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):

೧. ದನಗಳಿಗೆ ಜನಗಳಿಗೆ ಏನೇನು ಇಲ್ಲ?

೨. ಕವಯಿತ್ರಿ ಮುಗಿಲತ್ತ ಕೈಚಾಚಿ ಏಕೆ ನಿಂತಿದ್ದಾರೆ?

೩. ಜನರನ್ನು ಕವಯಿತ್ರಿ ಯಾವ ಯಾವುದರಿಂದ ಪಾರು ಮಾಡುವುದಾಗಿ ಹೇಳಿದ್ದಾರೆ?

೪. ಕವಯಿತ್ರಿ ನಗುವ ನಗು ಎಂತಹುದು?

### ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ):

೧. ಕವಯಿತ್ರಿ ಅಗ್ನಿಪರ್ವತ ಜ್ವಾಲಾಮುಖಿ ಆಗಿದ್ದೇನೆ ಎನ್ನಲು ಕಾರಣಗಳೇನು?

೨. 'ಒಮ್ಮೆ ನಗುತ್ತೇವೆ' ಎಂಬ ಕವಿತೆಯಲ್ಲಿ ವ್ಯಕ್ತವಾಗುವ ನಗುವಿನ ವೈಶಿಷ್ಟ್ಯ ವಿವರಿಸಿರಿ.

### ಭಾಷಾಭ್ಯಾಸ :

೧. ತತ್ಸಮ–ತದ್ಭವ ಗಮನಿಸಿ: ಅಗ್ನಿ (ತ್ಸ) – ಅಗಿನಿ, ಅಗ್ಗಿ (ತದ್ಭವ)
ಆಕಾಶ (ತ್ಸ) – ಆಗಸ (ದ್ಭ)

೨. ಪದಬಿಡಿಸಿ ಬರೆಯಿರಿ: ಕಂಬನಿ, ಕಾರ್ಮೋಡ.

೩. ನಾನಾರ್ಥ ಗಮನಿಸಿ: ಹೊಳೆ – ನದಿ, ಕಾಂತಿ.

೪. ಅನುಕರಣಾವ್ಯಯಗಳನ್ನು ಗಮನಿಸಿ: ಕತಕತ, ಧಗಧಗ.

### ಚಟುವಟಿಕೆ :

೧. ಹಸಿವು–ಬಡತನ ಕುರಿತ ದಲಿತ–ಬಂಡಾಯ ಕವಿಗಳ ಕವನಗಳನ್ನು ಸಂಗ್ರಹಿಸಿರಿ.

೨. 'ಬಣ್ಣದ ಗುಬ್ಬಾರು' – ಜನಪದ ಹಾಡನ್ನು ಗಮನಿಸಿ.

### ಆಕರ :

ಕೃತಿ : ನಾನೆಂಬ ಮಾಯೆ (ಸಮಗ್ರ ಕವನ ಸಂಕಲನ)
ಲೇಖಕರು : ಸುಕನ್ಯಾ ಮಾರುತಿ.
ಪ್ರಕಾಶನ : ಸ್ವಪ್ನ ಬುಕ್‌ಹೌಸ್, ಬೆಂಗಳೂರು.

### ಹೆಚ್ಚಿನ ಓದಿಗೆ :

೧. ನನ್ನ ಜನಗಳು (ಕವನ) – ಡಾ. ಸಿದ್ಧಲಿಂಗಯ್ಯ

೨. ಅನ್ನಯಜ್ಞ (ಕವನ) – ದ.ರಾ. ಬೇಂದ್ರೆ

**ಅನ್ನದ ಮಹತ್ವ ಹಸಿದವರಿಗೆ ಮಾತ್ರ ಗೊತ್ತು** – *ಗಾದೆ*

# ಟಿಪ್ಪಣಿಗಾಗಿ

# ಗದ್ಯ ಭಾಗ

# ೧. ಮುಟ್ಟಿಸಿಕೊಂಡವನು

*– ಪಿ. ಲಂಕೇಶ್*

*ಜಾತಿಪದ್ಧತಿ ಶತಶತಮಾನಗಳ ಕಾಲದಿಂದಲೂ ಬೆಳೆದುಬಂದಿರುವ ಕ್ರೂರ ಪದ್ಧತಿ. ಜಾತಿಯ ಹಿನ್ನಲೆಯಲ್ಲಿ ವ್ಯಕ್ತಿಗಳನ್ನು ನೋಡುವ ಮೌಢ್ಯ, ಆ ನೆಲೆಯಲ್ಲಿ ನಡೆವ ಶೋಷಣೆ ಇನ್ನೂ ಹೋಗಿಲ್ಲ. ಶಿಕ್ಷಣ, ನಗರೀಕರಣ, ವಿಜ್ಞಾನದ ಬೆಳವಣಿಗೆಗಳಿಂದಲೂ ನಮ್ಮ ದೇಶ ಜಾತಿಪದ್ಧತಿಯಿಂದ ಮುಕ್ತವಾಗದಿರುವುದು ನಮ್ಮ ದುರಂತ. ವ್ಯಕ್ತಿವ್ಯಕ್ತಿಯ ನಡುವಿನ ತರತಮ-ಭಾವವಳಿದು ಮಾನವೀಯವಾಗಿ ನೋಡುವ ಗುಣ ಬೆಳೆಯಬೇಕಾಗಿದೆ ಮತ್ತು ಶರಣರ, ಸಂತರ ಸಮಾನತೆಯ ಆಶಯ ಸಾಕಾರಗೊಳ್ಳಬೇಕಿದೆ. ಬದಲಾವಣೆಗಾಗಿ ಹಂಬಲಿಸುತ್ತಿರುವ ಸಮಾಜಕ್ಕೆ ಬಿಡುಗಡೆಯ ದಾರಿಯನ್ನು ತೋರಿಸುವ ದಿಕ್ಕಿನಲ್ಲಿ ಈ ಕತೆ ಮುಖ್ಯ ಹೆಜ್ಜೆ.*

*ಲಂಕೇಶರು ನಿಜವಾದ ಅರ್ಥದಲ್ಲಿ ವಿಸ್ಮಯದ ಸೃಷ್ಟಿಕರ್ತ. ಪೀಡನೆ, ಹಿಂಸೆಗಳನ್ನು ನಿಕಷವಾಗಿ ಹಾಗೂ ತಂತ್ರ ವಿಧಾನವಾಗಿ ಬಳಸಿ ವ್ಯಕ್ತಿಯ ಗೋಸುಂಬೆತನವನ್ನು ಅಥವಾ ಪ್ರಜ್ಞಾಸ್ತರದಲ್ಲಿ ಆ ವ್ಯಕ್ತಿಯೂ ಗುರುತಿಸಿಕೊಂಡಿರಲಾರದ ಅನುಭವದ ಬಿರುಕನ್ನು ಅಲ್ಪತೆಯನ್ನು ಒಂದೊಂದೇ ಪದರದಲ್ಲಿ ಬಿಚ್ಚುತ್ತಾ ಒಳಗಿನ ಸತ್ಯವನ್ನು ಅದರ ನಗ್ನತೆಯಲ್ಲಿ ತೋರಿಸಿಬಿಡುವ ಶಕ್ತಿ ಅವರದು. ವರ್ತಮಾನದ ಘಟನೆ ಮತ್ತು ವ್ಯಕ್ತಿ ಮುಖಾಮುಖಿಯಾಗುವಲ್ಲಿ ನಿಜ ತೆರೆದುಕೊಳ್ಳುವುದೆಂಬ ತಿಳಿವಳಿಕೆ ಈ ಕತೆಯ ಹಿಂದಿದೆ.*

ಬಸಲಿಂಗನಿಗೆ ಅದು ಪುರುಸೊತ್ತಿಲ್ಲದ ಕಾಲ. ಗೇಯುವುದನ್ನು ನಾಲ್ಕು ದಿನ ತಡಮಾಡಿದರೆ ಕುಳ ನೆಲದಲ್ಲಿ ನಾಟುವುದಿಲ್ಲ. ಆದರೆ ಇರುವ ಎರಡು ಎತ್ತುಗಳಲ್ಲಿ ಒಂದು ನೊಗ ಇಟ್ಟೊಡನೆ ಮಲಗಿಬಿಡುತ್ತದೆ. ಎಷ್ಟು ಹೊಡೆದರೂ ಏಳುವುದಿಲ್ಲ. ಇನ್ನೊಂದು ಕೂಡ ತನ್ನ ಸಹೋದ್ಯೋಗಿಯಂತೆಯೇ ಆಗಿಬಿಡುವ ಸೂಚನೆಗಳಿವೆ. ಮಲಗಿದ್ದು ಒಂದು ಏಟು ಕೊಟ್ಟೊಡನೆ ಏಳುತ್ತದೆ. ಜೊತೆಗಾರ ಏಳುವುದನ್ನೇ ಕಾದು ಕೆಲಸವಿಲ್ಲದ ಬಗ್ಗೆ ಖುಷಿಗೊಳ್ಳುವಂತೆ ಕಂಡುಬರುತ್ತದೆ. ಆದ್ದರಿಂದ ಬಸಲಿಂಗ ಎರಡೂ ಎತ್ತುಗಳನ್ನು ಯಾರಾದರೊಬ್ಬರಿಗೆ ಸಾಟಿಯಲ್ಲಿ ಕೊಟ್ಟು ಹೊಸ ಎತ್ತುಗಳನ್ನು ಹೊಂಚಿಕೊಳ್ಳಬೇಕು. ಮಗುವಿಗೆ ಮೈಯಲ್ಲಿ ಸರಿಯಿಲ್ಲ. ಶಿವನೂರು ಸ್ವಾಮಿಗಳಿಗೆ ತೋರಿಸಬೇಕು ಎಂದು ಹೆಂಡ್ತಿ ಸಿದ್ಲಿಂಗಿ ಹೇಳುತ್ತಲೇ ಇದ್ದಾಳೆ. ಮಗುವಿನ ಕೆಮ್ಮು ಹೋಗುತ್ತಲೇ ಇಲ್ಲ. ಈ ನಡುವೆ ಬಸಲಿಂಗನಿಗೆ ಇನ್ನೊಂದು ತೊಂದರೆ ಕಾಣಿಸಿಕೊಂಡಿತು. ಈ ತೊಂದರೆ ತನ್ನನ್ನು ಇಷ್ಟೊಂದು ಗಾಸಿಗೊಳಿಸೀತೆಂದು ಬಸಲಿಂಗ ಊಹಿಸಿರಲಿಲ್ಲ. ತನ್ನ ಮಲಗುವ ಎತ್ತುಗಳನ್ನು ಸಾಟಿಮಾಡಲು ಹೇಳಬೇಕಾದ ಸುಳ್ಳು ಅವನ ತಲೆ ತಿನ್ನತೊಡಗಿತ್ತು. ಸುಳ್ಳು ಹೇಳಲು ಬೇಕಾದ ಛಾತಿ, ಮಾತುಗಾರಿಕೆ ಅವನಲ್ಲಿರಲಿಲ್ಲ. ಎತ್ತುಗಳ ಬಗ್ಗೆ ಹೇಳಲು ಒಳ್ಳೆಯದನ್ನು ಲೆಕ್ಕ ಹಾಕಿದಂತೆಲ್ಲ ತಲೆ ಬಿಸಿಯಾಗುತ್ತಿತ್ತು. ಅದೇನೇ ಆದರೂ ಈ ಸಮಯದಲ್ಲಿ ಬಸಲಿಂಗನ ಎಡಗಣ್ಣಲ್ಲಿ ಕಾಣಿಸಿಕೊಂಡ ನೋವು ಹೆಚ್ಚಾಗುತ್ತಲೇ ಹೋಯಿತು.

ಮೊದಮೊದಲು ಅದು ಕಣ್ಣುಬೇನೆ ಇರಬಹುದೆಂದು ತಿಳಿದ. ಆದರೆ ಕಣ್ಣು ಕೆಂಪಾಗಲಿಲ್ಲ. ಕಣ್ಣಿನ ಸುತ್ತ ನೋವು ಮಾತ್ರ ಹೆಚ್ಚಾಯಿತು. ಈ ನೋವು ಬಲಗಣ್ಣಿನಲ್ಲಿರಲಿಲ್ಲ. ಎಡಗಣ್ಣು ನೋವಿನೊಂದಿಗೆ ಸ್ವಲ್ಪ ಮಂದವಾಗುತ್ತಿದ್ದಂತೆ ಅನ್ನಿಸತೊಡಗಿತು. ಹೆದರಿಕೆ ಶುರುವಾಯಿತು. ನಗರದ ತನ್ನ ಎಂದಿನ ವೈದ್ಯರಿಗೆ ತೋರಿಸಿದ. ಅವರು

ನೋವಿನ ವಿವರಗಳನ್ನೆಲ್ಲ ಕೇಳಿ ರೆಪ್ಪೆ ಅಗಲಿಸಿ ನೋಡಿದರು. ಅವರಿಗೆ ಅರ್ಥವಾಗದಿದ್ದರೂ ಬಸಲಿಂಗನಿಗೆ ಧೈರ್ಯ ತುಂಬಲು ಒಳ್ಳೊಳ್ಳೆಯ ಮಾತನಾಡಿದರು, ತಮ್ಮ ವೈದ್ಯಕೀಯ ಪವಾಡಗಳನ್ನು ವಿವರಿಸಿದರು. ಹಚ್ಚಿಕೊಳ್ಳಲು ಒಂದು ಲೇಹ್ಯ ಕೊಟ್ಟರು. ಸ್ವಲ್ಪ ಸಮಾಧಾನದಿಂದ ಮನೆಗೆ ಬಂದ ಬಸಲಿಂಗನಿಗೆ ಹಲವು ದಿನ ಲೇಹ್ಯ ಹಚ್ಚಿಕೊಂಡು ವೈದ್ಯರು ಹೇಳಿದಂತೆ ಬಟ್ಟೆಯ ಕಾವು, ಉಪ್ಪಿನ ಕಾವು ಕೊಟ್ಟುಕೊಂಡ. ಆದರೆ ಕಣ್ಣಿನ ನೋವು ಮತ್ತು ಮಂದಸ್ಥಿತಿ ಕಡಿಮೆಯಾಗಲಿಲ್ಲ. ಹಾಗೆಂದು ಹೇಳಿದರೆ ಹೆಂಡತಿ ಸಿದ್ಲಿಂಗಿ ನಂಬಲಿಲ್ಲ. ಅದು ಆತನ ಕಲ್ಪನೆ ಎಂಬಂತೆ ಮಾತಾಡಿದಳು. ಬಸಲಿಂಗನಿಗೆ ಸಿಟ್ಟು ಬಂತು. ಒಂದು ರೀತಿಯ ಅಸಹಾಯಕತೆ ಶುರುವಾಯಿತು. ನೋವನ್ನು ಸುಮ್ಮನೆ ವಿವರಿಸದೆ ಕೆಲವರಲ್ಲಿ ತನ್ನ ಕಷ್ಟ ತೋಡಿಕೊಂಡ. ಉಳದಿರುವ ನೆಲ, ಮಗುವಿನ ಕಾಯಿಲೆ ಎಲ್ಲವೂ ಅವನಿಗೆ ಗೌಣವಾಗಿ ಕಾಣತೊಡಗಿದ್ದವು. ಯಾರೋ ಒಬ್ಬರು ಸರ್ಕಾರಿ ಆಸ್ಪತ್ರೆಯ ಡಾಕ್ಟರ್ ತಿಮ್ಮಪ್ಪನಿಗೆ ತೋರಿಸಲು ಹೇಳಿದರು. ಸರ್ಕಾರಿ ಆಸ್ಪತ್ರೆ ಅಂದರೆ ದಿಕ್ಕು ದಿವಾಳಿ ಇಲ್ಲದವರು ಹೋಗುವ ಜಾಗ ಎಂದು ತಿಳಿದಿದ್ದ ಅವನಿಗೆ ಇದು ಕೊನೆಯ ಪ್ರಯತ್ನವಾಗಿ ಕಾಣಿಸಿತು. ಆದರೆ ಅವನಿಗೆ ತಿಮ್ಮಪ್ಪನ ಬಗ್ಗೆ ಹೇಳಿದ್ದವರು ಧೈರ್ಯ ತುಂಬಿದರು. ಖಾಸಗಿ ವೈದ್ಯರು ಕೂಡ ಎಷ್ಟು ಕೆಟ್ಟವರೆಂದು ವಿವರಿಸಿದರು.

ಡಾ॥ ತಿಮ್ಮಪ್ಪ ಬಿಡುವಿಲ್ಲದ ವೈದ್ಯರು. ಅವರ ಆಸ್ಪತ್ರೆಯಲ್ಲಿ ಹತ್ತಾರು ಜನ ಸಾಲುಗಟ್ಟಿ ನಿಂತಿದ್ದರು. ಎಲ್ಲರೂ ಬಡವರು, ಬಸಲಿಂಗ ಕಾಯುತ್ತಾ ಕೂತ. ಅವನ ಸರದಿ ಬಂದಾಗ ತಿಮ್ಮಪ್ಪನವರ ಎದುರು ನಿಂತ ಒಟ್ಟಿಗೇ ತನ್ನ ಕಷ್ಟಗಳನ್ನು ತೋಡಿಕೊಂಡ. ತನ್ನ ಮಲಗುವ ಎತ್ತುಗಳಿಂದ ಹಿಡಿದು ತನ್ನ ನೋವು, ತನ್ನ ನಿದ್ರೆ, ನೆಮ್ಮದಿಯನ್ನೆಲ್ಲ ಕೆಡಿಸಿರುವುದನ್ನು ಹೇಳಿದ. ತಿಮ್ಮಪ್ಪ ಅವನನ್ನು ಪರೀಕ್ಷಿಸಿದರು. ಸೂಟಿಯಾದ ಬೆರಳುಗಳ, ವಿಶ್ವಾಸ ತುಂಬಿದ ಮಾತುಗಳ ಡಾಕ್ಟರು. ಬಸಲಿಂಗನ ದೃಷ್ಟಿಯ ಅಳತೆ, ಸ್ಪಷ್ಟತೆಯನ್ನು ನೋಡಿದರು; ನೋವಿನ ಕಾರಣಕ್ಕಾಗಿ ಹುಡುಕಿದರು. ಕೊನೆಗೆ ಹೇಳಿದರು; "ನಿನ್ನ ಕಣ್ಣು ಸರಿಹೋಗುತ್ತೆ, ಆದರೆ ಆಪರೇಷನ್ ಆಗಬೇಕು, ಪರವಾಗಿಲ್ಲವಾ?"

ಖಂಡಿತಾ ಸರಿಹೋಗುತ್ತಾ ಎಂಬಂತೆ ಬಸಲಿಂಗ ನೋಡಿದ.

ತಿಮ್ಮಪ್ಪ ವಿಶ್ವಾಸದಿಂದ ಮಾತಾಡಿದರು. ಬಸಲಿಂಗನಿಗೆ ಇದನ್ನೂ ತನ್ನ ಮನಸ್ಸಿನಲ್ಲಿಯೇ ಇಟ್ಟುಕೊಂಡ. ಸಿದ್ಲಿಂಗಿ ಕೇಳಿದಾಗ ಡಾಕ್ಟರ ಹೆಸರನ್ನು ಮಾತ್ರ ಹೇಳಿದ. ವಿವರಗಳನ್ನು ತಿಳಿಸುವ ಉತ್ಸಾಹ ಅವನಲ್ಲಿರಲಿಲ್ಲ. ಮರುದಿನ ಹಕ್ಕೆ, ಹಿತ್ತಿಲು, ನೀರುನಿಡಿಯ ಕೆಲಸವನ್ನೆಲ್ಲ ಮುಗಿಸಿ ಆಸ್ಪತ್ರೆಗೆ ಹೊರಟ. ತಿಮ್ಮಪ್ಪ ಎಷ್ಟು ಒಳ್ಳೆಯವರೆಂದರೆ ಅವರು ಅವನಿಗಾಗಿ ಕಾಯುತ್ತಿದ್ದಂತಿತ್ತು. ಬಸಲಿಂಗನಲ್ಲಿ ಅವರಿಗೆ ವಿಶೇಷ ಆಸಕ್ತಿ, ಪ್ರೀತಿ ಮೂಡಿದ್ದವು. ಅವನ ಹೊಲ, ಎತ್ತು, ಮಗು ಕೂಡ ಅವರಲ್ಲಿ ನಿಂತಿದ್ದವು. ಅನುಭವಿ ವೈದ್ಯರಾದ ತಿಮ್ಮಪ್ಪ ಬಸಲಿಂಗನನ್ನು ಆಪರೇಷನ್‌ಗೆ ಸಿದ್ಧಗೊಳಿಸಿ ಕೆಲವೇ ನಿಮಿಷಗಳಲ್ಲಿ ಆಪರೇಶನ್ ಮುಗಿಸಿದರು. ಅವನ ಕೈ ಹಿಡಿದುಕೊಂಡು ಹೇಳಿದರು, ನೋಡು, ಇದು ಸೂಕ್ಷ್ಮವಾದ ಶಸ್ತ್ರಚಿಕಿತ್ಸೆ, ನೀನು ಎರಡುವಾರ ತಲೆಗೆ ನೀರನ್ನು ಸೋಂಕಿಸಬಾರದು. ನೀರು ಬಿದ್ದರೆ ಕಣ್ಣು ಕೆಟ್ಟುಹೋಗುವ ಅಪಾಯ ಇದೆ. ಇದನ್ನು ಸರಿಯಾಗಿ ನೆನಪಿಟ್ಟುಕೋ.

ಬಸಲಿಂಗನಲ್ಲೂ ತಿಮ್ಮಪ್ಪನವರ ಬಗ್ಗೆ ವಿಚಿತ್ರ ಪ್ರೀತಿ ಬೆಳೆದಿತ್ತು. ಆದರೆ ಅವನು ಮನೆಗೆ ಹೋದ ಮೇಲೆ ಸಿದ್ಲಿಂಗಿ ದೊಡ್ಡ ರಾದ್ಧಾಂತವನ್ನೇ ಎಬ್ಬಿಸಿದಳು. ಆಕೆಗೆ ಅದು ಹೇಗೋ ತಿಮ್ಮಪ್ಪ ಹೊಲೆಯರೆಂಬುದು ಗೊತ್ತಾಗಿತ್ತು. ತನಗೆ ಗೊತ್ತಿಲ್ಲದ ವಿಷಯ ಆಕೆಗೆ ಹೇಗೆ ತಿಳಿಯಿತೆಂದು ಬೆರಗಾದ. ತನ್ನ ತಿಮ್ಮಪ್ಪನ ನಡುವಿನ ಸಂಬಂಧ ಅವನಿಗೆ ಬೇರೆ ಎರಕದಲ್ಲಿ ಹೊಯ್ದಂತೆ ಕಾಣಿಸಿಕೊಳ್ಳತೊಡಗಿತು. ತನ್ನನ್ನು ಮುಟ್ಟುವ ಮುನ್ನ ಅವರು ತಮ್ಮ ಜಾತಿಯ ಬಗ್ಗೆ ಒಂದು ಮಾತು ಹೇಳಿದ್ದರೆ ಒಳ್ಳೆಯದಿತ್ತೆಂದು ಕ್ಷಣ ಅನ್ನಿಸಿತು. ಆದರೆ ಅಂಥ ಯೋಚನೆ ಕೆಟ್ಟದೆಂದು ಬೈದುಕೊಂಡ. ತನ್ನ ಆಳ್ತನದಲ್ಲಿ ಏನೋ ಕಮ್ಮಿಯಾದಂತೆ ಬಸಲಿಂಗನಿಗೆ ಅನ್ನಿಸಿತು. ಇದರಿಂದ ನೊಂದುಕೊಂಡ. ಈ ವಿಷಯವನ್ನು ಯಾರಿಗೂ ಹೇಳಕೂಡದೆಂದು ತೀರ್ಮಾನಿಸಿದ. ಸಿದ್ಲಿಂಗಿ ಕೂಡ ಇದನ್ನು

ಒಪ್ಪಿದಳು. ಸೂತಕವನ್ನು ಪರಿಹರಿಸಲು ಬಸಲಿಂಗ ಮೈ ತೊಳೆದುಕೊಳ್ಳಬೇಕು. ತಿಮ್ಮಪ್ಪನವರ ಹಿತವಚನವನ್ನು ಮರೆಯದಿದ್ದರೂ ಅದು ಅಸ್ಪಷ್ಟವಾಗತೊಡಗಿತ್ತು. ಸಿದ್ಲಿಂಗಿ ಅವನಿಗೆ ಕಣ್ಣು ಮಾತ್ರ ನೆನೆಯದಂತೆ ಬಿಸಿ ಬಿಸಿ ನೀರು ಹೊಯ್ದು ಸ್ನಾನ ಮಾಡಿಸಿದಳು.

ಮನಸ್ಸು ಹಗುರಾದರೂ ಪಟ್ಟುಗಳಲ್ಲಿ ಭದ್ರವಾಗಿದ್ದ ಎಡಗಣ್ಣು ಎರಡು ದಿನ ನೋವಿನಿಂದ ಮುಕ್ತವಾಗಿದ್ದು ಮೂರನೆಯ ದಿನದಿಂದ ತುಡಿಯತೊಡಗಿತು; ಮತ್ತೆ ನೋವು ಶುರುವಾಯಿತು. ಈಗ ಬಸಲಿಂಗ ಇಕ್ಕಟ್ಟಿಗೆ, ಪಶ್ಚಾತ್ತಾಪಕ್ಕೆ ಸಿಕ್ಕಿಹಾಕಿಕೊಂಡ. ಸುಳ್ಳು ಹೇಳಲಾರದ ಬಸಲಿಂಗ ಒಂದು ವಾರದೊಳಗೆ ತಿಮ್ಮಪ್ಪನವರನ್ನು ಬಿಟ್ಟು ಬೇರೆಲ್ಲ ಡಾಕ್ಟರುಗಳಿಗೆ ತನ್ನ ಕಣ್ಣು ತೋರತೊಡಗಿದ. ಆದದ್ದು ಹೇಳಿದ. ಅವರು ನೀಡಿದ ಸಲಹೆ, ಔಷಧಿ ಸರಿಹೋಗಲೇ ಇಲ್ಲ. ಬೇರೆ ದಾರಿ ಕಾಣದೆ ತಿಮ್ಮಪ್ಪನವರ ಬಳಿಗೇ ಹೋದ. ಅವರು ಅವನನ್ನು ಪ್ರೀತಿಯಿಂದಲೇ ಪ್ರಶ್ನೆ ಕೇಳತೊಡಗಿದರು. ಬಸಲಿಂಗ ಉತ್ತರಿಸಿದ. ತಾನು ತನ್ನ ತಲೆಗೆ ನೀರನ್ನು ಸೋಂಕಿಸಿಯೇ ಇಲ್ಲ ಎಂದು ಸುಳ್ಳು ಹೇಳಿದ. ಅವನು ನಡುಗುತ್ತಿರುವುದನ್ನು ನೋಡಿ ತಿಮ್ಮಪ್ಪ ತಮಗನ್ನಿಸಿದ್ದನ್ನು ಹೇಳಿದರು. ತನ್ನ ಸುಳ್ಳು ಡಾಕ್ಟರಿಗೆ ಗೊತ್ತಾಗಿರುವುದನ್ನು ಕಂಡ ಬಸಲಿಂಗ ಇನ್ನೂ ತಬ್ಬಿಬ್ಬಾದ.

"ಬಸಲಿಂಗಪ್ಪ, ನೀನು ತುಂಬ ಒಳ್ಳೆಯವನು. ಆದದ್ದು ಆದಹಾಗೆ ಹೇಳು" ಎಂದು ತಿಮ್ಮಪ್ಪ ತಣ್ಣಗೆ ಹೇಳಿದರು.

ಬಸಲಿಂಗ ಜಡಗೊಳ್ಳತೊಡಗಿದ್ದ. ಸುಳ್ಳು ಹೇಳಿದ್ದ ಬಸಲಿಂಗ ಈಗ ಯಾಂತ್ರಿಕವಾಗಿ ಆದದ್ದನೆಲ್ಲ ಹೇಳಿದ. ತನ್ನ ಎದೆಯ ಭಾರ ಇಳಿದಂತೆ ಸುಮ್ಮನೆ ಮೌನವಾಗಿ ಕೂತ. "ಹೆಂಗಾದ್ರೂ ಮಾಡಿ ನಂಗೆ ಇನ್ನೊಂದ್ಸಲ ಆಪರೇಶನ್ ಮಾಡಿಬಿಡ್ರಿ. ನಿಮ್ಮ ಮಾತು ಮೀರೊಲ್ಲ" ಅಂದ.

ತಿಮ್ಮಪ್ಪ ಕತ್ತು ಅಲ್ಲಾಡಿಸಿದರು. ಇನ್ನೊಂದು ಆಪರೇಶನ್‌ನಿಂದ ಏನೂ ಆಗುವುದಿಲ್ಲ ಎಂದು ಹೇಳಿದರು. "ಈಗಿರೋ ಗಾಯಕ್ಕೆ ಔಷಧಿ ಕೊಡ್ತೆನೆ. ತಪ್ಪದೆ ಹಚ್ಚಿಕೋ" ಎಂದು ಹೇಳಿದರು.

ಅದೇಕೋ ಬಸಲಿಂಗನಿಗೆ ಸಿಟ್ಟು ಬಂದಿತ್ತು. ತನ್ನ ಜಾತಿಯನ್ನು ಕೆಡಿಸಿದ ತಿಮ್ಮಪ್ಪ ತನ್ನ ಬಗ್ಗೆ ನಿರ್ಲಕ್ಷ ಬೆಳೆಸಿಕೊಳ್ಳುತ್ತಿರುವಂತೆ ಅನ್ನಿಸತೊಡಗಿತ್ತು. ತನ್ನ ಕಣ್ಣು ಹೋಗಲು ತಿಮ್ಮಪ್ಪ ಅದ್ಯಾವುದೋ ರೀತಿಯಲ್ಲಿ ಕಾರಣರಾದಂತೆ ತಿಳಿದ. ಆದದ್ದನ್ನೆಲ್ಲ ತಾನು ಬಲ್ಲವರಲ್ಲಿ ಹೇಳಿಕೊಂಡು ತಿಮ್ಮಪ್ಪನವರನ್ನ ಟೀಕಿಸಿದ; ಅವರಲ್ಲೂ ತಿಮ್ಮಪ್ಪನ ಬಗ್ಗೆ ಸಿಟ್ಟು ಬರುವಂತೆ ವಿಷಯಗಳನ್ನ ತಿರುಚಿ ಹೇಳಿದ. ಹೇಳುತ್ತ ಹೋದಂತೆ ತಾನು ತಿರುಚಿ ಹೇಳುತ್ತಿರುವುದೇ ಸತ್ಯವಿರುವುದಾಗಿ ನಂಬಿದ. ಒಮ್ಮೊಮ್ಮೆ ಇಡೀ ದಿನ ಏನೂ ಅರ್ಥವಾಗದವನಂತೆ ಕೂತುಬಿಡುವ; ತನ್ನಲ್ಲಿ ಬೆಳೆಯುತ್ತಿದ್ದ ಸಣ್ಣತನಕ್ಕೆ ದಂಗಾಗಿಬಿಡುವ. ಇದು ಎತ್ತಿನ ಸಾಟಿಗೆ ಅನುಕೂಲವಾಗಬಹುದು, ಸುಳ್ಳು ತನ್ನ ಕುಟುಂಬಕ್ಕೆ ಸಹಾಯವಾಗಬಹುದು, ಹೀಗೂ ಅನ್ನಿಸಿತು. ಹೆಂಡತಿ ಸಿದ್ಲಿಂಗಿಯ ಜೊತೆಗೆ ಮಾತಾಡುವಾಗ ಹೆಚ್ಚಿನ ಗೆಲುವು ಅವನ ದನಿಯಲ್ಲಿ ಕಾಣಿಸಿಕೊಂಡಿತು. ಉಡಾಫೆಯ ಮಾತಾಡುವುದನ್ನು ಕಲಿಯಬೇಕೆನ್ನಿಸಿತು. ಗೇಯುವುದು ತಡವಾದರೆ ಸಾಲ ಎತ್ತಿ ಬದುಕಲು ಕೂಡ ಉಡಾಫೆ ಸಹಾಯಕ.

ಆದರೆ ಬಸಲಿಂಗನ ದುರಂತ ಆ ದಿಕ್ಕಿನಲ್ಲಿರಲಿಲ್ಲ. ತನ್ನ ಎಡಗಣ್ಣು ಪೂರ್ತಿ ಇಲ್ಲವಾಗಿ ನೋವು ಹೊರಟುಹೋಗುತ್ತಿದ್ದಂತೆ ಬಲಗಣ್ಣಿನಲ್ಲಿ ನೋವು ಕಾಣಿಸಿಕೊಂಡಿತು. ಎಡಗಣ್ಣಿನ ನೋವು ಆರಂಭವಾದಾಗಿನ ಅವನ ಮುಗ್ಧತೆ ಕೂಡ ಮನಸ್ಸಿಗೆ ಬಸಿಯತೊಡಗಿತು. ಈ ಸಲ ಹೆಚ್ಚು ಚುರುಕಾಗಿರಬಲ್ಲ 'ಛಾತಿ' ಪಡೆದಿದ್ದರಿಂದ ಅನೇಕ ಡಾಕ್ಟರನ್ನು ಕಂಡ; ತಾನು ಬಲ್ಲ ತನ್ನ ಲಿಂಗಾಯತ ಜಾತಿಯ ರಾಜಕಾರಣಿ ರುದ್ರಪ್ಪನನ್ನು ಜೊತೆಗೇ ಕರೆದುಕೊಂಡು ಡಾಕ್ಟರಲ್ಲಿಗೆ ಅಲೆದ. ಕೆಲವು ಡಾಕ್ಟರುಗಳು, "ಇದಕ್ಕೆ ಆಪರೇಶನ್ನೇ ಬೇಕಿಲ್ಲ. ಆ ಡಾ। ತಿಮ್ಮಪ್ಪನಿಗೆ ಬುದ್ಧಿ ಇಲ್ಲ–ಅದಕ್ಕೆ ಆಪರೇಶನ್ ಮಾಡಿದ್ದಾರೆ" ಎಂದು ಹೇಳಿದರು. ಔಷಧಿ ನೀಡಿ ಹಿತವಚನ ಕೊಟ್ಟರು. ಆದರೆ

ಬಸಲಿಂಗನ ನೋವು ಕಡಿಮೆಯಾಗಲಿಲ್ಲ; ಆತಂಕ ಹೋಗಲಿಲ್ಲ. ಈ ಕಣ್ಣಿನ ರೋಗಕ್ಕೆ ಔಷಧಿ ಇದ್ದೇ ಇರುತ್ತದೆಂದು ನಂಬತೊಡಗಿದ್ದ ಬಸಲಿಂಗ ಆಸುಪಾಸಿನಲ್ಲಿ ಇದ್ದ ಡಾಕ್ಟರನ್ನೆಲ್ಲಾ ನೋಡಿದ. ಕೊನೆಗೆ ತನ್ನ ಉಡಾಫೆಯ ಶೈಲಿಯಲ್ಲೇ ತಿಮ್ಮಪ್ಪನವರನ್ನು ನೋಡಿದ.

ತಿಮ್ಮಪ್ಪ ತನ್ನ ರೋಗಿಯಲ್ಲಿ ಆಗಿದ್ದ ಬದಲಾವಣೆ ಗಮನಿಸಿದರು; ಆತನ ಗಂಟಲು ದೊಡ್ಡದಾಗಿತ್ತು. ಅವನು ತನಗರಿವಿಲ್ಲದಂತೆಯೇ ಸಣ್ಣವನಾಗತೊಡಗಿದ್ದ. ಅವನ ಕಾಯಿಲೆ ದೇಹದ ಮಟ್ಟದಿಂದ ಮಾನಸಿಕ ಸ್ತರವನ್ನು ತಲುಪತೊಡಗಿತ್ತು.

ತಿಮ್ಮಪ್ಪ ನೋವಿನಿಂದಲೇ ಹೇಳಿದರು, "ಬಸಲಿಂಗಪ್ಪ, ನಾನು ನಿನ್ನನ್ನು ಮುಟ್ಟಿದ್ದು ಡಾಕ್ಟರಾಗಿ; ಆದರೆ ನಿನ್ನಂಥ ಮುಗ್ಧ ಮನುಷ್ಯನಲ್ಲಿ ಕೂಡ ಈ ಮುಟ್ಟುವಿಕೆ ನಾನು ಊಹಿಸದೆ ಇದ್ದದ್ದನ್ನು ಮಾಡಿದೆ. ಅದು ನಿನ್ನ ತಪ್ಪಲ್ಲ. ಇದಕ್ಕಾಗಿ ನಾನು ಯಾರನ್ನೂ ಬೈಯುವುದಿಲ್ಲ. ನೀನು ಈ ಸಲ ಒಂದು ಕೆಲಸ ಮಾಡು. ನನ್ನ ಹೆಸರನ್ನು ಹೇಳಿ ಡಾಕ್ಟರ್ ಚಂದ್ರಪ್ಪನವರನ್ನು ನೋಡು. ಅವರು ನನ್ನಷ್ಟೇ ಒಳ್ಳೆಯ ಡಾಕ್ಟರು. ಏನೂ ತಪ್ಪು ತಿಳಿಯಬೇಡ" ಅಂದರು.

ಈಗ ಕೂಡ ಬಸಲಿಂಗ ಡಾ॥ ತಿಮ್ಮಪ್ಪನವರನ್ನು ದ್ವೇಷಿಸದಿದ್ದರೂ ಅವರ ಬಗ್ಗೆ ಒಂದು ರೀತಿಯ ಸವಾಲು ಬೆಳೆದಿತ್ತು. ತಾನು ಅವರ ಬಗ್ಗೆ ಮತ್ತು ಅವರ ಜಾತಿಯನ್ನು ಕುರಿತು ಮಾತಾಡಿದ್ದೆಲ್ಲ ಅವರಿಗೆ ಗೊತ್ತಾಗಿರಬಹುದೆಂಬ ಆತಂಕ ಹುಂಬತನವಾಗಿ ಜಂಬವಾಗಿ ಬದಲಾಗಿತ್ತು. ಆತ ತಿಮ್ಮಪ್ಪನವರಿಂದ ಹೊರಗೆ ಬಂದೊಡನೆ ರಾಜಕಾರಣಿ ರುದ್ರಪ್ಪನನ್ನು ಕೇಳಿ ಚಂದ್ರಪ್ಪನ ಜಾತಿ ತಿಳಿದುಕೊಂಡ. ತಿಮ್ಮಪ್ಪನ ಜಾತಿಯಷ್ಟು ಕೆಟ್ಟದಾಗಿಲ್ಲದ್ದು ಅರಿತು ನಿಸೂರಾದ. ಕೂಡಲೆ ಹೋಗಿ ಡಾ॥ ಚಂದ್ರಪ್ಪನವರನ್ನು ನೋಡಿದ.

ಅಲ್ಲಿ ಬಸಲಿಂಗನಿಗೆ ಅನಿರೀಕ್ಷಿತವಾದದ್ದು ಕಾದಿತ್ತು. ಬಸಲಿಂಗನ ಎಡಗಣ್ಣಿನ ಪೂರ್ತಿ ಚರಿತ್ರೆಯನ್ನು – ಬಸಲಿಂಗನ ತಿರುಚುವಿಕೆಯೊಂದಿಗೆ – ಕೇಳಿದ ಚಂದ್ರಪ್ಪ ಹೇಳಿದರು. "ಡಾ॥ ತಿಮ್ಮಪ್ಪನವರಿಂದ ಆಗದ ಕೆಲಸ ನನ್ನಂಥವರಿಂದ ಸಾಧ್ಯವಿಲ್ಲ. ನಮ್ಮ ವೈದ್ಯಲೋಕ ಬಲ್ಲ ಅತ್ಯಂತ ಪ್ರಾಮಾಣಿಕ, ಪ್ರತಿಭಾವಂತ ಡಾಕ್ಟರು ತಿಮ್ಮಪ್ಪ. ಈ ಕಣ್ಣಿನ ರೋಗ ಅವರ ವಲಯಕ್ಕೆ ಸೇರಿದ್ದು. ನೀನು ಅವರನ್ನು ನೋಡಿದರೆ ಮಾತ್ರ ಇರುವ ಒಂದು ಕಣ್ಣು ಉಳಿಯುತ್ತೆ."

ರಾಜಕಾರಣಿ ರುದ್ರಪ್ಪನೊಂದಿಗೆ ಹೊರಗೆ ಬಂದ ಬಸಲಿಂಗ. ಬಿಸಿಲಲ್ಲಿ ತಲೆಯ ಮೇಲೆ ಕೈಹೊತ್ತು ಕೂತ. ಯಾರು ಮಾತಾಡಿಸಿದರೂ ಮಾತಾಡಲೇ ಇಲ್ಲ. ಹೆಂಡತಿಯ ಮಾತು ಕಿವಿಗೆ ಬೀಳಲೊಲ್ಲವು. ಬಲಗಣ್ಣಿನ ನೋವು ಭೀಕರವಾಗಿತ್ತು. ಬರುಬರುತ್ತ ದೃಷ್ಟಿ ಮಂದವಾಗುತ್ತಿರುವುದು ಬಸಲಿಂಗನಿಗೆ ಗೊತ್ತಿತ್ತು. ತನ್ನ ಉಡಾಫೆ, ಸುಳ್ಳು, ಜಾತಿ, ಮಠದ ಗುರು – ಯಾರೂ ತನ್ನ ಕಣ್ಣು ಉಳಿಸುವುದಿಲ್ಲ ಎಂಬುದು ನಿಶ್ಚಿತವಾಗತೊಡಗಿತ್ತು. ನೋವು, ದೈಹಿಕ ನೋವನ್ನು ಮೀರಿದ ನೋವು ಅವನನ್ನು ತುಂಬತೊಡಗಿತ್ತು. ಡಾ॥ ತಿಮ್ಮಪ್ಪನವರ ಮಿಂಚಿನಂತಹ ಬೆರಳು, ಪ್ರೀತಿ ತುಂಬಿದ ಮುಖ ನೆನಪಾದವು, ತನ್ನ ಹೊಲ, ತನ್ನ ಎತ್ತುಗಳು, ತನ್ನ ಗದ್ದೆಯ ವಾರೆಯಲ್ಲಿರುವ ಮಾವಿನಮರ, ಪಾರಿಜಾತದ ಹೂವು...

ನೇರವಾಗಿ ತಿಮ್ಮಪ್ಪನವರಲ್ಲಿಗೆ ಹೋದ. ನೋವು ತುಂಬಿದ ಬಲಗಣ್ಣು ಕಂಬನಿ ಸುರಿಸುತ್ತಿತ್ತು. ತಿಮ್ಮಪ್ಪನವರ ಕೈಹಿಡಿದುಕೊಂಡ. ಅವರನ್ನು ಅಪ್ಪಿಕೊಂಡು ಗಟ್ಟಿಯಾಗಿ ಅಳತೊಡಗಿದ. ತಿಮ್ಮಪ್ಪ ಚಲಿಸಲಿಲ್ಲ. ತಲೆ ನೇವರಿಸಲಿಲ್ಲ ಕೂಡ. ಉಸಿರು ಹತೋಟಿಗೆ ಬಂದಾಗ ಬಸಲಿಂಗ ಏನೇನೋ ಬಡಬಡಿಸಿದ. ಅದು ಅವನಿಗೆ ಮತ್ತು ತಿಮ್ಮಪ್ಪನವರಿಗೆ ಮಾತ್ರ ಗೊತ್ತಾಗುವಂತಿತ್ತು.

ಎದುರಿಗೆ ಕುಳಿತಿದ್ದ ಬಸಲಿಂಗನನ್ನು ತಿಮ್ಮಪ್ಪ ಎವೆ ಇಕ್ಕದೆ ನೋಡಿದರು. ಆತನನ್ನು ತಾವು ಇಷ್ಟಪಡಲು ಕಾರಣವೇನೆಂದು ಚಿಂತಿಸಿದರು. ಅದು ಆತನಲ್ಲಿ ಒಮ್ಮೆ ಇದ್ದು ಈಗ ಮರುಕಳಿಸಿರುವ ಮುಗ್ಧತೆ ಇರಬಹುದು. ಅವನನ್ನು ಕಂಡರೆ ಅವನ ಜಾತಿ ಯಾವುದಿರಬಹುದು ಎಂಬ ಪ್ರಶ್ನೆ ಕೂಡ ತಮ್ಮಲ್ಲಿ ಸುಳಿಯದಿದ್ದುದು ಇರಬಹುದು. ಮನುಷ್ಯನ ನೋವಿಗೆ, ಮನುಷ್ಯನ ತೊಳಲಾಟಕ್ಕೆ, ಮನುಷ್ಯನಿಗೆ ಸಾಧ್ಯವಾಗುವ ಸಣ್ಣತನ ಮತ್ತು ಒಳ್ಳೆಯತನಕ್ಕೆ ಸಾಕ್ಷಿಯಾಗಿ ಕಾಣುತ್ತಿದ್ದುದು ಇರಬಹುದು.

ಬಸಲಿಂಗ ಅವರ ನಿಶ್ಚಲ ಕಣ್ಣನ್ನು ನೋಡುತ್ತಲೇ ಇದ್ದ. ತಿಮ್ಮಪ್ಪನವರ ಕಣ್ಣಲ್ಲಿ ತೇವ ಒಸರತೊಡಗಿತು. ಅದು ಕಂಬನಿಯಾಗುವುದಕ್ಕೆ ಮುನ್ನ ಹೇಳಿದರು:

"ಈ ಸಲ ತಲೆಗೆ ನೀರು ಸೋಂಕಿಸಕೂಡದು, ಈ ಕಣ್ಣು ಸರಿಹೋಗುತ್ತೆ" ಎಂದು ಮಾತ್ರ ಹೇಳಿ ಶಸ್ತ್ರಚಿಕಿತ್ಸೆಗೆ ಸಿದ್ಧತೆ ಮಾಡಿಕೊಳ್ಳತೊಡಗಿದರು.

ಸುಳ್ಳುಗಳಿಂದ ಮುಕ್ತವಾಗಿದ್ದ ಬಸಲಿಂಗ ಮಗುವಿನಂತೆ ಅವರ ಚಲನವಲನ ನೋಡುತ್ತ ಕೂತ.

## ಲೇಖಕರ ಪರಿಚಯ :



**ಪಿ. ಲಂಕೇಶ್** (೧೯೩೫–೨೦೦೦) : ನವ್ಯಸಾಹಿತ್ಯದ ಪ್ರಮುಖ ಲೇಖಕರಲ್ಲೊಬ್ಬರಾದ ಪಿ. ಲಂಕೇಶ್ ಕನ್ನಡ ಕಥಾಸಾಹಿತ್ಯಕ್ಕೆ ಹೊಸ ಆಯಾಮ ನೀಡಿದವರು. ಹುಟ್ಟೂರು ಶಿವಮೊಗ್ಗ ಸಮೀಪದ ಕೊನಗವಳ್ಳಿ ಗ್ರಾಮ. ಹಲವು ವರ್ಷಗಳ ಕಾಲ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ಆನಂತರ ಆ ವೃತ್ತಿಯನ್ನು ತ್ಯಜಿಸಿ ತಮ್ಮ ಹೆಸರಿನಲ್ಲಿ 'ಲಂಕೇಶ್ ಪತ್ರಿಕೆ' ಎಂಬ ವಾರಪತ್ರಿಕೆಯನ್ನು ಆರಂಭಿಸಿ ಕನ್ನಡ ನಾಡಿನ ಜಾಣ–ಜಾಣೆಯರ ಮನಸ್ಸಿಗೆ ಲಗ್ಗೆಯಿಟ್ಟವರು.

ಲಂಕೇಶ್ ಬರೆದ ಕೃತಿಗಳು ಹಲವಾರು. ಕೆರೆಯ ನೀರನು ಕೆರೆಗೆ ಚೆಲ್ಲಿ, ನಾನಲ್ಲ, ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ, ಕಲ್ಲುಕರಗುವ ಸಮಯ ಮತ್ತು ಇತರ ಕತೆಗಳು, ಉಲ್ಲಂಘನೆ, ಮಂಜು ಕವಿದ ಸಂಜೆ ಮೊದಲಾದ ಕಥಾಸಂಕಲನಗಳನ್ನು, ಬಿರುಕು, ಮುಸ್ಸಂಜೆಯ ಕಥಾಪ್ರಸಂಗ, ಅಕ್ಕ ಮೊದಲಾದ ಕಾದಂಬರಿಗಳನ್ನು, ತಲೆಮಾರು, ಬಿಚ್ಚು ಮೊದಲಾದ ಕವನಸಂಕಲನಗಳನ್ನು ಪ್ರಕಟಿಸಿದ್ದಾರೆ. ನಾಟಕ ಕ್ಷೇತ್ರದಲ್ಲಿ ವಿಶೇಷವಾಗಿ ಕೆಲಸಮಾಡಿದ ಲಂಕೇಶ್ ಅವರ ಟಿ. ಪ್ರಸನ್ನನ ಗೃಹಸ್ಥಾಶ್ರಮ, ನನ್ನ ತಂಗಿಗೊಂದು ಗಂಡು ಕೊಡಿ, ತೆರೆಗಳು, ಸಂಕ್ರಾಂತಿ, ಗುಣಮುಖ ಮೊದಲಾದ ನಾಟಕಗಳು ರಂಗಾಸಕ್ತರ ಗಮನಸೆಳೆದಿವೆ. ಹುಳಿಮಾವಿನ ಮರ ಇವರ ಆತ್ಮಕಥನ. ಪಾಪದ ಹೂವುಗಳು, ದೊರೆ ಈಡಿಪಸ್ ಮತ್ತು ಅಂತಿಗೊನೆ ಅನುವಾದ ಕೃತಿಗಳು. ಪ್ರಸ್ತುತ, ಕಂಡದ್ದು ಕಂಡಹಾಗೆ ಇವರ ವಿಮರ್ಶಾ ಕೃತಿಗಳು. 'ಅಕ್ಷರ ಹೊಸ ಕಾವ್ಯ' ಇವರು ಸಂಗ್ರಹಿಸಿ ಸಂಪಾದಿಸಿದ ವಿಶಿಷ್ಟ ಕಾವ್ಯಸಂಗ್ರಹ. ಲಂಕೇಶ್ ಪತ್ರಿಕೆಯಲ್ಲಿ ಇವರು ಬರೆದ ಟೀಕೆ ಟಿಪ್ಪಣಿ, ಮರೆಯುವ ಮುನ್ನ ಅಂಕಣಗಳು ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ. 'ಪಲ್ಲವಿ', 'ಅನುರೂಪ', 'ಎಲ್ಲಿಂದಲೋ ಬಂದವರು' ಮೊದಲಾದ ಚಿತ್ರಗಳನ್ನು ನಿರ್ದೇಶಿಸಿದ ಲಂಕೇಶ್ 'ಪಲ್ಲವಿ' ಚಿತ್ರ ನಿರ್ದೇಶನಕ್ಕೆ ರಾಷ್ಟ್ರಪ್ರಶಸ್ತಿ ಪಡೆದಿದ್ದಾರೆ. ೧೯೯೩ರಲ್ಲಿ ಲಂಕೇಶ್ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

'ಮುಟ್ಟಿಸಿಕೊಂಡವನು' ಲಂಕೇಶ್ ಅವರು ಬರೆದ ವಿಶಿಷ್ಟ ಕತೆಗಳಲ್ಲೊಂದು. ವ್ಯಕ್ತಿಯ ಮುಗ್ಧತೆ, ಸಣ್ಣತನ ಮತ್ತು ಆತನೊಳಗೆ ಹುದುಗಿರುವ ಜಾತಿಪ್ರಜ್ಞೆ – ಇವು ಉಂಟುಮಾಡುವ ನೋವು, ತಳಮಳ, ಸಮಸ್ಯೆಗಳನ್ನು

ತಣ್ಣನೆಯ ಶೈಲಿಯಲ್ಲಿ ಈ ಕತೆ ನಿರೂಪಿಸುತ್ತದೆ. ವ್ಯಕ್ತಿಯ ಜಾತಿಪ್ರಜ್ಞೆ ಹುಟ್ಟುಹಾಕುವ ಸಮಸ್ಯೆ ಮತ್ತು ಈ ಅವಮಾನಗಳನ್ನು ಮಾನವೀಯ ನೆಲೆಯಲ್ಲಿ ಎದುರಿಸುವ ವೈದ್ಯನ ಪ್ರಾಮಾಣಿಕತೆ ಈ ಎರಡರ ವೈರುಧ್ಯದಲ್ಲಿಯೇ ಕತೆಯ ತೀವ್ರತೆ ಇದೆ. ಶಿವರಾಮಕಾರಂತರ 'ಚೋಮನದುಡಿ' ಕಾದಂಬರಿಯ ನಂತರ ದಲಿತ ಸಂವೇದನೆಯನ್ನು ದಲಿತೇತರನೊಬ್ಬ ವಿಶಿಷ್ಟವಾಗಿ ನೋಡುವ ಸಂದರ್ಭ ಈ ಕತೆಯಲ್ಲಿದೆ.

## ಶಬ್ದಾರ್ಥ :

ಕುಳ–ನೇಗಿಲಿನ ತುದಿ; ನೊಗ–ಎತ್ತುಗಳ ಹೆಗಲಿನ ಮೇಲೆ ಹೇರುವ ಮರದ ದಿಂಡು; ಗಾಸಿ–ತೊಂದರೆ, ಹಿಂಸೆ; ಸಾಟಿ–ವಿನಿಮಯ, ಅದಲುಬದಲು; ಲೇಹ್ಯ–ನೆಕ್ಕಿತಿನ್ನುವ ಔಷಧ, ಮಲಾಮು; ಹಕ್ಕೆ–ಆಶ್ರಯ, ನೆಲೆ; ಹಿತ್ತಲು–ಮನೆಯ ಹಿಂದಿನ ಪ್ರದೇಶ; ಗೇಯು–ದುಡಿಮೆ; ಛಾತಿ–ಧೈರ್ಯ, ಕೆಚ್ಚು; ನಿಸೂರ–ನಿರುಮ್ಮಳ; ಹೊಂಚಿಕೊಳ್ಳು–ಹೊಂದಿಸಿಕೊಳ್ಳು.

## : ಅಭ್ಯಾಸ ಭಾಗ :

### ಅ) ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು:

೧. ಆಪರೇಷನ್ ಆಗಬೇಕು, ಪರವಾಗಿಲ್ಲವಾ?

೨. ನೀರು ಬಿದ್ದರೆ ಕಣ್ಣು ಹೋಗುವ ಅಪಾಯ ಇದೆ.

೩. ಬಸಲಿಂಗಪ್ಪ, ನೀನು ತುಂಬಾ ಒಳ್ಳೆಯವನು.

೪. ಅವನು ನನ್ನಷ್ಟೆ ಒಳ್ಳೆಯ ಡಾಕ್ಟರು, ಏನೂ ತಪ್ಪು ತಿಳಿಯಬೇಡ.

೫. ಈ ಮುಟ್ಟುವಿಕೆ ನಾನು ಊಹಿಸದೆ ಇದ್ದದ್ದನ್ನು ಮಾಡಿದೆ.

೬. ನೀನು ಅವರನ್ನು ನೋಡಿದರೆ ಮಾತ್ರ ಇರುವ ಒಂದು ಕಣ್ಣು ಉಳಿಯುತ್ತೆ.

### ಆ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):

೧. ಬಸಲಿಂಗನ ಹೆಂಡತಿಯ ಹೆಸರೇನು?

೨. ಬಸಲಿಂಗನಿಗೆ ಕಾಣಿಸಿಕೊಂಡ ತೊಂದರೆ ಯಾವುದು?

೩. ಬಸಲಿಂಗನಿಗೆ ಮೊದಲು ಯಾವ ಕಣ್ಣಿನಲ್ಲಿ ನೋವು ಆರಂಭವಾಯಿತು?

೪. 'ಮುಟ್ಟಿಸಿಕೊಂಡವನು' ಕತೆಯಲ್ಲಿ ಬರುವ ಸರ್ಕಾರಿ ಆಸ್ಪತ್ರೆಯ ವೈದ್ಯರ ಹೆಸರೇನು?

೫. ಸರ್ಕಾರಿ ಆಸ್ಪತ್ರೆಯ ಬಗ್ಗೆ ಬಸಲಿಂಗನಲ್ಲಿದ್ದ ಅಭಿಪ್ರಾಯವೇನು?

೬. ಬಸಲಿಂಗನು ಡಾ। ತಿಮ್ಮಪ್ಪನಿಗೆ ಏನೆಂದು ಸುಳ್ಳು ಹೇಳಿದನು?

೭. ಬಸಲಿಂಗ ವೈದ್ಯರಿಗಾಗಿ ಅಲೆದಾಗ ಜೊತೆಗಿದ್ದ ರಾಜಕಾರಣಿ ಯಾರು?

೮. ಬಸಲಿಂಗನ ಕಾಯಿಲೆ ದೇಹದ ಮಟ್ಟದಿಂದ ಯಾವ ಸ್ತರವನ್ನು ತಲುಪತೊಡಗಿತ್ತು?

೯. ಡಾ। ತಿಮ್ಮಪ್ಪ ಬಸಲಿಂಗನಿಗೆ ಯಾವ ವೈದ್ಯರನ್ನು ಕಾಣಬೇಕೆಂದು ಸೂಚಿಸಿದರು?

೧೦. ಕೊನೆಗೆ ಬಸಲಿಂಗ ಯಾವುದರಿಂದ ಮುಕ್ತನಾಗಿದ್ದ?

## ಇ) ಎರಡು ಅಂಕಗಳ ಪ್ರಶ್ನೆಗಳು (ಎರಡು-ಮೂರು ವಾಕ್ಯದಲ್ಲಿ ಉತ್ತರಿಸಿ):

೧. ಬಸಲಿಂಗನಿಗೆ ಅದು ಪುರುಸೊತ್ತಿಲ್ಲದ ಕಾಲ ಯಾಕೆ?

೨. ಹೆಂಡ್ತಿ ಸಿದ್ಲಿಂಗಿ ಏನು ಹೇಳುತ್ತಲೇ ಇದ್ದಳು?

೩. ಬಸಲಿಂಗನಿಗೆ ತನ್ನ ಕಷ್ಟದ ಮುಂದೆ ಯಾವುದು ಗೌಣವಾಗಿ ಕಾಣತೊಡಗಿದವು?

೪. ಕಣ್ಣನ್ನು ಪರೀಕ್ಷಿಸಿದ ಡಾ। ತಿಮ್ಮಪ್ಪ ಬಸಲಿಂಗನಿಗೆ ಏನೆಂದು ಹೇಳಿದರು?

೫. ಸಿದ್ಲಿಂಗಿ ಏಕೆ ರಾದ್ಧಾಂತ ಮಾಡಿದಳು?

೬. ಅನ್ಯ ಡಾಕ್ಟರುಗಳು ಬಸಲಿಂಗನ ಕಾಯಿಲೆ ಬಗ್ಗೆ ಏನೆಂದು ಪ್ರತಿಕ್ರಿಯಿಸಿದರು?

೭. ಡಾ। ಚಂದ್ರಪ್ಪ ಬಸಲಿಂಗನಿಗೆ ಡಾ। ತಿಮ್ಮಪ್ಪನ ಬಗ್ಗೆ ಕೊಟ್ಟ ಅಭಿಪ್ರಾಯವೇನು?

೮. ಕೊನೆಯಲ್ಲಿ ಬಸಲಿಂಗನಿಗೆ ಏನೆಂದು ನಿಶ್ಚಿತವಾಗತೊಡಗಿತ್ತು?

## ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):

೧. ಬಸಲಿಂಗ ಎದುರಿಸುತ್ತಿದ್ದ ಸಮಸ್ಯೆಗಳು ಯಾವುವು?

೨. ಕಣ್ಣುನೋವು ಶುರುವಾದ ಆರಂಭದಲ್ಲಿ ಬಸಲಿಂಗ ಪಡೆದುಕೊಂಡ ಚಿಕಿತ್ಸೆ ಯಾವ ರೀತಿಯದು?

೩. ಬಸಲಿಂಗ ಡಾ। ತಿಮ್ಮಪ್ಪನವರ ಸೂಚನೆಗಳನ್ನು ಪಾಲಿಸದೆ ಇರಲು ಕಾರಣವೇನು?

೪. ಬಸಲಿಂಗನಿಗೆ ಸಿಟ್ಟು ಬರಲು ಕಾರಣವೇನು? ಅದನ್ನು ಆತ ಯಾವ ರೀತಿಯಲ್ಲಿ ವ್ಯಕ್ತಪಡಿಸುತ್ತಾನೆ?

೫. ಬಸಲಿಂಗ ಕೊನೆಯಲ್ಲಿ ತೆಗೆದುಕೊಂಡ ನಿರ್ಧಾರ ಯಾವುದು? ಅದಕ್ಕೆ ಕಾರಣಗಳೇನು?

## ಭಾಷಾಭ್ಯಾಸ :

೧. ಈ ಕತೆಯಲ್ಲಿ ಬರುವ ಗ್ರಾಮ್ಯ ಹಾಗೂ ಅನ್ಯದೇಶ್ಯ ಪದಗಳನ್ನು ಆರಿಸಿ ಬರೆಯಿರಿ.

೨. ಸೂತಕ – ಇದರ ಅರ್ಥ ಮೈಲಿಗೆ. ಜಾತ, ಮೃತ, ರಜಸ್ಸು, ಉಚ್ಚಿಷ್ಟ, ಜಾತಿ ಎಂಬ ಪಂಚಸೂತಕಗಳಿವೆ.

೩. ದೃಷ್ಟಿ, ಕ್ಷಣ – ಇವುಗಳ ತದ್ಭವ ರೂಪಗಳನ್ನು ಬರೆಯಿರಿ.

## ಚಟುವಟಿಕೆ :

೧. ನಿಮ್ಮ ಸಮೀಪವಿರುವ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿರುವ ವೈದ್ಯರು ಸೇವೆ ಸಲ್ಲಿಸುತ್ತಿರುವ ರೀತಿಯ ಬಗ್ಗೆ ಲೇಖನ ಬರೆಯಿರಿ.

೨. ಈ ಕತೆಯನ್ನು ನಾಟಕರೂಪದಲ್ಲಿ ಬರೆದು ಅಭಿನಯಿಸಿ.

೩. ಜಾತ್ಯತೀತ ಸಮಾಜದ ಅಗತ್ಯವನ್ನು ಕುರಿತು ಪ್ರಬಂಧ ರಚಿಸಿ.

## ಆಕರ :

ಕೃತಿ : ಸಮಗ್ರ ಕಥೆಗಳು

ಲೇಖಕರು : ಪಿ. ಲಂಕೇಶ್

ಪ್ರಕಾಶನ : ಪತ್ರಿಕೆ ಪ್ರಕಾಶನ
ನಂ. ೯, ಪೂರ್ವ ಆಂಜನೇಯ ಗುಡಿ ರಸ್ತೆ,
ಬೆಂಗಳೂರು – ೫೬೦ ೦೦೪.

## ಹೆಚ್ಚಿನ ಓದಿಗೆ :

೧. ಸಮಗ್ರ ಸಾಹಿತ್ಯ – ಲಂಕೇಶ್

೨. ಚೋಮನದುಡಿ (ಕಾದಂಬರಿ) – ಕೆ. ಶಿವರಾಮ ಕಾರಂತ

೩. ಸಮಗ್ರ ಸಾಹಿತ್ಯ – ದೇವನೂರು ಮಹಾದೇವ

೪. ಮೆರವಣಿಗೆ – ಸಿದ್ಧಲಿಂಗಯ್ಯ

೫. ಕನ್ನಡ ಸಣ್ಣ ಕತೆಗಳು – (ಸಂ.) ಜಿ.ಎಚ್. ನಾಯಕ

**ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯಾ**
**ಇವ ನಮ್ಮವ ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯಾ**

*– ಬಸವಣ್ಣ*

# ೨. ವಾಲ್‌ಪರೈ : ಅಭಿವೃದ್ಧಿ ತಂದ ದುರಂತ

– *ಕೃಪಾಕರ ಸೇನಾನಿ, ಕೆ. ಪುಟ್ಟಸ್ವಾಮಿ*

*'ಮಾನವನ ಎಲ್ಲ ಅವಶ್ಯಕತೆಗಳನ್ನು ಪೂರೈಸುವ ಶಕ್ತಿ ಈ ಭೂಮಿಗೆ ಇದೆ. ಆದರೆ ಅವನ ದುರಾಸೆಗಳನ್ನಲ್ಲ' ಎಂದು ಫ್ರಾನ್ಸಿಸ್ ಬೆಕನ್ ಎಂಬ ತತ್ತ್ವಜ್ಞಾನಿ ಹೇಳಿದ ಮಾತು ಮನುಷ್ಯನ ಅಂತರಾಳವನ್ನು ಹೊಕ್ಕಿಲ್ಲ. ಪ್ರಾಕೃತಿಕ ಅಸಮತೋಲನಕ್ಕೆ ಮಾನವನ ದುರಾಸೆಯೇ ಮೂಲ ಕಾರಣವಾಗಿದೆ. ಹಣದ ಬೆನ್ನು ಹತ್ತಿರುವ ಮಾನವ ಪ್ರಕೃತಿಯನ್ನು ನಾಶಗೈಯುತ್ತಾ ಅಟ್ಟಹಾಸ ಮೆರೆಯುತ್ತಿದ್ದಾನೆ. ಗಣಿಗಾರಿಕೆ, ಮರಳುದಂಧೆ, ನೀರಿನ ಮಾರಾಟ, ಅರಣ್ಯಲೂಟಿ, ಪ್ರಾಣಿ ಸಂಕುಲಗಳ ಬೇಟೆ–ಇವೆಲ್ಲವೂ ಪ್ರಕೃತಿ ಮತ್ತು ಜೀವಜಾಲಕ್ಕೆ ವಿನಾಶವನ್ನು ತಂದಿದೆ.*

*ಅರಣ್ಯನಾಶದಿಂದ ಪ್ರಾಣಿಸಂಕುಲ ನಾಶ, ಹವಾಮಾನ ವೈಪರೀತ್ಯ, ಬರಗಾಲ–ಜಲಮೂಲಗಳ ನಾಶ– ಇದರಿಂದ ನಾನಾ ಖಾಯಿಲೆಗಳ ತವರಾಗಿ ಮಾನವ ಹಾಗೂ ಪ್ರಾಣಿ ಸಂಕುಲಗಳ ಬದುಕು ದುರ್ಭರವಾಗುತ್ತಿದೆ. ಪ್ರತಿಯೊಬ್ಬರಲ್ಲೂ ಪ್ರಕೃತಿಯನ್ನು ಪ್ರೀತಿಸುವ, ರಕ್ಷಿಸುವ, ಉಳಿಸಿ–ಬೆಳೆಸುವ ಮನೋಭಾವ ಮೂಡಿ ಕಾರ್ಯಪ್ರವೃತ್ತವಾಗಬೇಕಾಗಿದೆ. ಈ ಮೂಲಕ ಮುಂದಿನ ಪೀಳಿಗೆಗೆ ಹಿತವಾದ ಬದುಕಿನ ವಾತಾವರಣವನ್ನು ಉಳಿಸುವ ದಿಕ್ಕಿನಲ್ಲಿ ನಮ್ಮ ಪಯಣ ಸಾಗಬೇಕಾಗಿದೆ. ಪ್ರಸ್ತುತ 'ವಾಲ್‌ಪರೈ : ಅಭಿವೃದ್ಧಿ ತಂದ ದುರಂತ' ಎಂಬ ಲೇಖನವು ನಮ್ಮ ಅನುಭವದ ವ್ಯಾಪ್ತಿಯಲ್ಲಿ ಜೀವಜಾಲದ ಸಂಕೀರ್ಣತೆಯನ್ನು ಅರಿಯುವ ನಿಟ್ಟಿನಲ್ಲಿ ನಡೆಸಿರುವ ಒಳನೋಟವುಳ್ಳ ಪ್ರಯತ್ನವಾಗಿದೆ.*

ಹದಿನೆಂಟನೇ ಶತಮಾನದ ಅಂತ್ಯಭಾಗ. ಬ್ರಿಟಿಷರು ರಾಷ್ಟ್ರದೆಲ್ಲೆಡೆ ಅಧಿಪತ್ಯ ಸಾಧಿಸಿದ್ದ ಸಮಯ. ಅನನ್ಯ ಜೀವ ಸಂಕುಲಗಳಿಂದ ಸಮೃದ್ಧವಾಗಿದ್ದ ಪಶ್ಚಿಮಘಟ್ಟ ಶ್ರೇಣಿಯ ನಡುವಿನ ಒಂದು ದಟ್ಟ ಅರಣ್ಯ ಪ್ರದೇಶ. ಈ ಪ್ರದೇಶಕ್ಕೆ ಆಗ ಹೆಸರೇ ಇರಲಿಲ್ಲ. ಗಗನಚುಂಬಿ ಮರಗಳ ಮೇಲ್ಚಾವಣಿಯನ್ನು ಭೇದಿಸಿ ಭೂಸ್ಪರ್ಶ ಮಾಡಲು ಸೂರ್ಯಕಿರಣಗಳು ಸೆಣೆಸುತ್ತಿದ್ದ ದಟ್ಟವಾದ ಕಾಡು, ನಡು ನಡುವೆ ಹುಲ್ಲುಗಾವಲುಗಳ ಅನಂತ ಬಯಲು, ಅದರ ಏಕತಾನತೆ ಮುರಿಯುವ ಶೋಲಾ ಕಾಡುಗಳು, ಪರ್ವತ ಶ್ರೇಣಿಗಳ ನಡುವೆ ಅಕ್ಷಾಂಶ ರೇಖಾಂಶಗಳನ್ನು ಬರೆದಂತೆ ಹರಿವ ಹಳ್ಳ–ಕೊಳ್ಳಗಳು. ಕಗ್ಗತ್ತಲ ಖಂಡ ಎಂದು ಹೆಸರಾಗಿದ್ದ ಆಫ್ರಿಕಾದಂತೆ ಅದು ಹೊರಗಿನ ಜನರಿಗೆ ಪರಿಚಯವಿರಲಿಲ್ಲ. ನಂತರದ ದಿನಗಳಲ್ಲಿ ವಾಲ್‌ಪರೈ ಎಂದು ನಾಮಕರಣಗೊಂಡ ಈ ನಿಗೂಢ ಪ್ರದೇಶದ ಅಂತರಂಗವನ್ನು ಭೇದಿಸುವಂತಹ ಸಾಹಸಿಗರು ಯಾರೂ ಅಲ್ಲಿಗೆ ಬಂದಿರಲಿಲ್ಲ.

ಆದರೆ ಬ್ರಿಟಿಷರು ಆಗಮಿಸಿದ ನಂತರ ಈ ಅರಣ್ಯ ಅಜ್ಞಾತವಲಯವಾಗಿ ಬಹಳ ದಿನ ಉಳಿಯಲಿಲ್ಲ. ಅವರಿಗೆ ಹೊಸತನ್ನು ಶೋಧಿಸುವ, ಅನ್ವೇಷಿಸುವ ಪ್ರವೃತ್ತಿ ಆನುಷಂಗಿಕವಾಗಿ ಹಾಯ್ದು ಬಂದಿರುವ ಗುಣ. ೧೮೯೦ರಲ್ಲಿ ಕಾರ್ವೆರ್ ಮಾರ್ಷ್ ಎಂಬ ಬ್ರಿಟಿಷಿಗ ಕುದುರೆಯೇರಿ ಕೊಯಮತ್ತೂರಿನಿಂದ ದಕ್ಷಿಣಕ್ಕೆ ನೂರು ಕಿ.ಮೀ. ದೂರದ ವಾಲ್‌ಪರೈಗೆ ಬಂದ. ಜೀರುಂಡೆಗಳ ಗದ್ದಲದಲ್ಲಿ ತನ್ಮಯವಾಗಿದ್ದ ಕಗ್ಗತ್ತಲು ಅರಣ್ಯವನ್ನು ಪ್ರವೇಶಿಸಿದ. ಕಾಡಿನ ಅನ್ವೇಷಣೆಗೆ ಬಂದ ಮಾರ್ಷ್‌ಗೆ ತಾನೊಂದು ಚಕ್ರವ್ಯೂಹದಲ್ಲಿ ಸಿಕ್ಕಿಬಿದ್ದಿರುವುದು ಅರಿವಾಗುವಾಗ

ತಡವಾಗಿತ್ತು. ಹೆಜ್ಜೆಹೆಜ್ಜೆಗೂ ಸರಪಳಿಯಂತೆ ಮರದಿಂದ ಮರಕ್ಕೆ ತೂಗು ಬಿದ್ದಿದ್ದ ನೂರಾರು ಬಳ್ಳಿಗಳನ್ನು ಭೇದಿಸುವುದೇ ಸವಾಲಾಯಿತು. ದಾರಿ ಸಾಗದೆ ಒಂದೆರಡು ರಾತ್ರಿಗಳು ಕಳೆದಾಗ ಕುದುರೆಯ ಮೇಲೆ ಹೇರಿಕೊಂಡು ಬಂದ ತಿನಿಸುಗಳೆಲ್ಲಾ ಮುಗಿಯುತ್ತಾ ಬಂತು. ತಾನು ನುಸುಳಿ ಬಂದ ದಾರಿಯನ್ನು ಮತ್ತೆ ಹುಡುಕಿ ಮರಳುವ ಪ್ರಯತ್ನವು ಸಫಲವಾಗಲಿಲ್ಲ. ಬಹುಶಃ ತನ್ನ ಹುಚ್ಚು ಸಾಹಸ ಇಷ್ಟು ಗಂಭೀರ ಸ್ವರೂಪ ತಾಳಬಹುದೆಂಬ ಅರಿವು ಆತನಿಗೆ ಇರಲಿಲ್ಲ.

ಎದುರಾದ ಸವಾಲುಗಳಿಗೆ ಕುಗ್ಗದೆ ಮುಂದುವರಿದ ಮಾರ್ಷ್‌ಗೆ ಜನರು ಓಡಾಡಿ ಸವೆಸಿದಂತಿದ್ದ ಕಿರುಹಾದಿಯೊಂದು ಗೋಚರಿಸಿತು. ಅದೇ ಜಾಡನ್ನು ಹಿಡಿದು ಸಾಗಿದಾಗ ನಾಲ್ಕಾರು ಪುಟ್ಟ ಗುಡಿಸಲುಗಳಿದ್ದ ಹಾಡಿ ಪ್ರತ್ಯಕ್ಷವಾಯಿತು.

ಗುಡಿಸಲಿನ ಬಳಿ ಹತ್ತಾರು ಆದಿವಾಸಿಗಳಿದ್ದರು. ಮಾರ್ಷ್‌ನ ಕುದುರೆಯ ಖುರಪುಟದ ಸದ್ದಿಗೆ ದಿಗಿಲುಗೊಂಡರು. ಅದು ಅವರು ಆವರೆಗೂ ನೋಡಿರದ ಪ್ರಾಣಿ. ಅದರ ಜೊತೆಯಲ್ಲಿ ಟೋಪಿ ಧರಿಸಿದ ನಾಜೂಕು ಪೋಷಾಕಿನ ಮಾರ್ಷ್. ಎರಡು ವಿಚಿತ್ರಗಳನ್ನು ಒಮ್ಮೆಲೆ ಕಂಡ ಅವರು ಹೆದರಿ ಮಕ್ಕಳನ್ನು ಎಳೆದುಕೊಂಡು ದಟ್ಟಡವಿಯಲ್ಲಿ ಮಿಂಚಿನಂತೆ ಮಾಯವಾದರು. ತನ್ನ ಸಾಹಸದ ಯಾತ್ರೆ ತಂದ ಫಲಶ್ರುತಿಯನ್ನು ಹೇಳಲು ಕುದುರೆ ಬಿಟ್ಟರೆ ಮಾರ್ಷ್‌ಗೆ ಬೇರಾರೂ ಇರಲಿಲ್ಲ.

ಅಸಹಾಯಕನಾಗಿ ನಿಂತಿದ್ದ ಮಾರ್ಷ್‌ಗೆ ಒಂದು ಗುಡಿಸಿಲಿನಿಂದ ಏನೋ ಸದ್ದು ಬಂದಂತಾಯಿತು. ಆ ಕಡೆ ನೋಡಿದರೆ ಕಟ್ಟುಮಸ್ತಾದ ಆದಿವಾಸಿಯೊಬ್ಬ ಬರುತ್ತಿದ್ದ. ಅವನ ಮುಖದಲ್ಲಿ ಧೈರ್ಯದ ಸುಳಿವನ್ನು ಕಂಡ ಮಾರ್ಷ್ ಸಂಜ್ಞೆಯ ಮೂಲಕ ಸ್ನೇಹವನ್ನು ಪ್ರಕಟಿಸಿದ. ಅತ್ತ ಕಡೆಯಿಂದಲೂ ಸೂಕ್ತ ಪ್ರತಿಕ್ರಿಯೆ ಬಂತು. ಮಾರ್ಷ್‌ಗೆ ಆ ಮನುಷ್ಯನೊಡನೆ ಸ್ನೇಹ ಸಂಪಾದಿಸಲು ಹೆಚ್ಚು ಸಮಯ ಬೇಕಾಗಲಿಲ್ಲ. ತೆರೆದ ಗುಡಿಸಲಿನಲ್ಲಿಯೇ ಇಬ್ಬರೂ ಬಿಡಾರ ಹಾಕಿದರು.

ಮಾರ್ಷ್‌ಗೆ ಪರಿಚಯವಾದದ್ದು ಪೂಣಚ್ಚಿ ಎಂಬ ಆದಿವಾಸಿ. ಅವನ ನೆರವಿನಿಂದ ಇಡೀ ಅರಣ್ಯವನ್ನೆಲ್ಲ ಮಾರ್ಷ್ ಅನ್ವೇಷಿಸಿದ. ಪ್ರಕೃತಿಯನ್ನು ಆಸ್ವಾದಿಸುತ್ತಾ ತಾನು ಇಲ್ಲಿಯೇ ನೆಲಸಬೇಕೆಂದು ತೀರ್ಮಾನಿಸಿದ. ಪೂಣಚ್ಚಿಯ ಸಹಕಾರದಿಂದ ಸ್ಥಳೀಯರ ವಿಶ್ವಾಸ ಸಂಪಾದಿಸಿ, ಇಡೀ ಪ್ರದೇಶದ ನಕ್ಷೆ ತಯಾರಿಸಿದ. ಜೊತೆಗೆ ಆಗಷ್ಟೆ ಭಾರತ ಪ್ರವೇಶಮಾಡಿದ್ದ ಚಹಾ ಗಿಡಗಳನ್ನು ತಂದು ನೆಟ್ಟ. ವಾಲ್‌ಪರೈ ಕಾಡಿನ ಮುಂದಿನ ದಿನಗಳ ದುರಂತದ ಮೂಲ ಬೀಜಗಳು ಚಹಾ ಗಿಡದ ರೂಪದಲ್ಲಿ ಬಂದಿದ್ದವು.

ಹೊಸ ಜಾಗದಲ್ಲಿ ಚಹಾ ಗಿಡಗಳು ಹುಲುಸಾಗಿ ಬೆಳೆಯಲಾರಂಭಿಸಿದವು. ಮಾರ್ಷ್ ನಿಧಾನವಾಗಿ ಕಾಡು ಕಡಿಯುತ್ತಾ, ಚಹಾ ಗಿಡಗಳನ್ನು ಪಳಗಿಸುತ್ತಾ, ತೋಟವನ್ನು ವಿಸ್ತರಿಸುತ್ತಾ ನಡೆದ. ಸಮೃದ್ಧವಾಗಿ ಬೆಳೆದ ತೋಟವನ್ನು ಆನಂದಿಸುತ್ತಾ ೧೯೩೪ರಲ್ಲಿ ಅಸುನೀಗಿದ.

ಮಾರ್ಷ್‌ನ ಚಹಾ ತೋಟದ ಯಶಸ್ಸು ಸ್ವಾತಂತ್ರೋತ್ತರದಲ್ಲಿ ಭಾರತದ ಅಗ್ರಗಣ್ಯ ಕೈಗಾರಿಕೋದ್ಯಮಿಗಳನ್ನು ಕೈಬೀಸಿ ಕರೆಯಿತು. ಕಾಡಿನ ಗರ್ಭಪಾತಕ್ಕೆ ಮೊದಲಾಯಿತು. ಪ್ರಭಾವದ ನೆರವಿಲ್ಲದ ಗಗನಚುಂಬಿ ಮರಗಳು ನೆಲಕ್ಕುರುಳಿದವು. ದಿಮ್ಮಿಕೊಳ್ಳಲು ಕಂಟ್ರಾಕ್ಟರುಗಳು ಬಂದರು. ಫಲವತ್ತಾದ ಭೂಮಿಯಲ್ಲಿ ರಸ್ತೆ ನಿರ್ಮಾಣವಾಯಿತು. ಹೊಗೆಯುಗುಳುವ, ಗಡಗಡ ಸದ್ದು ಮಾಡುವ ಲಾರಿ, ಟ್ರಾಕ್ಟರ್‌ಗಳು ಬರತೊಡಗಿದವು. ನೀರವತೆ ನಾಶವಾಯಿತು. ನಿರುದ್ಯೋಗ ಸಮಸ್ಯೆಗೆ ಸಂಜೀವಿನಿಯಂತಿದ್ದ ವಾಲ್‌ಪರೈ ಅರಣ್ಯದ ಮೇಲಿನ ಅತ್ಯಾಚಾರಕ್ಕೆ ಸರ್ಕಾರ ಉತ್ತೇಜನ

ನೀಡಿತು, ಉದ್ಯಮಿಗಳಿಗೆ ಅನುಕೂಲವಾಗುವಂತೆ ವರ್ತಿಸಿತು. ನಿಬಿಡ ಅರಣ್ಯಗಳೆಲ್ಲ ತೆರವಾಗಿ ಚಹಾ ತೋಟಗಳ ಅನಂತ ಬಯಲಿನ ಪ್ರದೇಶಗಳೇ ಏಕಸ್ವಾಮ್ಯತೆ ಪಡೆದವು.

ಈಗ ಇಡೀ ವಾಲ್‌ಪರ್ೈ ಹಸಿರು ಕಂಬಳಿ ಹೊದ್ದು ಮಲಗಿದಂತಿದೆ. ಕಣ್ಣು ಕಾಣುವವರೆಗೂ ಚಹಾ ತೋಟದ ಅನಂತ ಬಯಲು. ದಿಗಂತದಂಚಿನವರೆಗೆ ಮಾಲೆಮಾಲೆಯಾಗಿ ಸಹಸ್ರ ಸಹಸ್ರ ಚದರ ಮೈಲುಗಳವರೆಗೆ ಹರಡಿರುವ ಇದು ಮಾನವ ಸಾಮರ್ಥ್ಯಕ್ಕೆ ದಕ್ಕಿದ ವಿಜಯ ಪತಾಕೆಯಂತಿದೆ. ವಾಲ್‌ಪರ್ೈಗೆ ಹಿಂದಿನ ನಿರುದ್ಯೋಗ ಸಮಸ್ಯೆಯನ್ನು ಸ್ವಲ್ಪಮಟ್ಟಿಗೆ ನಿವಾರಿಸಿದ ಹೆಗ್ಗಳಿಕೆಯಿದೆ, ಅದರ ಹಿಂದಿನ ಸೊಬಗು ಮತ್ತು ವೈಭವದ ಸಣ್ಣ ಕುರುಹೂ ಉಳಿಯದಂತೆ ಮಾಡಿದ ಮಾನವ ಸಾಮರ್ಥ್ಯಕ್ಕೆ ಬಿಂಬವಾಗಿದೆ.

ಆದರೆ ಈ ಅಭಿವೃದ್ಧಿ ಅಲ್ಲಿನ ಜೀವಸಂಕುಲಗಳ ಮೇಲೆ ಬೀರಿರಬಹುದಾದ ದುಷ್ಪರಿಣಾಮಗಳ ಬಗ್ಗೆ ಯಾರಿಗೂ ಅರಿವಿರಲಿಲ್ಲ. ಕಾಲಾಂತರದಿಂದ ಈ ಕಾಡಿನಲ್ಲಿ ಅಧಿಪತ್ಯ ಸ್ಥಾಪಿಸಿಕೊಂಡು ಸ್ವಚ್ಛಂದವಾಗಿ ಬದುಕಿದ್ದ ಸಿಂಹಬಾಲದ ಕೋತಿಗಳ ನೆಲೆ ಧ್ವಂಸವಾಯಿತು. ಕಾಡಿನೆಲ್ಲೆಡೆ ಆವರಿಸಿದ್ದ ಅವುಗಳ ಸಂಖ್ಯೆ ಕ್ಷೀಣಿಸಿ ಕೇವಲ ಎರಡು ಸಾವಿರಕ್ಕೆ ಇಳಿದಾಗ ಇಡೀ ಜಗತ್ತೆ ಬೆಚ್ಚಿಬಿದ್ದಿತು. ಅಪರೂಪದ ಸಿಂಹ ಬಾಲದ ಕೋತಿಗಳ ಸಂತತಿ ವಂಶನಾಶದ ಅಂಚಿನಲ್ಲಿರುವುದು ಸ್ಪಷ್ಟವಾಯಿತು. ಇದರೊಂದಿಗೆ ಕಣ್ಮರೆಯಾದ ಅನೇಕ ಜೀವ ಸಂಕುಲಗಳು ಬೆಳಕಿಗೆ ಬಂದವು. ಆದರೆ ಸಮಯ ಮೀರಿತ್ತು. ಅವುಗಳ ಬಗ್ಗೆ ಏನೂ ಮಾಡಲಾಗದಂತಹ ಅಸಹಾಯಕತೆ ಎಲ್ಲರದಾಗಿತ್ತು.

ವಾಲ್‌ಪರ್ೈ ಮಧ್ಯದಲ್ಲಿ ಪುದುತೋಟಂ ಎಂಬ ತೋಟವಿದೆ. ಪರಿಸರದ ಮೇಲೆ ನಡೆದ ಅತ್ಯಾಚಾರಕ್ಕೆ ಇದು ಸಾಕ್ಷಿಯಾಗಿ ನಿಂತಿದೆ. ಇದು ಸುಮಾರು ೪೦೦ ಎಕರೆ ಪ್ರದೇಶ. ತೋಟವನ್ನು ಸೀಳಿರುವ ಡಾಂಬರ್ ರಸ್ತೆಯು ದೂರಕ್ಕೆ ಮಾಗಿದ ಗಾಯದ ಕಲೆಯಂತೆ ತೋರುತ್ತದೆ. ನೆಲೆತಪ್ಪಿದ ಸುಮಾರು ೩೦ ಸಿಂಹಬಾಲದ ಕೋತಿಗಳು ಇಲ್ಲಿ ಆಶ್ರಯ ಪಡೆದಿವೆ. ಎಂದೂ ಭೂಸ್ಪರ್ಶವನ್ನೇ ಮಾಡದೆ ವೃಕ್ಷವಾಸಿಗಳಾಗಿ ಬದುಕು ದೂಡುವ ಈ ವಾನರ ಕುಲಕ್ಕೆ ಅಸಾಧ್ಯ ಸನ್ನಿವೇಶಗಳು ಎದುರಾಗಿವೆ. ವೃಕ್ಷವಾಸಿಗಳಾದ ಕೋತಿಗಳು ಈಗ ಮರದಿಂದ ಮರಕ್ಕೆ ಹಾರುವಂತಿಲ್ಲ. ಬದಲು ನೆಲಕ್ಕೆ ಇಳಿದು ಡಾಂಬರ್ ರಸ್ತೆ ದಾಟಿ ಮತ್ತೊಂದು ಮರ ಹತ್ತಬೇಕು. ರಸ್ತೆ ದಾಟುವ ನಾಗರಿಕ ಬುದ್ಧಿ ಇಲ್ಲದ ಹಲವಾರು ಕೋತಿಗಳು ಈಗಾಗಲೇ ವಾಹನಕ್ಕೆ ಸಿಕ್ಕಿ ಅಂಗವಿಕಲಗೊಂಡಿವೆ. ಅವುಗಳಿಗೆ ಆಹಾರ ನೀಡುತ್ತಿದ್ದ ಮರಗಳು ಕ್ಷೀಣಿಸಿವೆ. ಅವುಗಳಿಗೆ 'ದಯಾಮೃತ್ಯು' (Mercy Killing) ಕರುಣಿಸಲೂ ಕಾನೂನಿನಲ್ಲಿ ಅವಕಾಶವಿಲ್ಲ. ಏಕೆಂದರೆ ಅವು ಕೆಂಪು ಪಟ್ಟಿಯಲ್ಲಿರುವ ಜೀವಿಗಳು. ಬೇರೆಡೆಗೆ ಸ್ಥಳಾಂತರಿಸುವ ಕ್ರಿಯೆಯಲ್ಲೂ ಅಧಿಕ ಸಾವುನೋವು ಸಹಜ. ಇದರಿಂದಾಗಿ ವಿಜ್ಞಾನಿಗಳು, ಅರಣ್ಯ ಇಲಾಖೆಯವರು ಅಸಹಾಯಕರಾಗಿದ್ದಾರೆ. ಬದುಕುಳಿಯಲು ಅವು ಊರಿನಂಗಳದ ಕಸದ ತೊಟ್ಟಿಗಳಲ್ಲಿ ಆಹಾರ ಹುಡುಕುತ್ತಾ ಬದುಕು ನೂಕುತ್ತಿವೆ.

ವಾಲ್‌ಪರ್ೈನ ಸಮಸ್ಯೆ ಕೇವಲ ಸಿಂಹಬಾಲದ ಕೋತಿಗಳಿಗಷ್ಟೇ ಸೀಮಿತವಾಗಿಲ್ಲ. ವಾಣಿಜ್ಯ ವ್ಯವಹಾರದ ದೃಷ್ಟಿಯಿಂದ ಶ್ರೀಮಂತ ಪ್ರದೇಶವೆಂದು ಗುರುತಿಸಿಕೊಂಡಿದ್ದ ಅದು ಈಗ ತತ್ತರಿಸುತ್ತಿದೆ. ಅಂತಾರಾಷ್ಟ್ರೀಯ ವಿದ್ಯಮಾನಗಳು ವಾಲ್‌ಪರ್ೈನ ಆರ್ಥಿಕ ಸ್ಥಿತಿಗತಿಗೆ ಕುತ್ತು ತಂದಿವೆ. ವಿಶ್ವ ಮಾರುಕಟ್ಟೆಯಲ್ಲಿ ಚಹಾ ಬೇಡಿಕೆ ಕುಸಿದಿದೆ. ರಫ್ತು ಇಳಿಮುಖಗೊಂಡು ಚಹಾ ತೋಟಗಳು ನಷ್ಟದಲ್ಲಿವೆ. ಬದುಕುಳಿಯಲು ತೋಟದ ಮಾಲೀಕರು ಉತ್ಪಾದನಾ ವೆಚ್ಚ ಕಡಿತಗೊಳಿಸುವ ಅನಿವಾರ್ಯತೆಯಲ್ಲಿದ್ದಾರೆ. ಜನರು ನಿರ್ವಹಿಸುತ್ತಿದ್ದ ಕೆಲಸಗಳನ್ನು ಯಾಂತ್ರೀಕರಣ ಮಾಡಲು ಮುಂದಾಗಿದ್ದಾರೆ. ಕಂಗಾಲಾದ ಕಾರ್ಮಿಕರು ಕೆಂಪು ಬಾವುಟಗಳನ್ನ ಹಿಡಿದು ಹೋರಾಟಕ್ಕೆ ಸಜ್ಜಾಗಿದ್ದಾರೆ. ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ಆದರೆ ಬದುಕು ಹಸನುಗೊಳ್ಳುವ ಯಾವ ಭರವಸೆಗಳು ಕಾಣುತ್ತಿಲ್ಲ.

ಹೀಗಾಗಿ ವಾಲ್‌ಪರೈನಲ್ಲಿ ಹಿಂದಿನ ವೈಭವವಿಲ್ಲ. ಪ್ರಶಾಂತ ನೀರವತೆಯ ಕುರುಹಿಲ್ಲ. ಕಾಡನ್ನು ಸೀಳಿ ಅನುರಣಿಸುತ್ತಿದ್ದ ವಾನರಗಳ ಕೇಕೆಯಿಲ್ಲ. ಬದಲು ಯಂತ್ರಗಳ ಕರ್ಕಶ ಸದ್ದು, ದಿನನಿತ್ಯ ಕಾರ್ಮಿಕರ ಮೆರವಣಿಗೆ, ಪ್ರತಿಭಟನೆಯ ಘೋಷಣಾ ಧ್ವಜಗಳು ತುಂಬಿವೆ. ಪ್ರತಿಭಟಿಸಬೇಕಿದ್ದ ಸಿಂಹಬಾಲದ ಕೋತಿಗಳು ಎಲ್ಲೋ ಅಡಗಿ ತಮ್ಮ ಅವನತಿಯ ದಿನಗಳನ್ನು ಎಣಿಸುತ್ತಿವೆ. ಮನುಷ್ಯರ ಸುಳಿವೆ ಇಲ್ಲದೆ ಕಾಡಾಗಿದ್ದ ವಾಲ್‌ಪರೈನಲ್ಲಿ ಈಗ ಜನಸಂಖ್ಯೆ ಲಕ್ಷಕ್ಕೂ ಮೀರಿದೆ. ಅವರದೇ ಸಮಸ್ಯೆ, ಅವರದೇ ಗಜಿಬಿಜಿ.

ಇಂತಹ ಪರಿಸ್ಥಿತಿಯಲ್ಲಿಯೂ ಹಾಡು ಹಕ್ಕಿಗಳಾದ ವಿಷಲಿಂಗ್ ಥ್ರಷ್‌ಗಳು ಬದುಕುಳಿಯುವ ಛಲ ತೊಟ್ಟಿವೆ. ಮಿನುಗುವ ಹಸಿರುಪಾಚಿಗಳನ್ನು ಹೊದ್ದು ಮಲಗಿದ ಕಲ್ಲು ಬಂಡೆಗಳ ನಡುವೆ, ನುಸುಳಿ ಹರಿಯುತ್ತಿದ್ದ ಸ್ವಚ್ಛ ನೀರಿನ ಹಳ್ಳಕೊಳ್ಳಗಳು ಇವುಗಳ ಬದುಕಿಗೆ ಆಧಾರವಾಗಿದ್ದವು. ಈಗ ಪರಿಸ್ಥಿತಿ ಬದಲಾಗಿದೆ. ಝುರಿ ಜಲಪಾತಗಳ ಪಾತ್ರಗಳನ್ನೆಲ್ಲ ಆಕ್ರಮಿಸಿ ಮೆಲ್ಲನೆ ತೆವಳುತ್ತಿರುವ ಕೊಳಚೆ ನೀರಿನ ಚರಂಡಿಗಳೆ ಈಗ ಈ ಹಾಡು ಹಕ್ಕಿಗಳ ನೆಲೆ. ಅವುಗಳ ಬದುಕು ಮುಂದೆ ಹೇಗೋ? ಏನೋ? ಆದರೆ ತಮ್ಮ ನೋವಿನ ನಡುವೆಯೂ ಮುಂಜಾನೆ ಬೇಗನೆ ಎದ್ದು ರಾಗವಾಗಿ ಹಾಡುವುದನ್ನು ಮಾತ್ರ ಬಿಟ್ಟಿಲ್ಲ. ಹಾಡುವುದು ಅವುಗಳಿಗೆ ಅನಿವಾರ್ಯ; ಅವುಗಳ ಕರ್ಮ!

ಮಾನವ ಕೇಂದ್ರೀಕೃತ ಅಭಿವೃದ್ಧಿ ಎನ್ನುವುದು ತನ್ನ ಹುಟ್ಟಿನಲ್ಲೇ ದುರಂತದ ಬೀಜಗಳನ್ನು ಅಡಗಿಸಿಕೊಂಡಿರುತ್ತದೆ. ಈ ಬೀಜಗಳು ಸದ್ದಿಲ್ಲದೆ ಬಿದ್ದಿರುತ್ತವೆ. ಅಭಿವೃದ್ಧಿಯ ಪ್ರಗತಿ ಪರಾಕಾಷ್ಠೆ ಮುಟ್ಟಿದೊಡನೆ ಅವು ಚಿಗುರೊಡೆದು ದುರಂತದ ವಿರಾಟ್ ಪ್ರದರ್ಶನಕ್ಕೆ ಸಜ್ಜಾಗುತ್ತದೆ. ಈ ದುರಂತದ ಕಾವು ಮುಟ್ಟುವ ವೇಳೆಗೆ ಮತ್ತೆಂದೂ ಹಿಂದಕ್ಕೆ ಬರಲಾರದ ಹಂತ ತಲುಪಿರುತ್ತದೆ. ನಾಗರಿಕತೆಯ ಉನ್ನತಿಯ ಆದರ್ಶದೊಡನೆ ಆರಂಭವಾಗುವ ಅಭಿವೃದ್ಧಿ, ಮನುಕುಲದ ಪತನಕ್ಕೆ ಕಾರಣವಾಗುವುದು, ಅದರ ಕ್ರೂರ ವ್ಯಂಗ್ಯವಿರಬಹುದು. ಆದರೆ ಅಭಿವೃದ್ಧಿಯ ಹೆಸರಿನಲ್ಲಿ ಪ್ರಕೃತಿಯ ಮೇಲೆ ಅತ್ಯಾಚಾರವೆಸಗಿದ ಜನಾಂಗಕ್ಕೆ ಇದರ ಬಾಧೆ ತಟ್ಟುವುದಿಲ್ಲ. ದುರಂತದ ಶಾಪಕ್ಕೆ ತುತ್ತಾಗುವವರು, ಇದಕ್ಕೆ ಸಂಬಂಧವೇ ಇಲ್ಲದ ಮುಂದಿನ ಜನಾಂಗ ಮತ್ತು ಇತರೆ ಜೀವಸಂಕುಲ. ಇಂಥ ದುರಂತಕ್ಕೆ ಪಶ್ಚಿಮ ಘಟ್ಟದ ಕಾಡಿನ ನಡುವೆ ಇರುವ ವಾಲ್‌ಪರೈ ಅರಣ್ಯ ಜ್ವಲಂತ ಸಾಕ್ಷಿಯಾಗಿ ನಿಂತಿದೆ.

ಇಲ್ಲಿ ವಾಲ್‌ಪರೈನ ದುರಂತ ಒಂದು ಉದಾಹರಣೆ ಮಾತ್ರ. ನಮ್ಮ ರಾಜ್ಯದ ಮತ್ತು ರಾಷ್ಟ್ರದ ಮೂಲೆ ಮೂಲೆಗಳಲ್ಲೂ ಇಂಥ ಹಲವಾರು ಉದಾಹರಣೆಗಳು ಕಾಣಸಿಗುತ್ತವೆ. ದೂರದೃಷ್ಟಿ ಮತ್ತು ಒಳನೋಟಗಳಿಲ್ಲದ ಯಾವುದೆ ಅಭಿವೃದ್ಧಿ ಯೋಜನೆಗಳು ಇದಕ್ಕಿಂತಲೂ ಕಠೋರವಾದ ಅಧ್ಯಾಯಗಳನ್ನು ಎಲ್ಲಿ ಬೇಕಾದರೂ ಬರೆಯಬಹುದು.

ಏನಿಲ್ಲದಿದ್ದರೂ, ಮುಂದಿನ ಜನಾಂಗಕ್ಕೆ ಪರಿಶುದ್ಧವಾದ ನೀರು, ಮಲಿನಗೊಳ್ಳದ ಗಾಳಿ, ಸ್ವಚ್ಛ ಸಮುದ್ರ, ನೀಲಿ ಆಕಾಶಗಳನ್ನು ಬಿಟ್ಟು ಹೋಗುವುದು ನಮ್ಮೆಲ್ಲರ ಛಲವಾಗಬೇಕು. ನಾವು ನೀವೆಲ್ಲ ಇದಕ್ಕೆ ಬದ್ಧವಾಗಿರಬೇಕು ಇದು ಮನುಕುಲದ ಮತ್ತು ನಮ್ಮ ಸುತ್ತಮುತ್ತಲಿನ ಪರಿಸರದ ಬಗ್ಗೆ ತೋರುವ ಕನಿಷ್ಟ ಕಳಕಳಿ ಮತ್ತು ಸೌಜನ್ಯದಲ್ಲಿ ನಿಜವಾದ ಸಾರ್ಥಕತೆ ಅಡಗಿದೆ.

## ಲೇಖಕರ ಪರಿಚಯ :

**ಕೃಪಾಕರ** (೦೭.೦೭.೧೯೫೬) ಮತ್ತು **ಸೇನಾನಿ** (೦೧.೦೧. ೧೯೬೦) ಇಬ್ಬರೂ ವನ್ಯಜೀವಿ ಛಾಯಾಗ್ರಹಣದಲ್ಲಿ ಖ್ಯಾತನಾಮರು, ಮೈಸೂರಿನವರು. ಏಷ್ಯಾದಲ್ಲಿಯೇ ಮೊಟ್ಟಮೊದಲ ಬಾರಿಗೆ ಕಾಡಿನಲ್ಲಿರುವ ಸೀಳುನಾಯಿಗಳನ್ನು ಕುರಿತ ಸಾಕ್ಷ್ಯ ಚಿತ್ರಕ್ಕಾಗಿ ಪ್ರತಿಷ್ಠಿತ ಗ್ರೀನ್ ಆಸ್ಕರ್ ಪುರಸ್ಕಾರಕ್ಕೆ ಪಾತ್ರರಾದವರು. ನಮ್ಮ ಸುತ್ತಮುತ್ತಲಿನ ಜೀವಜಾಲದ ಬಗ್ಗೆ ಅಪಾರ ಕಾಳಜಿಯುಳ್ಳವರು. ಕಾಡುಗಳ್ಳ ವೀರಪ್ಪನ್‌ನಿಂದ ಅಪಹರಣಕ್ಕೊಳಗಾಗಿ, ತಮ್ಮ ಸಜ್ಜನಿಕೆಯ ವ್ಯಕ್ತಿತ್ವದಿಂದ ಪಾರಾಗಿ ಬಂದವರು. ಇವರಿಬ್ಬರೂ ಒಟ್ಟಾಗಿ ತೆಗೆದ ಛಾಯಾಚಿತ್ರಗಳು, ಸಾಕ್ಷ್ಯಚಿತ್ರಗಳು ಅಂತಾರಾಷ್ಟ್ರೀಯ ಖ್ಯಾತಿ ಗಳಿಸಿವೆ. ಮೈಸೂರಿನಲ್ಲಿ ವಾಸವಿರುವ ಇವರು ಕಾಡಿನಲ್ಲಿರುವುದೇ ಹೆಚ್ಚು. ಇವರಿಬ್ಬರೂ **ಕೆ. ಪುಟ್ಟಸ್ವಾಮಿ**ಯವರೊಂದಿಗೆ ಸೇರಿ ರಚಿಸಿರುವ 'ಜೀವಜಾಲ' ಎಂಬ ಕೃತಿ ಅತ್ಯಂತ ಪ್ರಸಿದ್ಧವಾಗಿದೆ. ಡಾ. ಕೆ. ಪುಟ್ಟಸ್ವಾಮಿ ತಮ್ಮ 'ಸಿನಿಮಾಯಾನ' ಕೃತಿಗಾಗಿ ರಾಷ್ಟ್ರಪತಿಗಳ ಸ್ವರ್ಣಕಮಲ ಪ್ರಶಸ್ತಿ ಪಡೆದ ಪ್ರತಿಭಾವಂತರು. ತಮ್ಮ ಪರಿಸರ ಮತ್ತು ವಿಜ್ಞಾನ ಸಂಬಂಧ ಬರಹಗಳಿಂದ ಪ್ರಸಿದ್ಧರಾಗಿದ್ದಾರೆ.



ಮಾನವನ ಪ್ರವಾಸ ಮತ್ತು ಸಾಹಸ ಪ್ರವೃತ್ತಿಗಳು ಕಾಡನ್ನು ನಾಶಮಾಡುವ ಮೂಲಕ ಜೈವಿಕ ಜಗತ್ತಿನ ಏರುಪೇರುಗಳಿಗೆ ಕಾರಣವಾಗುವ ದುರಂತಗಳನ್ನು ಕುರಿತು ಪ್ರಸ್ತುತ ಲೇಖನವು ಗಮನ ಸೆಳೆದಿದೆ. ಮಿಲಿಯಾಂತರ ವರ್ಷಗಳಿಂದ ವಿಕಾಸಗೊಂಡು ಅರಳಿದ ಜೈವಿಕ ವೈವಿಧ್ಯ ನಾಶವನ್ನು ಮನುಷ್ಯನ ಸ್ವಾರ್ಥ ಮೂಲ ಅಭಿವೃದ್ಧಿ ಕಾರ್ಯಗಳು ನಿರಂತರವಾಗಿ ನಡೆಸಿಕೊಂಡು ಬಂದಿರುವುದಕ್ಕೆ 'ವಾಲ್‌ಪರೈ' ನೆಪಮಾತ್ರವಾಗಿದೆ.

## ಶಬ್ದಾರ್ಥ :

ದುರಂತ–ಅಪಾಯ; ಪರಾಕಾಷ್ಠೆ–ತುತ್ತತುದಿ; ವಿರಾಟ್–ವಿಶ್ವರೂಪ; ಪತನ–ಅವನತಿ; ಸಂಕುಲ–ಗುಂಪು, ಸಮೂಹ; ರೋಚಕ–ಸುಖಕರವಾದ, ಹಿತಕಾರಿ; ಅಧಿಪತ್ಯ–ಯಜಮಾನಿಕೆ, ಒಡೆತನ; ನಿಬಿಡ–ದಟ್ಟವಾದ, ಸಾಂದ್ರವಾದ; ಸಾಂದ್ರತೆ–ದಟ್ಟಣೆ; ಎಡೆ–ಸ್ಥಳ, ಜಾಗ; ಬಿಡಾರ–ತಂಗುವ ಸ್ಥಳ; ನೀರವತೆ–ಮೌನ, ನಿಶ್ಶಬ್ದ; ಕುಮ್ಮಕ್ಕು–ಸಹಾಯ, ಒತ್ತಾಸೆ; ಏಕಸ್ವಾಮ್ಯತೆ–ಒಬ್ಬರ ಒಡೆತನದಲ್ಲಿರುವ; ಕುರುಹು–ಗುರುತು; ಕ್ಷೀಣಿಸು–ಸೊರಗು, ಕ್ಷಯಿಸು; ಅನುರಣಿಸು–ಅನುಸರಿಸಿ ಮುಂದುವರಿದ ಧ್ವನಿ; ಅವನತಿ–ಕೀಳುದೆಸೆ.

## ಟಿಪ್ಪಣಿ :

೧. **ವಾಲ್‌ಪರೈ :**

ಇದು ತಮಿಳುನಾಡಿಗೆ ಸೇರಿದ ಕಣಿವೆ ಪ್ರದೇಶ. ಪರೈ ಎಂದರೆ ಬಂಡೆಕಲ್ಲು. ಬಂಡೆಗಳಿಂದಾವೃತವಾದ ಕಾಡನ್ನು ತಮಿಳಿನಲ್ಲಿ ವಾಲ್‌ಪರೈ ಎನ್ನುವರು. ಮದುಮಲೈ ಕಾಡಿನ ಸೆರಗಿನಲ್ಲಿರುವ ಒಂದು ಸ್ಥಳ. ಸೂರ್ಯನ ಕಿರಣ ಪ್ರವೇಶಿಸಲು ಕಷ್ಟವೆನ್ನುವಷ್ಟು ದಟ್ಟವಾಗಿದ್ದ ಈ ಅರಣ್ಯ ಪ್ರದೇಶವು ಅಭಿವೃದ್ಧಿಯ ಹೆಸರಿನಲ್ಲಿ ಬರಡಾಗಿ ಹೋಗಿದೆ.

## : ಅಭ್ಯಾಸ ಭಾಗ :

### ಅ) ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು:

೧. ಈ ಪ್ರದೇಶಕ್ಕೆ ಆಗ ಹೆಸರೇ ಇರಲಿಲ್ಲ.

೨. ಅದು ಅವರು ಆವರೆಗೂ ನೋಡಿರದ ಪ್ರಾಣಿ.

೩. ದುರಂತದ ಮೂಲ ಬೀಜಗಳು ಚಹಾ ಗಿಡದ ರೂಪದಲ್ಲಿ ಬಂದವು.

೪. ಕಾರ್ಮಿಕರು ಕೆಂಪು ಬಾವುಟ ಹಿಡಿದು ಹೋರಾಟಕ್ಕೆ ಸಜ್ಜಾಗಿದ್ದಾರೆ.

೫. ಹಾಡುವುದು ಅವುಗಳಿಗೆ ಅನಿವಾರ್ಯ; ಅವುಗಳ ಕರ್ಮ!

### ಆ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):

೧. ಬ್ರಿಟಿಷರಲ್ಲಿ ಹಾಯ್ದು ಬಂದಿರುವ ಆನುಷಂಗಿಕ ಗುಣ ಯಾವುದು?

೨. ವಾಲ್‌ಪರೈಗೆ ಬಂದ ಬ್ರಿಟಿಷ್ ಪ್ರಜೆ ಯಾರು?

೩. ಮಾರ್ಷ್ ವಾಲ್‌ಪರೈಗೆ ಬಂದುದು ಯಾವಾಗ?

೪. ಮಾರ್ಷ್‌ನ ಜೊತೆಗಾರನ ಹೆಸರೇನು?

೫. ಕೆಂಪುಪಟ್ಟಿಗೆ ಸೇರಿದ ಪ್ರಾಣಿ ಯಾವುದು?

೬. ವಾಲ್‌ಪರೈನ ದುರಂತದ ಮೂಲ ಬೀಜಗಳು ಯಾವ ರೂಪದಲ್ಲಿ ಬಂದವು?

### ಇ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):

೧. ಬ್ರಿಟಿಷರು ಬರುವ ಮೊದಲು ವಾಲ್‌ಪರೈ ಹೇಗಿತ್ತು?

೨. ಮಾರ್ಷ್‌ನನ್ನು ಕಂಡು ಆದಿವಾಸಿಗಳು ಹೇಗೆ ಪ್ರತಿಕ್ರಿಯಿಸಿದರು?

೩. ಕೈಗಾರಿಕೋದ್ಯಮಿಗಳಿಂದ ಕಾಡು ನಾಶವಾದುದು ಹೇಗೆ?

೪. ಸಿಂಹಬಾಲದ ಕೋತಿಗಳಿಗೆ ಒದಗಿದ ತೊಂದರೆ ಏನು?

### ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):

೧. ವಾಲ್‌ಪರೈಗೆ ಬಂದ ಮಾರ್ಷ್ ಅಲ್ಲಿ ಹೇಗೆ ನೆಲೆಯೂರಿದ? ವಿವರಿಸಿ.

೨. ಅಂತಾರಾಷ್ಟ್ರೀಯ ವಿದ್ಯಮಾನಗಳಿಂದಾಗಿ ವಾಲ್‌ಪರೈಗೆ ಒದಗಿದ ಸಮಸ್ಯೆಗಳೇನು?

೩. ಸಿಂಹಬಾಲದ ಕೋತಿಗಳು ಮತ್ತು ಹಾಡುಹಕ್ಕಿಗಳಿಗಾದ ಅನನುಕೂಲಗಳಾವುವು? ವಿವರಿಸಿ.

೪. ಅಭಿವೃದ್ಧಿ ತರುವ ಪ್ರಾಕೃತಿಕ ನಾಶದ ಸ್ವರೂಪವನ್ನು ಪಠ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.

## ಭಾಷಾಭ್ಯಾಸ :

೧. ಕಿರುಹಾದಿ, ಹಸಿರುಕಂಬಳಿ, ಸಣ್ಣಕುರುಹು, ಹಾಡುಹಕ್ಕಿ, ಶುದ್ಧನೀರು, ಸ್ವಚ್ಛಸಮುದ್ರ – ಈ ಪದಗಳಲ್ಲಿರುವ ಗುಣವಾಚಕಗಳನ್ನು ಗುರುತಿಸಿ.

೨. ಆಗಮಿಸಿದ, ಅನ್ವೇಷಿಸುತ್ತಾ, ಹುಡುಕುವವನು, ಹರಿಯುತ್ತಿದ್ದ – ಈ ಕ್ರಿಯಾಪದಗಳ ಕಾಲವನ್ನು ಸೂಚಿಸಿ.

೩. ಮಾರ್ಗಕ್ಕೆ, ಜಾಡನ್ನು, ಗುಡಿಸಿಲಿನಿಂದ, ಮುಖದಲ್ಲಿ, ಕೋತಿಗಳ – ಈ ಪದಗಳಲ್ಲಿ ಬಳಕೆಯಾಗಿರುವ ವಿಭಕ್ತಿ ಪ್ರತ್ಯಯಗಳನ್ನು ಹೆಸರಿಸಿ.

೪. ಹೆಜ್ಜೆಹೆಜ್ಜೆ, ಸಹಸ್ರಸಹಸ್ರ, ಮೆಲ್ಲಮೆಲ್ಲನೆ – ಈ ದ್ವಿರುಕ್ತಿಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.

೫. ನೂರಾರು, ಒಬ್ಬನು, ನಾಲ್ಕಾರು, ಹತ್ತಾರು, ಸಹಸ್ರಾರು – ಇಂಥ ಸಂಖ್ಯಾವಾಚಕ ಹಾಗೂ ಸಂಖ್ಯೇಯವಾಚಕಗಳನ್ನು ಪಟ್ಟಿಮಾಡಿ.

೬. ಶೋಧಿಸು, ಕಳೆದುಹೋಗು, ಆಸ್ವಾದಿಸು, ಹಾಡುವುದು – ಈ ಕ್ರಿಯಾಪದಗಳ 'ಧಾತು' ಗುರುತಿಸಿ.

## ಚಟುವಟಿಕೆ :

೧. ಪರಿಸರ ನಾಶದಿಂದುಂಟಾಗುತ್ತಿರುವ ಹವಾಮಾನ ವೈಪರೀತ್ಯಗಳ ಬಗ್ಗೆ ಒಂದು ಪ್ರಬಂಧ ಬರೆಯಿರಿ.

೨. ವನ್ಯಜೀವಿಗಳ ಸಂತತಿ ಕ್ಷೀಣಿಸುತ್ತಿರುವ ಕುರಿತು ಮಾಹಿತಿ ಸಂಗ್ರಹಿಸಿ.

೩. ಪರಿಸರವನ್ನು ಮೂಲಸ್ವರೂಪದಲ್ಲಿ ಉಳಿಸಲು ಮಾಡಬಹುದಾದ ಕಾರ್ಯ ಯೋಜನೆಗಳ ಬಗೆಗೆ ನಿಮ್ಮ ಆಲೋಚನೆಗಳನ್ನು ಚರ್ಚಿಸಿ.

## ಆಕರ :

ಕೃತಿ : ಜೀವಜಾಲ (ಪರಿಸರ ವಿಜ್ಞಾನ)

ಲೇಖಕರು : ಕೃಪಾಕರ ಸೇನಾನಿ, ಡಾ. ಕೆ. ಪುಟ್ಟಸ್ವಾಮಿ

ಪ್ರಕಾಶನ : ಅಭಿನವ ಪ್ರಕಾಶನ
೧೭/೧೮–೨, ಮೊದಲನೆಯ ಮುಖ್ಯರಸ್ತೆ
ಮಾರೇನಹಳ್ಳಿ, ವಿಜಯನಗರ, ಬೆಂಗಳೂರು–೪೦.

**ಸೂಚನೆ :** 'ಜೀವಜಾಲ' ಕೃತಿಯ ಮೂಲ ಲೇಖನವನ್ನು ಶ್ರೀ ಕೃಪಾಕರ ಅವರು ಪಠ್ಯಪುಸ್ತಕಕ್ಕಾಗಿ ಪರಿಷ್ಕರಿಸಿ ಕೊಟ್ಟಿದ್ದಾರೆ.

## ಹೆಚ್ಚಿನ ಓದಿಗೆ :

೧. ಕಿರಿಯರಿಗಾಗಿ ಪರಿಸರ – ಕೆ.ಪಿ. ಪೂರ್ಣಚಂದ್ರ ತೇಜಸ್ವಿ

೨. ಪರಿಸರ ವಿಜ್ಞಾನ – ಎಚ್.ಆರ್. ಕೃಷ್ಣಮೂರ್ತಿ

೩. ಇರುವುದೊಂದೇ ಭೂಮಿ – ನಾಗೇಶ ಹೆಗಡೆ

೪. ನಮ್ಮ ಅರಣ್ಯ ಸಂಪತ್ತು – ಅಜ್ಜಂಪುರ ಕೃಷ್ಣಸ್ವಾಮಿ

೫. ಭಾರತದ ಪರಿಸರದ ಪರಿಸ್ಥಿತಿ – ಕೆ. ಶಿವರಾಮಕಾರಂತ (ಸಂ.)

೬. ಅರಣ್ಯ ಮತ್ತು ಮಾನವ – ಕಲ್ಲನಗೌಡ ಪಾಟೀಲ

೭. ಕಾಡು ಮತ್ತು ತೋಪು – ವಿ. ಚಂದ್ರಶೇಖರ ನಂಗಲಿ.

*ಈ ಭೂಮಿ ನಾವು ನಮ್ಮ ಹಿರಿಯರಿಂದ ಪಡೆದ ಬಳುವಳಿಯಲ್ಲ. ನಮ್ಮ ಮಕ್ಕಳಿಗೆ ಸಲ್ಲಿಸಬೇಕಾದ ಋಣ.*

# ೩. ಆಯ್ಕೆಯಿದೆ ನಮ್ಮ ಕೈಯಲ್ಲಿ

– *ನೇಮಿಚಂದ್ರ*

*ಅದೃಷ್ಟ–ದುರಾದೃಷ್ಟಗಳ ಏರಿಳಿತವು ಮನುಷ್ಯನ ಬದುಕಿನಲ್ಲಿ ಸರ್ವೇಸಾಮಾನ್ಯ. ಆದರೂ ಕಷ್ಟ, ದು:ಖ, ಸೋಲು, ನಿರಾಸೆಗಳು ಬಂದಾಗ ಹತಾಶೆಗೊಂಡ ಮನಸ್ಸು ದುರಾದೃಷ್ಟವನ್ನು ನಿಂದಿಸುವುದೇ ಹೆಚ್ಚು. ಛಲದಿಂದ ಬದುಕನ್ನು ಎದುರಿಸಿ ಗೆಲ್ಲುವ ಹಲವು ಆಯ್ಕೆಗಳನ್ನು ನಮಗೆ ಬದುಕು ಕೊಟ್ಟಿದೆ. ನಿರಾಸೆಯ ಮಡಿಲಿಗೆ ಬೀಳದೆ ಎಚ್ಚರಿಕೆಯ ಎಲ್ಲೆಯಲ್ಲಿ ಬದುಕನ್ನು ಬದಲಿಸಿಕೊಳ್ಳುವ, ಸಾಧಿಸುವ ತಾಳ್ಮೆ, ಸಹನೆಗಳ ಅಗತ್ಯವನ್ನು ಪ್ರತಿಪಾದಿಸುವ ಅನುಭವ ಕಥನವೊಂದು ಇಲ್ಲಿದೆ.*

–೧–

'ಏನ್ ಮಾಡೋಕಾಗುತ್ತೆ ಎಲ್ಲಾ ಹಣೆ ಬರಹ, ಆಗೋದು ಆಗೇ ಆಗುತ್ತೆ' ಎಂದಾಗೆಲ್ಲ ನನಗೆ ರೇಗಿ ಹೋಗುತ್ತದೆ. ನಿಜ ಕೆಲವೊಮ್ಮೆ ಆಗುವುದನ್ನು ತಡೆಯಲು ಆಗದಿರಬಹುದು. ಆದರೆ ಪ್ರಯತ್ನಿಸಬಹುದಲ್ಲ. 'ಅದೃಷ್ಟ' ವನ್ನೇ ಅವಲಂಬಿಸಿ ಬದುಕಲು ಸಾಧ್ಯವೆ?

ನಾಲ್ಕು ವರ್ಷಗಳ ಹಿಂದೆ, ರಜೆಗೆಂದು ಮೈಸೂರಿನ ಅಮ್ಮನ ಮನೆಗೆ ಸಕುಟುಂಬ ಸಮೇತಳಾಗಿ ಹೋಗಿದ್ದೆ. ಆ ರಾತ್ರಿ ಇದ್ದಕ್ಕಿದ್ದಂತೆ ನನ್ನ ಗಂಡ ಕೀರ್ತಿಗೆ ಎಲ್ಲಿಲ್ಲದ ಕೆಳಹೊಟ್ಟೆಯ ನೋವು. ಅದೆಲ್ಲೋ ಬೆನ್ನ ಹಿಂಬದಿಯಲ್ಲಿ ಹುಟ್ಟಿ, ಕಿಬ್ಬೊಟ್ಟೆಯವರೆಗೆ ಹರಡಿ ನಿಂತ ನೋವಿನಲ್ಲಿ ಒದ್ದಾಡತೊಡಗಿದರು. ಮಿಷನ್ ಆಸ್ಪತ್ರೆಗೆ ಓಡಿದ್ದಾಯ್ತು. ಸೋನೋಗ್ರಫಿ ಮಾಡಿ '೮ ಮಿ.ಮೀ. ಉದ್ದದ ಮೂತ್ರಪಿಂಡದ ಕಲ್ಲಿದೆ' ಎಂದು ತಿಳಿಸಿದರು. ಎರಡು ದಿನದ ಅನಂತರ ಶಸ್ತ್ರಚಿಕಿತ್ಸೆಗೆ ದಿನಾಂಕ ನಿಗದಿಯಾಯಿತು, ನೋವು ಕಡಿಮೆ ಮಾಡಲು ಮಾತ್ರೆ ಕೊಟ್ಟು ಕಳುಹಿಸಿದರು. ಮಾತ್ರೆ ತೆಗೆದುಕೊಂಡು ನನ್ನವರು ಮಲಗಿದಂತೆ, ನಾನು ಮನೆಯಿಂದ ಹೊರಬಿದ್ದೆ.

ಈ 'ಕಿಡ್ನಿ ಸ್ಟೋನ್' ಯಾಕಾಗುತ್ತೆ ತಿಳಿದುಕೊಳ್ಳಬೇಕಿತ್ತು. 'ಅಯ್ಯೋ ಕೆಲವರಿಗೆ ಆಗುತ್ತೆ, ಕೆಲವರಿಗೆ ಇಲ್ಲ, ಅವರವರ ಅದೃಷ್ಟ' ಇಂಥ ಉತ್ತರಗಳು ನನಗೆ ತೃಪ್ತಿ ನೀಡಲಿಲ್ಲ. ಯಾರ್‍ಯಾರಿಗೆ 'ಕಿಡ್ನಿ ಸ್ಟೋನ್' ಆಗಿತ್ತು ಅಕ್ಕಪಕ್ಕದಲ್ಲಿ ವಿಚಾರಿಸಿದೆ. ಎದುರು ಮನೆಯ ಕಮಲಮ್ಮ ಮೇಡಂಗೆ ಆಗಿತ್ತು ಎಂದು ಕೇಳಿ ಅವರ ಮನೆಗೆ ಹೋದೆ. 'ಸಾಮಾನ್ಯವಾಗಿ ಗಂಡಸರಲ್ಲಿ ಮೂತ್ರಪಿಂಡದ ಕಲ್ಲುಗಳು ಹೆಚ್ಚು ಕಾಣಿಸಿಕೊಳ್ಳುವುದನ್ನು ನೋಡಿದ್ದೆ, ನಿಮಗೆ ಹೇಗೆ ಬಂತು ಮೇಡಂ?' ಅಂತಾ ಕೇಳಿದೆ. ಅವರ ಶಾಲೆಯಲ್ಲಿ ಮಹಿಳೆಯರಿಗೆ ಶೌಚಾಲಯವಿರಲಿಲ್ಲ. ಹಾಗಾಗಿ ಬೆಳಗ್ಗೆ ಮನೆಯಿಂದ ಹೊರಟ ಮೇಲೆ, ಮತ್ತೆ ಸಂಜೆ ಹಿಂದಿರುಗಿ ಬರುವವರೆಗೂ ಜಲಬಾಧೆಯನ್ನು ತಡೆದುಕೊಳ್ಳದೆ ಬೇರೆ ದಾರಿ ಇರಲಿಲ್ಲ. ನೀರು ಕುಡಿದರೆ ಶೌಚಾಲಯಕ್ಕೆ ಹೋಗಬೇಕಾಗುತ್ತದೆ ಎಂದು ಈ ಮಹಿಳೆ ದಿನವೆಲ್ಲ ನೀರು ಕುಡಿಯುವುದನ್ನೇ ಬಿಟ್ಟಿದ್ದರು. ಒಂದು ದಿನ ಹೆರಿಗೆ ನೋವನ್ನು ಮೀರಿಸಿದ ನೋವಿನಿಂದ ಬೊಬ್ಬೆ ಇಟ್ಟು ವೈದ್ಯರಲ್ಲಿ ಪರಿಶೀಲಿಸಿದಾಗ ಮೂತ್ರಪಿಂಡದ ಕಲ್ಲುಗಳಿರುವುದು ತಿಳಿದುಬಂತು. ಒಮ್ಮೆ ಅದರಿಂದ ಪಾರಾದ ಮೇಲೆ, ವೈದ್ಯರ ಸಲಹೆಯಂತೆ ಯಥೇಚ್ಛವಾಗಿ ನೀರು ಕುಡಿಯುವ ಅಭ್ಯಾಸ ಮಾಡಿಕೊಂಡರು. ವೈದ್ಯರು ಹೇಳಿದ್ದ ಕೆಲವು ಆಹಾರದ ಬದಲಾವಣೆಗಳನ್ನೂ ಜಾರಿಗೆ ತಂದರು. ಕಳೆದ ಇಪ್ಪತ್ತು ವರ್ಷಗಳಲ್ಲಿ ಮತ್ತೆ ಅವರಿಗೆ ಮೂತ್ರಪಿಂಡದ ಕಲ್ಲು ಕಾಣಿಸಿರಲಿಲ್ಲ.

ಮೂಲೆಮನೆ ಮುದ್ದೇಗೌಡರಿಗೂ ಮೂತ್ರಪಿಂಡದ ಕಲ್ಲಾಗಿತ್ತು ಎಂದು ತಿಳಿದಾಗ, ಅವರ ಮನೆಗೂ ಹೋದೆ. 'ಓಹ್ ಈಗದೇನೂ ದೊಡ್ಡ ಆಪರೇಷನ್ ಅಲ್ಲಮ್ಮ. ನಾನು ನಾಲ್ಕು ಬಾರಿ ಮಾಡಿಸಿಕೊಂಡಿದ್ದೇನೆ' ಎಂದು ಅಂಗಿ ಎತ್ತಿ ತೋರಿಸಿದರು. ಎರಡು ದೊಡ್ಡದಾಗಿ ಕೊಯ್ದ ಗಾಯದ ಗುರುತು, ಇನ್ನೆರಡು ಸಣ್ಣದು. 'ಮೊದಲೆಲ್ಲ ಹೀಗೆ ಕತ್ತರಿಸುತ್ತಿದ್ದರು, ಈಗ ನೋಡಿ ಲೇಸರ್ ಬಂದು ತುಂಬ ಸುಲಭ' ಹೇಳಿದರು. 'ಅಲ್ಲ ಅಷ್ಟು ಬಾರಿ ಕಲ್ಲು ಫಾರ್ಮ್ ಆಯ್ತಾ?' ಕೇಳಿದೆ. 'ಅಯ್ಯೋ ಒಮ್ಮೆ ಬಂದಮೇಲೆ ಆಗ್ತಾನೇ ಇರುತ್ತೆ, ಏನು ಮಾಡೋಕಾಗುತ್ತೆ?' ಉದಾಸೀನದಿಂದ ಹೇಳಿದರು. 'ನೀರು ಕುಡಿದ್ರೆ ಹತೋಟಿಗೆ ಬರುತ್ತೆ ಅಂತಾರೆ.....?' ನಾನು ಹೇಳಿದೆ. 'ಅಯ್ಯೋ ಅದೆಲ್ಲ ಪಥ್ಯ ಯಾರು ಮಾಡೋಕೆ ಆಗುತ್ತೆ? ಬಾಡು ತಿನ್ಬೇಡಿ, ಹಾಲಿನ ಪದಾರ್ಥಗಳನ್ನು ಜಾಸ್ತಿ ಸೇವಿಸಬೇಡಿ, ಸದಾ ನೀರು ಕುಡೀರಿ ಅಂತಾರೆ. ಅದೆಲ್ಲ ಆಗೋ ಮಾತಲ್ಲ ಬಿಡಿ' ಎಂದು ತಲೆ ಕೊಡವಿದರು. ಹಿಂತಿರುಗಿ ಬಂದು ಕೀರ್ತಿಗೆ ಹೇಳಿದೆ. 'ನೋಡು, ನಿನ್ನ ಎದುರು ಎರಡು ಆಯ್ಕೆಗಳಿವೆ. ಏನೂ ಮಾಡದೆ ಮುದ್ದೇಗೌಡರ ತರಹ ಎರಡೆರಡು ವರ್ಷಕ್ಕೆ ಆಪರೇಷನ್ ಮಾಡಿಸಿಕೊಳ್ಳೋದು. ಇಲ್ಲ, ಕಮಲಮ್ಮ ಮೇಡಂ ತರಹ ಇನ್ನು ಮೇಲೆ ಚೆನ್ನಾಗಿ ನೀರು ಕುಡಿಯೋದು. ಮೊಳದುದ್ದ ಪಂಜಾಬಿ ಲೋಟದಲ್ಲಿ ಹಾಲು ಕುಡಿಯೋದು ಕಡಿಮೆ ಮಾಡು. ೮ ಮಿ.ಮೀ. ಕಲ್ಲು ಈಗ ಕರಗೋದು ಕಷ್ಟ. ಆದರೆ ಇದೇ ಮೊದಲ ಮತ್ತು ಕೊನೆಯ ಆಪರೇಷನ್ ಆಗ್ಬೇಕು, ಈಗಿಂದ್ಲೇ ನೀರು ಕುಡಿಯೋಕೆ ಶುರು ಮಾಡೋಣ, ಎಳನೀರು ತರ್ತೀನಿ' ಎಂದು ಹೊರಟೆ. 'ಅದೆಲ್ಲ ಆಮೇಲೆ ಆರಂಭಿಸೋಣ, ಈಗ ಕುಡಿದ ತಕ್ಷಣ ಕಲ್ಲೇನೂ ಕರಗೋಲ್ಲ' ಬೇಸರದಿಂದ ಕೀರ್ತಿ ಹೇಳಿದರು. 'ಕರಗದೆ ಇರಬಹುದು, ಈಗಿನಿಂದಲೇ ಅಭ್ಯಾಸ ಮಾಡಿಕೋ' ಗದರಿದೆ. ಕೊಳದಪ್ಪಲೆ ನೀರು ತಂದು ಇಟ್ಟೆ. ಎಳನೀರು, ಬಾರ್ಲಿ ವಾಟರ್ ಸುರಿದೆ. ಎರಡು ದಿನ ನೀರು ಕುಡಿದೂ ಕುಡಿದೂ ನೀರಿನಲ್ಲಿ ಕೀರ್ತಿ ತೇಲಿ, ಮುಳುಗಿದ್ದರು. ಆಪರೇಷನ್ ದಿನ ಬಂತು. ಆಸ್ಪತ್ರೆಗೆ ಅಡ್ಮಿಟ್ ಆದದ್ದಾಯ್ತು. ಇನ್ನೇನು ಆಪರೇಷನ್ ಥಿಯೇಟರ್‌ಗೆ ಕರೆದೊಯ್ಯಬೇಕು. ಕಲ್ಲು ಇರುವ ಸ್ಥಳವೇನಾದರೂ ಚಲಿಸಿದ್ದರೆ ತಿಳಿಯಲು ಸೋನಗ್ರಫಿ ರೂಮಿಗೆ ಕರೆದೊಯ್ದರು. ಹುಡುಕಿಯೇ ಹುಡುಕಿದರು, ಎಲ್ಲಿ ಮೂತ್ರಪಿಂಡದ ಕಲ್ಲು? ಕಾಣಲೇ ಇಲ್ಲ, ಎರಡೇ ದಿನದಲ್ಲಿ ಮೊಗೆದು ಸುರಿದು ಕುಡಿದ ನೀರಿನಲ್ಲೆಲ್ಲೋ ಕರಗಿಹೋಗಿತ್ತು. ಅಂದಿನಿಂದ ನೀರಿನ ಮಹಿಮೆ, ನನ್ನ ಸಲಹೆಯ ಮಹಿಮೆ ಅರಿತ ಪತಿ ನೀರು ಕುಡಿದೂ ಕುಡಿದೂ ಇಲ್ಲಿಯವರೆಗೂ ಮತ್ತೆ ಹೊಟ್ಟೆನೋವು ಎಂದಿಲ್ಲ. ಆಯ್ಕೆ ನಮ್ಮ ಕೈಯಲ್ಲಿದೆ.

–೨–

ಅದೃಷ್ಟ–ಆಯ್ಕೆ ಪ್ರಶ್ನೆ ಬಂದಾಗ ನನಗೆ ಸೀತಾ ಜ್ಞಾಪಕಕ್ಕೆ ಬರುತ್ತಾಳೆ. ನಾನು ಮೈಸೂರಿನಲ್ಲಿ ಹೈಸ್ಕೂಲು ಓದುತ್ತಿರುವಾಗ ಪರಿಚಯವಾದವಳು. ನಮ್ಮ ತಂದೆ ಮತ್ತು ಆಕೆಯ ತಂದೆ ಇಬ್ಬರೂ ಕಾಲೇಜು ಪ್ರಾಧ್ಯಾಪಕರಾಗಿದ್ದರು. ಹಾಗಾಗಿ ನಮ್ಮ ಮನೆಗಳ ನಡುವೆ ಸ್ನೇಹ ಮೂಡಿತ್ತು. ನಮ್ಮಿಬ್ಬರ ಮನೆಯಲ್ಲೂ ಗಂಡು–ಹೆಣ್ಣು ಭೇದವಿಲ್ಲದೆ 'ಎಷ್ಟು ಬೇಕಾದರೂ ಓದಿಸಲು' ಸಿದ್ಧರಿದ್ದ ಅಪ್ಪಂದಿರು. ಹೈಸ್ಕೂಲಿನಿಂದಲೇ ಇಂಜಿನಿಯರ್ ಆಗಬೇಕೆಂದು ಹಟ ಹಿಡಿದು ನಾನು ಓದತೊಡಗಿದ್ದೆ. ಸೀತಾ ಮಾತ್ರ ಓದಿನಲ್ಲಿ ಆಸಕ್ತಿ ತೋರಿಸಲಿಲ್ಲ. ಎಸ್.ಎಸ್.ಎಲ್.ಸಿ.ಯಲ್ಲಿ ಎಲ್ಲ ವಿಷಯದಲ್ಲೂ ಫೇಲ್ ಆದಳು. ಮತ್ತೊಮ್ಮೆ ಕಟ್ಟುವ ತಾಪತ್ರಯಕ್ಕೇ ಹೋಗಲಿಲ್ಲ. ಸದಾ ಯಾರಾದರೂ ಗೆಳತಿಯನ್ನು ಜೊತೆ ಮಾಡಿಕೊಂಡು ಮಾರ್ಕೆಟ್, ಸಿನೆಮಾ ಎಂದು ಸುತ್ತುವಳು. ವರ್ಷಗಳು ಉರುಳಿದವು, ನಾನು ಸಂಶೋಧನೆಗೆಂದು ಬೆಂಗಳೂರಿನ ಟಾಟಾ ಇನ್‌ಸ್ಟಿಟ್ಯೂಟಿಗೆ ಬಂದೆ. ಸೀತಾ ವಿವಾಹವಾಗಿ ಬೆಂಗಳೂರು ಸೇರಿದ್ದಳು. ಸೀತಾ ತುಂಬ ಸುಂದರವಾದ ಹುಡುಗಿ. ಆದರೆ 'ಹುಡುಗಿಗೆ ಒಂದು ಡಿಗ್ರಿ ಆದರೂ ಆಗಿರಬೇಕು' ಎಂದು ಬಯಸುವ ಕಾಲದಲ್ಲಿ, ಚೆನ್ನಾಗಿ ಓದಿದ, ಕೈ ತುಂಬಾ ಸಂಬಳ ತರುವ ಹುಡುಗ ಸಿಗುವುದು ಕಷ್ಟವಾಯಿತು. ಸೀತಾಗೆ ಗಂಡನ ಮನೆಗೆ ಹೊಂದಿಕೊಳ್ಳಲು ಆಗಲೇ ಇಲ್ಲ. 'ಇಷ್ಟು ಸಣ್ಣ ಮನೆ, ಅದಿಲ್ಲ, ಇದಿಲ್ಲ. ನಮ್ಮ ಮನೆ ಮೈಸೂರಿನಲ್ಲಿ ಹೇಗಿತ್ತು....' ನೂರು ದೂರು ಹಿಡಿದು ವಾರವಾರಕ್ಕೆ ನನ್ನನ್ನು ಹುಡುಕಿ ಇನ್‌ಸ್ಟಿಟ್ಯೂಟಿಗೆ ಬರುತ್ತಿದ್ದಳು. 'ಸುಮ್ಮನೆ ದೂರು ಹೇಳುತ್ತಾ ಕೂರೋ ಬದಲು, ನೀನೇನಾದರೂ ಮಾಡು. ಎಸ್.ಎಸ್.ಎಲ್.ಸಿ. ಕಟ್ಟು, ಟೈಪಿಂಗ್ ಏನಾದರೂ

ಕಲಿ....' ನೂರು ದಾರಿಗಳಿದ್ದರೂ, ಅವೆಲ್ಲಾ ಸೀತಾಗೆ ಬಲು ಪ್ರಯಾಸದ್ದಾಗಿ, ಬಲು ನಿಧಾನದ್ದಾಗಿ ಕಾಣುತ್ತಿತ್ತು. 'ತಟ್ಟನೆ ಎಲ್ಲ ಸರಿಹೋಗಿಬಿಡಬೇಕು' ಎಂದು ಬಯಸುತ್ತಿದ್ದಳು. 'ಕೈತುಂಬ ಸಂಪಾದಿಸಿ ತಂದು ಹಾಕಿ ಹೆಂಡ್ತಿನಾ ಚೆನ್ನಾಗಿ ಇಟ್ಟುಕೊಳ್ಳುವುದು ಗಂಡನ ಜವಾಬ್ದಾರಿ' ಎಂದು ಬಲವಾಗಿ ನಂಬಿದ ಈ ಹುಡುಗಿ, ತನ್ನ ಕಿರುಬೆರಳನ್ನು ಎತ್ತಲೂ ಸಿದ್ದವಿರಲಿಲ್ಲ. ಇರುವುದು ಆಕೆಗೆ ಸಾಲುತ್ತಿರಲಿಲ್ಲ. ಬೇಕು ಅಂದದ್ದನ್ನು ದುಡಿದು ಗಳಿಸಲು ಸಿದ್ಧವಿರಲಿಲ್ಲ. ಕಾಲ ಸರಿಯಿತು. ನನ್ನ ಸಂಶೋಧನೆ ಮುಗಿದು, ಕೆಲಸ ಹಿಡಿದಿದ್ದೆ. ಬಾಡಿಗೆ ಮನೆಯಲ್ಲಿ ರೋಸಿ, ಬ್ಯಾಂಕ್ ಸಾಲ ಪಡೆದು ಸಣ್ಣ ಫ್ಲಾಟ್ ಕೊಂಡಿದ್ದೆ. ಒಂದು ದಿನ ಮನೆಗೆ ಬಂದ ಸೀತಾ 'ನೀನು ಬಿಡೆ, ತುಂಬ ಅದೃಷ್ಟವಂತೆ' ಎಂದು ಹಲುಬಿದಳು. 'ಖಂಡಿತ ನಾನು ಅದೃಷ್ಟವಂತೆ ಕಣೆ, ನಮ್ಮ ಭಾರತದಲ್ಲಿ ಎಷ್ಟು ಜನ ಹೆಣ್ಣು ಮಕ್ಕಳಿಗೆ ಓದೋ ಅವಕಾಶ ಸಿಗುತ್ತೆ ಹೇಳು. ವಿದ್ಯಾವಂತರ ಕುಟುಂಬದಲ್ಲಿ ಹುಟ್ಟಿದೆನಲ್ಲ ಅದು ನನ್ನ ಅದೃಷ್ಟ. ಎಷ್ಟು ಬೇಕಾದರೂ ಓದಿಸ್ತೇನೆ ಅಂದ ಅಪ್ಪ ಇದ್ದಾರಲ್ಲ ಅದು ನನ್ನ ಅದೃಷ್ಟ . ಆದರೆ ಹುಚ್ಚಿ, ಈ ಅದೃಷ್ಟ ನಿನಗೂ ಇತ್ತಲ್ಲೆ?' ಎಂದುಬಿಟ್ಟೆ. ಅವಳಿಗೆ ನನ್ನ ಹೇಳಿಕೆ ಸರಿ ಕಾಣಲಿಲ್ಲ. ಅವಳಿಗೆ ಬದುಕೆಲ್ಲವೂ ಅದೃಷ್ಟದ ಆಟದಂತೆ ಕಾಣುತ್ತಿತ್ತು. ತನ್ನದು ಹಣೆಬರಹ, ದುರದೃಷ್ಟ ಅಂತ ಹಲುಬಿದಳು. ಅವಳ ಮದುವೆ ಹೆಚ್ಚು ದಿನ ಉಳಿಯಲಿಲ್ಲ. ಅವಳ ಬದುಕು ದುರಂತದಲ್ಲಿಯೇ ಕೊನೆಗೊಂಡಿತ್ತು.

–೩–

ಬಹಳಷ್ಟು ಬಾರಿ ಯೋಚಿಸುತ್ತೇನೆ, ಅದೃಷ್ಟ ಎಂದರೇನು? ಅತಿ ಕಡಿಮೆ ಸಂಭವನೀಯತೆ ಇರುವ ಘಟನೆ ನಡೆದಾಗ, ಅದು ಒಳ್ಳೆಯದಿದ್ದರೆ ಅದನ್ನು ಅದೃಷ್ಟ ಎನ್ನುತ್ತೇವೆ. ಕೆಲವು ತಿಂಗಳ ಹಿಂದೆ ನಮ್ಮ ಕಾರ್ಖಾನೆಗೆ ಹೋಗುವ ಏರ್‌ಪೋರ್ಟ್ ರಸ್ತೆಯಲ್ಲಿ ಒಂದು ಭಯಂಕರ ಅಪಘಾತವಾಗಿತ್ತು. ಕಾರೊಂದು ಇಬ್ಭಾಗವಾಗಿ, ಜಜ್ಜಿ ಹೋಗಿದ್ದ ರೀತಿ ನೋಡಿ 'ಒಳಗಿದ್ದವರಾರೂ ಉಳಿದಿರೋಲ್ಲ' ಅಂದುಕೊಂಡಿದ್ದೆವು. ಮರುದಿನ ಪತ್ರಿಕೆ ನೋಡುತ್ತಿದ್ದೇನೆ, ಆ ಕಾರಲ್ಲಿ ಕುಳಿತ ಮನುಷ್ಯ ಜೀವದೊಂದಿಗೆ ಬಚಾವಾಗಿದ್ದ! ಅದು ಅದೃಷ್ಟ. ಅದೇ ಚಾಮರಾಜಪೇಟೆಯಲ್ಲಿದ್ದ ನಮ್ಮ ನೆಂಟರ ಹುಡುಗ, ಫುಟ್‌ಪಾತ್ ಮೇಲೆ ನಿಂತಿದ್ದರೂ, ಲಾರಿಯೊಂದು ನಿಯಂತ್ರಣ ತಪ್ಪಿ ಬಂದು ಹೊಡೆದು, ಸ್ಥಳದಲ್ಲೇ ಮೃತನಾಗಿದ್ದ. ಅದು ದುರದೃಷ್ಟ. ಬದುಕಿನಲ್ಲಿ ಅಪರೂಪಕ್ಕೆ ಇಂತಹ ಅದೃಷ್ಟ, ದುರದೃಷ್ಟದ ಘಟನೆಗಳು ಘಟಿಸುತ್ತವೆ. ಆದರೆ ಅದೃಷ್ಟವನ್ನೇ ಅವಲಂಬಿಸಿ ಬದುಕಲು ಹೊರಟವರು ಜೂಜುಕೋರರಾಗುತ್ತಾರೆ.

ಬದುಕು ಸದಾ ಅದೃಷ್ಟಗಳನ್ನು ನಮ್ಮತ್ತ ಎಸೆಯದಿದ್ದರೂ, ಬದುಕು ನೂರು, ಸಾವಿರ ಅವಕಾಶಗಳನ್ನು ನಮ್ಮೆದುರು ತೆರೆಯುತ್ತದೆ. ಎಂಥ ಕೆಟ್ಟ ಸಂದರ್ಭದಲ್ಲೂ ನಮ್ಮೆದುರು ಆಯ್ಕೆಗಳಿರುತ್ತವೆ. ದಿನಾ ಬಡಿಯುವ ಗಂಡನನ್ನು ಪಡೆದು ಕ್ರೌರ್ಯ–ಹಿಂಸೆಯ ಮದುವೆಯಲ್ಲಿ ಸಿಕ್ಕಿಬಿದ್ದಿದ್ದ, ಕೇವಲ ಹತ್ತನೇ ತರಗತಿ ಓದಿದ್ದ, ಮೂರು ಸಣ್ಣಮಕ್ಕಳ ತಾಯಿ ಫ್ಲೇವಿಯಾ "ತಾನು ಓದಿಲ್ಲ, ತವರಿನ ಸಂಪತ್ತಿಲ್ಲ, ಬೆಂಬಲಕ್ಕೆ ಯಾರಿಲ್ಲ, ಮೂರು ಮಕ್ಕಳು, ಬಡಿಸಿಕೊಳ್ಳದೆ ಬೇರೆ ಮಾರ್ಗವಿಲ್ಲ" ಎಂದು ಕೈಕಟ್ಟಿ ದುರದೃಷ್ಟಕ್ಕೆ ಹಲುಬಿ ಕೂರಲಿಲ್ಲ. ಅವರೆದುರು ಆಯ್ಕೆಗಳಿದ್ದವು. ಅಂತಹ ಕೆಟ್ಟ ಸಂದರ್ಭದಲ್ಲೂ, ನಲವತ್ತರ ವಯಸ್ಸಿನಲ್ಲಿ ವಿದ್ಯಾಭ್ಯಾಸ ಮುಂದುವರೆಸಿ ಮುಂಬಯಿಯ ಪ್ರಸಿದ್ಧ ನ್ಯಾಯವಾದಿಯಾದರು. ಮೂರು ಮಕ್ಕಳನ್ನು ಮುಂದೆ ತಂದರು.

'ವರದಕ್ಷಿಣೆ ಕೊಡದೆ ಮದುವೆಗೆ ಬೇರೆ ಮಾರ್ಗವಿಲ್ಲ' ಎಂದುಕೊಂಡ ನಿಶಾಶರ್ಮ, ಹಸೆಯೇರುವ ಸಮಯದಲ್ಲಾದರೂ 'ತನಗೆ ದುರಾಸೆಯ ಈ ಹುಡುಗನನ್ನು ನಿರಾಕರಿಸುವ ಆಯ್ಕೆ ಇದೆ' ಎಂದು ಕಂಡುಕೊಂಡಳು.

ಬದುಕು ನಮ್ಮೆದುರು ನೂರು ದಾರಿಗಳನ್ನು ತೆರೆದಿದೆ. ನಮ್ಮಂಥ ಬಹುಪಾಲು ಮಧ್ಯಮ ವರ್ಗದವರ ಎದುರು ನೂರು ಸಾವಿರ ಆಯ್ಕೆಗಳಿವೆ. ಓದುವ ಆಯ್ಕೆ, ಜರ್ದಾ ಜಗಿಯದೆ ಇರುವ ಆಯ್ಕೆ, 'ಪ್ಲೇವಿನ್' ಚಟಕ್ಕೆ

ಬೀಳದೆ ಆಯ್ಕೆ, ವರದಕ್ಷಿಣೆ ಇಲ್ಲದೆ ಮದುವೆಯಾಗುವ ಆಯ್ಕೆ, ಅಂತಹ ಪುಣ್ಯಾತ್ಮ ಸಿಗದಿದ್ದರೆ ಮದುವೆ ಆಗದೆ ಇರುವ ಆಯ್ಕೆ.... ಬದುಕು ನಮ್ಮೆದುರು ನೂರು ಅವಕಾಶಗಳನ್ನು ಇಟ್ಟಿದೆ, ಬಳಸಿಕೊಳ್ಳಬೇಕಷ್ಟೆ. ನೂರು ಹಾದಿಯನ್ನು ಹಾಸಿದೆ, ಎದ್ದು ನಡೆಯಬೇಕಷ್ಟೆ.

## ಲೇಖಕರ ಪರಿಚಯ:



**ಶ್ರೀಮತಿ ನೇಮಿಚಂದ್ರ** (ಜನನ : ೧೬-೭-೧೯೫೯) ಎಚ್.ಎ.ಎಲ್.ನಲ್ಲಿ ಹಿರಿಯ ಇಂಜಿನಿಯರ್ ಆಗಿದ್ದಾರೆ. ತಂದೆ: ಶ್ರೀ ಜಿ. ಗುಂಡಪ್ಪ, ತಾಯಿ: ಶ್ರೀಮತಿ ತಿಮ್ಮಕ್ಕನವರು. ಸ್ತ್ರೀಸಂವೇದನೆಯುಳ್ಳ ಕಥೆಗಾರ್ತಿ ಎನಿಸಿರುವ ಇವರು ಉದಯವಾಣಿ ದಿನಪತ್ರಿಕೆಯ ಬದುಕು ಬದಲಿಸಬಹುದು ಎಂಬ ಅಂಕಣ ಬರಹದಿಂದ ಸುಪ್ರಸಿದ್ಧರಾಗಿದ್ದಾರೆ. ನಮ್ಮ ಕನಸುಗಳಲ್ಲಿ ನೀವಿದ್ದೀರಿ, ಮತ್ತೆ ಬರೆದ ಕತೆಗಳು, ಒಂದು ಶ್ಯಾಮಲ ಸಂಜೆ ಎಂಬ ಕಥಾಸಂಕಲನಗಳನ್ನು ಇವರು ಪ್ರಕಟಿಸಿದ್ದಾರೆ. ನೇಮಿಚಂದ್ರರ ಕಥೆಗಳು ಎಂಬ ಶೀರ್ಷಿಕೆಯಲ್ಲಿ ಇವರ ಸಮಗ್ರ ಕಥೆಗಳು ಬೆಳಕುಕಂಡಿವೆ. ಥಾಮಸ್ ಆಲ್ವಾ ಎಡಿಸನ್, ನೋವಿಗದ್ದಿದ ಕುಂಚ, ಬೆಳಕಿನೊಂದು ಕಿರಣ ಮೇರಿಕ್ಯೂರಿ ಎಂಬ ಜೀವನ ಚರಿತ್ರೆಗಳನ್ನೂ ಒಂದು ಕನಸಿನ ಪಯಣ, ಪೆರುವಿನ ಪವಿತ್ರ ಕಣಿವೆ ಎಂಬೆರಡು ಪ್ರವಾಸ ಕಥನಗಳನ್ನು ನೇಮಿಚಂದ್ರ ರಚಿಸಿದ್ದಾರೆ. ದುಡಿವ ಹಾದಿಯಲ್ಲಿ ಜೊತೆಗಾಗಿ, ನ್ಯಾಯಕ್ಕಾಗಿ ಕಾದ ಭಾಂವ್ರಿದೇವಿ, ನನ್ನಕತೆ-ನಮ್ಮಕತೆ. ಬೆಳಗೆರೆ ಜಾನಕಮ್ಮ, ಮಹಿಳಾಲೋಕ - ಇವು ನೇಮಿಚಂದ್ರರ ಇತರ ಕೃತಿಗಳು. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಮೂರು ಬಾರಿ ಪಡೆದಿರುವ ನೇಮಿಚಂದ್ರರಿಗೆ ಡಾ॥ ಹಾ.ಮಾ. ನಾಯಕ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿ, 'ಯಾದ್ ವಶೇಮ್' ಕಾದಂಬರಿಗೆ 'ಅಕ್ಕ' ಪ್ರಶಸ್ತಿ, ಕಥಾಸಾಹಿತ್ಯಕ್ಕೆ ಖಾದ್ರಿ ಶಾಮಣ್ಣ ಸ್ಮಾರಕ ಟ್ರಸ್ಟ್‌ನ 'ಇಂದಿರಾತನಯ' ಪ್ರಶಸ್ತಿ, ವಿಜ್ಞಾನ, ಸಾಹಿತ್ಯ, ಮಹಿಳಾ ಅಧ್ಯಯನವನ್ನು ಕುರಿತಂತೆ ಮಂಗಳೂರಿನ 'ಸಂದೇಶ ಪ್ರಶಸ್ತಿ' ಹಾಗೂ ಗದಗದ 'ಕಲಾಚೇತನ' ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಸಂದಿವೆ.

## ಶಬ್ದಾರ್ಥ :

ಸೋನಗ್ರಫಿ-ಮೂತ್ರಪಿಂಡದಲ್ಲಿನ ಕಲ್ಲನ್ನು ಪತ್ತೆಹಚ್ಚಲು ನಡೆಸುವ ತಪಾಸಣೆ; ಕಿಡ್ನಿಸ್ಟೋನ್-ಮೂತ್ರಪಿಂಡ ದಲ್ಲಿನ ಕಲ್ಲು; ಜಲಬಾಧೆ-ಮೂತ್ರಬಾಧೆ, ಬಾಯಾರಿಕೆ; ಯಥೇಚ್ಛ-ಬೇಕಾದಷ್ಟು; ಲೇಸರ್-ಕಿರಣ ಚಿಕಿತ್ಸೆ; ಪಥ್ಯ-ನಿಯಮದಂತೆ ತೆಗೆದುಕೊಳ್ಳಬೇಕಾದ ಆಹಾರ, ಔಷಧಿ ಇತ್ಯಾದಿ; ಬಾಡು-ಮಾಂಸ; ಅಡ್ಮಿಟ್-ದಾಖಲಾಗು; ನರ್ಸ್-ಶುಶ್ರೂಷಕರು; ಮೊಗೆದು-ತುಂಬಿ; ತಾಪತ್ರಯ-ತೊಂದರೆ, ಕಷ್ಟ (ಆದಿಭೌತಿಕ, ಆದಿದೈವಿಕ, ಆಧ್ಯಾತ್ಮಿಕ ಎನ್ನುವ ಮೂರು ರೀತಿಯ ಕಷ್ಟಗಳು); ಡಿಗ್ರಿ-ಪದವಿ; ರೋಸಿ-ಬೇಸತ್ತು; ಫುಟ್‌ಪಾತ್-ಪಾದಚಾರಿಗಳು ಚಲಿಸುವ ಪಥ.

## ಟಿಪ್ಪಣಿ :

೧. **ನಿಶಾ ಶರ್ಮಾ :**

ನಿಶಾ ಶರ್ಮ ಇಂಜಿನಿಯರಿಂಗ್ ಓದಿ, ಉದ್ಯೋಗದಲ್ಲಿದ್ದ ಹುಡುಗಿ. ಆಕೆಗೆ ವಿವಾಹ ನಿಶ್ಚಿತವಾಗಿತ್ತು. ಅಸಾಧ್ಯ ಆಸೆಬುರುಕ ಗಂಡಿನ ವರದಕ್ಷಿಣೆಯ ಬೇಡಿಕೆಗಳಿಗೆಲ್ಲ ತಲೆದೂಗಿ ಎರಡೆರಡು ವಾಷಿಂಗ್ ಮೆಷೀನ್, ಟಿವಿ, ಫ್ರಿಜ್ ಏನೆಲ್ಲವನ್ನು ನೀಡಿ ಮನೆಯವರು ಮದುವೆ ನಿಶ್ಚಯ ಮಾಡಿದ್ದರು.

ಮದುವೆಯ ಮಂಟಪದಲ್ಲಿ ಗಂಡಿನ ಕಡೆಯವರು ಮತ್ತಷ್ಟು ವರದಕ್ಷಿಣೆಯನ್ನು ಕೇಳಿ ತಮ್ಮ ಮಿತಿ ಮೀರಿದ ದುರಾಸೆಯನ್ನು ಮೆರೆದಾಗ, ನಿಶಾ ಪ್ರತಿಭಟಿಸಿ ತಾನು ಈ ವಿವಾಹವನ್ನು ಮಾಡಿಕೊಳ್ಳುವುದಿಲ್ಲ ಎಂದು ನಿರಾಕರಿಸಿ ಹೊರ ಬಂದಳು. ಮುಂದೆ ಆಕೆಗೆ ಒಳ್ಳೆಯ ಸಂಬಂಧ ಕೂಡಿಬಂದು ವರದಕ್ಷಿಣೆ ಇಲ್ಲದೆಯೇ ವಿವಾಹವಾಯಿತು.

೨. **ಫ್ಲೇವಿಯಾ :**

ಫ್ಲೇವಿಯಾ ಕನ್ನಡ ನೆಲದ ಹುಡುಗಿ. ಅವರನ್ನು ಓದಿಸಿದ್ದು ಎಸ್.ಎಸ್.ಎಲ್.ಸಿ.ವರೆಗೆ ಮಾತ್ರ. ನಂತರ ಮದುವೆಯಾಗಿತ್ತು. ವಿವಾಹವಾದೊಡನೆ ಪತಿಯೊಡನೆ ಮುಂಬಯಿಗೆ ಬಂದಿದ್ದರು. ಗಂಡನ ಹೊಡೆತ ಬಡಿತದ ಕೌಟುಂಬಿಕ ಹಿಂಸೆಯಲ್ಲಿ ಅವರು ಛಿದ್ರವಾದರು. ಅವರಿಗೆ ಮೂರು ಮಕ್ಕಳು. ಕೌಟುಂಬಿಕ ಹಿಂಸೆ, ನಮ್ಮ ಸಮಾಜದಲ್ಲಿ ಬಹಳಷ್ಟು ಬೆಳಕಿಗೆ ಬಾರದೆ, ಸೆರಗಿನ ಮರೆಯಲ್ಲಿ, ಬಿಗಿದ ತುಟಿಗಳ ಬಿಕ್ಕುಗಳಲ್ಲಿ ತಡೆದು ಮುಗಿಯುತ್ತದೆ. ಕ್ರೌರ್ಯ ತುಂಬಿದ ವಿವಾಹದಲ್ಲೇ ಕಡೆಯವರೆಗೂ ಉಳಿದು ತಮ್ಮೊಡನೇ ತಮ್ಮ ಕರ್ಮಕತೆಯನ್ನು ನಿಗೂಢವಾಗಿ ಉಳಿಸಿ ಹೋಗುವವರೇ ಹೆಚ್ಚು. ಇಂಥ ಹಿಂಸೆಯ ಸಂಬಂಧವನ್ನು ಬದಿಗಿಟ್ಟು ಓದು–ಉದ್ಯೋಗವಿಲ್ಲದಿದ್ದರೂ ಹೊರ ಬಂದು, ತಮ್ಮ ಕಾಲ ಮೇಲೆ ನಿಂತ ಅಪರೂಪದ ದಿಟ್ಟ ಮಹಿಳೆ ಫ್ಲೇವಿಯಾ.

ಫ್ಲೇವಿಯಾ, ತಮ್ಮ ಮಧ್ಯವಯಸ್ಸಿನಲ್ಲಿ ವಿದ್ಯಾಭ್ಯಾಸ ಮುಂದುವರೆಸಿದರು. ಕಾನೂನಿನಂತಹ ಕ್ಲಿಷ್ಟ ವಿಷಯವನ್ನು ಆಯ್ದು ಹುದ್ದೆಗೆ ತಯಾರಾದರು. ತಮ್ಮ ಬದುಕಿನ ಕತ್ತಲನ್ನು ಕೆಡುವುತ್ತಲೆ ಇತರರ ಹಾದಿಯ ಹಣತೆಯಾದರು. ಮಹಿಳಾ ಸಂಘಟನೆ, ಮಹಿಳಾ ಅಧ್ಯಯನದಲ್ಲಿ ತೊಡಗಿದರು. ಎಲ್.ಎಲ್.ಬಿ. ಮತ್ತು ಎಲ್.ಎಲ್.ಎಮ್. ಮುಗಿಸಿದರು. ಕೆಲವೇ ವರ್ಷಗಳಲ್ಲಿ ಅವರ ಶ್ರಮ ಫಲ ನೀಡಿತು. ಅತ್ಯಂತ ಯಶಸ್ವೀ ಲಾಯರ್ ಎನಿಸಿಕೊಂಡದ್ದಲ್ಲದೆ, ಸ್ತ್ರೀವಾದಿ ದೃಷ್ಟಿಕೋನದ ನ್ಯಾಯವಾದಿ ಎಂದೂ ಹೆಸರು ಪಡೆದಿದ್ದಾರೆ.

## : ಅಭ್ಯಾಸ ಭಾಗ :

### ಅ) ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು:

೧. 'ಅದೃಷ್ಟವನ್ನೇ' ಅವಲಂಬಿಸಿ ಬದುಕಲು ಸಾಧ್ಯವೇ?

೨. ಮತ್ತೆ ಅವರಿಗೆ ಮೂತ್ರಪಿಂಡದ ಕಲ್ಲು ಕಾಣಿಸಿರಲಿಲ್ಲ.

೩. "ನೋಡು, ನಿನ್ನ ಎದುರು ಎರಡು ಆಯ್ಕೆಗಳಿವೆ."

೪. "ಈ ಅದೃಷ್ಟ ನಿನಗೂ ಇತ್ತಲ್ಲೆ?"

೫. ಮುಂಬಯಿಯ ಪ್ರಸಿದ್ಧ ನ್ಯಾಯವಾದಿಯಾದರು.

## ಆ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):

೧. ಲೇಖಕಿಗೆ ಯಾವಾಗ ರೇಗಿ ಹೋಗುತ್ತಿತ್ತು?

೨. ಲೇಖಕಿಯ ಪತಿ ಯಾವ ತೊಂದರೆಯಿಂದ ಬಳಲಿದರು?

೩. 'ಕಿಡ್ನಿಸ್ಟೋನ್' ಬಗ್ಗೆ ತಿಳಿಯಲು ಲೇಖಕಿ ಯಾರನ್ನು ಭೇಟಿ ಮಾಡಿದರು?

೪. ಲೇಖಕಿಯ ಪತಿಯನ್ನು ಸೋನಗ್ರಫಿ ರೂಮಿಗೆ ಕರೆದೊಯ್ದುದೇಕೆ?

೫. ಅದೃಷ್ಟದ ಪ್ರಶ್ನೆ ಬಂದಾಗ ಲೇಖಕಿಗೆ ಯಾರು ನೆನಪಾಗುತ್ತಾರೆ?

೬. ದುರಾಸೆಯ ಹುಡುಗನನ್ನು ನಿರಾಕರಿಸಿದವರು ಯಾರು?

## ಇ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):

೧. ಯಾವ ಉತ್ತರಗಳಿಂದ ಲೇಖಕಿಗೆ ತೃಪ್ತಿಯಾಗಲಿಲ್ಲ?

೨. ಕಮಲ ಮೇಡಂ ವೈದ್ಯರ ಯಾವ ಸಲಹೆಯನ್ನು ರೂಢಿಸಿಕೊಂಡರು?

೩. ಮುದ್ದೇಗೌಡರು ಪಥ್ಯದ ವಿಚಾರವಾಗಿ ಹೊಂದಿದ್ದ ನಿಲುವು ಯಾವುದು?

೪. ಸೀತಾಳ ಓದುವ ಆಸಕ್ತಿ ಹೇಗಿತ್ತು?

೫. ಸೀತಾಳ ಬಯಕೆ, ನಂಬಿಕೆಗಳು ಹೇಗಿದ್ದವು?

೬. ತಾನು ಅದೃಷ್ಟವಂತೆಯೆಂದು ಲೇಖಕಿ ಭಾವಿಸಲು ಕಾರಣವೇನು?

## ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ):

೧. ರಜೆಗೆಂದು ಮೈಸೂರಿಗೆ ಹೋದಾಗ ಲೇಖಕಿಯ ಪತಿಗಾದ ತೊಂದರೆಯೇನು?

೨. ಕಮಲಾ ಮೇಡಂಗೆ ಮೂತ್ರಪಿಂಡದಲ್ಲಿ ಕಲ್ಲು ಮೂಡಿದ್ದೇಕೆ?

೩. ಲೇಖಕಿಯ ಪತಿಯ ಮೂತ್ರಪಿಂಡದ ಕಲ್ಲು ಕರಗಿಹೋಗಿದ್ದು ಹೇಗೆ?

೪. ಸೀತಾ ಎಂಬ ಗೆಳತಿಯ ಗುಣ–ಸ್ವಭಾವವನ್ನು ಲೇಖಕಿ ಹೇಗೆ ಚಿತ್ರಿಸಿದ್ದಾರೆ?

೫. ಬದುಕಿನಲ್ಲಿ ಆಯ್ಕೆಗಳು ಮುಖ್ಯ ಎಂಬುದನ್ನು ಲೇಖಕಿ ಹೇಗೆ ನಿರೂಪಿಸಿದ್ದಾರೆ?

## ಭಾಷಾಭ್ಯಾಸ :

೧. ತಲೆಕೊಡವು, ತಲೆದೂಗು, ತಲೆಬಾಗು, ತಲೆತಗ್ಗಿಸು – ಈ ನುಡಿಗಟ್ಟುಗಳಲ್ಲಿರುವ ಅರ್ಥವ್ಯತ್ಯಾಸವನ್ನು ಗಮನಿಸಿ:

ತಲೆಕೊಡವು ಎಂದರೆ ನಿರಾಕರಿಸು; ತಲೆದೂಗು ಎಂದರೆ ಮೆಚ್ಚುಗೆ ಅಥವಾ ಒಪ್ಪಿಗೆ ಸೂಚಿಸು; ತಲೆಬಾಗು ಎಂದರೆ ನಮಸ್ಕರಿಸು ಅಥವಾ ಶರಣಾಗು; ತಲೆತಗ್ಗಿಸು ಎಂದರೆ ಅಪಮಾನ ಅನುಭವಿಸು

ಎಂಬಿತ್ಯಾದಿ ಅರ್ಥಗಳಿವೆ. ಇದೇ ರೀತಿ ತಲೆಬಿಸಿಯಾಗು, ತಲೆ ಮೇಲೆ ಮೆಣಸು ಅರೆ, ತಲೆಹಾಕು, ತಲೆ ಮೇಲೆ ಚಪ್ಪಡಿ ಎಳೆ, ತಲೆತಿರುಗು, ತಲೆಎತ್ತು, ತಲೆದಂಡ ಮುಂತಾದವುಗಳ ಅರ್ಥವ್ಯತ್ಯಾಸವನ್ನು ಗಮನಿಸಿರಿ. ವಾಕ್ಯದಲ್ಲಿ ಅವುಗಳನ್ನು ಪ್ರಯೋಗಿಸುವುದನ್ನು ಅಭ್ಯಾಸ ಮಾಡಿ.

೨. ಕೀರ್ತಿಗೆ, ನೋವಿನಲ್ಲಿ, ಶಾಲೆಯಲ್ಲಿ, ಮನೆಯಿಂದ – ಇವುಗಳ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ.

೩. ಪಠ್ಯದಲ್ಲಿ ಬಂದಿರುವ ಅನ್ಯದೇಶ್ಯ ಪದಗಳನ್ನು ಗುರುತಿಸಿ ಪಟ್ಟಿಮಾಡಿರಿ.

## ಚಟುವಟಿಕೆ :

೧. ಮೂತ್ರಪಿಂಡ ಮತ್ತು ಅದರ ನಿರ್ವಹಣೆಯ ವಿವರಗಳನ್ನು ಸಂಗ್ರಹಿಸಿರಿ.

೨. ಆಯ್ಕೆಯ ಮೂಲಕ ಬದುಕನ್ನು ರೂಪಿಸಿಕೊಳ್ಳುವುದರ ಬಗ್ಗೆ ಒಂದು ಲೇಖನ ರಚಿಸಿ.

೩. ಅದೃಷ್ಟವನ್ನು ನಂಬದೆ, ಆತ್ಮಬಲವನ್ನು ನಂಬಿ ಬದುಕನ್ನು ರೂಪಿಸಿಕೊಂಡ ವ್ಯಕ್ತಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿರಿ.

## ಆಕರ :

ಕೃತಿ : ಬದುಕು ಬದಲಿಸಬಹುದು

ಲೇಖಕರು : ನೇಮಿಚಂದ್ರ

ಪ್ರಕಾಶಕರು : ನವಕರ್ನಾಟಕ ಪ್ರಕಾಶನ;
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ,
ಬೆಂಗಳೂರು – ೫೬೦ ೦೦೧.

## ಹೆಚ್ಚಿನ ಓದಿಗೆ :

೧. 'ನನ್ನ ಕಥೆ... ನಮ್ಮ ಕಥೆ...' ಫ್ಲೇವಿಯಾ ಅವರ ಆತ್ಮಕತೆ, ಕನ್ನಡಕ್ಕೆ ಅನುವಾದ: ನೇಮಿಚಂದ್ರ.

೨. 'ದುಡಿವ ಹಾದಿಯಲ್ಲಿ ಜೊತೆಯಾಗಿ' – ದುಡಿವ ದಂಪತಿಗಳಿಗಾಗಿ ನೇಮಿಚಂದ್ರ ಬರೆದ ಪುಸ್ತಕ.

೩. 'ಹೋರಾಟದ ಹಾದಿಯಲ್ಲಿ ಧೀಮಂತ ಮಹಿಳೆಯರು' – ನೇಮಿಚಂದ್ರ

**ಕತ್ತಲಿನಿಂದ ಬೆಳಕಿನೆಡೆಗೆ ಸಾಗುವ ಪಯಣ
ಭವಿಷ್ಯವನ್ನು ಉಜ್ವಲಗೊಳಿಸುತ್ತದೆ.**

*– ಎಂ.ಕೆ. ಗಾಂಧಿ*

# ೪. ಕನ್ನಡವನ್ನು ಕಟ್ಟುವ ಕೆಲಸ

*– ಹಾ.ಮಾ. ನಾಯಕ*

*ನಮ್ಮ ಹಿರಿಯರನೇಕರು ಈ ನಾಡು-ನುಡಿಗಳನ್ನು ಕಟ್ಟಿ ಬೆಳೆಸಿದ್ದಾರೆ. ಈ ಕಟ್ಟುವ ಕೆಲಸವನ್ನು ಇಂದಿನವರು ಮುಂದುವರೆಸಿಕೊಂಡು ಹೋಗಬೇಕಾಗಿದೆ. ಈ ಕೆಲಸ ಸತತವಾಗಿ ನಡೆಯಬೇಕಾಗಿರುವಂಥದ್ದು. ನಮ್ಮ ಭಾಷೆ-ಸಾಹಿತ್ಯಗಳ ಅಭಿವೃದ್ಧಿಗಾಗಿ, ಕನ್ನಡನಾಡಿನ ಸರ್ವಾಂಗೀಣ ಬೆಳವಣಿಗೆಗಾಗಿ ನಾವೆಲ್ಲರೂ ಸಂಕಲ್ಪ ಬಲದಿಂದ ದುಡಿಯಬೇಕಾಗಿದೆ. ಭಾಷೆ ಬೆಳೆದರೆ ಸಂಸ್ಕೃತಿಯೂ ಬೆಳೆಯುತ್ತದೆ. ಶ್ರೀಮಂತ ಭಾಷೆಯಲ್ಲಿ ಮಾತ್ರವೇ ವಿಚಾರಗಳು ಸ್ಪಂದಿಸಬಲ್ಲವು. ಸಮಾಜದ ಆರೋಗ್ಯ ಪಾಲನೆಯಲ್ಲಿ ಭಾಷೆಯದೂ ಮಹತ್ವದ ಪಾಲಿದೆ. ಭಾಷೆಯ ರಕ್ಷಣೆ ಹಾಗೂ ಸಂವರ್ಧನೆ, ಅದರ ಬಳಕೆ ಹಾಗೂ ಪ್ರಚಾರವನ್ನು ಹೆಚ್ಚಿಸುವುದಕ್ಕೆ ಒಟ್ಟು ಸಮಾಜ, ಸರಕಾರಗಳು ಒಂದಾಗಿ ಸೇರಿ ಕಾರ್ಯಪ್ರವೃತ್ತವಾಗಬೇಕಾಗುತ್ತದೆ. ಭಾಷೆಗೆ ಪ್ರೋತ್ಸಾಹದ ನೀರೆರೆಯಬೇಕಾಗುತ್ತದೆ. ಅದಕ್ಕೆ ಗಾಳಿ, ಬೆಳಕು ದೊರೆಯುವಂತಹ ವಾತಾವರಣವನ್ನು ಕಲ್ಪಿಸಬೇಕಾಗುತ್ತದೆ. ಪರ ಆಕ್ರಮಣದಿಂದ ರಕ್ಷಣೆ ಕೊಡಬೇಕಾಗುತ್ತದೆ. ಇವೆಲ್ಲವೂ ಅನ್ವಯವಾಗುವಂತಹ ಪರಿಸ್ಥಿತಿ ಇಂದು ಕನ್ನಡ ಭಾಷೆಗೆ ಇದೆ.*

*ಡಾ॥ ಹಾ.ಮಾ. ನಾಯಕರು ಕನ್ನಡ ನಾಡು-ನುಡಿಗೆ ಅತ್ಯಗತ್ಯವೂ ಕಾರ್ಯಸಾಧ್ಯವೂ ಆಗಿರುವಂತಹ ಸಲಹೆ-ಸೂಚನೆಗಳನ್ನು ಪ್ರಸ್ತುತ ಲೇಖನದಲ್ಲಿ ನೀಡಿದ್ದಾರೆ. ಭಾಷೆ ಬೆಳೆಯದೆ ಜನ ಬೆಳೆಯುವುದಿಲ್ಲ, ನಾಡೂ ಬೆಳೆಯುವುದಿಲ್ಲ, ಸಾಹಿತ್ಯವೂ ಬೆಳೆಯುವುದಿಲ್ಲ. ಭಾಷೆ-ಸಂಸ್ಕೃತಿಗಳನ್ನು ಬೆಳೆಸಿಕೊಳ್ಳದ ಜನಾಂಗ ಆಂತರಿಕ ಚೈತನ್ಯವನ್ನು ಕಳೆದುಕೊಳ್ಳುತ್ತದೆ. ಅಂತಹ ಜನಾಂಗದ ಹೊರ ಬದುಕು ಬೆಳೆದರೂ ಒಳಬದುಕು ಬರಡಾಗುತ್ತದೆ.*

– ೧ –

**ಕ**ನ್ನಡ ನನ್ನ ಮೊದಲ ಪ್ರೀತಿ; ಎರಡನೆಯ ಪ್ರೀತಿಯೂ ಅದೇ. ಆದ್ದರಿಂದ ಇಲ್ಲಿ ಸವತಿ ಮಾತ್ಸರ್ಯಕ್ಕೆ ಎಡೆ ಇಲ್ಲ. ಕನ್ನಡದ ಪ್ರೀತಿ ನನಗೆ ಎಳವೆಯಿಂದಲೇ ಬಂದದ್ದು. ಸಹಜವಾಗಿ ಬಂದದ್ದು. ಅದು ಯಾವುದೋ ಸಂದರ್ಭದಿಂದ ಪ್ರೇರಿತವಾದುದಲ್ಲ; ಚಳುವಳಿಗಾಗಿ ಹುಟ್ಟಿಕೊಂಡದ್ದಲ್ಲ; ಕೀರ್ತಿ ಕಾಮನೆಗಳನ್ನು ಉದ್ದೇಶಿಸಿದ್ದಲ್ಲ. ನನ್ನ ಕನ್ನಡದ ಪ್ರೀತಿ ಮಾಸ್ತಿ, ಕುವೆಂಪು, ತೀನಂಶ್ರೀ ಅವರ ಪದ್ಯಗಳನ್ನು ಪಠ್ಯಪುಸ್ತಕಗಳಲ್ಲಿ ಓದಿದಾಗ ಸ್ಫುರಿಸಿದ್ದು; ಬಿಎಂಶ್ರೀ, ಆಲೂರು, ಮುದವೀಡರ ಮಾತುಗಳಿಂದ ಕಣ್ಣೊಡೆದ್ದದು; ಕೃಷ್ಣಶಾಸ್ತ್ರೀ, ಅನಕೃ ಅವರ ವಿಚಾರಗಳಿಂದ ರೂಪಿತವಾದದ್ದು; ಮುಂದೆ ಗಾಂಧಿ, ವಿನೋಬಾ ಮೊದಲಾದವರ ಚಿಂತನೆಗಳಿಂದ ಹರಳುಗೊಂಡದ್ದು. ನಾನು ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗ ಆಕಸ್ಮಿಕವಾಗಿ ಹೈದರಾಬಾದ್ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ ಕೈಗೆ ಸಿಕ್ಕಿತು. ಅದರ ಒಂದು ಭಾಗವನ್ನು ಓದುತ್ತಲೇ ಕನ್ನಡದ ಕಾರಣಕ್ಕಾಗಿ ನಾನು ನನ್ನನ್ನು ಒಪ್ಪಿಸಿಕೊಂಡುಬಿಟ್ಟೆ. ಎ.ಆರ್. ಕೃಷ್ಣಶಾಸ್ತ್ರಿಗಳು ಅಲ್ಲಿ ಹೀಗೆ ಹೇಳಿದ್ದರು:

> *"ಏನಾದರೂ ಒಂದು ದುರದೃಷ್ಟದಿಂದ – ಅಂಥ ದುರದೃಷ್ಟ ಬರದಿರಲಿ – ನಮ್ಮ ದೇಶದಲ್ಲಿ ಬೌದ್ಧಧರ್ಮ ಖಿಲವಾಗಿ ನಷ್ಟವಾಗಿ ಹೋದಂತೆ ಸಂಸ್ಕೃತವೂ ಆಗಿಹೋಗುವುದಾದರೆ, ಅದು ಹೊರದೇಶಗಳಲ್ಲಿ ಬದುಕಿರುತ್ತದೆ, ಬಾಳುತ್ತಿರುತ್ತದೆ. ಆದರೆ ಕನ್ನಡ? ಕನ್ನಡಿಗರೇ, ನಿಮ್ಮ ಕನ್ನಡವನ್ನು*

*ಇಂಡಿಯ ದೇಶದ ದಕ್ಷಿಣ ಭಾಗದಲ್ಲಿ ಒಂದು ಅಂಗೈ ಅಗಲ ಬಿಟ್ಟರೆ ಮತ್ತೆಲ್ಲಿಯೂ ನೋಡಲಾರಿರಿ. ನೀವು ಅದನ್ನು ಅಲಕ್ಷ್ಯ ಮಾಡಿದರೆ ಮಿಕ್ಕ ಯಾವ ದೇಶದ ಯಾವ ಜನರೂ ಅದನ್ನು ಎತ್ತಿ ಹಿಡಿಯಲಾರರು. ಅದು ಹೋದರೆ ಹೋಗಲಿ ಎನ್ನುವ ಹಾಗಿದ್ದರೆ ಈ ಕಡೆ ಬಂಗಾಳಕೊಲ್ಲಿ ಇದೆ. ಆ ಕಡೆ ಅರಬ್ಬಿ ಸಮುದ್ರ ಇದೆ; ಗುಡಿಸಿ ಹಾಕಿಬಿಡಿ. ಇತರ ಭಾಷೆಗಳು ಒತ್ತಿಕೊಂಡು ಬರಲಿ, ಆಕ್ರಮಿಸಿಕೊಳ್ಳಲಿ!"*

ಈ ಮಾತುಗಳನ್ನು ಓದುತ್ತ ನನ್ನ ಹದಿಹರಯದ ಮನಸ್ಸಿನಲ್ಲಾದ ಖೇದವನ್ನು, ಭಯವನ್ನು, ಅಸಹಾಯಕತೆಯನ್ನು, ಕ್ರೋಧವನ್ನು ಈ ಹೊತ್ತೂ ಅನುಭವಿಸುತ್ತಿದ್ದೇನೆ. ಕೃಷ್ಣಶಾಸ್ತ್ರಿಗಳು ಇಲ್ಲಿ ಸಂಸ್ಕೃತವನ್ನಷ್ಟೇ ಕೈ ಮಾಡಿ ತೋರಿಸಿರುವರಾದರೂ ಸಂದರ್ಭವು ಕನ್ನಡದ ಎಲ್ಲ ಕುತ್ತುಗಳನ್ನು ಪ್ರಾತಿನಿಧಿಕವಾಗಿ ಸಂಕೇತಿಸುತ್ತದೆಂದು ಇಟ್ಟುಕೊಳ್ಳಬಹುದು.

– ೨ –

ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳು ನಮ್ಮ ದೇಶದ ಪ್ರಾಂತೀಯ ಭಾಷೆಗಳ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತಿವೆ. ಯಾವ ಯಾವ ಭಾಷೆಗೆ ಯಾವ ಯಾವ ಸ್ಥಾನವಿರಬೇಕೋ ಆ ಮರ್ಯಾದೆಯನ್ನು ನಾವು ಮೀರಬಾರದು. ಕರ್ನಾಟಕದಲ್ಲಿ ಕನ್ನಡವೇ ಪ್ರಥಮ, ಪ್ರಧಾನ, ರಾಜ, ರಾಣಿ, ರಾಜಕುಮಾರ ಎಲ್ಲ. ಮಿಕ್ಕ ಯಾವ ಭಾಷೆಯಾದರೂ ಇಲ್ಲಿ ಸೇವಕರ ಸ್ಥಾನದಲ್ಲಿರಬೇಕು. ಪ್ರತಿಯೊಂದು ಹಿಂದಿಯೇತರ ರಾಜ್ಯದಲ್ಲಿರುವ ಕೇಂದ್ರಾಡಳಿತ ಸಂಸ್ಥೆಗಳು, ಉದ್ಯಮಗಳು, ಕಚೇರಿಗಳು ಆಯಾ ಪ್ರಾದೇಶಿಕ ಭಾಷೆಗಳನ್ನು ಬಳಸದಿರುವುದರಿಂದ ತಮ್ಮಷ್ಟಕ್ಕೇ ದ್ವೀಪಗಳಾಗಿ ನಿಂತಿವೆ. ವಿಮಾನದಲ್ಲಿ ಮೊದಲಸಲ ಪ್ರಯಾಣ ಮಾಡಲು ಬಂದಿದ್ದ ನನ್ನ ಮಿತ್ರರೊಬ್ಬರು ಬೆಂಗಳೂರು ವಿಮಾನ ನಿಲ್ದಾಣದಲ್ಲಿ ನನ್ನನ್ನು ಕೇಳಿದರು: "ಇದೇನು ಸಾರ್, ನಾವು ಎಲ್ಲಿದ್ದೇವೆ? ಇಲ್ಲಿ ಒಂದೂ ಕನ್ನಡ ಅಕ್ಷರವೇ ಕಾಣಿಸುವುದಿಲ್ಲವಲ್ಲ!" ನಾನೆಂದೆ: "ಕಾಣಿಸದೆ ಏನು? ಅಲ್ಲಿ ನೋಡಿ ಕಕ್ಕಸ್ಸಿನ ಮೇಲೆ ಕನ್ನಡದಲ್ಲಿ ಗಂಡಸರು ಹೆಂಗಸರು ಎಂದು ಬರೆದಿದ್ದಾರಲ್ಲ!" ಇದು ಕೇಂದ್ರ ಸರ್ಕಾರ ಕನ್ನಡಕ್ಕೆ ತೋರಿಸುವ ಮರ್ಯಾದೆ! ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಕನ್ನಡದಲ್ಲಿ ಸೂಚನೆಗಳಿಲ್ಲದಿದ್ದರೆ, ಇನ್ನು ಯಾವ ಕಡೆ ಇರುವುದು ಸಾಧ್ಯ? ವಿಮಾನ ನಿಲ್ದಾಣದ ಎಲ್ಲ ಪ್ರಕಟಣೆಗಳೂ ಪ್ರಾದೇಶಿಕ ಭಾಷೆಗಳಲ್ಲಿರುವುದು ಅಗತ್ಯ. ಇಂಗ್ಲಿಷ್ ಹಿಂದಿ ಬಾರದವರು ಈ ದೇಶದಲ್ಲಿ ವಿಮಾನ ಪ್ರಯಾಣ ಮಾಡಬಾರದೆ? ಬೆಂಗಳೂರು, ಮಂಗಳೂರು, ಬೆಳಗಾವಿ ವಿಮಾನ ನಿಲ್ದಾಣಗಳಿಂದ ಹೊರಡುವ ಮತ್ತು ಅಲ್ಲಿಗೆ ಬರುವ ವಿಮಾನಗಳೊಳಗಿನ ಪ್ರಕಟಣೆಗಳೂ ಕನ್ನಡದಲ್ಲಿರಬೇಕು. ಇದೇನು ಬಹು ಖರ್ಚಿನ ಭಾರೀ ದೊಡ್ಡ ಕೆಲಸವಲ್ಲ. ಬಹುಭಾಷೆಗಳ ಈ ರಾಷ್ಟ್ರದಲ್ಲಿ ನಾವು ಒಡೆಯದೆ ಬಾಳಬೇಕಾದರೆ ಎಲ್ಲ ಭಾಷೆಗಳ ಸಮಾನ ಬಳಕೆ, ಎಲ್ಲ ಭಾಷೆಗಳಲ್ಲಿ ಸಮಾನ ಗೌರವ ಅತ್ಯಗತ್ಯ. ಕೇಂದ್ರ ಸರ್ಕಾರದ ಕಚೇರಿ ಯಾವ ರಾಜ್ಯದಲ್ಲಿರುತ್ತದೋ ಆ ರಾಜ್ಯದ ಭಾಷೆಯನ್ನು ಅದು ಅಲ್ಲಿನ ಜನರೊಂದಿಗೆ ಮತ್ತು ಸರ್ಕಾರದೊಂದಿಗೆ ಬಳಸಬೇಕು; ಆ ರಾಜ್ಯದಲ್ಲಿರುವ ಕೇಂದ್ರ ಸರ್ಕಾರದ ನೌಕರರು ಆ ರಾಜ್ಯದ ಭಾಷೆಯನ್ನು ಬಲ್ಲವರಾಗಿರಬೇಕು – ಎಂದು ರಾಜಮನ್ನಾರ್ ಸಮಿತಿಯ ವರದಿ ಹೇಳಿದೆ. ಆದುದರಿಂದ ಈ ಭಾಷೆಯ ಸಮಸ್ಯೆ ಕೇಂದ್ರ – ರಾಜ್ಯಗಳ ಸಂಬಂಧದಲ್ಲಿ ಬಹಳ ಮುಖ್ಯ ವಿಷಯವಾಗಿದೆ.

ರೈಲ್ವೇ, ಅಂಚೆ ಮತ್ತು ತಂತಿ ಇಲಾಖೆಗಳೂ ಪ್ರಾದೇಶಿಕ ಭಾಷೆಗಳ ಮೇಲೆ ಸಾಕಷ್ಟು ಮಲತಾಯಿ ಧೋರಣೆ ಬೆಳೆಸಿಕೊಂಡಿವೆ. ಕನ್ನಡ ನಾಡಿನ ಸಣ್ಣ ಪುಟ್ಟ ಊರುಗಳಲ್ಲಿರುವ ರೈಲ್ವೇ ಸ್ಟೇಷನ್ನುಗಳಲ್ಲಿಯೂ ಹಿಂದಿ ಇಂಗ್ಲಿಷ್‌ಗಳೇ ರಾರಾಜಿಸಿದರೆ ನಾವು ನಮ್ಮ ದೇಶದಲ್ಲಿದ್ದೇವೆಂಬ ಭಾವನೆ ಯಾರಲ್ಲಾದರೂ ಬರುವುದು ಸಾಧ್ಯವೆ? ಲೈಫ್ ಇನ್‌ಶ್ಯೂರೆನ್ಸ್ ಕಾರ್ಪೊರೇಷನ್ನಿನಂಥ ಸಂಸ್ಥೆಗಳು, ಬ್ಯಾಂಕುಗಳು ಹೀಗೆ ಕೇಂದ್ರಾಡಳಿತದ ಯಾವ ಸಂಸ್ಥೆಗಳಿಗೆ ಹೋದರೂ ನಾವು ಪರದೇಶಿಗಳೆಂಬ ಭಾವನೆ ಬರುತ್ತದೆ. ಎಲ್ಲಿಯವರೆಗೆ ಈ ಸಂಸ್ಥೆಗಳಲ್ಲಿ ನಮ್ಮದೇ ಭಾಷೆಗಳ

ಬಳಕೆಯಾಗುವುದಿಲ್ಲವೋ ಅಲ್ಲಿಯವರೆಗೂ ಈ ಸಂಸ್ಥೆಗಳು ಜನಜೀವನದಿಂದ ಹೊರಗೇ ಉಳಿಯುತ್ತವೆ. ಎಲ್ಲ ಸೂಚನೆಗಳು, ಎಲ್ಲಾ ಫಾರಂಗಳು, ಎಲ್ಲ ಬರವಣಿಗೆಯ ವ್ಯವಹಾರಗಳು ಕ್ರಮವಾಗಿ ಪ್ರಾದೇಶಿಕ ಭಾಷೆ ಹಿಂದಿ ಮತ್ತು ಇಂಗ್ಲಿಷ್‌ಗಳಲ್ಲಿರಬೇಕು. ಇದೇ ತ್ರಿಭಾಷಾ ಸೂತ್ರದ ಬಳಕೆ.

– ೩ –

ಯಾವ ಭಾಷೆಯ ಹೇರಿಕೆಯೂ ಸರಿಯಲ್ಲ. ಯಾವುದೇ ಭಾಷೆಯ ಕಲಿಕೆಯನ್ನು ತಡೆಯುವುದೂ ಸರಿಯಲ್ಲ. ಆದರೆ ಇದರಲ್ಲಿ ಔಚಿತ್ಯದ ಒಂದು ಪ್ರಶ್ನೆಯಿದೆ. ಒಂದು ಘಟ್ಟದಿಂದ ಮುಂದಕ್ಕೆ ವಿದ್ಯಾರ್ಥಿಗಳು ತಮಗೆ ಬೇಕಾದ ಭಾಷೆಗಳನ್ನು ಆಯ್ದುಕೊಂಡು ಅಭ್ಯಾಸ ಮಾಡುವ ಅವಕಾಶಗಳಿರಬೇಕು. ಆ ಘಟ್ಟದವರೆಗೆ ಮಾತೃಭಾಷೆಯ ಹಾಗೂ ಪ್ರಾದೇಶಿಕ ಭಾಷೆಯ ಕಡ್ಡಾಯ ಶಿಕ್ಷಣ ಕೊಡುವುದು ಸರ್ಕಾರದ ಕರ್ತವ್ಯವಾಗಿರುತ್ತದೆ. ಒಂದು ರಾಜ್ಯದಲ್ಲಿ ನೆಲೆಸಿದವರು ಅಲ್ಲಿನ ಪ್ರಾದೇಶಿಕ ಭಾಷೆಯನ್ನು ಕಲಿಯದೆ ಹೋಗದಂತೆ ನೋಡಿಕೊಳ್ಳುವ ಜವಾಬ್ದಾರಿ ಸರ್ಕಾರದ್ದು. ಅದು ಅಂಥ ಶಿಕ್ಷಣ ಕ್ರಮವನ್ನು ರೂಪಿಸಬೇಕಾಗುತ್ತದೆ. ಸ್ಥಳೀಯ ಭಾಷೆಯನ್ನು ಕಲಿಯದೆ ಹೋದರೆ ಹೊರಗಿನಿಂದ ಬಂದವರು ದ್ವೀಪಜೀವಿಗಳಾಗಿ ಉಳಿಯಬೇಕಾಗುತ್ತದೆ. ಆ ರಾಜ್ಯದ ಜನರೊಂದಿಗೆ ಬೆರೆಯುವುದು ಸಾಧ್ಯವಾಗುವುದಿಲ್ಲ. ಒಂದು ರಾಜ್ಯದ ಎಲ್ಲ ಸೌಲಭ್ಯಗಳನ್ನೂ ಬಳಸಿಕೊಂಡು ಬದುಕುವ ಜನ ಅಲ್ಲಿನ ಭಾಷೆಯನ್ನೂ ಬಳಸುವುದು ಅನಿವಾರ್ಯವಾಗುತ್ತದೆ. ಪ್ರದೇಶ ಭಾಷೆಯ ಕಲಿಕೆ ಮಾತೃಭಾಷಾ ಕಲಿಕೆಗೆ ವಿರೋಧವಾದುದಲ್ಲ. ಅವೆರಡೂ ಪೂರಕವಾದಾಗಲೇ ವಿದ್ಯಾರ್ಥಿಗಳಿಗೆ ತಮ್ಮ ಮನೆ ಮತ್ತು ಆವರಣಗಳ ಪರಿಚಯ ಸ್ಪಷ್ಟವಾಗುತ್ತದೆ.

ಇಂಗ್ಲಿಷ್ ನಮಗೆ ಪ್ರಪಂಚಕ್ಕಿರುವ ಕಿಟಕಿ ಎಂಬುದರಲ್ಲಿ ಸಂದೇಹವಿಲ್ಲ. ಹಾಗೆಂದು ಅದನ್ನು ತಲೆಯ ಮೇಲೆ ಹೇರಿಕೊಳ್ಳಲಾಗುವುದಿಲ್ಲ. ಇಂಗ್ಲಿಷಿನ ದುರ್ದೈವವೆಂದರೆ, ಅದರ ನಿಜವಾದ ಸಾರ್ಥಕವಾದ ಬಳಕೆಯಾಗದೆ ಕೇವಲ ಒಂದು ಪ್ರತಿಷ್ಠೆಯ ವಿಷಯವಾಗಿರುವುದು. ಕಾನ್ವೆಂಟುಗಳ ಶಿಕ್ಷಣದಲ್ಲಿ ಅದು ಗಿಳಿಪಾಠವಾಗಿ ನಮ್ಮ ಬಾಲಕ ಬಾಲಕಿಯರಲ್ಲಿ ಒಂದು ಕೃತಕ ವ್ಯಕ್ತಿತ್ವವನ್ನು ಮೂಡಿಸುತ್ತಿದೆ. ಈ ಬಗೆಯ ಶಿಕ್ಷಣವೇ ಪರಮಶ್ರೇಷ್ಠವಾದುದೆಂದು ನಮ್ಮಲ್ಲಿ ಅನೇಕರು ಭ್ರಮಿಸಿದ್ದಾರೆ. ಇಂಗ್ಲಿಷ್ ನಮಗೆ ಬೇಕು, ನಿಜ. ಆದರೆ ಎಷ್ಟು ಬೇಕು, ಹೇಗೆ ಬೇಕು ಎನ್ನುವುದನ್ನು ಮಾತ್ರ ಯಾರೂ ಯೋಚಿಸಿಲ್ಲ. ಶಾಲಾ ಶಿಕ್ಷಣದ ಕೊನೆಯಲ್ಲಿ ಎಷ್ಟೊಂದು ಜನ ಶಿಕ್ಷಣವನ್ನು ಮುಂದುವರಿಸದೆ ಹೋಗುತ್ತಾರೆಂಬುದನ್ನು ಗಮನಿಸಿದರೆ ಇಂಗ್ಲಿಷ್ ಶಿಕ್ಷಣದ ಅಪವ್ಯಯ ನಮಗೆ ತಿಳಿಯುತ್ತದೆ.

ಇಂಗ್ಲಿಷನ್ನು ಭಾಷೆಯನ್ನಾಗಿ ಕಲಿಸಿ, ವಿಷಯಗಳನ್ನು ನಮ್ಮ ನಮ್ಮ ಭಾಷೆಗಳಲ್ಲಿಯೇ ಕಲಿಸಬೇಕು. ಮಾಧ್ಯಮದ ಪ್ರಶ್ನೆ ನಮ್ಮಲ್ಲಿ ಬಗೆಹರಿಯಲಾರದ ಸಮಸ್ಯೆಯಾಗಿದೆ. ಶಿಕ್ಷಣ ತಜ್ಞರೆನ್ನಿಸಿಕೊಂಡವರಿಗೂ ಅನೇಕ ಸಲ ಭಾಷೆಯನ್ನು ಕಲಿಸುವುದು, ಭಾಷೆಯ ಮೂಲಕ ಕಲಿಸುವುದು ಇವುಗಳ ನಡುವಿನ ಅಂತರ ತಿಳಿದಿರುವುದಿಲ್ಲ. ಕನ್ನಡ ಮಾಧ್ಯಮವಾಗಬೇಕು ಎಂದರೆ ಇಂಗ್ಲಿಷನ್ನು ಕಲಿಸಬಾರದು ಎಂದಲ್ಲ. ನಮ್ಮ ಭಾಷೆಯಲ್ಲಿ ಓದಿದ್ದೇ ಮೈಗೆ ಹತ್ತುವುದು. ಆಧುನಿಕ ವಿಜ್ಞಾನವನ್ನು ಕಲಿಯುವುದು ಕಲಿಸುವುದು ನಮ್ಮ ಭಾಷೆಗಳ ಮೂಲಕ ಸಾಧ್ಯವಾಗುವುದಿಲ್ಲ ಎನ್ನುವುದು ಒಂದು ಮೂಢನಂಬಿಕೆ. ಕನ್ನಡದ ಮೂಲಕ ಕಲಿತೂ ಶ್ರೇಷ್ಠ ವಿಜ್ಞಾನಿಯಾಗಬಹುದು ಎನ್ನುವುದಕ್ಕೆ ನಮ್ಮವರೇ ಆದ ಡಾ॥ ಸಿ.ಎನ್.ಆರ್. ರಾವ್ ಅತ್ಯುತ್ತಮ ಉದಾಹರಣೆಯಾಗಿದ್ದಾರೆ. ಜನರಿಗೆ ಇಂಗ್ಲಿಷಿನ ಮೇಲೆ ಮೋಹ ಬೆಳೆಯಲು ಪ್ರತಿಷ್ಠೆಯೇ ಕಾರಣ.

ಪ್ರತಿಯೊಬ್ಬ ತಂದೆ–ತಾಯಿಗಳೂ ತಮ್ಮ ಮಕ್ಕಳು ಒಳ್ಳೆಯ ಶಾಲೆಗಳಲ್ಲಿ ಓದಬೇಕು, ಒಳ್ಳೆಯ ಶಿಕ್ಷಣ ಪಡೆಯಬೇಕು, ಅವರ ಭವಿಷ್ಯ ಉಜ್ವಲವಾಗಿರಬೇಕು ಎಂದು ಆಶಿಸುತ್ತಾರೆ. ಅವರು ನ್ಯಾಯವಾಗಿಯೆ ಅಸಹ್ಯ ಎನ್ನಿಸುವ ನಮ್ಮ ಸಾರ್ವಜನಿಕ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸಲು ಇಷ್ಟಪಡುವುದಿಲ್ಲ. ಎಷ್ಟೋ ಕಡೆಗಳಲ್ಲಿರುವ ಶಾಲೆಗಳನ್ನು ಒಮ್ಮೆ ನೋಡಿ; ಕುಸಿದು ಬೀಳುತ್ತಿರುವ ಕಟ್ಟಡಗಳು, ದೊಡ್ಡಿಯಾದ ತರಗತಿಗಳು, ಅಧ್ಯಾಪಕರಿಲ್ಲದ

ತರಗತಿಗಳು, ಪಾಠ ಹೇಳದ ಅನರ್ಹ ಅಧ್ಯಾಪಕರು, ದಿನ ಬೆಳಗಾದರೆ ರಜೆ, ಶಿಸ್ತಿಲ್ಲದ ವ್ಯವಸ್ಥೆ, ಮೂತ್ರದ ವಾಸನೆಯ ಪರಿಸರ–ಇದು ನಮ್ಮ ಬಹಳಷ್ಟು ಶಾಲೆಗಳ ಸ್ಥಿತಿ. ಆದ್ದರಿಂದ ಸಾರ್ವಜನಿಕರು ಅನಿವಾರ್ಯವಾಗಿ ಖಾಸಗಿ ಉದ್ಯಮವಾದ ಇಂಗ್ಲಿಷ್ ಶಾಲೆಗಳ ಕಡೆ ಹೋಗುತ್ತಾರೆ. ಎಲ್ಲಿಯವರೆಗೆ ನಮ್ಮ ಸಾರ್ವಜನಿಕ ಶಾಲೆಗಳ ಸ್ಥಿತಿಗತಿಗಳು ಉತ್ತಮವಾಗುವುದಿಲ್ಲವೋ ಅಲ್ಲಿಯವರೆಗೆ ಶಿಕ್ಷಣದಲ್ಲಿ ಕನ್ನಡ ಆಕರ್ಷಕವೆನ್ನಿಸುವುದಿಲ್ಲ. ಇಂಗ್ಲಿಷ್ ನಮಗೆ ಬೇಕು. ಆದರೆ ನಮ್ಮ ಭಾಷೆಯ ಬದಲಿಗೆ ಅಲ್ಲ. ಇಂಗ್ಲಿಷ್ ಒಂದೇ ಅಲ್ಲ. ಇನ್ನೂ ಹಲವು ಭಾಷೆಗಳು ನಮಗೆ ಬೇಕು. ಒಂದೊಂದು ಭಾಷೆಯೂ ಒಂದೊಂದು ವರ; ಒಂದೊಂದು ಜಗತ್ತು. ಆದರೆ ಯಾವ ಭಾಷೆ ಬೇಕು ಎನ್ನುವುದು ನಮ್ಮ ಅಗತ್ಯವನ್ನು ಅನುಸರಿಸಿದ್ದು. ಹೊರ ಜಗತ್ತಿನ ಸಂಪರ್ಕಕ್ಕಾಗಿ ನಮಗೆ ಇಂಗ್ಲಿಷ್ ಬೇಕು. ಆದರೆ ಅದೇ ಸರ್ವಸ್ವವಾಗಿ ಅಲ್ಲ. ಇಂಗ್ಲಿಷ್ ಮೂಲಕವಾದ ಶಿಕ್ಷಣ ಕುಂಡದಲ್ಲಿ ನೆಟ್ಟ ಗಿಡಗಳಂತೆ. ಬೇರು ನೆಲಕ್ಕಿಳಿಯುವುದಿಲ್ಲ. ಭೂಮಿಯ ಸಾರವನ್ನು ಅವು ಗ್ರಹಿಸುವುದಿಲ್ಲ. ಹಾಕಿದ ಹಿಡಿ ಗೊಬ್ಬರದಲ್ಲೇ ಅದು ಜೀವಮಾನವನ್ನು ಕಳೆಯಬೇಕು.

– ೭ –

ಈಚಿನ ವರ್ಷಗಳಲ್ಲಿ ಕನ್ನಡಿಗರು ತಮ್ಮ ರಾಜ್ಯದಲ್ಲಿ ತಾವೇ ತಬ್ಬಲಿಗಳಾಗುತ್ತಿರುವುದನ್ನು ಅನುಭವಕ್ಕೆ ತೆಗೆದುಕೊಂಡಿದ್ದಾರೆ. ಉದ್ಯೋಗದ ಸಮಸ್ಯೆ ತೀವ್ರತರವಾಗಿದೆ. ರಾಜ್ಯದಲ್ಲಿ ಸ್ಥಾಪಿತವಾಗುವ ಕೇಂದ್ರದ ಉದ್ಯಮಗಳಲ್ಲಿ ಕನ್ನಡಿಗರಿಗೆ ದೊರೆಯಬೇಕಾದ ಪಾಲು ದೊರೆಯುವುದಿಲ್ಲ. ಒಂದು ಹಂತದವರೆಗಿನ ನೇಮಕಾತಿಯಲ್ಲಿ ಸ್ಥಳೀಯರನ್ನೇ ಪರಿಗಣಿಸಬೇಕಾದ ಅಗತ್ಯವಿದ್ದರೂ ಇಲ್ಲಿ ಹಾಗಾಗುತ್ತಿಲ್ಲ. ಆ ಪ್ರದೇಶದ ಜನರಿಗೇ ಉದ್ಯೋಗಾವಕಾಶಗಳು ದೊರೆಯದಿದ್ದರೆ ಅಲ್ಲಿ ಉದ್ಯೋಗಗಳು ಆರಂಭಗೊಳ್ಳುವ ಉದ್ದೇಶವೇನು? ಉಪಯೋಗವೇನು? ರಾಜ್ಯ ಸರ್ಕಾರದ ನೌಕರಿಗಳನ್ನು ಮತ್ತು ರಾಜ್ಯ ಸರ್ಕಾರದ ಉದ್ಯಮಗಳನ್ನು ನೆರೆಹೊರೆಯವರು ಆಕ್ರಮಿಸಿಕೊಂಡು ಬಿಡುತ್ತಾರೆ. ಅಲ್ಲಿಯೂ ಕನ್ನಡಿಗರಿಗೆ ಅವಕಾಶಗಳಿಲ್ಲ. ಇದರಿಂದ ಕನ್ನಡಿಗರು ಉದ್ಯೋಗದ ವಿಷಯದಲ್ಲಿ ಭೀತಿಗೊಂಡಿರುವುದು ಸಹಜ. ಕನ್ನಡಿಗರ ಆತ್ಮಹತ್ಯಾಕಾರಿಯಾದ ಔದಾರ್ಯ ಧೋರಣೆಯಿಂದ ಈಗಾಗಲೇ ಬೆಂಗಳೂರೂ ಸೇರಿದಂತೆ ಕರ್ನಾಟಕದ ಅನೇಕ ಕಡೆ ಕನ್ನಡಿಗರು ಅಲ್ಪಸಂಖ್ಯಾತರಾಗುತ್ತಿದ್ದಾರೆ. ಭಾಷಾ ಅಲ್ಪಸಂಖ್ಯಾತರ ಹೆಸರಿನಲ್ಲಿ ಈಚೆಗೆ ಬೆಂಗಳೂರು ಕೇಂದ್ರಾಡಳಿತ ನಗರವಾಗಬೇಕೆಂಬ ಅಪಸ್ವರವನ್ನೂ ಕೇಳಿದ್ದೇವೆ. ಕನ್ನಡಿಗರು ಕನ್ನಡ ನಾಡಿನಲ್ಲಿಯೇ ತಬ್ಬಲಿಗಳಾದರೆ ಅವರಿಗೆ ಆಶ್ರಯವೆಲ್ಲಿದೆ? ಕನ್ನಡಿಗರ ಸಂಕಷ್ಟಗಳಿಗೂ ಒಂದು ಮಿತಿ ಇದೆ. ಅವರ ತಾಳ್ಮೆಗೆ ತಪ್ಪು ಅರ್ಥ ಹಚ್ಚಬಾರದು. ಬದುಕು ಭಾಷೆಗಿಂತ ದೊಡ್ಡದು ಎಂದು ಹೇಳುತ್ತಾರೆ. ಆದರೆ ಭಾಷೆಯನ್ನು ಬಿಟ್ಟು ಬದುಕು ಇರುವುದಿಲ್ಲ ಎಂಬುದನ್ನು ನಾವು ಮರೆಯಬಾರದು.

– ೫ –

ಎಲ್ಲಿಯವರೆಗೆ ಕನ್ನಡ ನಮ್ಮ ಆಡಳಿತ, ಶಿಕ್ಷಣದಲ್ಲಿ ಪ್ರಥಮವೂ ಪ್ರಧಾನವೂ ಆಗಿರುವುದಿಲ್ಲವೋ, ಎಲ್ಲಿಯವರೆಗೆ ಅದು ಜನಜೀವನವನ್ನು ತುಂಬಿಕೊಳ್ಳುವುದಿಲ್ಲವೋ, ಎಲ್ಲಿಯವರೆಗೆ ಕನ್ನಡಿಗರು ಸ್ವಾಭಿಮಾನಿಗಳಾಗುವುದಿಲ್ಲವೋ ಅಲ್ಲಿಯವರೆಗೂ ಕನ್ನಡದ ಸಮಸ್ಯೆಗಳು ಇದ್ದೇ ಇರುತ್ತವೆ. ಸರ್ಕಾರ ಮತ್ತು ಸಾರ್ವಜನಿಕರು ಇಬ್ಬರೂ ಈ ಜವಾಬ್ದಾರಿಯನ್ನು ನಿರ್ವಹಿಸಬೇಕು. ಎಲ್ಲವನ್ನೂ ಸರ್ಕಾರದ ಮೇಲೆ ಹಾಕಿ ನಾವು ಹೊಣೆಯನ್ನು ತಪ್ಪಿಸಿಕೊಳ್ಳುವಂತಿಲ್ಲ.

ಪ್ರತಿಯೊಬ್ಬ ಕನ್ನಡಿಗನೂ ಪ್ರತಿಯೊಂದು ಅಂಗುಲದಲ್ಲಿಯೂ ಕನ್ನಡಿಗನಾಗಬೇಕು. ಆಗ ಮಾತ್ರ ಅನೇಕ ಸಮಸ್ಯೆಗಳಿಗೆ ಪರಿಹಾರ ದೊರಕುತ್ತದೆ. ಕನ್ನಡ ಕನ್ನಡ ಎನ್ನುವ ನಾವು ನಮ್ಮನ್ನೇ ಪ್ರಶ್ನಿಸಿಕೊಳ್ಳುವುದು ತೀರ ಅಗತ್ಯ. ಕನ್ನಡ ಹೇಳುವುದಕ್ಕೆ ಮಾತ್ರ ಅಲ್ಲ, ಅನುಸರಿಸುವುದಕ್ಕೂ ಕೂಡ ಎಂದು ಎಷ್ಟು ಜನ ತಿಳಿದಿದ್ದೇವೆ?

ನಮ್ಮ ಮಕ್ಕಳನ್ನು ಯಾವ ಶಾಲೆಗಳಲ್ಲಿ ಓದಿಸುತ್ತಿದ್ದೇವೆ? ನಾವು ಯಾವ ಪತ್ರಿಕೆಗಳನ್ನು ಓದುತ್ತಿದ್ದೇವೆ? ನಾವು ನೋಡುವುದು ಯಾವ ಸಿನಿಮಾಗಳನ್ನು? ನಮ್ಮ ಮನೆಯ ಬೋರ್ಡು ಯಾವ ಭಾಷೆಯಲ್ಲಿದೆ? ನಮ್ಮ ಲೆಟರ್‌ಹೆಡ್‌ಗಳು ಅಚ್ಚಾಗಿರುವುದು, ನಮ್ಮ ಮನೆಯ ಲಗ್ನ ಪತ್ರಿಕೆಗಳು ಅಚ್ಚಾಗಿರುವುದು ಯಾವ ಭಾಷೆಯಲ್ಲಿ? ನಾವು ಬ್ಯಾಂಕುಗಳಿಗೆ ಚೆಕ್ಕು ಬರೆಯುವುದು ಕನ್ನಡದಲ್ಲೇ? ನಾವು ಬರೆಯುವ ಕಾಗದ ಪತ್ರಗಳಲ್ಲಿ ಎಷ್ಟು ಭಾಗ ಕನ್ನಡ? ಇಂಥ ನೂರು ಪ್ರಶ್ನೆಗಳನ್ನು ನಾವು ಕೇಳಿಕೊಳ್ಳಬೇಕು. ಅವುಗಳ ಉತ್ತರ ನಮ್ಮನ್ನು ಚುಚ್ಚದಿದ್ದರೆ ಮಾತ್ರ ನಾವು ಕನ್ನಡವನ್ನು ಕುರಿತು ಮಾತಾಡಲು ಯೋಗ್ಯತೆ ಗಳಿಸಿಕೊಂಡಿದ್ದೇವೆ ಎಂದು ಅರ್ಥ. ಕನ್ನಡಿಗರು ಮೊದಲು ಕನ್ನಡದವರಾಗಬೇಕು.

## ಲೇಖಕರ ಪರಿಚಯ :

**ಹಾಮಾನಾ** ಎಂದೇ ಪ್ರಸಿದ್ಧರಾಗಿರುವ **ಡಾ॥ ಹಾರೋಗದ್ದೆ ಮಾನಪ್ಪ ನಾಯಕ** (೧೯೩೧-೨೦೦೧)



ಅವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಹಾರೋಗದ್ದೆಯವರು. ಶ್ರೀನಿವಾಸ ನಾಯಕ - ರುಕ್ಮಿಣಿಯಮ್ಮ ದಂಪತಿಗಳ ಸುಪುತ್ರರು. ಮೈಸೂರು ವಿ.ವಿ.ಯ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ, ಗುಲಬರ್ಗಾ ವಿ.ವಿ.ಯ ಕುಲಪತಿಗಳಾಗಿ ಕರ್ತವ್ಯ ನಿರ್ವಹಿಸಿದವರು. ಕನ್ನಡದ ಕಟ್ಟಾಳು ಎಂದೇ ತಮ್ಮನ್ನು ಗುರುತಿಸಿಕೊಂಡಿದ್ದ ಹಾ.ಮಾ. ನಾಯಕರು ತಮ್ಮ ಅಪಾರ ವಿದ್ವತ್ತಿನಿಂದ, ದಕ್ಷ ಆಡಳಿತದಿಂದ, ಸ್ನೇಹಪರ ಗುಣಪಕ್ಷಪಾತದಿಂದ ಹೆಸರಾಗಿದ್ದರು. ಕನ್ನಡದ ಹಲವು ದಿನಪತ್ರಿಕೆಗಳಲ್ಲಿ ಖ್ಯಾತ ಅಂಕಣಕಾರರೆನಿಸಿದ್ದರು. ತಮ್ಮ 'ಸಂಪ್ರತಿ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರವನ್ನು ಪಡೆಯುವ ಮೂಲಕ ದೇಶದಲ್ಲೇ ಅಂಕಣ ಬರಹಕ್ಕೆ ಮಾನ್ಯತೆಯನ್ನು ತಂದುಕೊಟ್ಟರು. ೧೯೮೫ರಲ್ಲಿ ಬೀದರಿನಲ್ಲಿ ನಡೆದ ಐವತ್ತೇಳನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಹಾ.ಮಾ. ನಾಯಕರು ಬಾಳ್ನೋಟಗಳು, ಸಂಪ್ರತಿ, ಸಲ್ಲಾಪ, ಸಂಭ್ರಮ, ಸೂಲಂಗಿ, ಸಂಪಣ, ಭಾರತದ ಧರ್ಮ, ರವೀಂದ್ರನಾಥ ಠಾಕೂರ್, ಸಂಗತಿ, ನಮ್ಮ ಮನೆಯ ದೀಪ ಮುಂತಾದ ನೂರಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿದ್ದ ಹಾ.ಮಾ. ನಾಯಕರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಐಬಿಎಚ್ ಪ್ರಶಸ್ತಿ, ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ಇತ್ಯಾದಿ ಪುರಸ್ಕಾರಗಳು ಸಂದಿವೆ. ಬೀದರ್ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣವನ್ನು ಅವರು 'ಕನ್ನಡವನ್ನು ಕಟ್ಟುವ ಕೆಲಸ' ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಿದ್ದರು. ಕನ್ನಡಕ್ಕೆ ಆಗಬೇಕಾಗಿರುವ ಕಾರ್ಯಸ್ವರೂಪದ ಬಹುಸೂಕ್ಷ್ಮ ಸಂಗತಿಗಳತ್ತ ಹಾಮಾನಾ ಇಲ್ಲಿ ಜನರ ಮತ್ತು ಆಳುವವರ ಗಮನ ಸೆಳೆದಿರುವುದನ್ನು ಮನಗಾಣಬಹುದು. ಅವರು ಚರ್ಚಿಸಿರುವ ಅನೇಕ ಸಂಗತಿಗಳಲ್ಲಿ ಕೆಲವನ್ನು ಇಲ್ಲಿ ಸಂಕಲಿಸಲಾಗಿದೆ.

## ಶಬ್ದಾರ್ಥ :

ಸ್ಫುರಿಸು-ಮಿಂಚು, ಬುದ್ಧಿಗೆ ಗೋಚರಿಸು; ಖಿಲ-ಪಾಳುಬೀಳು, ಶೂನ್ಯವಾಗು; ಖೇದ-ದುಃಖ; ಕ್ರೋಧ-ಕೋಪ; ಕುತ್ತು-ಅಪಾಯ; ಪರದೇಶಿ-ದಿಕ್ಕಿಲ್ಲದವರು, ಹೊರನಾಡಿನವರು; ದುರ್ದೈವ-ಕೆಟ್ಟ ಅದೃಷ್ಟ, ದೌರ್ಭಾಗ್ಯ; ಪ್ರತಿಷ್ಠೆ-ಘನತೆ, ಗರ್ವ; ಕೃತಕ-ಸಹಜವಲ್ಲದ; ತೀವ್ರತರ-ಹರಿತ, ಉಗ್ರವಾದ; ಅಂಗುಲ-ಒಂದು ಇಂಚು, ಬೆರಳು.

## ಟಿಪ್ಪಣಿಗಳು :

೧. **ಡಾ॥ ಸಿ.ಎನ್.ಆರ್. ರಾವ್:**

ತಮ್ಮ ವೈಜ್ಞಾನಿಕ ಸಂಶೋಧನೆಗಳಿಂದ ವಿಶ್ವದ ಗಮನ ಸೆಳೆದ ಕನ್ನಡಿಗ. ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಕೀರ್ತಿ ಇವರದು. ಭಾರತ ಸರ್ಕಾರದಿಂದ ಪದ್ಮವಿಭೂಷಣ ಮತ್ತು ದೇಶದ ಅತ್ಯುಚ್ಚ ಗೌರವವಾದ 'ಭಾರತರತ್ನ' ಪುರಸ್ಕಾರ ಪಡೆದಿರುವ ಹೆಮ್ಮೆಯ ಸುಪುತ್ರರು.

೨. **ರಾಜಮನ್ನಾರ್ ಸಮಿತಿ:**

ಕೇಂದ್ರ ಮತ್ತು ರಾಜ್ಯಗಳ ಸಂಯುಕ್ತ ವ್ಯವಸ್ಥೆಯ ಸಂಬಂಧ ನಿಷ್ಕರ್ಷೆಗಾಗಿ ತಮಿಳುನಾಡು ಸರ್ಕಾರವು ೧೯೬೯ರ ಸೆಪ್ಟೆಂಬರ್‌ನಲ್ಲಿ ಡಾ॥ ಪಿ.ವಿ. ರಾಜಮನ್ನಾರ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ನೇಮಿಸಿತು. ಭಾಷೆಯನ್ನು ಒಳಗೊಂಡಂತೆ ಇಪ್ಪತ್ತಕ್ಕೂ ಹೆಚ್ಚಿನ ಅಂಶಗಳನ್ನಾಧರಿಸಿ ಸಮಿತಿಯು ಮೇ, ೧೯೭೧ರಲ್ಲಿ ವರದಿಯನ್ನು ಸಲ್ಲಿಸಿತು. ಹಾ.ಮಾ. ನಾಯಕರು ತಮ್ಮ ಲೇಖನದಲ್ಲಿ ಭಾಷಾ ಸಂಬಂಧವನ್ನು ಚರ್ಚಿಸುವಾಗ ಸಾಂದರ್ಭಿಕವಾಗಿ ರಾಜಮನ್ನಾರ್ ಸಮಿತಿಯ ಉಲ್ಲೇಖ ಮಾಡಿರುತ್ತಾರೆ.

೩. **ಎ.ಆರ್. ಕೃಷ್ಣಶಾಸ್ತ್ರಿ:**

ಕನ್ನಡದ ಅಶ್ವಿನಿ ದೇವತೆಗಳಲ್ಲಿ ಒಬ್ಬರೆನಿಸಿದ್ದ ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳು (ಮತ್ತೊಬ್ಬರು ಟಿ.ಎಸ್. ವೆಂಕಣ್ಣಯ್ಯ) ಚಿಕ್ಕಮಗಳೂರು ಸಮೀಪದ ಅಂಬಳೆ ಗ್ರಾಮದವರು. ತಮ್ಮ ಘನ ವಿದ್ವತ್ತಿಗೆ ಖ್ಯಾತರಾದವರು. ಶ್ರೀಪತಿಯ ಕಥೆಗಳು, ಕಥಾಮೃತ, ವಚನ ಭಾರತ, ನಿರ್ಮಲ ಭಾರತಿ ಮುಂತಾದ ಕೃತಿಗಳನ್ನು ರಚಿಸಿರುವರು. ಹರಿಶ್ಚಂದ್ರ ಕಾವ್ಯ ಸಂಗ್ರಹ, ಕವಿಜಿಹ್ವಾಬಂಧನ, ಕನ್ನಡ ಕೈಪಿಡಿ, ಭಾಸಕವಿ, ಬಂಕಿಮಚಂದ್ರ, ಸರ್ವಜ್ಞ ಕವಿ ಇತ್ಯಾದಿ ಕೃತಿಗಳನ್ನು ಶಾಸ್ತ್ರೀಯ ರೀತಿಯಲ್ಲಿ ಸಂಪಾದಿಸಿಕೊಟ್ಟಿದ್ದಾರೆ. ೧೯೪೧ರಲ್ಲಿ ಹೈದರಾಬಾದ್‌ನಲ್ಲಿ ನಡೆದ ೨೬ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

## : ಅಭ್ಯಾಸ ಭಾಗ :

### ಅ) ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು:

೧. ಒಂದು ಅಂಗೈ ಅಗಲ ಬಿಟ್ಟರೆ ಮತ್ತೆಲ್ಲಿಯೂ ನೋಡಲಾರಿರಿ.
೨. ಇಂಗ್ಲಿಷ್ ಹಿಂದಿ ಬಾರದವರು ವಿಮಾನ ಪ್ರಯಾಣ ಮಾಡಬಾರದೆ?
೩. ನಾವು ಪರದೇಶಿಗಳೆಂಬ ಭಾವನೆ ಬರುತ್ತದೆ.
೪. ನಮ್ಮ ಭಾಷೆಯಲ್ಲಿ ಓದಿದ್ದೆ ಮೈಗೆ ಹತ್ತುವುದು.
೫. ಒಂದೊಂದು ಭಾಷೆಯೂ ಒಂದೊಂದು ವರ.
೬. ನಾವು ಯಾವ ಪತ್ರಿಕೆಗಳನ್ನು ಓದುತ್ತಿದ್ದೇವೆ?
೭. ಕನ್ನಡಿಗರು ಮೊದಲು ಕನ್ನಡಿಗರಾಗಬೇಕು.

### ಆ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿರಿ):

೧. ಎ.ಆರ್. ಕೃಷ್ಣಶಾಸ್ತ್ರಿಗಳು ಎಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು?
೨. ನಮ್ಮ ದೇಶದಲ್ಲಿ ಖಿಲವಾಗಿ ಹೋದ ಧರ್ಮ ಯಾವುದು?

೩. ಪ್ರಾಂತೀಯ ಭಾಷೆಗಳ ಸ್ಥಾನವನ್ನು ಆಕ್ರಮಿಸುತ್ತಿರುವ ಭಾಷೆಗಳಾವುವು?
೪. ಯಾವ ಮರ್ಯಾದೆಯನ್ನು ನಾವು ಮೀರಬಾರದು?
೫. ಸ್ಥಳೀಯ ಭಾಷೆ ಕಲಿಯದ ಅನ್ಯಭಾಷಿಕರು ಏನಾಗುತ್ತಾರೆ?
೬. ಯಾವುದು ನಮ್ಮ ಮೈಗೆ ಹತ್ತುವುದು?
೭. ಕನ್ನಡದ ಮೂಲಕ ಕಲಿತು ಶ್ರೇಷ್ಠ ವಿಜ್ಞಾನಿಯಾದವರು ಯಾರು?
೮. ತಮ್ಮ ರಾಜ್ಯದಲ್ಲಿ ತಾವೇ ತಬ್ಬಲಿಗಳಾಗುತ್ತಿರುವವರು ಯಾರು?
೯. ಬದುಕು ಯಾವುದನ್ನು ಬಿಟ್ಟು ಇರುವುದಿಲ್ಲ?
೧೦. ಕನ್ನಡದ ಸಮಸ್ಯೆಗಳಿಗೆ ಪರಿಹಾರ ದೊರಕಿಸಲು ನಾವು ಏನು ಮಾಡಬೇಕು?

**ಇ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ):**

೧. ಲೇಖಕರಲ್ಲಿ ಕನ್ನಡ ಪ್ರೀತಿ ಸ್ಫುರಿಸಿದ್ದು ಹೇಗೆ?
೨. ಎ.ಆರ್. ಕೃಷ್ಣಶಾಸ್ತ್ರಿಗಳ ಭಾಷಣ ಓದಿ ಲೇಖಕರಲ್ಲಿ ಮೂಡಿದ ಭಾವನೆಗಳಾವುವು?
೩. ಕರ್ನಾಟಕದಲ್ಲಿ ಕನ್ನಡಕ್ಕೆ ಯಾವ ಸ್ಥಾನವಿರಬೇಕೆಂದು ಹಾಮಾನಾ ಅಪೇಕ್ಷಿಸಿದ್ದಾರೆ?
೪. ಕೇಂದ್ರದ ರೈಲು, ಅಂಚೆ ಇಲಾಖೆಗಳು ಯಾವ ಧೋರಣೆ ಬೆಳೆಸಿಕೊಂಡಿವೆ?
೫. ತ್ರಿಭಾಷಾ ಸೂತ್ರದ ಬಳಕೆ ಹೇಗಿರಬೇಕು?
೬. ನಮ್ಮ ಸಾರ್ವಜನಿಕರ ಶಾಲೆಗಳ ಬಗ್ಗೆ ಲೇಖಕರ ಅಭಿಪ್ರಾಯವೇನು?
೭. ಕನ್ನಡದ ಸಮಸ್ಯೆಗಳು ಎಲ್ಲಿಯವರೆಗೂ ಇದ್ದೇ ಇರುತ್ತವೆ?
೮. ಕನ್ನಡದ ಬಗ್ಗೆ ಮಾತಾಡಲು ನಾವು ಯೋಗ್ಯತೆ ಗಳಿಸುವುದು ಯಾವಾಗ?

**ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ):**

೧. ಕೇಂದ್ರ ಸರ್ಕಾರದ ಕಚೇರಿಗಳಲ್ಲಿ ಕನ್ನಡತನವಿಲ್ಲದಿರುವ ಬಗ್ಗೆ ಹಾಮಾನಾ ಹೇಗೆ ಟೀಕಿಸಿದ್ದಾರೆ?
೨. ಹೊರನಾಡಿನಿಂದ ಬಂದು ಕನ್ನಡ ನಾಡಿನಲ್ಲಿ ನೆಲೆಸಿರುವವರ ಜವಾಬ್ದಾರಿಗಳನ್ನು ಲೇಖಕರು ಹೇಗೆ ವಿವರಿಸಿದ್ದಾರೆ?
೩. ನಮಗೆ ಬೇಕಾಗಿರುವ ಕನ್ನಡ ಮಾಧ್ಯಮ ಶಿಕ್ಷಣ ಮತ್ತು ಇಂಗ್ಲಿಷ್ ಭಾಷೆಯ ಸಂಬಂಧ ಯಾವ ಸ್ವರೂಪದ್ದಾಗಿರಬೇಕೆಂದು ಲೇಖಕರು ಹೇಳಿದ್ದಾರೆ?
೪. ಪೋಷಕರು ಖಾಸಗಿ ಶಾಲೆಗಳ ಕಡೆ ಹೊರಳಲು ಲೇಖಕರು ಯಾವ ಕಾರಣಗಳನ್ನು ಉದಾಹರಿಸುತ್ತಾರೆ?
೫. ಕನ್ನಡಿಗರೆನ್ನಿಸಿಕೊಳ್ಳಲು ಯಾವ ಯೋಗ್ಯತೆಯ ಪ್ರಶ್ನೆಗಳು ನಮ್ಮನ್ನು ಚುಚ್ಚಬೇಕು? ವಿವರಿಸಿ.

**ಭಾಷಾಭ್ಯಾಸ :**

೧. ಸ್ಫುರಿಸು, ಸಮುದ್ರ, ಕರ್ತವ್ಯ, ಭೂಮಿ, ತಾಳ್ಮೆ – ಇವುಗಳಿಗೆ ಸಮಾನಾರ್ಥಕಗಳನ್ನು ಬರೆಯಿರಿ.
೨. ಎಡೆ, ಗುಡಿ, ಕಲಿ, ಮರ್ಯಾದೆ, ಕೊನೆ – ಇವುಗಳಿಗೆ ನಾನಾರ್ಥಗಳನ್ನು ಬರೆಯಿರಿ.

೩. ಪರದೇಶಿ, ಮೈಗೆ ಹತ್ತು, ತಲೆಮೇಲೆಮೆರಸು – ಈ ನುಡಿಗಟ್ಟುಗಳ ಅರ್ಥ ಬರೆದು, ಸ್ವಂತ ವಾಕ್ಯಗಳಲ್ಲಿ ಅವುಗಳನ್ನು ಬಳಸಿ ಬರೆಯಿರಿ.

೪. ಖಿಲ–ಅಖಿಲ, ವ್ಯಯ–ಅಪವ್ಯಯ, ಸಹ್ಯ–ಅಸಹ್ಯ ಇಂತಹ ಪ್ರಯೋಗಗಳನ್ನು ಗಮನಿಸಿ.

## ಚಟುವಟಿಕೆ :

೧. ಡಾ॥ ಹಾ.ಮಾ. ನಾಯಕ ಮತ್ತು ಎ.ಆರ್. ಕೃಷ್ಣಶಾಸ್ತ್ರಿಗಳ ಸಾಹಿತ್ಯ ಸಮ್ಮೇಳನಾಧ್ಯಕ್ಷರ ಭಾಷಣದ ಪೂರ್ಣ ಪಾಠಗಳನ್ನು ಸಂಗ್ರಹಿಸಿ.

೨. ಕನ್ನಡವನ್ನು ಸಕಲಕ್ಷೇತ್ರಗಳಲ್ಲೂ ಸಮರ್ಥವಾಗಿ ಬಳಸಲು ನಮ್ಮ ಪ್ರಯತ್ನ ಹೇಗಿರಬೇಕೆಂಬ ನಿಮ್ಮ ಅನಿಸಿಕೆಗಳ ಬಗ್ಗೆ ಪ್ರಬಂಧ ರಚಿಸಿ.

೩. ಕನ್ನಡ ನಾಡಿನಲ್ಲಿ ಕನ್ನಡಿಗರೇ ತಬ್ಬಲಿಗಳಾಗುತ್ತಿರುವ ಆತಂಕಕಾರಿ ಬೆಳವಣಿಗೆಯ ಬಗ್ಗೆ ಪಠ್ಯದ ಹಿನ್ನೆಲೆಯಲ್ಲಿ ಚರ್ಚೆ ಏರ್ಪಡಿಸಿ.

## ಆಕರ :

ಕೃತಿ : ಕನ್ನಡವನ್ನು ಕಟ್ಟುವ ಕೆಲಸ

ಲೇಖಕರು : ಡಾ॥ ಹಾ.ಮಾ. ನಾಯಕ

ಪ್ರಕಾಶನ : ಐ.ಬಿ.ಎಚ್. ಪ್ರಕಾಶನ,
ಗಾಂಧಿನಗರ, ಬೆಂಗಳೂರು – ೫೬೦ ೦೦೯.

ಪಠ್ಯಕ್ಕಾಗಿ ಮೂಲಕೃತಿಯ ಸಂಗ್ರಹ ರೂಪ : ಡಾ. ಎಚ್.ಎಸ್. ಸತ್ಯನಾರಾಯಣ

## ಹೆಚ್ಚಿನ ಓದಿಗೆ :

೧. ಸಮ್ಮೇಳನಾಧ್ಯಕ್ಷರ ಭಾಷಣದ ಸಂಪುಟಗಳು: ಪ್ರ; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨. ಕೆ.ವಿ. ನಾರಾಯಣ, ಬರಗೂರು ರಾಮಚಂದ್ರಪ್ಪ, ಡಿ.ಆರ್. ನಾಗರಾಜ್ ಮುಂತಾದ ಲೇಖಕರ ನಾಡು–ನುಡಿ ಸಂಬಂಧಿತ ಬರಹಗಳು.

೩. ಕನ್ನಡ ನಾಡಿಗೆ ಕನ್ನಡವೇ ಗತಿ ಮತ್ತು ಕನ್ನಡ ಮಾತು ತಲೆ ಎತ್ತುವ ಬಗೆ – ಬಿ.ಎಂ.ಶ್ರೀ. ಅವರ ಲೇಖನ.

*"ಏನೇ ಆದರೂ ಕನ್ನಡಕ್ಕೆ ಕುಂದಿಲ್ಲ ಎಂದು*
*ಧೈರ್ಯ ತಾಳುವವರ ಗುಂಪಿಗೆ ನಾನು ಸೇರಿಲ್ಲ"*

**– ಹಾ.ಮಾ. ನಾಯಕ**

# ೫. ಧಣಿಗಳ ಬೆಳ್ಳಿಲೋಟ

*– ಎಚ್. ನಾಗವೇಣಿ*

*ಸಮಾಜದಲ್ಲಿ ಮೊದಲಿನಿಂದಲೂ ಬಡವರ, ಕೂಲಿಕಾರರ, ನಿರ್ಗತಿಕರ ಬಗ್ಗೆ ತಾರತಮ್ಯ ಧೋರಣೆ ಎದ್ದು ಕಾಣುತ್ತದೆ. ಉಳ್ಳವರು ದುರ್ಬಲರ ಶ್ರಮವನ್ನಾಗಲಿ, ಪ್ರತಿಭೆಯನ್ನಾಗಲಿ ಗೌರವಿಸದೆ ಅವರ ಪರಿಶ್ರಮದಲ್ಲೆ ತಮ್ಮ ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನಿಸುತ್ತಾರೆ. ಶೋಷಿತರ ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಹೇಗೆ ಪ್ರತಿರೋಧ ವ್ಯಕ್ತವಾಗುತ್ತದೆ ಎನ್ನುವುದು ಈ ಕತೆಯಲ್ಲಿ ಅನಾವರಣಗೊಂಡಿದೆ.*

*ಮನುಷ್ಯನ ಭಾವನೆಗಳು ಹೊಳೆಗೂ ಇರುವಂತೆ ಹೊಳೆಯ ಪಾತ್ರವನ್ನು ಸಕ್ರಿಯವಾಗಿ ತಂದಿದ್ದಾರೆ. ಕರಾವಳಿ ತೀರದ ಬಡವರ ಬದುಕು, ಅವರ ಅಸಹಾಯಕತೆ ಹಾಗೂ ಆಡುಭಾಷೆಯ ಸೊಗಸು ಮನೋಜ್ಞವಾಗಿ ಕತೆಯ ಉದ್ದಕ್ಕೂ ಗಮನ ಸೆಳೆಯುವಂತಿದೆ. ಸಣ್ಣ ಕತೆಯ ಮುಖ್ಯ ಲಕ್ಷಣವಾದ ಆಕರ್ಷಕ ಶೈಲಿ, ಯಾರು ಊಹಿಸದ ಅಂತ್ಯ ಈ ಕತೆಗೆ ಮೆರಗನ್ನು ತಂದಿದೆ. ಕರಾವಳಿಯ ಬದುಕಿನ ವಿವರಗಳೊಂದಿಗೆ ಈ ಕತೆ ಹೃದಯಂಗಮವಾಗಿ ನಿರೂಪಿತವಾಗಿದೆ.*

**ಆ** ಮಾನಗೇಡಿ ಹೊಳೆಗೆ ಒಂದಿಷ್ಟು ಉಗುರೆಡೆಯಲ್ಲಾದರೂ ನಾಚಿಕೆಯೆಂಬುದು ಇದ್ದಿದ್ದರೆ, ಒಂದಾ ಆ ಪರಿಯ ಬೈಗಳಿಗೆ ಆದು ತಟ್ಟನೆ ಇಂಗಿಹೋಗುತ್ತಿತ್ತು ಅಥವಾ ಸರ್ರೆಂದು ನುಗ್ಗಿ ಬಂದು ಆಕೆಯನ್ನು ನುಂಗಿಬಿಡುತ್ತಿತ್ತು. ಅದೆಂತದ್ದೂ ಇಲ್ಲದೆ ಅದು "ಊದು ದಾಸಯ್ಯ ನನ್ನ ಬಾಲಕ್ಕೆ ಇನ್ನಷ್ಟು ಶಂಖ" ಎಂಬಂತೆ ಕಸಕಡ್ಡಿಗಳನ್ನು ಹೊತ್ತು ಹರಿಯುತ್ತಲೇ ಇತ್ತು – ಅತ್ತ ಕಡಲತ್ತ.

ಮುಂಜಾನೆ ಚಿನ್ನಮ್ಮ ಎಂದಿನಂತೆ ಹೊಳೆಯ ಸೆರಗಲ್ಲಿ ಮುಸುರೆ ಪಾತ್ರೆಗಳನ್ನು ರಾಶಿ ಹಾಕಿ ಕೂತು, ಪಕ್ಕದಲ್ಲಿ ಬೂದಿಯ ಗೆರಟೆಯನ್ನಿರಿಸಿಕೊಂಡು ಹೊಳೆಯ 'ಗುಣವಾಚನ'ಕ್ಕೆ ತೊಡಗಿದ್ದಳು. ಹೊಳೆಯುವ ಹೊಳೆಯ ಮೈಗೆ ಆ ಪರಿಯ ಬೈಗಳ ಪೆಟ್ಟು ತಗಲುತ್ತಿದ್ದಂತೆ, ಅದರ ದಡದಲ್ಲಿ ನಿಂತು ಮರಿಮೀನುಗಳ ತಪಾಸಣೆಯಲ್ಲಿದ್ದ ಅಸಂಖ್ಯ ಕೊಕ್ಕರೆ–ಕೊಂಗುರ್–ಮೀಂಚುಳ್ಳಿಗಳೆಲ್ಲ ಆಕೆಯ ಬೈಗಳ ಪಾಲು ತಮಗೆಂದೂ ಬೇಡವೆಂಬಂತೆ ಸರ್ರನೆ ಆಚೆ ದಡಕ್ಕೆ ತಟ್ಟನೆ ಹಾರಿ ಹೋದವು.

ಆ ಹೊಳೆಯೇನು ಬೇಕು ಬೇಕೆಂದೇ ಚಿನ್ನಮ್ಮನ ಕುಟುಂಬಕ್ಕೆ ಅಂತಹ ಅಪವಾದವನ್ನು ಎಳೆದು ತಂದುಹಾಕಿದೆಯೆ? ಅದಕ್ಕೂ ಚಿನ್ನಮ್ಮನ ಪುಟ್ಟ ಸಂಸಾರದ ಬಗ್ಗೆ ಅದೆಷ್ಟು ಪ್ರೀತಿ ವಾತ್ಸಲ್ಯ, ಕಾಳಜಿ, ಅನುಕಂಪವಿಲ್ಲ! ಇಲ್ಲದಿದ್ದಲ್ಲಿ ಆ ಹೊಳೆ ಯಾಕಾಗಿ ಚಿನ್ನಮ್ಮನ ಗಂಡ ಕುದುಪನ ಗಾಳದ ಬಾಯಿಗೆ ಅಂತಹ ಹೊಡೆಯುವ ಮಳೆಗಾಲದಲ್ಲೂ ದಿನವೂ ಒಂದಷ್ಟು ತರುಮೀನುಗಳನ್ನು ಸಿಲುಕಿಸಬೇಕು! ಹಾಗೆ.... ತಾನು ಹರಿದು ಬರುವಾಗಲೆಲ್ಲಾ ತನ್ನ ಸೆರಗಂಚಿನಲ್ಲಿರುವ ತೋಟಗಳಿಂದ ಆಗ್ಗಾಗ್ಗೆ ಅಷ್ಟಿಷ್ಟು ತೆಂಗಿನಕಾಯಿ–ಸೌದೆ ಕಟ್ಟಿಗೆಗಳನ್ನು ತಂದು ಕುದುಪನ ದಿಟ್ಟಿಗೆ ಅವನ್ನೆಲ್ಲ ಬೀಳಿಸುತ್ತಿಲ್ಲವೆ! ಆಟಿ–ಸೋಣ ಕಾಲದ ಮಳೆಗಾಲದಲ್ಲಂತೂ ಕೇಳುವುದೇ ಬೇಡ. ಅಲ್ಲಿ ಇಲ್ಲಿಂದ ಪಾತ್ರೆ–ಪಗಡಿ, ಸೌದೆ–ಕಟ್ಟಿಗೆ, ಕೋಳಿ–ಕುರಿ, ಏಣಿ–ದೋಣಿ, ರೀಪು–ಪಕ್ಕಾಸುಗಳನ್ನು ಹೊತ್ತು ತಂದು ಚಿನ್ನಮ್ಮ–ಕುದುಪರ ಮಡಲಿಗೆ ಸುರಿಯುವುದು ಮಾಮೂಲು. ಚಿನ್ನಮ್ಮನ ಕುಟುಂಬದ ಜತೆ ಈ ಹೊಳೆಗೆ

ಇಷ್ಟೊಂದು ಒಡನಾಟವಿದ್ದರೂ, ಮೊನ್ನೆಯ ಶ್ರಾವಣ ಮಾಸದ ನಾಕರಂದು ಇದೇ ಹೊಳೆ ಆಕೆಯ ಕುಟುಂಬದ ಮೇಲೆ ದೊಡ್ಡ ಅಪವಾದವೊಂದನ್ನು ಹೊರಿಸಿ ಇಡಿಯ ಕುಟುಂಬದ ಉಗ್ರಕೋಪ–ಅಸಹನೆಗೆ ಬಲಿಯಾಗ ಬೇಕಾಯಿತು.

ಆದದ್ದಿಷ್ಟೆ, ಕಳೆದ ಶ್ರಾವಣ ಮಾಸದ ನಾಕನೇ ದಿನ ಚಿನ್ನಮ್ಮನ ಏಕೈಕ ಮಗ ಗುಡ್ಡ, ಆ ಪರಿಯಲ್ಲಿ ತುಂಬಿ ಹರಿಯುತ್ತಿದ್ದ ಶಾಂಭವಿ ಹೊಳೆಯ ದಡದಲ್ಲಿ ಕೂತು, ಧಣಿ ಮನೆಯ ಮುಸುರೆ ಪಾತ್ರೆಗಳನ್ನು ತಿಕ್ಕುತ್ತಿದ್ದ. ಆಷಾಢ–ಶ್ರಾವಣ–ಭಾದ್ರಪದ ಮಾಸದಲ್ಲಿ ನದಿಯ ಒಡಲೆಂದರೆ ಎಂಥದ್ದು! ಕಾವಿಗೆ ಕೂತ ಹೇಂಟೆಯಂತೆ – ಒಡಲು ಯಾವತ್ತೂ ವ್ಯಗ್ರ–ಪ್ರಕ್ಷುಬ್ಧ. ಹತ್ತಿರ ಬಂದವರನ್ನು ಕುಕ್ಕಿ ಮುಕ್ಕುವ ಸಿಡುಕು. ಹುಟ್ಟುವ ಘಟ್ಟದಲ್ಲಿ ಆ ಹೊಳೆಯ ದೇಹ–ಒಡಲು ಮನಸ್ಸು ಪ್ರಫುಲ್ಲ, ಶಾಂತ, ನಿರ್ಮಲವಾಗಿದ್ದರೂ ಅದು ಸಾಗಿ ಬರುವ ದಾರಿಯೇನು ಸುಲಭದ್ದೇ. ಕಡಲ ಸಂಗಮಕ್ಕಾಗಿ ರಭಸದಿಂದ ಹಾತೊರೆದು ಬರುವಾಗ ದಾರಿಯಲ್ಲಿ ತುಂಬಿ ಹರಿವ ಅನೇಕ ಕೆರೆ ತೋಡು ಹಳ್ಳ, ಕೊಳ್ಳಗಳನ್ನು ತನ್ನೊಡಲೊಳಗೆ ಬಾಚಿಕೊಂಡು ಸಾಗಿ ಬರಬೇಕಲ್ಲವೆ! ಇಂತಹ ವಿಕ್ಷಿಪ್ತ ಮನಃಸ್ಥಿತಿ, ಪರಿಸ್ಥಿತಿಯಲ್ಲಿ ಆ ಶಾಂಭವಿ ಹೊಳೆ ಇರಬೇಕಾದರೆ, ಚಿನ್ನಮ್ಮನ ಮಗ ಎಂಟುವರ್ಷದ ಗುಡ್ಡ, ಧಣಿಗಳ ಮುಸುರೆ ಪಾತ್ರೆಯಲ್ಲಿ ಮರಿಮೀನುಗಳನ್ನು ಹಿಡಿಯುವ ಆಟವನ್ನಾಡುತ್ತಾ... ತನ್ನದೇ ಲೋಕದಲ್ಲಿ ವಿಹರಿಸುತ್ತಾ ಪಾತ್ರೆ ಉಜ್ಜುತ್ತಿದ್ದ.

ನಿಜಕ್ಕೂ ಧಣಿ ವೆಂಕಪ್ಪಯ್ಯನವರ ಮಾತಿನಂತೆ ಹೇಳುವುದಾದರೆ ಗುಡ್ಡ ಪಾತ್ರೆ ಉಜ್ಜುತ್ತಿದ್ದುದು ಹೊಳೆಯ ಸೆರಗಲ್ಲಿ ಅಲ್ಲವೇ ಅಲ್ಲ, ಆತ ಉಜ್ಜುತ್ತಿದ್ದುದು ವೆಂಕಪ್ಪಯ್ಯನವರ ತೆಂಗಿನ ತೋಟದ ಅಂಚಿನಲ್ಲಿ. ಮಳೆಗಾಲದಲ್ಲಿ ಆ ಹೊಳೆ ಆಡಿದ್ದೇ ಆಟ, ಹೂಡಿದ್ದೇ ಹೂಟ. 'ಮಳೆಗಾಲ ಬಂದರೆ ಸಾಕು ಈ ಬಿಕನಾಸಿ ಹೊಳೆ ಊರಿಡೀ ತನ್ನ ಸೆರಗನ್ನೇ ಹಾಸಿಬಿಡುತ್ತದೆ...., ಎಷ್ಟಗಲ ಸೆರಗು ಹಾಸಿದರೂ ಇನ್ನಷ್ಟು ದೂರಕ್ಕೆ ಹಾಸಬೇಕೆಂಬ ಚಟ ಇದಕ್ಕೆ....' ಎಂದು ಧಣಿಗಳು ಯಾವತ್ತೂ ಹೊಳೆಯನ್ನು ಮೂದಲಿಸುವುದು ಇದ್ದೇ ಇದೆ. ಹೊಳೆಗೂ ಬಾಯೇನಾದರೂ ಬರುತ್ತಿದ್ದರೆ 'ಎಲವೋ ಹುಲು ಮಾನವ ವೆಂಕಪ್ಪಯ್ಯ, ಸುತ್ತಲ ನಾಕೂರಲ್ಲಿರುವ ಯಾವನೇ ಶ್ಯಾನುಭೋಗ ಉಗ್ರಾಣಿಯನ್ನಾದರೂ ಕರೆತಂದು ನನ್ನೆದರು ಸರಪಳಿ ಎಳೆಸು. ಅವೆಲ್ಲವೂ ನನ್ನದಲ್ಲದಿದ್ದರೆ ಕೇಳು ಮತ್ತೆ....' ಎಂದು ಮರು ಉತ್ತರ ಕೊಡುತ್ತಿತ್ತೇನೊ! ಬಾಯಿ ಇಲ್ಲದಿದ್ದರೇನಂತೆ... ಮಳೆಗಾಲ ಬಂದೊಡನೆ ಬರಿ ಕ್ರಿಯೆಯಲ್ಲೇ ತನ್ನ ವ್ಯಾಪ್ತಿ, ತನ್ನ ಪರಿಹಾರ, ತನ್ನ ಬಲ ಎಷ್ಟೆಂಬುದನ್ನು ಧಣಿಗಳಿಗೆ ಮನವರಿಕೆ ಮಾಡಿ ಅವರಿಗೆ ಕಿರಿಕಿರಿ ಎಬ್ಬಿಸುವುದರಲ್ಲಿ ಹೊಳೆಯೇನು ಹಿಂದೆ ಬಿದ್ದಿಲ್ಲ. ಹೊಳೆಯ ಈ ಉಪಟಳ ತಾಳಲಾರದೆ ಧಣಿಯವರು ಪ್ರತಿವರ್ಷವೂ ಹೊಳೆ ಸೊರಗುವ ಕಾಲಕ್ಕೆ ತನ್ನ ಮೇಲುಸ್ತುವಾರಿಯಲ್ಲಿ ನದಿ ಸೆರಗನ್ನು ಒಂದಷ್ಟು ಅತ್ಲಾಗೆ ದೂಡುವಂತೆ ಪಾದೆಕಲ್ಲು–ಮುರಕಲ್ಲಿನ ಗಟ್ಟಿ ಅಡಿಪಂಚಾಂಗ ಹಾಕಿಸಿ ನದಿಯ ಸೆರಗಿಗೂ ತೋಟಕ್ಕೂ ನಡುವೆ ದರೆ ಎಬ್ಬಿಸಿ ಎತ್ತರಿಸುವುದಿದೆ. ಈ ವರ್ಷ ಹೊಳೆಯ ಮೈಯಿಂದ ತೋಟವನ್ನು ನಾಕಡಿ ಎತ್ತರಿಸಿದ್ದರೆ, ಮುಂದಿನ ವರ್ಷ ಐದಡಿ ಎತ್ತರಿಕೆ. ಆದರೆ ಆ ಬಿರುಬೇಸಗೆಯಲ್ಲಿ ನಿತ್ರಾಣ ಸ್ಥಿತಿಯಲ್ಲಿರುವ ಹೊಳೆಯಂತೂ ತನ್ನ ನಿಶ್ಯಕ್ತ ಸ್ಥಿತಿಯಲ್ಲಿ ಧಣಿಗಳ ಆ ಕೃತ್ಯವನ್ನು ಕಂಡೂ ಕಾಣದಂತಿದ್ದು 'ಗದ್ದೆಯಲ್ಲಿ ಬಿತ್ತುವುದನ್ನು ಮರಳದಿನ್ನೆ ಮೇಲೆ ಬಿತ್ತಿದೆಯಲ್ಲವ ಮಾರಾಯ..?' ಎಂದು ಧಣಿಯವರ ಪೆದ್ದುತನದ ಬಗ್ಗೆ ಮನಸ್ಸಲ್ಲೇ ನಗುತ್ತಾ ಆ ಧರೆಯನ್ನು ಕೆಡವಲು ಹೊಂಚು ಹಾಕುತ್ತಿರುತ್ತದೆ. ಅನಾದಿ ಕಾಲದಿಂದಲೂ ಅಲ್ಲೇ ಇರುವ ಹೊಳೆಗೇನು ತಿಳಿದಿಲ್ಲವೆ. ಇವ ಧನಿಕ ಮಹಾಶಯ ತನ್ನ ಸೆರಗನ್ನೇ ಒತ್ತರಿಸಿಕೊಂಡು ತೋಟಮಾಡಿದ್ದಾನೆ ಎನ್ನುವ ಸತ್ಯ. ಅಂತು ಮಳೆಗಾಲ ಕಾಲಿಟ್ಟು ಆಟಿ ತಿಂಗಳ ನಾಲ್ಕು ಜಡಿಮಳೆ ಹೊಡೆದರೆ ಸಾಕು ಧಣಿಗಳು ಕಟ್ಟಿದ ದರೆ ಬುಡದಿಂದಲೇ ಲಯ. ಹೊಳೆ ತಟ್ಟನೆ ಧಣಿಯವರ ತೋಟದೊಳಗೆ ನುಗ್ಗಿ ಅದನ್ನಿಡೀ ಕಡಲು ಮಾಡಿ ಸೇಡು ತೀರಿಸಿಕೊಳ್ಳುತ್ತದೆ.

ಹೀಗೆ ಧಣಿ ಹಾಗೂ ಹೊಳೆಯ ನಡುವೆ ಇನ್ನೂ ಸಮರ ನಡೆಯುತ್ತಿದ್ದ ಆ ಶ್ರಾವಣಮಾಸದ ಮುಂಜಾನೆ, ಬಾಲಕ ಗುಡ್ಡ ತೋಟದ ಅಂಚಲ್ಲಿ ಕೂತು ಬೂದಿಯಿಂದ ತಿಕ್ಕಿದ ಪಾತ್ರೆಗಳು ಹೊಳೆಯ ನೀರಲ್ಲಿ ಜಾಲಾಡಿಸುತ್ತಿದ್ದ. ಹೊಳೆಯ ನೀರು ವಾರಗಟ್ಟಲೇ ಅಲ್ಲೇ ನಿಂತು ಧಣಿಗಳ ತೋಟದ ಅಂಚು ತುಳುವ ಹಲಸಿನಂತೆ ಮೆತ್ತಗಾಗಿದೆ ಎಂಬುದು ಆ ಪುಟ್ಟ ಬಾಲಕನಿಗೆ ಅದ್ಹೇಗೆ ತಿಳಿದೀತು? ಹಿಂದಿನ ದಿನ ರಾತ್ರಿ ಊರ ವಿಷ್ಣುಮೂರ್ತಿ ದೇವಳದಲ್ಲಿ ನಡೆದ ಹರಿಕಥಾ ಕಾಲಕ್ಷೇಪದಲ್ಲಿ ಹರಿದಾಸರು ಹೇಳಿರುವ ಉಪಕತೆಗಳನ್ನು ನೆನಪಿಸಿಕೊಂಡೇ ನಗುತ್ತಾ ಪಾತ್ರೆ ಬೆಳಗುತ್ತಿದ್ದ ಆ ಬಾಲಕನಿಗೆ ಕಾಲಡಿಯ ಮಣ್ಣು ಕುಸಿಯಬಹುದೆನ್ನುವ ಅಂದಾಜು ಇಲ್ಲ... ಪರಿಜ್ಞಾನವೂ ಇಲ್ಲ. ಕಾಲಡಿಯ ಮಣ್ಣು ಮೆಲುವಾಗಿ ಕುಸಿದು ಹೊಳಿಗೆ ಜಾರಿತು! ಕ್ಷಣಮಾತ್ರದಲ್ಲಿ ಗುಡ್ಡನ ಜತೆ ಧಣಿಗಳ ಮನೆಯ ಪಾತ್ರೆ, ಸೌಟು, ಕೊಳಗ, ತಪ್ಪಲೆಗಳೆಲ್ಲವೂ ನೀರು ಪಾಲಾದವು! ಗುಡ್ಡನೇನು ಸಾಮಾನ್ಯದ ಪೋರನೆ? ಆತನ ಈಜಿಗೆ ಮೀನುಗಳೇ ನಾಚಬೇಕು. ಈಜಿ ಮೇಲೆ ಬಂದವ ನೇರ ಧಾವಿಸಿದ್ದು ಅಪ್ಪ ಕುದುಪನತ್ತ. ಧಣಿಗಳ ತೋಟದಲ್ಲಿ ತೆಂಗಿನಬುಡ ಬಿಡಿಸುವ ಕಾಯಕದಲ್ಲಿ ಮಗ್ನನಾಗಿದ್ದ ಕುದುಪನಿಗೆ ಮಗನ ಮಾತು ಕೇಳಿ ಎದೆ ಬಡಿತ ಸ್ತಬ್ಧಗೊಂಡಂತಾಯಿತು. ಬಂದು ನೋಡುತ್ತಾನೇನು! ಮುಸುರೆ ಪಾತ್ರೆಗಳೆಲ್ಲವೂ ಹೊಳೆಯ ಪಾಲಾಗಿವೆ. ಧಣಿಗಳಿಗೇನಾದರೂ ಈ ಸುದ್ದಿ ತಲುಪಿದರೆ, ಅವರ ಸಿಟ್ಟಿನ ಭರಕ್ಕೆ ತಾವೆಲ್ಲರೂ ಹೊಳೆಪಾಲಾಗುವುದು ಖಂಡಿತ ಎಂದು ಆಲೋಚಿಸಿದವನೆ ತಟ್ಟನೆ ಮೈಯ ಬಟ್ಟೆಬರೆಗಳನ್ನೆಲ್ಲ ಜಾರಿಸಿ ಅತ್ತೆಸೆದು ಕೋಮಣಾಲಂಕೃತನಾಗಿ ಹೊಳೆಯಲ್ಲಿ ಮುಳುಗಿ ನೆಲಕಚ್ಚಿರುವ ಪಾತ್ರೆಗಳಿಗಾಗಿ ಜಾಲಾಡತೊಡಗಿದ್ದ. ಕುಸಿದ ಮಣ್ಣಡಿಯಲ್ಲಿ ಸಿಗುವಷ್ಟು ಪಾತ್ರೆಗಳು ಸಿಕ್ಕವು. ಇನ್ನೆಷ್ಟು ಪಾತ್ರೆಗಳು ಸಿಗಬೇಕು? ಕುದುಪನಿಗೆ ಅಂದಾಜಿಲ್ಲ. ಮುಸುರೆ ಪಾತ್ರೆಗಳ 'ಒಡೆಯ' ಮಗನನ್ನು ಕೇಳಿದರೆ ಆತ ತೋರುಬೆರಳನ್ನು ಬಾಯೊಳಗಿರಿಸಿಕೊಂಡು ಮೌನಮುದ್ರೆಯಲ್ಲಿದ್ದಾನೆ. ಹೇಗೂ ಚಡ್ಡಿ ಒದ್ದೆನೀರಾಗಿದೆ. ಮತ್ತೊಮ್ಮೆ ತಾನು ಈ ತುಂಬಿದ ಹೊಳೆಯಲ್ಲಿ ಯಾಕೆ ಈಜಬಾರದು? ಅಪ್ಪನಲ್ಲಿ ಕೇಳುವುದೋ.... ಬಿಡುವುದೋ ಎಂಬ ಯೋಚನೆಯಲ್ಲಿದ್ದ ಗುಡ್ಡನಲ್ಲಿ.

'ಏಯ್ ಮೂರ್ಕಾಸಿನ ಹಡಬೆ.... ಇಷ್ಟೇನಾ ಪಾತ್ರೆ..... ಇನ್ನ್ಯಾವುದಾದರೂ ಮುಳುಗಿದ್ಯನಾ....?'

ಅವನ ಪ್ರಶ್ನೆಗೆ ಮಗ ಯೋಚನೆಯ ಕೋಟೆಯಿಂದ ಹೊರಬಂದ.

ಊಹುಂ... ಮಗ ಗುಡ್ಡನಿಗೆ ಇನ್ನ್ಯಾವ ಪಾತ್ರೆಗಳೂ ನೆನಪಿಗೆ ಬರುತ್ತಿಲ್ಲ. ಮಾಮೂಲಾಗಿ ದಿನವೂ ಇರುವಂತಹ ಎರಡು ಕಂಚಿನ ಕೊಳಗ, ಎರಡು ಹಿತ್ತಾಳೆ ಗಿಂಡೆ, ಹತ್ತು ಹಿತ್ತಾಳೆ ಲೋಟ, ಎರಡು ಚೊಂಬು, ಆರು ಮರದ ಸೌಟು, ಎರಡು ಹಿತ್ತಾಳೆ ಸೌಟು, ಹತ್ತು ಕಂಚಿನ ಬಟ್ಟಲು, ಎಂಟು ಹಿತ್ತಾಳೆ ತಟ್ಟೆ, ಒಂದು ಬಾಣಲೆ.... ಇವೆಲ್ಲವೂ ಇವೆ. ಮತ್ತ್ಯಾವುದು ಕಾಣಿಸುತ್ತಿಲ್ಲ? ಮಗ ಗುಡ್ಡನಿಗೂ ತಿಳಿಯುತ್ತಿಲ್ಲ. ಅಪ್ಪನಿಗೂ ಅಷ್ಟೆ. ಅಪ್ಪ ಮಗನನ್ನು ಅದೆಷ್ಟು ಕಾಡಿದರೂ, ಬೇಡಿದರೂ ಬಾಲಕ ಗುಡ್ಡನಿಗೆ ಉತ್ತರಿಸಲು ಕಿವಿ ಬಾಯಿ ಏನೂ ತೋಚುತ್ತಿಲ್ಲ. ಧಣಿಯವರ ಒಡತಿ ದಿನವೂ ಹೊರಗೆ ಸುರಿಯುವ ಮುಸುರೆ ಪಾತ್ತೆಗಳನ್ನು ಹೊತ್ತು ತಂದು ಅದನ್ನು ಉಜ್ಜುವುದಷ್ಟೆ ಆತನ ಕೆಲಸ. ಎಷ್ಟು ಪಾತ್ರೆ... ಯಾವುದು ಏನು ಎತ್ತ ಯಾಕಿಷ್ಟು ಎಂದು ವಿಚಾರಿಸಿದರೆ, ಧಣಿಪತ್ನಿಗೆ ಮಜ್ಜಿಗೆ ಕಡೆಯುವ ಕಡೆಗೋಲಲ್ಲೆ ತಲೆ ಸೀಳಿಬಿಟ್ಟಾರು!

ಅಪ್ಪನ ಕಾಡುವಿಕೆಗೆ ಕೊನೆಗೂ ಯೋಚಿಸಿ ಯೋಚಿಸಿ ಹಣ್ಣಾದ ಗುಡ್ಡನಿಗೆ ತಟ್ಟನೆ ನೆನಪಿಗೆ ಬಂದದ್ದು ಆ ಬೆಳ್ಳಿಲೋಟ. ಮುಂಜಾನೆ ರೇಜಿಗೆ ಹಿಡಿಸುವಷ್ಟು ಬಾರಿ ಧಣಿಪತ್ನಿಯವರು 'ಈ ಬೆಳ್ಳಿಲೋಟ ಜಾಗ್ರತೆ ಮಾರಾಯ, ನನ್ನ ಮದುವೆಯಲ್ಲಿ ನನ್ನಪ್ಪ ಕೊಟ್ಟಿದ್ದು.... ಅಪ್ಪಯ್ಯ ಕುಡ್ಲದ ರಥಬೀದಿಯಲ್ಲಿರುವ ನರಸಿಂಹಾಚಾರಿಯಲ್ಲಿ ಮಾಡಿದ್ದು. ಅದರ ಮೈಮೇಲಿನ ಹೂಬಳ್ಳಿಯನ್ನು ಈ ಕಾಲದಲ್ಲಿ ಯಾವ ಆಚಾರಿ ತಾನೆ ಮಾಡಿಯಾನು...' ಎಂದು ಹೇಳಿಯೇ ಮುಸುರೆ ಪಾತ್ರೆಯ ಜತೆಗೆ ಅದನ್ನೂ ಸೇರಿಸಿ ಇಟ್ಟದ್ದನ್ನು ಗುಡ್ಡ ಇದೀಗ ನೆನಪಿಸಿಕೊಂಡ.

ಆದರೇನು ಆತ ನೆನಪಿಸಿಕೊಂಡದ್ದೇ ಬಂತು. ಕುದುಪ ಅದೆಷ್ಟು ಬಾರಿ ಹೊಳೆಯೊಳಗೆ ಮುಳುಗಿ ಮೇಲೆದ್ದರೂ ಬೆಳ್ಳಿಲೋಟವನ್ನು ಬಿಟ್ಟು ಕೊಡುತ್ತಿಲ್ಲ. ಅಂತೂ ಬೆಳ್ಳಿಲೋಟ ಹೊಳೆಯ ಒಡಲಿಂದ ಹೊರಬರಲಿಲ್ಲ. ಅಪ್ಪ ಮಗ ಇಬ್ಬರೂ, ಆಗ ತಾನೆ ಅಲ್ಲಿಗೆ ಬಂದ ಚಿನ್ನಮ್ಮನ ಜತೆಸೇರಿ ಸಾಕಷ್ಟು ಕಣ್ಣೀರನ್ನು ಹೊಳೆಯ ನೀರಿಗೆ ಸೇರಿಸಿದರೂ ಹೊಳೆಯಿಂದ ಬಂದ ಉತ್ತರ ಒಂದೇ – ಬೆಳ್ಳಿಲೋಟ ಇಲ್ಲ ಎಂಬುದೇ. ಭೂಮಿ ಆಕಾಶ ಒಂದಾಗುವಂತೆ ಮತ್ತೆ ಮಳೆ ಜಡಿಯತೊಡಗಿದಾಗ ಕುದುಪ ಅಸಹಾಯಕನಾಗಿ ಧಣಿಗಳ ಅಂಗಳಕ್ಕೆ ಬಂದು ಬೆಳ್ಳಿಲೋಟದ ವಿಷಯ ತಲುಪಿಸಿದ್ದ. ಮಳೆಯ ಆರ್ಭಟದ ಜತೆ ಧಣಿಯರ ಆರ್ಭಟವೂ ಏರಿತು. ಆ ಆರ್ಭಟದ ಜತೆಗೆ ಕುದುಪನ ಕುಟುಂಬವೆ ಬೆಳ್ಳಿಲೋಟವನ್ನು ಲಪಟಾಯಿಸಿದ್ದು ಎಂಬ ಅಪವಾದವೂ ಬೀಸಿ ಬಂದು, ಕುದುಪ ಧಣಿಗಳ ಕೈಕಾಲು ಹಿಡಿದು ನಡೆದ ನಿಜಸ್ಥಿತಿ ವಿವರಿಸಿದರೂ ಅವರು ಒಪ್ಪಲೊಲ್ಲರು. ಧಣಿಯವರು ಎಂದಾದರೂ ಒಕ್ಕಲ ಮಕ್ಕಳನ್ನು ನಂಬಿದ್ದುಂಟೆ?

'ಇದೆಲ್ಲ ಸಾಕು ಮಾರಾಯ, ಯಾವತ್ತೂ ನಮ್ಮ ಮುಸುರೆ ಪಾತ್ರೆಗಳನ್ನು ನುಂಗದ ಹೊಳೆ ಇವತ್ತು ನನ್ನಪ್ಪ ಮದುವೆಯಲ್ಲಿ ಕೊಟ್ಟ ಬೆಳ್ಳಿಲೋಟವನ್ನು ನುಂಗಿತನಾ....' ಎಂದು ಒಳಮನೆಯ ದಾರಂದಕ್ಕೆ ಆತು ನಿಂತು ಧಣಿಪತ್ನಿಯವರು ಚೀರಿದಾಗ ಕುದುಪನ ಬಾಯಿ ಕಟ್ಟಿಹೋಗಿತ್ತು.

ಧಣಿಗಳು ಗುಡ್ಡನ ಬಾಯಿ ಬಿಡಿಸಲು ಆತನ ಮೈ ಮೇಲಿನ ಚರ್ಮ ಸುಲಿಯುವುದೊಂದೇ ಬಾಕಿ. ಅಂಗಳದ ಹೊಂಗಾರೆ ಮರಕ್ಕೆ ಆತನನ್ನು ಬಿಗಿದು ಆ ಮಳೆಯಲ್ಲೇ ತೆಂಗಿನ ಕೊತ್ತಳಿಗೆಯಲ್ಲಿ ಬಡಿದೇ ಬಡಿದರು. ಚಿನ್ನಮ್ಮನಿಗೆ ತನ್ನ ಕರುಳ ಕುಡಿಯ ಚೀರಾಟ ನರಳಾಟ ನೋಡಲಾಗಲ್ಲಿಲ್ಲ. ತಟ್ಟನೆ "ನಮ್ಮ ಊರ ಕೋಡ್ದಬ್ಬು ದೈವದ ಆಣೆಯಿದೆ.... ಇನ್ನು ನನ್ನ ಮಗನ ಮೇಲೆ ಕೈಮಾಡಿದಲ್ಲಿ....." ಎಂದು ಅಸಹಾಯಕತನದಿಂದ ಕಿರಿಚುತ್ತ ಧಣಿಗಳ ಕಾಲಿಗಡ್ಡ ಬಿದ್ದು, ತಾನು ಆ ಬೆಳ್ಳಿಲೋಟದ ಹಣವನ್ನು ವರ್ಷಾನುಗಟ್ಟಲೆ ಪಡಿಯಿಲ್ಲದೆ ನಿಮ್ಮಲ್ಲಿ ದುಡಿದು ತೀರಿಸುವೆನೆಂದು ಅಳುತ್ತಾ ಬೇಡಿಕೊಂಡಳು. ಧಣಿಗಳ ಕೈಯಿಂದ ಕೊತ್ತಳಿಗೆ ಕೆಳಗುರುಳಿತು. ಮುಂದಿನ ಮೂರು ಬೇಸಿಗೆವರೆಗೆ ಚಿನ್ನಮ್ಮನ ದುಡಿತಕ್ಕೆ ಪಡಿಯಿಲ್ಲ – ಎಂಬ ಕರಾರಿನನ್ವಯ ಗುಡ್ಡ ಬಂಧಮುಕ್ತನಾದ.

ಧಣಿಗಳ ಬೆಳ್ಳಿಲೋಟವನ್ನು ಎಂದು ಆ ಹೊಳೆ ನುಂಗಿತ್ತೊ ಅಂದಿನಿಂದ ಚಿನ್ನಮ್ಮ ಒಂಥರಾ ಹುಚ್ಚಳಾಗಿದ್ದಾಳೆ. ಆ ಘಟನೆ ನಡೆದು ಇಂದಿಗೆ ನವಮಾಸಗಳು ಉರುಳಿವೆ. ಬೆಂಕಿಯುಗುಳುವ ವೈಶಾಖ ಮಾಸ ಕಾಲಿಟ್ಟಿದೆ.

ಇಂದು ವೈಶಾಖಮಾಸದ ಮೂರನೇ ದಿನ. ಮುಂಜಾನೆ ಚಿನ್ನಮ್ಮ ಎಂದಿನಂತೆ ಹೊಳೆ ಅಂಚಿನಲ್ಲಿ ಕೂತು ಪಾತ್ರೆ ತಿಕ್ಕುತ್ತಾ ಹೊಳೆಯ ಮನೆಹಾಳು ಬುದ್ದಿಯನ್ನು ನಿಂದಿಸುತ್ತಿದ್ದಾಳೆ. ಅಷ್ಟರಲ್ಲೆ ಧಣಿಗಳು ಕುದುಪನ ಜತೆಗೂಡಿ ಬಂದು ಆ ದಿನದ ಕೆಲಸ ಕಾರ್ಯಗಳ ಬಗ್ಗೆ ಮಾತೆತ್ತಿದ್ದಾರೆ. ಕುದುಪ ಸೊಂಟದಲ್ಲಿನ ಕರಿದಾರಕ್ಕೆ ಕೋಮಣದ ತುಂಡೊಂದನ್ನು ಸಿಲುಕಿಸಿ, ತಲೆಗೊಂದು ಎಲೆವಸ್ತ್ರ ಬಿಗಿಯುತ್ತಾ ಧಣಿಗಳಿಂದ ಉದುರುವ ಮಾತುಗಳನ್ನು ಹೆಕ್ಕಿಕೊಳ್ಳುವ ಭಂಗಿಯಲ್ಲಿ ನಿಂತಿದ್ದಾನೆ. ಕಾದು ಬತ್ತಿರುವ ಹೊಳೆಯಿಂದ ಹೂಳೆತ್ತಿ ತಂದು ತೆಂಗಿನ ತೋಟಕ್ಕೆ ಹಾಕಬೇಕೆಂದು ಧಣಿಗಳು ಕುದುಪನಿಗೆ ಸೂಚನೆ ನೀಡುತ್ತಿದ್ದರು. ಧಣಿಗಳ ಮಾತು ಚಿನ್ನಮ್ಮನ ಕಿವಿಗೂ ತಲುಪುತ್ತಿದೆ. ಆದರೆ ಅದು ತನಗಲ್ಲ ತನ್ನ ಕಿವಿ ಬೀಳಿನ ಬುಗುಡಿಗೆ ಎಂಬಂತೆ ತಾನು ಧಣಿಗಳ ಮನೆಯ ಮುಸುರೆ ಪಾತ್ರೆ ತಿಕ್ಕುತ್ತಾ ಹೊಳೆಯ ಬಗ್ಗೆಯೇ ತಲೆ ಕೆಡಿಸಿಕೊಳ್ಳುತ್ತಿದ್ದಳು.

ಚಿನ್ನಮ್ಮ ಕೊನೆಗೂ ಮುಸುರೆ ಕೆಲಸವನ್ನೆಲ್ಲ ಮುಗಿಸಿ ತನ್ನ ಗುಡಿಸಿಲಿನಲ್ಲಿ ಒಣ ಮೀನ ಚಟ್ನಿಯಲ್ಲಿ ತಂಗಳನ್ನ ಉಂಡು ಬಂದು ಹೂಳು ಹೊರುವ ಕೆಲಸದಲ್ಲಿ ತೊಡಗಿಕೊಂಡಳು. ಸುಡುವ ಸೂರ್ಯನಡಿ ಹೂಳೆತ್ತುತ್ತಾ ತಾನು ಕರಟುತ್ತಿರುವಾಗ ತೋಟದ ನೆರಳಲ್ಲಿ ಕುಳಿತು ಧಣಿಯವರು ಕೊಡುವ ಸೂಚನೆಗಳಿಂದ ಚಿನ್ನಮ್ಮನ ಸಿಟ್ಟಿನುರಿಗೆ ಮತ್ತಷ್ಟು ತುಪ್ಪ ಸುರಿದಂತಾಗುತ್ತಿತ್ತು. ಚಿನ್ನಮ್ಮ ಅಸಹನೆಯಿಂದ ಕನಲುತ್ತಾ, ನೆತ್ತಿ ಮೇಲೆ ಬೆಂಕಿಯುಗುಳುತ್ತಿದ್ದ

ಸೂರ್ಯನನ್ನೂ ಧಣಿಯನ್ನು ಶಪಿಸುತ್ತಾ ಹೂಳು ಹೊರುತ್ತಿದ್ದಳು. ಕುದುಪ ಹೂಳು ತುಂಬಿ ಕೊಡುತ್ತಿದ್ದ. ಚಿನ್ನಮ್ಮ ಅದನ್ನು ಹೊತ್ತುತಂದು ತೆಂಗಿನ ಬುಡಕ್ಕೆ ಎಸೆಯುತ್ತಿದ್ದಳು.

ಹೂಳೆತ್ತುವ ಕೆಲಸ ಹಾಗೆಯೇ ಮುಂದುವರಿದಿತ್ತು. ಮೂಳೆ ಮುರಿದು ಹೋಗುವಂತಹ ಕೆಲಸವದು. ಕುದುಪ ಸುಸ್ತಾದ. ಒಂದರೆಕ್ಷಣ ಅಲ್ಲೇ ನೀರೊಳಗೆ ಕುಸಿದು ಕುಳಿತ. ನೆರಳಲ್ಲಿದ್ದ ಧಣಿಗಳಿಗೆ ಸಿಟ್ಟಿನಿಂದ ಪಿತ್ತವೇರಿದಂತಾಯ್ತು. 'ಎದ್ದೇಳೋ ಮೂರ್ಕಾಸಿನವ.... ಪಡಿ ಅಳೆಯುವಾಗ ಪಾವಕ್ಕಿ ಕಮ್ಮಿ ಮಾಡಿದರೆ ಸುಮ್ಮನೆ ಇರ್ತಿಯೇನೋ ನೀನು?' ಎಂದು ಸಿಡುಕಿದರು. ಚಿನ್ನಮ್ಮನಿಗಂತೂ ಪಡಿಯಿಲ್ಲದ ಈ ದುಡಿತದ ಬಗ್ಗೆ ಇನ್ನಿಲ್ಲದಂತಹ ಅಸಮಾಧಾನವಿದೆ. ಒಂದೆಡೆ ಕಳ್ಳತನದ ಅಪವಾದ, ಮತ್ತೊಂದೆಡೆ ಕಠಿಣ ಶ್ರಮದ ದುಡಿತಕ್ಕೂ ಬೆವರಿಗೂ ಪ್ರತಿಫಲವಿಲ್ಲ. ಚಿನ್ನಮ್ಮ ತನ್ನ ಬಾರದ ಒಡಲನ್ನು ಕಣ್ಣೀರು ಜಿನುಗಿಸಿಕೊಂಡು ಮೆದುಗೊಳಿಸಿಕೊಂಡಳು. ಕುದುಪ ಧಣಿಯವರ ಸಿಡುಕು ಬೈಗಳಿಗೆ ಬೆದರಿ ಎದ್ದು ನಿಂತು ಮತ್ತೆ ಕೆಲಸದಲ್ಲಿ ಮಗ್ನನಾದ. ಗಂಡ ಹೆಂಡಿರಿಬ್ಬರೂ ಹೊಳೆಗೆ ಬೆವರಿನ ಮಳೆ ಸುರಿಸಿದರು. ಕುದುಪನಂತೂ ಆ ಬಿರುಬಿಸಿಲಿನ ಝಳಕ್ಕೆ ಕುಸಿಯುವಂತಾದ. ಆದರೂ ಧಣಿಗಳ ಭಯದಿಂದ ಕುಸಿಯದಾದ. ದೇಹದ ಮೂಲೆಮೂಲೆಗಳಿಂದ ಒಂದಷ್ಟು ತಾಕತ್ತನ್ನು ಸೋಸಿ ತಂದು ಮತ್ತೆ ಬುಟ್ಟಿಗೆ ಹೂಳು ತುಂಬತೊಡಗಿದ. ಬುಟ್ಟಿ ತುಂಬತೊಡಗಿತು... ಇನ್ನೇನು ಹೂಳು ತುಂಬಿದ್ದ ಬುಟ್ಟಿಯನ್ನು ಚಿನ್ನಮ್ಮನ ತಲೆಗೇರಿಸಬೇಕೆನ್ನುವಷ್ಟರಲ್ಲಿ ನೋಡುತ್ತಾನೇನು! ಅವ ಮೂರ್ಛೆ ಬೀಳುವಂತಾದ.

ನವಮಾಸಗಳ ಕಾಲ ಹೊಳೆಯ ಉದರದಲ್ಲಿ ಅಡಗಿದ್ದ ಧಣಿಗಳ ಬೆಳ್ಳಿಲೋಟದ ಮಂಕು ಮೂತಿ ಕಾಣಿಸುತ್ತಿದೆ! ತಾನೀ ದಂಪತಿಗಳನ್ನು ಅಪವಾದದ ಕುಣಿಕೆಯೊಳಗೆ ಸಿಲುಕಿಸಿ ನದಿಯ ಉದರದಲ್ಲಿ ಅಡಗಿ ಕೊಂಡೆನಲ್ಲಾ – ಎಂಬ ಪಶ್ಚಾತ್ತಾಪದಲ್ಲದು ಮುಖ ಮರೆಮಾಡಿಕೊಂಡಿದೆಯೇನೋ ಎಂಬಂತೆ ಕೆಸರೊಳಗೆ ದೇಹ ಹುದುಗಿಸಿಕೊಂಡಿದ್ದ ಬೆಳ್ಳಿಲೋಟವನ್ನು ಕುದುಪ ನಿಧಾನಕ್ಕೆ ಬುಟ್ಟಿಯಿಂದ ಹೊರಗೆಳೆದ. ಇನ್ನೂ ಸೂತಕ ಕಳೆಯದ ಹಸಿ ಮಗುವನ್ನು ಮೀಯಿಸುವಂತೆ ನಿಧಾನಕ್ಕೆ ಹೊಳೆಯ ನೀರಲ್ಲಿ ಆ ಬೆಳ್ಳಿಲೋಟವನ್ನು ತೊಳೆಯತೊಡಗಿದ. ಈ ಲೋಟದಿಂದಾಗಿ ತಾನೆಷ್ಟು ಅಪಮಾನದ ಮಾತುಗಳನ್ನು ಆ ಧಣಿಪತ್ನಿಯವರ ಕೊಳಕು ಬಾಯಿಂದ ಕೇಳಿಬಿಟ್ಟೆ..... ಎಂದು ಕುದುಪ ಹನಿಗಣ್ಣಾಗಿಯೇ ಆ ಲೋಟ ತೊಳೆದ. ಹೊಳೆಯ ಹೂಳೊಳಗೆ ಅವಿತು ತನ್ನ ಬಣ್ಣ ಗಾಂಭೀರ್ಯ ಕಳೆದುಕೊಂಡಂತಿದ್ದ ಬೆಳ್ಳಿಲೋಟಕ್ಕೆ ಇದೀಗ ಕುದುಪನಿಂದಾಗಿ ಜೀವ ಬಂದಂತಾಯ್ತು.

ತೋಟದಂಚಿನ ನೆರಳಲ್ಲಿ ಕುಳಿತು ಒಕ್ಕಲ ಮಕ್ಕಳ ಬೆವರಧಾರೆಯನ್ನೇ ದಿಟ್ಟಿಸುತ್ತಿದ್ದ ಧಣಿಗಳನ್ನು ಬೆಳ್ಳಿಲೋಟವು ಗಮನಿಸಿತು. ಧಣಿಗಳು ಮಾತ್ರ ಆ ಲೋಟವನ್ನು ಗಮನಿಸುವಂತಿರಲಿಲ್ಲ. ಅವರು ಚಿನ್ನಮ್ಮನ ಹಣೆಯಿಂದ ಕುಂಕುಮದೊಂದಿಗೆ ಕೆಳಗಿಳಿಯುತ್ತಿದ್ದ ಬೆವರಿನ ದಾರಿಯನ್ನೆ ಗಮನಿಸುತ್ತಿದ್ದರು. ಕುದುಪ ಹೂಳು ತುಂಬಿದ ಬುಟ್ಟಿಯನ್ನೆತ್ತಿ ಚಿನ್ನಮ್ಮನ ತಲೆಗೇರಿಸದೆ ನೀರೊಳಗೇ ನಿಂತು... ಕೂತು ಕಾಲ ಕಳೆಯುವ ಇನ್ನೇನೋ ಮಸಲತ್ತು ನಡೆಸುತ್ತಿರುವುದನ್ನು ಕಂಡು ಧಣಿಗಳು ಮತ್ತೆ ಸಿಟ್ಟಾದರು. ಆದರೂ ಇದೇನೊ ಹೊಸ ಮಸಲತ್ತು ಇರಬೇಕೆಂದು ಕಣ್ಣು ಕಿರಿದುಗೊಳಿಸಿ ಆತನತ್ತಲೇ ದಿಟ್ಟಿ ನೆಟ್ಟರು.

ಕುದುಪ ಯಾವುದೋ ಒಂದು ಕುಲಗೆಟ್ಟ ಲೋಟವನ್ನು ನೀರೊಳಗೆ ಅದ್ದಿ ತೆಗೆದು ಮಣಗಟ್ಟಲೆ ಕೊಳೆಗಟ್ಟಿದ್ದ ತನ್ನ ಎಲೆ ವಸ್ತ್ರದಲ್ಲಿ ಒರಸಿ ಚಿನ್ನಮ್ಮನ ಕೈಗೆ ಕೊಡುವುದನ್ನು ಧಣಿಗಳು ಮೌನವಾಗಿಯೇ ದಿಟ್ಟಿಸಿದರು. ಮಾನಗೆಟ್ಟ ಈ ಹುಚ್ಚು ಹೊಳೆ ಯಾವುದೋ ಮಳೆಗಾಲದಲ್ಲಿ ಯಾರದ್ದೋ ಮನೆ, ಮಠ ಮುಳುಗಿಸಿ ಹೊತ್ತುತಂದಿರುವ ಲೋಟವಿರಬೇಕದು ಎಂದು ಯೋಚಿಸಿದ ಧಣಿಗಳು, ಆ ಹಾಳು ಲೋಟದ ಜಗತ್ತಲ್ಲೆ ಮುಳುಗಿ ಹೋದ ಗಂಡ ಹೆಂಡಿರ ಚಲನವಲನವನ್ನು ಕಿರಿದು ಕಣ್ಣಿಂದ ಮತ್ತಷ್ಟು ಗಮನಿಸತೊಡಗಿದರು. ನಿಧಾನಕ್ಕೆ ಕೂತಲ್ಲಿಂದ ಎದ್ದುಬಂದರು.

ಹಾಗೇ ಸದ್ದಿಲ್ಲದೆ ಬಂದ ಧಣಿಗಳು ನೆರಳಲ್ಲೇ ನಿಂತು ತನ್ನೆದುರು ನಡೆಯುತ್ತಿದ್ದ, ವ್ಯಾಪಾರವನ್ನು ಕಿರುಗಣ್ಣಿನಿಂದ ಗಮನಿಸುತ್ತಿದ್ದಂತೆ ಅವರ ಎದೆ ಬಡಿತದ ಲಯ ತಪ್ಪತೊಡಗಿತು. ಅವರ ಒಡಲ ಸಮಸ್ತ ವ್ಯವಹಾರಗಳು ಒಂದರೆಗಳಿಗೆ ಸ್ತಬ್ಧಗೊಂಡಂತಾಯ್ತು! ಚಿನ್ನಮ್ಮ ತನ್ನ ಕೈಯಲ್ಲಿದ್ದ ಲೋಟ ತಿರುಗಿಸುತ್ತಿದ್ದಂತೆ ಅವರನ್ನೇ ಆಕೆ ತಿರುಗಿಸಿದಂತಾಯ್ತು! ಕಂಠದಲ್ಲಿ ಬಳ್ಳಿ ಬಿಟ್ಟ ಆ ಬೆಳ್ಳಿಲೋಟ ಧಣಿಯವರಿಗೆ ನಿಧಾನಕ್ಕೆ ತನ್ನ ಪರಿಚಯ ಮಾಡಿಸತೊಡಗಿತ್ತು. ಹೌದು! ಅದೇ ಬೆಳ್ಳಿಲೋಟ. ಅದರ ಕಂಠ ಏಳು ಎಸಳುಗಳ ದೊಡ್ಡ ಹೂವಿನಂತಿದೆ. ಧಣಿಗಳಿಗೆ ಲೋಟದ ಪರಿಚಯ ಪೂರ್ಣವಾಯ್ತು. ಎಷ್ಟೆಂದರೂ ಕಳೆದ ನಲವತ್ತು ವಸಂತಗಳಿಂದ ಆ ಬೆಳ್ಳಿಲೋಟ ಧಣಿಗಳ ಒಡನಾಟದಲ್ಲಿರಲ್ಲಿಲ್ಲವೆ! ಧಣಿಗಳ ದಾಂಪತ್ಯ ಜೀವನದ ಎಲ್ಲ ಪ್ರಮುಖ ಹಂತಗಳಲ್ಲೂ ಅದು ಮೂಕಸಾಕ್ಷಿಯಾಗಿರಲಿಲ್ಲವೆ?

ಧಣಿಗಳು ಆ ಬೆಳ್ಳಿಲೋಟವನ್ನೇ ದಿಟ್ಟಿಸಿದರು. ಚಿನ್ನಮ್ಮಳೂ ಲೋಟವನ್ನು ಹಾಗೇ ತಿರುಗಿಸಿ ನೋಡುತ್ತಲೇ ಅದರ ಪರಿಚಯ ಮಾಡಿಕೊಂಡಳು. ಆಕೆಯೂ ಆ ಬೆಳ್ಳಿಲೋಟವನ್ನು ಅದೆಷ್ಟು ಬಾರಿ ನೊರೆಕಾಯಿಂದ ಮೀಯಿಸಿಲ್ಲ. ಹಾಗೆ ಮೀಯಿಸುವಾಗಲೆಲ್ಲ ಅದರ ಮೈಮೇಲೆ ಬಿಟ್ಟಿರುವ ಬಳ್ಳಿಯ ಚಂದವನ್ನು ಅದೆಷ್ಟು ಬಾರಿ ಧಣಿಪತ್ನಿಯವರಲ್ಲಿ ಹೊಗಳಿಲ್ಲ. ಹೌದು, ಅದೇ...... ಕಂಠದಲ್ಲೆಲ್ಲ ಬಳ್ಳಿ ಬಿಟ್ಟ ಚಂದದ ಲೋಟ! ಚಿನ್ನಮ್ಮನಿಗೆ ಆ ಲೋಟವನ್ನು ಅದೆಷ್ಟು ನೋಡಿದರೂ ಸಾಲದು. ಧಣಿಗಳಿಗೆ ಕಾಣುವಂತೇ ಎತ್ತರಿಸಿ ಹಿಡಿದು ನೋಡಿಯೇ ನೋಡಿದಳು.

ಕುದುಪನೂ ಆ ಬೆಳ್ಳಿಲೋಟವನ್ನೆ ಗಮನಿಸುತ್ತಿದ್ದ. ಆತನಿಗಂತೂ ಆ ಲೋಟದ ದರ್ಶನವಾದೊಡನೆ ಬಿಸಿಲಿನಿಂದ ಜೀವ ಕಳೆದುಕೊಂಡಂತಿದ್ದ ದೇಹಕ್ಕೆ ಮತ್ತಷ್ಟು ಹೊಸ ಚೈತನ್ಯ ಬಂದಂತಾಗಿತ್ತು. ನೆತ್ತಿ ಮೇಲೆ ಬಿಸಿಲು ಕಾರುತ್ತಿರುವ ಸೂರ್ಯ ಇನ್ನಷ್ಟು ಬೇಕಿದ್ದರೆ ಕಾರಲಿ... ಎಂಬ ಉಡಾಫೆಯೂ ಆತನಲ್ಲಿ ಮೈತಳೆದು ಬಂದಂತಿತ್ತು. ಆತ ಚಿನ್ನಮ್ಮನ ಕೈಯಲ್ಲಿದ್ದ ಬೆಳ್ಳಿಲೋಟವನ್ನೊಮ್ಮೆ ಧಣಿಯವರ ಪರಿಧಿಗೆ ಒಪ್ಪಿಸಲು ಕಾತುರನಾಗಿ ಆ ಲೋಟ ಚಿನ್ನಮ್ಮನಿಂದ ತನ್ನ ಕೈಗೆ ಹಸ್ತಾಂತರಗೊಳ್ಳುವ ಕ್ಷಣಕ್ಕಾಗಿ ಕಾಯುತ್ತಿದ್ದ.

ಹಾಗೆ ಕಾಯುವ ಪ್ರತೀಕ್ಷಣವೂ ಆತನಿಗೆ ಅತೀ ದೀರ್ಘವಾಗಿ ಪರಿಣಮಿಸತೊಡಗಿತ್ತು. ಕ್ಷಣಕ್ಷಣಕ್ಕೂ ಆತನ ಚಡಪಡಿಕೆ ಏರುತ್ತಿದ್ದರೂ ಆ ಬಗ್ಗೆ ಚಿನ್ನಮ್ಮನಿಗೆ ಲಕ್ಷ್ಯವಿಲ್ಲ. ಲೋಟದ ಚಂದವನ್ನು ಆಕೆ ಮತ್ತೆ ಮತ್ತೆ ತಿರುಗಿಸಿ ನೋಡುತ್ತಿದ್ದಂತೆ.... ಆಕೆಯ ಒಡಲಲ್ಲೂ ಅದೆಷ್ಟೋ ಭಾವನೆಗಳು ಗಿರಕಿ ಹೊಡೆಯತೊಡಗಿದ್ದವು. ಇದೇ ಲೋಟವಲ್ಲವೆ... ತನ್ನ ಬೆವರಿನ ಬೆಲೆ ಕಳೆದದ್ದು. ಕಳ್ಳತನದ ಕಿರೀಟವನ್ನು ತನ್ನ ಮುರುಕಲು ಗುಡಿಸಲ ಚಾವಣಿಗೆ ಜೋಡಿಸಿದ್ದು. ಥೂ! ಬೆಳ್ಳಿಯದ್ದಾದರೇನಂತೆ.... ಬುದ್ಧಿ ಮಣ್ಣಿಗಿಂತಲೂ ಬುರ್ನಾಸು, ಮೂರ್ಕಾಸಿನದ್ದು! ಪಟ್ಟದ ಮೇಲಿನ ಕತ್ತಿಗೆ ಚಟ್ಟದಲ್ಲಿರುವವನ ಮೇಲೆ ದಿಟ್ಟಿ ಎಂದಿಗೂ ಸಲ್ಲ. ಜಾತಿಹಾವಿಗ್ಯಾಕೆ ಎರೆಹುಳದಂತೆ ಕೆಸರು ಕೆದಕುವ ಕೆಲಸ! ಈ ಬೆಳ್ಳಿಲೋಟದಿಂದಾಗಿ ತನ್ನ ಕುಟುಂಬ ಇದುವರೆಗೆ ಉಂಡ ನೋವು, ಅವಮಾನ ಪಟ್ಟಪಾಡು ಪರಿತಾಪಗಳೆಲ್ಲ ಚಿನ್ನಮ್ಮನ ಚಿತ್ತದಿಂದ ದಿಗಿಣ ತೆಗೆದು ಮೇಲೆದ್ದು ಬಂದು ಆಕೆಯ ಯೋಚನಾಶಕ್ತಿ ವಿವೇಚನಾ ಶಕ್ತಿಯನ್ನೇ ಕ್ಷಣಕಾಲ ಕಸಿದುಕೊಂಡವು. ಒಡಲ ಪಿತ್ತ ಒಂದರೆ ಕ್ಷಣ ಕೆರಳಿದಂತಾಯಿತು. ಆ ಸಂಕಟವುಂಡ ಜೀವಕ್ಕೆ ಏನನಿಸಿತೋ ಆ ಕ್ಷಣ! ಚಿನ್ನಮ್ಮ ತಟ್ಟನೆ ಪೂರ್ವಾಭಿಮುಖವಾಗಿ ನಡೆದಳು. ಆ ಹೊಳೆಯಲ್ಲೆ ಹತ್ತು ಹೆಜ್ಜೆ ಹಾಕಿ ಹನ್ನೊಂದನೇ ಹೆಜ್ಜೆಯಡಿ ನಿಂತವಳು... ಅತ್ತ ದೂರದಲ್ಲಿದ್ದ ಹೊಳೆಯ ಆಳ ಮಡುವತ್ತ ಬೆಳ್ಳಿಲೋಟವನ್ನು ಎಸೆದೇ ಬಿಟ್ಟಳು! ಕಂಠದಲ್ಲಿ ಬಳ್ಳಿ ಹೊತ್ತ ಆ ಬೆಳ್ಳಿಲೋಟ ತೋಟದಂಚಿನ ನೆರಳಲ್ಲಿ ನಿಂತು ತನ್ನನ್ನೇ ದಿಟ್ಟಿಸುತ್ತಿದ್ದ ಧಣಿಯವರ ಮೋರೆಯ ಅಸಂಖ್ಯ ಭಾವನೆಗಳನ್ನು ಓದುತ್ತಾ ಆಳದ ಮಡುವಲ್ಲಿ ನಿಧಾನಕ್ಕೆ ಮುಳುಗಿ ಹೋಯ್ತು. ಚಿನ್ನಮ್ಮ ಹೊಳೆಯ ನೀರಲ್ಲೊಮ್ಮೆ ಸಂಪೂರ್ಣ ಮುಳುಗಿ ಮತ್ತೆ ಎದ್ದು ನಿಂತಳು. ನೆರಳಲ್ಲಿದ್ದ ಧಣಿಯವರು ತಾನು ಹೊದ್ದುಕೊಂಡಿದ್ದ ವಲ್ಲಿಯಿಂದ ಮುಖಕ್ಕೆ ಗಾಳಿ ಬೀಸಿಕೊಂಡರು.

## ಲೇಖಕರ ಪರಿಚಯ :



**ಡಾ॥ ಎಚ್. ನಾಗವೇಣಿ** (ಜನನ : ೨೯.೧೧.೧೯೬೨): ಆಧುನಿಕ ಕನ್ನಡ ಸಾಹಿತ್ಯದ ಮಹತ್ವದ ಲೇಖಕಿಯರಲ್ಲಿ ಎಚ್. ನಾಗವೇಣಿ ಒಬ್ಬರು. ನಾಗವೇಣಿಯವರು ಮಂಗಳೂರಿನ ಹೊನ್ನಕಟ್ಟೆ ಎಂಬಲ್ಲಿ ಜನಿಸಿದರು. ಮಾಹಿತಿ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದು ಕೊಲ್ಕತ್ತಾದ ರಾಷ್ಟ್ರೀಯ ಗ್ರಂಥಾಲಯದ ಕೇಂದ್ರೀಯ ಪರಾವರ್ತನೆಯಲ್ಲಿ ಸೇವೆ ಸಲ್ಲಿಸಿ ಈಗ ಹಂಪಿ ಕನ್ನಡ ವಿ.ವಿ.ಯಲ್ಲಿ ಮುಖ್ಯ ಗ್ರಂಥಪಾಲಕಿ ಆಗಿದ್ದಾರೆ. ಹೊಸ ಕಥನ ಶೈಲಿಯನ್ನು ರೂಢಿಸಿಕೊಂಡಿರುವ ನಾಗವೇಣಿಯವರು ಕರಾವಳಿಯ ಪರಿಸರವನ್ನು ತಮ್ಮ ಕಥನಗಳಲ್ಲಿ ಆಪ್ತವಾಗಿ ಚಿತ್ರಿಸಿದ್ದಾರೆ.

ಗಾಂಧಿ ಬಂದ ಕಾದಂಬರಿ, ನಾಕನೇ ನೀರು, ಮೀಯುವ ಆಟ ಇವರ ಕಥಾಸಂಕಲನಗಳು, ವಸುಂಧರೆಯ ಗ್ಯಾನ ಪ್ರಬಂಧಗಳ ಸಂಕಲನ. ಸೂರ್ಯನಿಗೊಂದು ವೀಳ್ಯ ಅಂಕಣ ಬರಹಗಳ ಸಂಗ್ರಹ, ನವೋದಯದ ಕತೆಗಾರ್ತಿ ಗೌರಮ್ಮ, ರಂಗಸಂಪನ್ನ ಕಂಬಾರ, ಸಾರ–ವಿಸ್ತಾರ, ತಿರುಳು ತೋರಣ ಇವುಗಳು ಇವರ ಇನ್ನಿತರ ಪ್ರಮುಖ ಕೃತಿಗಳು. ಇವರ 'ಗಾಂಧಿ ಬಂದ' ಕಾದಂಬರಿಯು ರಂಗಕೃತಿಯಾಗಿ ರೂಪಾಂತರಗೊಂಡು ಜನಪ್ರೀತಿ ಗಳಿಸಿದೆ. ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಚದುರಂಗ ಪ್ರಶಸ್ತಿ, ಎಸ್.ಎಸ್. ಭೂಸನೂರಮಠ ಪ್ರಶಸ್ತಿ, ಗೀತಾ ದೇಸಾಯಿ ಪ್ರಶಸ್ತಿ ಇನ್ನೂ ಮುಂತಾದ ಪುರಸ್ಕಾರಗಳು ಇವರಿಗೆ ಸಂದಿವೆ.

'ಧಣಿಗಳ ಬೆಳ್ಳಿಲೋಟ' ಕತೆಯಲ್ಲಿ 'ಹೊಳೆ' ಒಂದು ಪಾತ್ರವಾಗಿ ಬಂದಿದೆ. ಉಳ್ಳವರು ತಮ್ಮ ಸ್ವಾರ್ಥ, ಆಮಿಷಕ್ಕೆ ಬಡವರನ್ನು ಧಾರುಣವಾಗಿ ದುಡಿಸಿಕೊಳ್ಳುವ ರೀತಿ ಅಮಾನುಷವಾದುದು. ಶೋಷಿತರು ತಮ್ಮ ನ್ಯಾಯಕ್ಕೆ, ಜೀವನ ಮೌಲ್ಯಕ್ಕೆ ಭಂಗ ಬಂದಾಗ ಹೇಗೆ ಆಕ್ರೋಶಗೊಳ್ಳುತ್ತಾರೆ ಎಂಬುದು ಈ ಕತೆಯಲ್ಲಿ ಮಾರ್ಮಿಕವಾಗಿ ಚಿತ್ರಣಗೊಂಡಿದೆ.

## ಶಬ್ದಾರ್ಥ :

ಬೈಗಳ–ಕೆಟ್ಟಮಾತು, ನಿಂದನೆ; ಇಂಗು–ಒಣಗು, ಬತ್ತು; ಸೆರಗು–ಅಂಚು; ಗೆರಟ–ತೆಂಗಿನ ಚಿಪ್ಪು; ಹಡಬೆ–ಒಂದು ಬೈಗಳದ ಪದ; ಗಾಳ–ಮೀನು ಹಿಡಿಯುವ ಕೊಕ್ಕು; ಆಟಿ–ಸೋಣ–ಆಷಾಡ ಶ್ರಾವಣ (ಆಟಿ–ಆಷಾಡ, ಸೋಣ–ಶ್ರಾವಣ); ರೀಪು–ಪಕ್ಕಾಸು–ಮನೆಯ ಮೇಲ್ಛಾವಣಿಗೆ ಹಾಕುವ ಮರದ ಸಾಮಗ್ರಿಗಳು; ನಾಕು–ನಾಲ್ಕು; ಹೇಂಟೆ–ಹೆಣ್ಣುಕೋಳಿ; ತೋಡು–ಕಾಲುವೆ, ಚಿಕ್ಕಹೊಳೆ; ಹೂಟ–ಪಿತೂರಿ, ಏರ್ಪಾಟು; ಬಿಕನಾಸಿ–ದರಿದ್ರ, ಭಿಕ್ಷುಕ, ಕ್ಷುದ್ರ; ಉಗ್ರಾಣಿ–ಗ್ರಾಮ ಸಹಾಯಕ (ಶಾನುಭೋಗರ ಸಹಾಯಕ); ಉಪಟಳ– ಹಿಂಸೆ, ತೊಂದರೆ; ದರೆ–ದಿಣ್ಣೆ, ತಿಟ್ಟು; ಜಡಿಮಳೆ–ಎಡೆಬಿಡದೆ ಸುರಿವ ಮಳೆ; ದೇವಳ–ದೇವಾಲಯ; ತುಳುವ ಹಲಸು–ಹಲಸಿನ ಒಂದು ಜಾತಿ, ಅಂಬಲಿ ಹಲಸು, ಬಿಳುವ; ಸೌಟು–ದೊಡ್ಡ ಚಮಚ; ಪೋರ–ಹುಡುಗ, ಬಾಲಕ; ಕೋಮಣ–ಲಂಗೋಟಿ, ಕೌಪೀನ; ಚೊಂಬು–ತಂಬಿಗೆ; ದಾರಂದ–ಬಾಗಿಲು; ಪಡಿ–ಅಕ್ಕಿ, ಧಾನ್ಯರೂಪದಲ್ಲಿ ಕೊಡುವ ದಿನಗೂಲಿ; ಕೊತ್ತಳಿಗೆ–ತೆಂಗಿನ ಮರದ ದಿಂಡು; ಹೂಳು–ಹೊಳೆಯ ತಳಭಾಗದ ಕೆಸರು; ಬುಗುಡಿ–ಕಿವಿಯಲ್ಲಿ ಧರಿಸುವ ಆಭರಣ; ಪಾವು–ಅಳತೆಯ ಸಾಧನ; ತಾಕತ್ತು–ಶಕ್ತಿ; ಮೂತಿ–ತುದಿ, ಮೋರೆ; ಕುಣಿಕೆ–ಸರಿಗಂಟು; ನೊರೆಕಾಯಿ–ಅಂಟುವಾಳ ಕಾಯಿ; ಕಾರು–ಕಕ್ಕು, ಹೊರಹಾಕು; ದಿಗಿಣ–ನೆಗೆತ, ಯಕ್ಷಗಾನದ ನೆಗೆತ; ಮೋರೆ–ಮುಖ; ವಲ್ಲಿ–ಉತ್ತರೀಯ, ಬಳ್ಳಿ; ನೊರೆಕಾಯಿ–ಇದನ್ನು ಪಾತ್ರೆ ಉಜ್ಜಲು, ಬಟ್ಟೆಯನ್ನು ಶುದ್ಧೀಕರಿಸಲು, ಆಭರಣ ಶುಚಿಗೊಳಿಸಲು ಬಳಸುತ್ತಾರೆ. ಮಲೆನಾಡಿನಲ್ಲಿ ಅಂಟುವಾಳಕಾಯಿ ಎಂದು ಕರೆಯುತ್ತಾರೆ.

## : ಅಭ್ಯಾಸ ಭಾಗ :

### ಅ) ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು:

೧. ಅದಕ್ಕೂ ಚಿನ್ನಮ್ಮನ ಪುಟ್ಟ ಸಂಸಾರದ ಬಗ್ಗೆ ಅದೆಷ್ಟು ಪ್ರೀತಿ ವಾತ್ಸಲ್ಯ.

೨. ಕಾವಿಗೆ ಕೂತ ಹೇಂಟೆಯಂತೆ – ಒಡಲು ಯಾವತ್ತೂ ವ್ಯಗ್ರ–ಪ್ರಕ್ಷುಬ್ಧ.

೩. 'ಗದ್ದೆಯಲ್ಲಿ ಬಿತ್ತುವುದನ್ನು ಮರಳದಿನ್ನೆ ಮೇಲೆ ಬಿತ್ತಿದೆಯಲ್ಲವ ಮಾರಾಯ.....?'

೪. ಆತನ ಈಜಿಗೆ ಮೀನುಗಳೇ ನಾಚಬೇಕು.

೫. ಧಣಿಯವರು ಎಂದಾದರೂ ಒಕ್ಕಲು ಮಕ್ಕಳನ್ನು ನಂಬಿದ್ದುಂಟೆ?

೬. ಮೂರು ಬೇಸಿಗೆಯವರೆಗೆ ಚಿನ್ನಮ್ಮನ ದುಡಿತಕ್ಕೆ ಪಡಿಯಿಲ್ಲ.

೭. ಪಾವಕ್ಕಿ ಕಮ್ಮಿ ಮಾಡಿದರೆ ಸುಮ್ಮನೆ ಇರ್ತಿಯೇನೋ ನೀನು?

೮. ಇದೇ ಲೋಟವಲ್ಲವೇ..... ತನ್ನ ಬೆವರಿನ ಬೆಲೆ ಕಳೆದದ್ದು.

### ಆ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):

೧. ಧಣಿಗಳ ಮನೆಯ ಪಕ್ಕದಲ್ಲಿ ಹರಿಯುತ್ತಿದ್ದ ಹೊಳೆ ಯಾವುದು?

೨. 'ಗುಡ್ಡ' ಹೊಳೆಯಲ್ಲಿ ಯಾವ ಆಟ ಆಡುತ್ತಿದ್ದನು?

೩. ಧಣಿಗಳ ಹೆಸರೇನು?

೪. ಬೆಳ್ಳಿಲೋಟ ಲಪಟಾಯಿಸಿದ ಅಪವಾದವನ್ನು ಯಾರ ಮೇಲೆ ಹೊರಿಸಲಾಯಿತು?

೫. ಧಣಿ ಎಂದಿಗೂ ಯಾರನ್ನು ನಂಬುವುದಿಲ್ಲ?

೬. ಧಣಿಗಳು ಹೊಳೆಯ ಹೂಳೆತ್ತಲು ಯಾರಿಗೆ ಸೂಚಿಸಿದರು?

೭. ಬೆಳ್ಳಿಲೋಟ ಏನನ್ನು ಕಳೆದುಕೊಂಡಿತ್ತು?

೮. ಧಣಿಗಳ ದಾಂಪತ್ಯಕ್ಕೆ ಯಾವುದು ಮೂಕಸಾಕ್ಷಿಯಾಗಿತ್ತು?

### ಇ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):

೧. ಮುಂಜಾನೆ ಚಿನ್ನಮ್ಮ ಯಾವ ಕೆಲಸದಲ್ಲಿ ತೊಡಗಿದ್ದಳು?

೨. ನದಿಯ ಒಡಲು ಯಾವಾಗ ಪ್ರಕ್ಷುಬ್ಧವಾಗಿರುತ್ತದೆ?

೩. ಧಣಿಗಳು ಹೊಳೆಯನ್ನು ಹೇಗೆ ಮೂದಲಿಸುತ್ತಿದ್ದರು?

೪. ಮುಸುರೆ ಪಾತ್ರೆಗಳ 'ಒಡೆಯ' ಏನೆಂದು ಯೋಚಿಸಿದನು?

೫. ಧಣಿಪತ್ನಿ ಬೆಳ್ಳಿಲೋಟವನ್ನು ಹೇಗೆ ಪರಿಚಯಿಸಿದ್ದಾಳೆ?

೬. ಧಣಿಯ ಬಡಿತದಿಂದ ಗುಡ್ಡ ಬಂಧಮುಕ್ತನಾದುದು ಹೇಗೆ?

೭. ಕುದುಪನಿಗೆ ಹನಿಗಣ್ಣಾಗಲು ಕಾರಣವೇನು?

## ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):

೧. ಚಿನ್ನಮ್ಮನ ಕುಟುಂಬ ಹೊಳೆಯ ಬಗ್ಗೆ ಅಸಹನೆ ಹೊಂದಬಾರದೆಂದು ಲೇಖಕಿ ಬಯಸುವುದೇಕೆ? ವಿವರಿಸಿ.

೨. ಧಣಿ ಹಾಗೂ ಹೊಳೆಯ ನಡುವಿನ ಸಮರವನ್ನು ಚಿತ್ರಿಸಿ.

೩. ಮುಸುರೆ ಪಾತ್ರೆಗಳು ನೀರು ಪಾಲಾದುದು ಹೇಗೆ? ಅವುಗಳನ್ನು ಮೇಲೆತ್ತಲು ಮಾಡಿದ ಪ್ರಯತ್ನಗಳೇನು?

೪. ಬೆಳ್ಳಿಲೋಟ ಕಂಡಾಗ ಧಣಿಯಲ್ಲಿ ಆತಂಕ, ಗಾಬರಿ, ಭಯ ಉಂಟಾಗಲು ಕಾರಣವೇನು?

೫. ಚಿನ್ನಮ್ಮ ಬೆಳ್ಳಿಲೋಟವನ್ನು ಮತ್ತೆ ಹೊಳೆಗೆ ಎಸೆಯಲು ಕಾರಣವೇನು? ವಿಶ್ಲೇಷಿಸಿ.

## ಭಾಷಾಭ್ಯಾಸ :

೧. ಈ ಕಥೆಯಲ್ಲಿ ಬಳಕೆಯಾಗಿರುವ ಕರಾವಳಿ ಮತ್ತು ಮಲೆನಾಡಿನ ವಿಶೇಷ ಪದಗಳು: ಸೆರಗು, ಪಡಿ, ತೋಡು, ಉಪಟಳ, ಗೆರಟ, ಪಕ್ಕಾಸು, ಹಡಬೆ, ನುಂಗಿತನಾ, ಮೂತಿ, ಕೊತ್ತಳಿಗೆ, ಕೋವಣ, ಮೀಯು, ಹೆಕ್ಕು, ಕರಟು, ಕುಣಿಕೆ, ಬುರ್ನಾಸು, ವಲ್ಲಿ – ಇದೇ ರೀತಿ ನಿಮ್ಮ ಪ್ರದೇಶದ ಹತ್ತು ಪ್ರಾದೇಶಿಕ ಪದಗಳನ್ನು ಪಟ್ಟಿ ಮಾಡಿರಿ.

೨. 'ಊದು ದಾಸಯ್ಯ ನನ್ನ ಬಾಲಕ್ಕೆ ಇನ್ನಷ್ಟು ಶಂಖ' ಎನ್ನುವ ದೇಸಿ ಪ್ರಯೋಗಕ್ಕೆ ಸಂವಾದಿಯಾಗಿ 'ಕೋಣನ ಮುಂದೆ ಕಿಂದ್ರಿ ಬಾರಿಸಿದಂಗೆ' ಪ್ರಯೋಗವು ಇದೆ. ನಿಮ್ಮ ಭಾಗದಲ್ಲಿರುವ ಈ ಬಗೆಯ ದೇಸಿ ಪ್ರಯೋಗಗಳನ್ನು ಗುರುತಿಸಿ ಬರೆಯಿರಿ.

೩. ಗಳ್ದೆ > ಗರ್ದೆ > ಗದ್ದೆ – ಈ ರೀತಿ ಭಾಷಿಕ ಬದಲಾವಣೆ ಹೊಂದಿದ ಪದಗಳನ್ನು ಗಮನಿಸಿ.

೪. "ಮುಸುರೆ ಪಾತ್ರೆಗಳನ್ನು ನುಂಗದ ಹೊಳೆ ಇವತ್ತು ನನ್ನಪ್ಪ ಮದುವೆಯಲ್ಲಿ ಕೊಟ್ಟ ಬೆಳ್ಳಿಲೋಟವನ್ನು ನುಂಗಿತನಾ" ಈ ಮಾತಿನಲ್ಲಿರುವ ವ್ಯಂಗ್ಯವನ್ನು ಗುರುತಿಸಿ.

೫. ಗಾಣ > ಗಾಳ ಆಗುವಂತೆ ಣ > ಳ ಕಾರ ಆಗುವ ನಾಲ್ಕು ಉದಾಹರಣೆಗಳನ್ನು ಬರೆಯಿರಿ.

೬. ಪ > ಹ ಕಾರ ಆಗುವ ಪಾವು > ಹಾವು, ಪಸಿ > ಹಸಿ, ಪೊತ್ತು > ಹೊತ್ತು ಇಂತಹ ಇನ್ನಿತರ ನಾಲ್ಕು ಪದಗಳನ್ನು ಬರೆಯಿರಿ.

## ಆಕರ :

ಕೃತಿ : ಮೀಯುವ ಆಟ
ಲೇಖಕರು : ಡಾ|| ಎಚ್. ನಾಗವೇಣಿ
ಪ್ರಕಾಶನ : ಲೋಹಿಯಾ ಪ್ರಕಾಶನ, ಬಳ್ಳಾರಿ.

## ಹೆಚ್ಚಿನ ಓದಿಗೆ :

೧. ಮರಳಿ ಮಣ್ಣಿಗೆ – ಡಾ|| ಶಿವರಾಮ ಕಾರಂತ
೨. ನನ್ನ ಜನಗಳು – ಸಿದ್ಧಲಿಂಗಯ್ಯ
೩. ಧನಿಯರ ಸತ್ಯನಾರಾಯಣ (ಕತೆ) – ಕೊರಡ್ಕಲ್ ಶ್ರೀನಿವಾಸರಾವ್

**‘ಸ್ವಾತಂತ್ರ್ಯವೆಮ್ಮುಸಿರು – ಉಸಿರಾಡಲೆಡೆಯಿಲ್ಲ’**

*– ಜಿ.ಪಿ. ರಾಜರತ್ನಂ.*

# ೬. ಬದುಕನ್ನು ಪ್ರೀತಿಸಿದ ಸಂತ

*– ಎಚ್.ಆರ್. ರಾಮಕೃಷ್ಣರಾವ್*

*ಕನ್ನಡ ಸಾಹಿತ್ಯದ ಪ್ರಮುಖ ಪ್ರಕಾರದಲ್ಲಿ ವ್ಯಕ್ತಿಚಿತ್ರಣ/ಜೀವನಚರಿತ್ರೆಯೂ ಒಂದಾಗಿದೆ. ನಮ್ಮೆದುರಿಗೆ ಇಲ್ಲದ, ನಮ್ಮ ನಡುವಿನ ಒಬ್ಬ ವ್ಯಕ್ತಿಯ ಜೀವನ ಚರಿತ್ರೆ, ಬಾಳಿಬದುಕಿದ ಅವರ ವ್ಯಕ್ತಿತ್ವ ನಮ್ಮ ಯುವಜನಾಂಗಕ್ಕೆ ಆದರ್ಶವಾಗಬೇಕು. ಮಹಾತ್ಮರ ಬದುಕನ್ನು ಓದಿ ಬದುಕು ಕಟ್ಟಿಕೊಳ್ಳಲು ಸ್ವಲ್ಪವಾದರೂ ಸಾಧ್ಯವಾದೀತೆಂಬುದನ್ನು ಪ್ರಸ್ತುತ 'ಕಲಾಂ ಮೇಷ್ಟ್ರು' ಕೃತಿಯ ಆಯ್ದ ಭಾಗ 'ಬದುಕನ್ನು ಪ್ರೀತಿಸಿದ ಸಂತ' ಲೇಖನ ನಿರೂಪಿಸುತ್ತದೆ.*

*ಸಾಮಾನ್ಯನಾದ ಬಾಲಕನೊಬ್ಬ ರಾಷ್ಟ್ರದ ಅತ್ಯುನ್ನತ ಹುದ್ದೆಗೆ ಏರಿದ ಬಗೆ ನಮ್ಮ ಯುವಪೀಳಿಗೆಗೆ ದಾರಿದೀಪ. ಅವರ ಸರಳ ಬದುಕಿನ ಕ್ರಿಯಾಧರ್ಮದ ಮುನ್ನೋಟ, ಮಾನವೀಯ ಮಿಡಿತ, ಮಕ್ಕಳೊಂದಿಗಿನ ಒಡನಾಟ ಇವು ಡಾ|| ಎಪಿಜೆ ಅಬ್ದುಲ್ ಕಲಾಂ ಅವರ ಬದುಕಿನ ಸೂತ್ರಗಳು. ಅವರಿಗಿರುವ ಅಭಿರುಚಿ, ಆಸಕ್ತಿ, ಅನುಭವ ಜ್ಞಾನ ಮತ್ತು ಉನ್ನತವಾದ ಮಾನವ ಪ್ರೀತಿ, ಸರ್ವಧರ್ಮ ಸಮನ್ವತೆಯ ರೀತಿ ನಮ್ಮನ್ನು ಬೆರಗುಗೊಳಿಸುತ್ತದೆ. ಪ್ರಸ್ತುತ ಲೇಖನ ಅವರು ಬದುಕನ್ನು ಪ್ರೀತಿಸಿದ ರೀತಿಯನ್ನು ಸಮರ್ಥವಾಗಿ ಅಭಿವ್ಯಕ್ತಿಸುತ್ತದೆ.*

**ವಿ**ಜ್ಞಾನ ತಂತ್ರಜ್ಞಾನಗಳ ಸಂಕೀರ್ಣ ಪ್ರಪಂಚದಲ್ಲಿ ಅಬ್ದುಲ್ ಕಲಾಂ ಅವರು ತಮ್ಮನ್ನು ತಾವೇ ತೊಡಗಿಸಿಕೊಂಡದ್ದು ಯಾವುದೋ ಪ್ರಶಸ್ತಿ, ಪುರಸ್ಕಾರ, ಹಣ ಗಳಿಸಲಿಕ್ಕಲ್ಲ. "ಭಗವಂತನ ಸೃಷ್ಟಿಯಲ್ಲಿರುವವರೆಲ್ಲ ಆತನ ಬಂಧುಗಳೆ; ಯಾರು ಅವರುಗಳ ಸೇವೆ ಮಾಡುತ್ತಾರೋ ಅವರೇ ದೇವರಿಗೆ ಹತ್ತಿರವಾದವರು", ಇದು ಅವರ ಬದುಕಿನ ಮಂತ್ರ.

ರಾಷ್ಟ್ರಪತಿಯಾಗಿ ಆಯ್ಕೆಗೊಳ್ಳುವುದಕ್ಕೆ ಕೆಲವೇ ದಿನಗಳ ಹಿಂದೆ ಅವರು ಹೈದರಾಬಾದಿನ ಒಂದು ಆಸ್ಪತ್ರೆಗೆ ಭೇಟಿಕೊಟ್ಟಿದ್ದರು. ಬುದ್ಧಿಮಾಂದ್ಯ ಮಕ್ಕಳ ಮಿದುಳಿನಲ್ಲಿ 'ಚಿಪ್' ಅಳವಡಿಸಿ ಗುಣಪಡಿಸಲು ಸಾಧ್ಯವೆ ಎಂದು ವೈದ್ಯರನ್ನು ಪ್ರಶ್ನಿಸಿದರು. ಅಗತ್ಯ ಮಾಹಿತಿಗಳನ್ನು ಕ್ರೋಡೀಕರಿಸಿರುವ ಸೂಕ್ಷ್ಮ ಎಲೆಕ್ಟ್ರಾನಿಕ್ ಸಾಧನವೇ ಚಿಪ್. ಕಂಪ್ಯೂಟರ್ ಸಹಾಯದಿಂದ ಮಿದುಳಿನಲ್ಲಿ ಇದನ್ನು ಅಳವಡಿಸಿ ಬುದ್ಧಿಮಾಂದ್ಯತೆ ನಿವಾರಿಸಬಹುದೆ ಎಂದು ಕಲಾಂ ಪ್ರಶ್ನಿಸಿದರು. ವೈದ್ಯರು ಸಾಧ್ಯತೆಯ ಬಗ್ಗೆ ಅನುಮಾನ ವ್ಯಕ್ತಪಡಿಸಿದಾಗ ಕಲಾಂ ಹೇಳಿದರು, "ಇದು ಸಾಧ್ಯವಿಲ್ಲ ಎಂದು ಹೇಳುವ ನೂರು ಕಾರಣಗಳ ಬಗ್ಗೆ ನನಗೆ ಸ್ವಲ್ಪವೂ ಆಸಕ್ತಿ ಇಲ್ಲ. ಅದು ಹೇಗೆ ಸಾಧ್ಯವಾಗುತ್ತದೆ ಎಂಬ ಒಂದು ಕಾರಣ ಹೇಳಬಲ್ಲಿರಾ?" ಅಬ್ದುಲ್ ಕಲಾಂ ಅವರು ಯಾವಾಗಲೂ ಸಾಧ್ಯತೆಗಳನ್ನು ಅರಸುವ ಆಶಾಜೀವಿ.

೧೯೯೯ರಲ್ಲಿ ಅವರು ತಮ್ಮ ಆತ್ಮಚರಿತ್ರೆ ಪ್ರಕಟಿಸಿದರು. ಅದಕ್ಕೆ ಅವರಿಟ್ಟ ಹೆಸರು "ವಿಂಗ್ಸ್ ಆಫ್ ಫೈರ್". ಅಗ್ನಿಜ್ವಾಲೆ ಯಾವಾಗಲೂ ಊರ್ಧ್ವಮುಖಿ. ಮೇಲೇರುವುದೇ ಅದರ ಸ್ವಭಾವ. ಅತ್ಯಂತ ಕೆಳಹಂತದಲ್ಲಿ ಜನಿಸಿದವನಿಗೆ ಮನಸ್ಸು ಉದ್ದೀಪನಗೊಂಡದ್ದರಿಂದ ಉನ್ನತ ಮಟ್ಟಕ್ಕೇರಲು ಸಾಧ್ಯವಾಯಿತು. 'ತಾನೇಕೆ ಆತ್ಮಕಥೆ ಬರೆದೆ' ಎಂದು ಪ್ರಶ್ನಿಸಿಕೊಂಡು ಅವರು ಹೀಗೆ ಉತ್ತರಿಸಿದ್ದಾರೆ!

"ನನ್ನ ಬದುಕು ಯಾರೊಬ್ಬರಿಗೆ ಅನುಕರಣೆಗೆ ಯೋಗ್ಯವಾದ ಮಾದರಿಯಾಗುತ್ತದೆಂಬ ಭ್ರಮೆ ನನಗಿಲ್ಲ. ಯಾವುದೋ ಮೂಲೆಯಲ್ಲಿನ ಊರಿನಲ್ಲಿ ಹುಟ್ಟಿ, ಸಾಮಾಜಿಕವಾಗಿ ಸೌಲಭ್ಯಗಳಿಂದ ವಂಚಿತವಾಗಿರುವ ಮಗುವಿಗೆ ಅದರಂಥದೆ ಪರಿಸರದಲ್ಲಿದ್ದ ನನ್ನ ಭವಿಷ್ಯ ಅರಳಿದ್ದನ್ನು ಓದಿದಾಗ ಭರವಸೆ ಮೂಡಬಹುದು. ಅಂತಹ ಮಕ್ಕಳಿಗೆ, ತಾವು ಹಿಂದುಳಿದವರು, ಅಸಮರ್ಥರು ಅನ್ನುವ ಭ್ರಮೆಯಿಂದ ಬಿಡುಗಡೆಹೊಂದಲು ನನ್ನ ಬದುಕು ಸ್ಫೂರ್ತಿ ನೀಡಬಹುದೇನೋ".

ಅಂತಾರಾಷ್ಟ್ರೀಯ ಕ್ಷಿಪಣಿ ಕೇಂದ್ರವಾಗಿ ಹೈದರಾಬಾದಿನ ಸಮೀಪದ ಬರಡು ಭೂಮಿಯನ್ನು *"ಸಂಶೋಧನಾ ಕೇಂದ್ರ ಇಮಾರತ್"* ಎಂಬ ಹೆಸರಿನಲ್ಲಿ ಸ್ಥಾಪಿಸಿದ್ದು ಅವರ ಕ್ರಿಯಾಶೀಲತೆಗೆ ಸಾಕ್ಷಿಯಾಗಿದೆ. ಕಲಾಂ ಅವರು ಒಬ್ಬ ಶಿಲ್ಪಿ. ಬೇರೆಯವರಿಗೆ ಬಂಡೆಯಾಗಿ ಕಾಣಿಸಿದ್ದು ಅವರಿಗೆ ಅದರೊಳಗೆ ಅಡಗಿರುವ ಶಿವಶಕ್ತಿಯಾಗಿ ಕಾಣಿಸುತ್ತದೆ. ಕುಗ್ರಾಮ ಇಮಾರತ್ ಇಂದು ವಿಶ್ವವಿಖ್ಯಾತ. ಕಗ್ಗಲ್ಲ ಬಂಜರು ನಾಡಿನಲ್ಲಿ, ಬಂಡೆಗಳ ಬಸಿರಲ್ಲಿ "ಶಿವನ ನಿಹಿತ ಶಕ್ತಿಯನ್ನು" ಕಂಡರು ಕಲಾಂ. ಕ್ಷಿಪಣಿ ರೂಪದಲ್ಲಿ ಶಕ್ತಿ ಹೊರಬರಲು ಕಂಪಿಸುತ್ತಿರುವುದನ್ನು ಅವರ ಒಳಗಣ್ಣು ನೋಡಿತ್ತು. ಕಲಾಂ ಬರೆದ ಒಂದು ಕವನ ಸಾಲು ಎಷ್ಟು ಅರ್ಥಪೂರ್ಣ: If you want to leave your foot prints on the sands of time, Do not drag your feet. ಬದ್ಧತೆಯಿಂದ ಸಾಧನೆಗಿರುವ ಮಾರ್ಗದಲ್ಲಿ ಕ್ರಮಿಸಲು ಅಗತ್ಯವಾದ ಮನೋಭಾವ ಇಲ್ಲಿದೆ.

## ಬದುಕಿನ ರಸನಿಮಿಷಗಳು

೧೯೮೮ರಲ್ಲಿ ಪೃಥ್ವಿ ಉಡಾವಣೆಗೆ ಪೂರ್ವಭಾವಿ ಸಿದ್ಧತೆಗಳು ಹೈದರಾಬಾದಿನ ರಕ್ಷಣಾ ಇಲಾಖೆಗೆ ಸಂಬಂಧಿಸಿದ ಪ್ರಯೋಗಾಲಯದಲ್ಲಿ ನಡೆಯುತ್ತಿದ್ದವು. ಇದರ ನಿರ್ದೇಶಕರು ವಿ.ಜೆ. ಸುಂದರಮ್. ಕೆಲಸಗಳು ತಡವಾದದ್ದಕ್ಕೆ ಸಬೂಬುಗಳನ್ನು ಹೇಳುತ್ತಾ ತಮ್ಮನ್ನು ಕೆಲವರು ಸಮರ್ಥಿಸಿಕೊಳ್ಳುತ್ತಿದ್ದರು. ಆ ದಿನದ ಪತ್ರಿಕೆಯನ್ನು ಕೈಯಲ್ಲಿ ಹಿಡಿದು ಕಲಾಂ ಸಭೆ ನಡೆಯುತ್ತಿದ್ದ ಸ್ಥಳಕ್ಕೆ ಬಂದರು.

ಸಿಕಂದರಾಬಾದಿನ ಶಾಲಾ ಬಾಲಕಿಯೊಬ್ಬಳು ತಯಾರಿಸಿದ್ದ ಪೃಥ್ವಿ ಕ್ಷಿಪಣಿಯ ಮಾದರಿಯ ಚಿತ್ರವನ್ನು ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಉಪನಿರ್ದೇಶಕ ಸಾರಸ್ವತ ಹೆಮ್ಮೆಯಿಂದ ಹೇಳಿದರು : "ಈ ಬಾಲಕಿ, ನಮ್ಮ ಕ್ಷಿಪಣಿಯ ಆಕಾರ, ಗಾತ್ರ ಕುರಿತು ಒಂದಷ್ಟು ವಿವರ ಕೇಳಿದ್ದಳು. ನಾನು ಮಾಹಿತಿ ನೀಡಿದ್ದೆ. ನೋಡಿ ಎಂಥ ಅದ್ಭುತ ಮಾದರಿ ತಯಾರಿಸಿದ್ದಾಳೆ."

"ಹಾಗಾದರೆ, ಆ ಹುಡುಗಿಯನ್ನು ಇಲ್ಲಿಗೆ ಯಾಕೆ ಕರೆಸಬಾರದು? ಆ ಮಗು ನಿಜವಾದ ಪೃಥ್ವಿ ಕ್ಷಿಪಣಿ ನೋಡಲಿ, ಒಂದು ದಿನ ನಿಮ್ಮ ಅತಿಥಿಯಾಗಿರಲಿ" ಅಬ್ದುಲ್ ಕಲಾಂ ಅವರು ಥಟ್ಟನೆ ಸಲಹೆ ಮಾಡಿದರು.

ಮುಂದೆ ಆ ಹುಡುಗಿಯನ್ನು ಇಲಾಖೆಯ ಕಾರಿನಲ್ಲಿ ಕರೆದುಕೊಂಡು ಹೋಗಿ ಪೃಥ್ವಿಯನ್ನು ತೋರಿಸಿದರು. ಕ್ಷಿಪಣಿಯ ಮೈ ಸವರಿದ ಆ ಮಗುವಿನ ಮನಸ್ಸಿನಲ್ಲಿ ಏನೆಲ್ಲ ಭಾವನೆಗಳು ಮೂಡಿದವೊ, ಯಾರು ತಾನೆ ಹೇಳಬಲ್ಲರು! ಕ್ಯಾಂಟೀನಿನಲ್ಲಿ ತಂತ್ರಜ್ಞರೊಡನೆ ಸಹಭೋಜನ, ಮೀಟಿಂಗ್ ಮಧ್ಯದಲ್ಲಿಯೇ ಹೊರಕ್ಕೆ ಬಂದ ಕಲಾಂ ಅವರು, "ನೀನು ಯಾವ ಸ್ಕೂಲಿನಲ್ಲಿ ಓದುತ್ತಿದ್ದೀಯೆ, ನಿಮ್ಮ ತಂದೆ ಏನು ಮಾಡುತ್ತಿದ್ದಾರೆ? ನಿನ್ನ ಹವ್ಯಾಸಗಳೇನು?" ಎಂದು ನಗುತ್ತಾ ಕೇಳಿದಾಗ ಹುಡುಗಿಗಾದ ಆನಂದ ಹೇಳತೀರದು.

ಚೆನ್ನೈನಲ್ಲಿ ಪದ್ಮಶೇಷಾದ್ರಿ ಬಾಲಭವನದ ಪ್ರೌಢಶಾಲೆಯಲ್ಲಿ ಕ್ವಿಜ್ ಕಾರ್ಯಕ್ರಮ. ಕ್ವಿಜ್ ಮಾಸ್ಟರ್ ಭಾರತರತ್ನ, ಕ್ಷಿಪಣಿ ಮನುಷ್ಯ ಅಬ್ದುಲ್ ಕಲಾಂ. ಏನೆಲ್ಲಾ ಪ್ರಶ್ನೆ ಕೇಳಬಹುದು ಅಂತ ವಿದ್ಯಾರ್ಥಿಗಳಿಗೆ ಕಾತುರ. ಕಲಾಂ ಅವರ ಪ್ರಶ್ನೆ ಹೀಗಿತ್ತು. "ಭೂಮಿ ಸೂರ್ಯನನ್ನು ಪರಿಭ್ರಮಿಸಲು ಒಂದು ವರ್ಷ ತೆಗೆದುಕೊಳ್ಳುತ್ತದೆ. ಹಾಗಿದ್ದಲ್ಲಿ ಹದಿನೈದನೇ ಪರಿಭ್ರಮಣ ಪಥದಲ್ಲಿದ್ದ ವ್ಯಕ್ತಿಗೆ ಎಷ್ಟು ವಯಸ್ಸಾಗಿರುತ್ತದೆ?" ಈ ಪ್ರಶ್ನೆ ಕೇಳಿದ ಅನೇಕ ಮಕ್ಕಳು ತಬ್ಬಿಬ್ಬಾಗಿದ್ದರು.

ಅಭಿಷೇಕ್ ಎಂಬ ಹುಡುಗ ಸ್ವಲ್ಪ ಯೋಚಿಸಿ, 'ಹದಿನಾಲ್ಕು' ಎಂದು ಉತ್ತರಿಸಿದ. ಉತ್ತರ ಸರಿಯಾಗಿತ್ತು. ಭೂಮಿಯ ಮೇಲೆ ನಿಂತಿದ್ದ ವ್ಯಕ್ತಿ ಹದಿನಾಲ್ಕು ಸುತ್ತು ಮುಗಿಸಿರುತ್ತಾನೆ ಅಲ್ಲವೆ? ಕಲಾಂ ಅವರು ತಮ್ಮ ವಯಸ್ಸನ್ನು ಹೇಳುತ್ತಿದ್ದುದೂ ಹೀಗೆಯೆ. ಕಲಾಂ ಅವರು ಇದ್ದ ಮನೆಯ ಮುಂದೆ ಪುಟ್ಟ ಮಕ್ಕಳ ಹಿಂಡು ಯಾವಾಗಲೂ ಇರುತ್ತಿತ್ತು. ಗಹನವಾದ ವಿಷಯಗಳನ್ನು ಪುಟ್ಟ ಕತೆಗಳ ರೂಪದಲ್ಲಿ ಹೇಳುತ್ತಾ 'ಕಲಾಂ ಮೇಷ್ಟ್ರು' ಬದುಕಿನ ಸಾರ್ಥಕತೆ ಮೆರೆಯುತ್ತಿದ್ದರು.

ಮಕ್ಕಳನ್ನು ಹತ್ತಿರ ಕೂರಿಸಿಕೊಂಡು ತಮ್ಮ ನೆನಪಿನ ಬುತ್ತಿ ಬಿಚ್ಚಿ ಅವರಿಗೆ ಉಣಬಡಿಸುತ್ತಿದ್ದರು. "ನಮಗೆ ತಿಳಿದಿರಲಿ ಬಿಟ್ಟಿರಲಿ, ನಾವೆಲ್ಲಾ ಎಳೆಯರಾಗಿದ್ದಾಗಿನಿಂದ ಬದುಕಿನ ಅನೇಕ ಮಜಲುಗಳಲ್ಲಿ ಯಾರನ್ನಾದರೂ ಆದರ್ಶ ವ್ಯಕ್ತಿಗಳಾಗಿರಿಸಿಕೊಂಡೇ ಬೆಳೆದಿರುತ್ತೇವೆ. ನೀವು ಬೆಳೆಯುತ್ತಿರುವಾಗ, ೧೫ ವರ್ಷ ತಲಪುವವರೆಗೆ, ನಿಮಗೆ ತಾಯಿ, ತಂದೆ ಮತ್ತು ಶಾಲಾ ಶಿಕ್ಷಕರು ಆದರ್ಶ ಮಾದರಿಗಳು. ಆ ವಯಸ್ಸಿನಲ್ಲಿ ಮಾರ್ಗದರ್ಶನ ಮಾಡಲು ಅವರು ಅತ್ಯಂತ ಸಮರ್ಥರು. ನಾನು ಚಿಕ್ಕವನಾಗಿದ್ದಾಗ ನನ್ನ ಅಮ್ಮ, ಅಪ್ಪ ದಿನದಲ್ಲಿ ಐದು ಬಾರಿ ನಮಾಜ್ ಸಲ್ಲಿಸುತ್ತಿದ್ದುದನ್ನು ನೋಡಿದ್ದೆ. ಅವರೇನೂ ಶ್ರೀಮಂತರಲ್ಲ. ಆದರೂ ಅವರು ಹಸಿದವರಿಗೆ ಉಣಬಡಿಸುತ್ತಿದ್ದರು. ಬಡವರಿಗೆ ಸಹಾಯ ಹಸ್ತ ಚಾಚುತ್ತಿದ್ದರು. ಹಣದ ಅಡಚಣೆಯ ನಡುವೆಯೂ ನನ್ನನ್ನು ಶಾಲೆಗೆ ಕಳಿಸುವಂತೆ ಅಪ್ಪನನ್ನು ಪ್ರೇರೇಪಿಸಿದವರು ಶಿವಸುಬ್ರಮಣ್ಯ ಅಯ್ಯರ್. ಮಕ್ಕಳನ್ನು ಬುದ್ಧಿವಂತರೂ ಮತ್ತು ಕಷ್ಟಪಟ್ಟು ಕೆಲಸ ಮಾಡುವಂತಹವರೂ ಆದ ಉತ್ತಮ ಮನುಷ್ಯರನ್ನಾಗಿ ಮಾಡುವುದು ತಂದೆತಾಯಿಯರ ಆದ್ಯ ಕರ್ತವ್ಯ. ಅಧ್ಯಾಪಕರು ಕಲಿಕೆ ಮತ್ತು ಜ್ಞಾನದ ಬೆಳಕನ್ನು ಮಕ್ಕಳಿಗೆ ನೀಡುವ ಕಿಟಕಿಗಳು, ಮಕ್ಕಳಲ್ಲಿ ಕ್ರಿಯಾಶೀಲತೆ ಮೊಳೆಯುವಂತೆ ಮಾಡುವ ಆದರ್ಶ ವ್ಯಕ್ತಿಗಳು. ತಾಯಿ, ತಂದೆ, ಶಿಕ್ಷಕರು ಸೇರಿ ಆದ ತ್ರಿಭುಜವೇ ಉತ್ತಮ ಬದುಕಿಗೆ ಆದರ್ಶ ಮಾದರಿ. ಈ ಮೂವರೂ ಶ್ರದ್ಧೆಯಿಂದ ದುಡಿದಾಗ ಮಾತ್ರ ಭಾರತಕ್ಕೆ ಹೊಸ ತಾರುಣ್ಯ ಬರುತ್ತದೆ. ಮಾತಾಪಿತೃಗಳ ಹಿಂದೆ ಶಾಲೆ ಮತ್ತು ಶಿಕ್ಷಕರ ಹಿಂದೆ ಮನೆ ಇರುತ್ತದೆ. ವಿದ್ಯಾಭ್ಯಾಸ ಹಾಗೂ ಶಿಕ್ಷಕ – ವಿದ್ಯಾರ್ಥಿ ಸಂಬಂಧಗಳನ್ನು ವ್ಯಾಪಾರಿ ಮನೋಭಾವದಿಂದ ನೋಡಬಾರದು, ರಾಷ್ಟ್ರಾಭಿವೃದ್ಧಿಯೇ ಮುಖ್ಯಗುರಿಯಾಗಿರಬೇಕು. ಸರಿಯಾದ ಶಿಕ್ಷಣ ನಮ್ಮ ಯುವಕರಲ್ಲಿ ಆತ್ಮಗೌರವ ಮತ್ತು ಘನತೆಗಳನ್ನು ಪೋಷಿಸುತ್ತದೆ. ಯಾವುದೇ ಕಾನೂನು ಒತ್ತಡದಿಂದ ಈ ಗುಣಗಳನ್ನು ಬೆಳೆಸಲಾರದು. ಇವುಗಳನ್ನು ನಾವೇ ಪೋಷಿಸಿಕೊಳ್ಳಬೇಕು." ಕಲಾಂ ಅವರ ಮಾತು ಚಿಣ್ಣರಿಗೆ ಅರ್ಥವಾಗಿತ್ತು.

ಮತ್ತೊಬ್ಬ ಹುಡುಗ ಪ್ರಶ್ನಿಸಿದ, "ಭೂಮಿಯ ಮೇಲಿನ ಮೊದಲ ವಿಜ್ಞಾನಿ ಯಾರಾಗಿರಬಹುದು? ದಯವಿಟ್ಟು ಹೇಳಿ" ಕಲಾಂ ಹೇಳಿದರು, "ನನಗನ್ನಿಸುತ್ತೆ, ವಿಜ್ಞಾನ ಹುಟ್ಟಿದ್ದು ಮತ್ತು ಈಗಲೂ ಜೀವಂತವಾಗಿರುವುದು ಪ್ರಶ್ನೆಗಳಿಂದ. ವಿಜ್ಞಾನದ ಅಡಿಪಾಯವೇ ಪ್ರಶ್ನೆ ಕೇಳುವುದು. ಕೊನೆಯಿಲ್ಲದಷ್ಟು ಪ್ರಶ್ನೆಗಳನ್ನು ಕೇಳುವವರು ಮಕ್ಕಳೇ ಎಂಬುದು ಪೋಷಕರಿಗೂ ಮತ್ತು ಶಿಕ್ಷಕರಿಗೂ ಚೆನ್ನಾಗಿ ಗೊತ್ತಿದೆ. ಆದ್ದರಿಂದ 'ಮಗುವೇ ಮೊದಲ ವಿಜ್ಞಾನಿ'." ಮಕ್ಕಳಿಗೆ ಉತ್ತರ ಹಿಡಿಸಿತ್ತು. ಚಪ್ಪಾಳೆ ತಟ್ಟಿ ಸಮ್ಮತಿ ಸೂಚಿಸಿದರು. ನೆರೆದಿದ್ದ ಶಿಕ್ಷಕರು ಮತ್ತು ತಾಯಿ ತಂದೆಯರು ಮುಗುಳ್ನಕ್ಕರು.

## ವ್ಯಕ್ತಿಗಿಂತ ರಾಷ್ಟ್ರ ದೊಡ್ಡದು

ಅಬ್ದುಲ್ ಕಲಾಂ ಅವರು ರಾಷ್ಟ್ರಪತಿ ಸ್ಥಾನಕ್ಕೆ ಆಯ್ಕೆಯಾದ ಸುದ್ದಿ ಪ್ರಕಟವಾದಾಗ ಚೆನ್ನೈನಲ್ಲಿದ್ದರು. ಮುಖ್ಯಮಂತ್ರಿ ಜಯಲಲಿತಾ ಅಭಿನಂದಿಸಿದರು. ಕಲಾಂ ಅವರು ಹೇಳಿದರು, "ಕನಸುಗಳು ಆಲೋಚನೆಗಳಾಗುತ್ತವೆ, ಆಲೋಚನೆಗಳು ಸೃಜನಾತ್ಮಕ ಕ್ರಿಯೆಗಳಾಗಿ ಪರಿವರ್ತನೆಗೊಳ್ಳುತ್ತವೆ." ಪತ್ರಿಕಾಗೋಷ್ಠಿಯನ್ನು ಮಾಧ್ಯಮದವರು ಏರ್ಪಡಿಸಿದ್ದರು. ಆಧುನಿಕ ಎಲೆಕ್ಟ್ರಾನಿಕ್ ಮಾಧ್ಯಮದವರೆಲ್ಲಾ ಜಮಾಯಿಸಿದ್ದ ಸಂತೆ. ಎಲ್ಲರಿಗೂ ಪ್ರಶ್ನೆ ಕೇಳುವ ಆತುರ. ತಾವು ಸಂದರ್ಶಿಸುತ್ತಿರುವುದು ಒಬ್ಬ ರಾಜಕಾರಣಿಯನ್ನಲ್ಲವೆಂಬುದನ್ನು ಮಾಧ್ಯಮದವರು ಮರೆತಂತಿತ್ತು. ಕಲಾಂಮೇಷ್ಟ್ರು ಪರಿಸ್ಥಿತಿಯನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡರು. "ಎಲ್ಲರೂ ಗಮನವಿಟ್ಟು ಕೇಳಿ. ಇದುವರೆಗೆ ಏನಾಗಿದೆಯೋ ಅದೆಲ್ಲ ಒಳ್ಳೆಯದಕ್ಕೆ, ಈಗ ಆಗುತ್ತಿರುವುದೂ ಒಳ್ಳೆಯದಕ್ಕಾಗಿಯೇ ಮತ್ತು ಮುಂದೆ ಆಗಲಿರುವುದೂ ಒಳ್ಳೆಯದಕ್ಕಾಗಿಯೇ, ಅರ್ಥವಾಯಿತೇ?" ಎಂದು ಅನೇಕಬಾರಿ ಶಾಲಾ ಮಕ್ಕಳನ್ನು ಕೇಳುವಂತೆ ಕೇಳಿದರು. ಶಿಷ್ಯ ಸಮೂಹ ಹೂಗುಟ್ಟಿತ್ತು! ಭಗವದ್ಗೀತೆಯ ಪ್ರಸಿದ್ಧ ಸಾಲುಗಳನ್ನು ಉದ್ಧರಿಸುತ್ತಾ ಜೀವನ ಮೌಲ್ಯಗಳ ಕ್ಲಾಸ್ ತೆಗೆದುಕೊಂಡರು. ಎಲ್ಲರೂ ಒಟ್ಟಿಗೆ ತಾವು ಹೇಳಿದ್ದನ್ನು ಹೇಳುವಂತೆ ಕೋರಿದರು "ವ್ಯಕ್ತಿಗಿಂತ ರಾಷ್ಟ್ರ ದೊಡ್ಡದು, ವ್ಯಕ್ತಿಗಿಂತ......." ಎಂದು ವಾಕ್ಯ ಮುಗಿಸುವ ಮೊದಲೇ ಎಲ್ಲರೂ ಒಟ್ಟಿಗೆ 'ರಾಷ್ಟ್ರದೊಡ್ಡದು' ಎಂದು ದನಿಗೂಡಿಸಿದರು.

ಡಿಜಿಟಲ್ ಲೈಬ್ರರಿ ಸ್ಥಾಪಿಸಿ, ತಾಳೆಗರಿಗಳಲ್ಲಿ ಅಡಗಿ ಕುಳಿತು ಸುಲಭವಾಗಿ ಲಭ್ಯವಾಗದ ಅಪಾರ ಸಂಪತ್ತನ್ನು ನಮ್ಮ ಯುವಕರಿಗೆ ಒದಗಿಸುವ ಮಹದಾಸೆ. ಎಪ್ಪತ್ತರ ವಯಸ್ಸಿನಲ್ಲಿ ಈ ಆಸೆ. ವಿಜ್ಞಾನ ಮತ್ತು ತಂತ್ರಜ್ಞಾನದ ಸಂಶೋಧನೆಯಿಂದಾಗಿ ದೊರೆತ ಜ್ಞಾನವನ್ನು ರೋಗಗ್ರಸ್ತ ಬಡಜನರಿಗೆ ಸುಲಭವಾಗಿ ಎಟಕುವಂತೆ ಮಾಡುವುದು ಹೇಗೆ ಎಂಬ ಚಿಂತೆ. ಅಣ್ಣಾಮಲೈ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರೊಫೆಸರ್ ಆಗಿದ್ದಾಗ, ಕಲಾಂ ಅವರು ತಮ್ಮ ಕನಸುಗಳನ್ನು ಹೀಗೆ ಬಿಚ್ಚಿಡುತ್ತಿದ್ದರು.

## ಯಶಸ್ಸಿನ ಮಂತ್ರ

ತಮ್ಮನ್ನು ಭೇಟಿಯಾದ ಮಕ್ಕಳು, "ಮಿ. ಪ್ರೆಸಿಡೆಂಟ್, ನಿಮ್ಮ ಯಶಸ್ಸಿನ ಗುಟ್ಟೇನು?" ಎಂದು ಕೇಳಿದರು. ಕಲಾಂಮೇಷ್ಟ್ರು ಹೇಳಿದರು: "ಯಶಸ್ಸಿನ ಪಂಚಾಕ್ಷರಿಮಂತ್ರ ಹೀಗಿದೆ. ಕುತೂಹಲ, ಆಲೋಚನಾಶಕ್ತಿ, ಜ್ಞಾನ (ತಿಳಿವು), ಕಷ್ಟಪಟ್ಟು ಕೆಲಸಮಾಡುವುದು ಮತ್ತು ಗುರಿಸಾಧಿಸುವ ಛಲ."

ಅಧ್ಯಕ್ಷರಾದ ತರುವಾಯ ಲಕ್ಷಾಂತರ ಮಕ್ಕಳನ್ನು ಅಬ್ದುಲ್ ಕಲಾಂ ಭೇಟಿಮಾಡಿದ್ದಾರೆ. ಬಡವರಾಗಿರಲಿ ಅಥವಾ ಶ್ರೀಮಂತರಾಗಿರಲಿ, ಎಲ್ಲ ಮಕ್ಕಳ ಕನಸೂ ಒಂದೆ : "ಅವರೆಲ್ಲರೂ ಶಾಂತಿ, ಸಮೃದ್ಧಿ ಮತ್ತು ಸುಭದ್ರ ಭಾರತದಲ್ಲಿ ಬದುಕ ಬಯಸುತ್ತಾರೆ."

ಮಕ್ಕಳಿಗೆ ಅವರು ಯಾವಾಗಲೂ ಹೇಳುತ್ತಿದ್ದುದು ಒಂದೇ ಮಾತು. "ಎಲ್ಲವನ್ನೂ ಪ್ರಶ್ನಿಸಿ. ಪ್ರಶ್ನೆಗಳಿಂದ ವಿಕಾಸಗೊಂಡದ್ದೇ ವಿಜ್ಞಾನ. ನಾವು ಮೊದಲು ಕ್ಷಿಪಣಿ ತಯಾರಿಸುತ್ತೇವೆಂದಾಗ ಅನೇಕರು ಅದು ಅಸಾಧ್ಯವಾದದ್ದು ಎಂದಿದ್ದರು. ನಾವು ಪಟ್ಟು ಹಿಡಿದು ಗುರಿಸಾಧಿಸಿದೆವು." ಅವರ ಮಾತಿನಲ್ಲಿದ್ದ ದೃಢತೆ, ಕಳಕಳಿಯಿಂದಾಗಿ ಅವು ಮಕ್ಕಳ ಮನಸ್ಸಿನಲ್ಲಿ ನಾಟುತ್ತಿದ್ದವು.

## ಲೇಖಕರ ಪರಿಚಯ :



**ಪ್ರೊ. ಎಚ್.ಆರ್. ರಾಮಕೃಷ್ಣರಾವ್** ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯಲ್ಲಿ ೩೦.೦೫.೧೯೩೫ರಲ್ಲಿ ಜನಿಸಿದರು. ಶ್ರೀ ಎಚ್.ವಿ. ರಂಗರಾವ್ ಮತ್ತು ರಂಗಮ್ಮ ಎಂಬ ದಂಪತಿಗಳ ಮಗ ಇವರು. ಮೈಸೂರು ವಿಶ್ವವಿದ್ಯಾನಿಲಯದಿಂದ ಭೌತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದ ನಂತರ ಬೆಂಗಳೂರಿನ ಕ್ರೈಸ್ಟ್ ಕಾಲೇಜಿನಲ್ಲಿ ಭೌತಶಾಸ್ತ್ರ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ಈಗ ನಿವೃತ್ತರಾಗಿದ್ದಾರೆ. ಕಲಾಂ ಮೇಷ್ಟ್ರು, ಡಾ. ಸುಬ್ರಮಣ್ಯನ್ ಚಂದ್ರಶೇಖರ್, ಸರ್ ಐಸಾಕ್ ನ್ಯೂಟನ್, ಸಂಕ್ಷಿಪ್ತ ಖಗೋಳ ವಿಜ್ಞಾನ ಚರಿತ್ರೆ, ಅಂತರಿಕ್ಷ, ಚಂದ್ರಯಾನ, ಬಿಗ್‌ಬ್ಯಾಂಗ್, ಪ್ರಳಯ-೨೦೧೨ ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. ವಿಜ್ಞಾನದ ವಿಚಾರಗಳನ್ನು ಕನ್ನಡದಲ್ಲಿ ಜನಪ್ರಿಯಗೊಳಿಸುವ ಸಲುವಾಗಿ ರಾಜ್ಯದಾದ್ಯಂತ ಉಪನ್ಯಾಸಗಳನ್ನು ನೀಡಿದ್ದಾರೆ. ಆಕಾಶವಾಣಿ, ದೂರದರ್ಶನಗಳಲ್ಲೂ ವಿಜ್ಞಾನ ಸಂಬಂಧಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. ನಿವೃತ್ತಿಯ ನಂತರವೂ ಬೆಂಗಳೂರಿನ ವಿವಿಧ ಕಾಲೇಜುಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸುತ್ತಿದ್ದಾರೆ.

ಶ್ರೀಯುತರು ಕನ್ನಡ ಪುಸ್ತಕಾಭಿವೃದ್ಧಿ ಪ್ರಾಧಿಕಾರಕ್ಕಾಗಿ ರಚಿಸಿಕೊಟ್ಟಿರುವ 'ಕಲಾಂ ಮೇಷ್ಟ್ರು' ಕೃತಿಯಿಂದ ಪ್ರಸ್ತುತ 'ಬದುಕನ್ನು ಪ್ರೀತಿಸಿದ ಸಂತ' ಎಂಬ ಲೇಖನವನ್ನು ಸ್ವೀಕರಿಸಲಾಗಿದೆ.

## ಶಬ್ದಾರ್ಥ :

ಸಂಕೀರ್ಣ–ಇಕ್ಕಟ್ಟಾದ; ಊರ್ಧ್ವಮುಖಿ–ಮೇಲುಮುಖ; ಉದ್ದೀಪನ–ಉತ್ತೇಜನ, ಉರಿಸುವ; ನಿಹಿತ–ಇಟ್ಟ, ಇರಿಸಿದ; ಸಬೂಬು–ಕಾರಣ, ನೆಪ; ಕ್ಷಿಪಣಿ–ದೂರದಿಂದ ನಿಯಂತ್ರಿಸಲ್ಪಡುವ ಸ್ಫೋಟಕವಾಗಿ ಉಡಾಯಿಸುವ ಸಾಧನ; ಮಜಲು–ಹಂತ; ಘನತೆ–ಶ್ರೇಷ್ಠತೆ; ಸೃಜನಾತ್ಮಕತೆ–ಕ್ರಿಯಾತ್ಮಕವಾದ; ದೃಢತೆ–ಬಲಿಷ್ಠವಾದ, ದಿಟವಾದ; ಕ್ರೋಡೀಕರಿಸು–ಸಂಗ್ರಹಿಸು; ಭ್ರಮೆ–ಭ್ರಾಂತಿ, ಹುಚ್ಚು, ಉನ್ಮಾದ; ಅಡಚಣೆ–ತೊಂದರೆ; ಜಮಾಯಿಸು–ಸೇರು.

## : ಅಭ್ಯಾಸ ಭಾಗ :

### ಅ) ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು:

೧. ಭಗವಂತನ ಸೃಷ್ಟಿಯಲ್ಲಿರುವವರೆಲ್ಲ ಆತನ ಬಂಧುಗಳೆ.

೨. ನೀನು ಯಾವ ಸ್ಕೂಲಿನಲ್ಲಿ ಓದುತ್ತಿದ್ದೀಯೆ?

೩. ವಿಜ್ಞಾನದ ಅಡಿಪಾಯವೇ ಪ್ರಶ್ನೆ ಕೇಳುವುದು.

೪. ಮಗುವೇ ಮೊದಲ ವಿಜ್ಞಾನಿ.

೫. ವ್ಯಕ್ತಿಗಿಂತ ರಾಷ್ಟ್ರ ದೊಡ್ಡದು.

೬. ಮಿ. ಪ್ರೆಸಿಡೆಂಟ್ ನಿಮ್ಮ ಯಶಸ್ಸಿನ ಗುಟ್ಟೇನು?

೭. ಎಲ್ಲ ಮಕ್ಕಳ ಕನಸೂ ಒಂದೇ.

## ಆ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):

೧. ದೇವರಿಗೆ ಹತ್ತಿರವಾದವರು ಯಾರು?

೨. ಚಿಪ್ ಎಂದರೇನು?

೩. ಕಲಾಂ ಅವರ ಆತ್ಮಚರಿತ್ರೆಯ ಹೆಸರೇನು?

೪. ಕಲಾಂ ಅವರ ಕ್ರಿಯಾಶೀಲತೆಗೆ ಸಾಕ್ಷಿ ಯಾವುದು?

೫. ವಿಜ್ಞಾನದ ಅಡಿಪಾಯ ಯಾವುದು?

೬. ಭೂಮಿಯ ಮೇಲಿನ ಮೊದಲ ವಿಜ್ಞಾನಿ ಯಾರು?

೭. ಕಲಾಂ ಅವರು ರಾಷ್ಟ್ರಪತಿಯ ಸ್ಥಾನಕ್ಕೆ ಆಯ್ಕೆಯಾದ ಸುದ್ದಿ ತಿಳಿದಾಗ ಅವರು ಎಲ್ಲಿದ್ದರು?

೮. ಕಲಾಂ ಅವರನ್ನು ಶಾಲೆಗೆ ಕಳಿಸುವಂತೆ ಪ್ರೇರೇಪಿಸಿದವರು ಯಾರು?

೯. ಕಲಾಂ ಅವರು ಯಾವ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರೊಫೆಸರ್ ಆಗಿದ್ದರು?

## ಇ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):

೧. ಕಲಾಂ ಅವರ ಬದುಕಿನ ಮಂತ್ರ ಯಾವುದು?

೨. ಕಲಾಂ ಅವರು ತಾವು ಆತ್ಮಕಥೆ ಬರೆದುದು ಏತಕ್ಕಾಗಿ?

೩. ಕಲಾಂ ಅವರು ಬಂಡೆಗಳ ಬಸಿರಲ್ಲಿ ಕಂಡದ್ದೇನು?

೪. ವಿ.ಜೆ. ಸುಂದರಮ್ ಸಿಕಂದರಾಬಾದ್ ಶಾಲಾ ಬಾಲಕಿ ಬಗೆಗೆ ಹೇಳಿದ ಹೆಮ್ಮೆಯ ಮಾತುಗಳಾವುವು?

೫. ಕಲಾಂ ಅವರ ದೃಷ್ಟಿಯಲ್ಲಿ ಕನಸುಗಳು ಏನಾಗುತ್ತವೆ?

೬. ಕಲಾಂ ಮೇಷ್ಟ್ರು ಹೇಳಿದ ಯಶಸ್ಸಿನ ಪಂಚಾಕ್ಷರಿ ಮಂತ್ರ ಯಾವುದು?

## ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):

೧. ಕಲಾಂ ಅವರು ಯಾವಾಗಲೂ ಸಾಧ್ಯತೆಗಳನ್ನು ಅರಸುವ ಆಶಾಜೀವಿ ಹೇಗೆ? ವಿವರಿಸಿರಿ.

೨. ಚೆನ್ನೈನಲ್ಲಿ ನಡೆದ ಪದ್ಮಶೇಷಾದ್ರಿ ಬಾಲಭವನದ ಪ್ರೌಢಶಾಲೆಯಲ್ಲಿ ನಡೆದ ಕ್ವಿಜ್ ಕಾರ್ಯಕ್ರಮದ ಔಚಿತ್ಯವನ್ನು ಕುರಿತು ವಿವರಿಸಿ.

೩. ತಾಯಿ–ತಂದೆ ಶಿಕ್ಷಕರು ಸೇರಿ ಆದ ತ್ರಿಭುಜವೇ ಉತ್ತಮ ಬದುಕಿಗೆ ಆದರ್ಶ ಮಾದರಿ ಹೇಗೆ? ವಿವರಿಸಿರಿ.

೪. ರಾಷ್ಟ್ರಪತಿಯಾಗಿ ಆಯ್ಕೆಯಾದಾಗ ಚೆನ್ನೈನಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಕಲಾಂ ಹೇಳಿದ್ದೇನು? ವಿವರಿಸಿರಿ.

೫. ತಮ್ಮನ್ನು ಭೇಟಿಯಾದ ಮಕ್ಕಳಿಗೆ ಕಲಾಂ ಹೇಳಿದ್ದೇನು?

## ಭಾಷಾಭ್ಯಾಸ :

೧. ಅನ್ಯದೇಶ್ಯ ಪದಗಳನ್ನು ಗಮನಿಸಿ: ಎಲೆಕ್ಟ್ರಾನಿಕ್, ಕಂಪ್ಯೂಟರ್, ಕ್ಯಾಂಟೀನ್, ಕ್ವಿಜ್, ಕ್ಲಾಸ್, ಡಿಜಿಟಲ್, ಲೈಬ್ರರಿ, ಪ್ರೆಸಿಡೆಂಟ್.

೨. ನಾನಾರ್ಥ ಪದಗಳನ್ನು ಗಮನಿಸಿರಿ:

ಅಡಿ – ಪಾದ, ಅಳತೆ, ಅಂಗುಲ.

ಹಿಂಡು – ಗುಂಪು, ಹಾಲನ್ನು ಕರೆ.

ಕಲಿ – ತಿಳಿ, ಗುರುತು, ಯುಗ.

೩. ಹೇಳಿದರು – ಇದು ಭೂತಕಾಲದ ರೂಪ.
ಇದೇ ರೀತಿ ಈ ಪಠ್ಯದಲ್ಲಿ ಬಂದಿರುವ ಪದಗಳನ್ನು ಪಟ್ಟಿ ಮಾಡಿರಿ.

೪. ಕಂಡರು – ಇದರ ಕ್ರಿಯಾಪ್ರಕೃತಿ – ಕಾಣು; ನಿಷೇಧ ರೂಪ – ಕಾಣರು.
ಇದೇ ರೀತಿ ಈ ಪಠ್ಯದಲ್ಲಿ ಬಂದಿರುವ ಪದಗಳನ್ನು ಪಟ್ಟಿಮಾಡಿ ತಿಳಿಯಿರಿ.

## ಚಟುವಟಿಕೆ :

೧. ಮಹಾತ್ಮರ ಜೀವನಚರಿತ್ರೆ ಪುಸ್ತಕ ಸಂಗ್ರಹಿಸಿ ಓದಿರಿ.

೨. ಮಹಾತ್ಮರ ಜೀವನಚರಿತ್ರೆ ಓದಿ, ಉಪನ್ಯಾಸಕರ ಸಹಾಯದಿಂದ ಕಿರುಪ್ರಬಂಧ ಬರೆಯಿರಿ.

## ಆಕರ :

ಕೃತಿ : 'ಕಲಾಂ ಮೇಷ್ಟ್ರು'
ಲೇಖಕರು : ಎಚ್.ಆರ್. ರಾಮಕೃಷ್ಣರಾವ್.
ಪ್ರಕಾಶನ : ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ.

## ಹೆಚ್ಚಿನ ಓದಿಗೆ :

೧. ಅಗ್ನಿಯ ರೆಕ್ಕೆಗಳು – ಜಯಪ್ರಕಾಶ ಪುತ್ತೂರ

೨. ಬಂಕಿಮ್‌ಚಂದ್ರ – ಎ.ಆರ್. ಕೃಷ್ಣಶಾಸ್ತ್ರಿ

೩. ಕುಲದೀಪಕರು – ಸಿದ್ಧವನಹಳ್ಳಿ ಕೃಷ್ಣಶಾಸ್ತ್ರಿ

*ಬಾಳನ್ನು ಅರಿತು ಅದನ್ನು ಮೆಚ್ಚಬೇಕು. ಇದೇ ನಿಜವಾದ ಜೀವನ ಸೂತ್ರ.*
*ಸುಖ–ದುಃಖ, ಸೋಲು–ಗೆಲುವು, ಸಿಹಿ–ಕಹಿ, ಆಶೆ–ನಿರಾಶೆ ಎಲ್ಲವನ್ನೂ*
*ಮೆಟ್ಟಿ ನಿಲ್ಲು, ಮೃತ್ಯುಂಜಯನಾಗಿ ಮೆರೆ, ನಟರಾಜನಾಗಿ ಕುಣಿ.*
*– ವಿವೇಕಾನಂದ*

# ೭. ತಿರುಳ್ಗನ್ನಡದ ಬೆಳ್ನುಡಿ

– *ಮುದ್ದಣ*

*ನಡುಗನ್ನಡ ಸಾಹಿತ್ಯವು ಹಿಂದೆ ಸರಿದು ಹೊಸಗನ್ನಡ ಸಾಹಿತ್ಯ ರೂಪುಗೊಳ್ಳುತ್ತಿದ್ದ ಸಂಕ್ರಮಣ ಕಾಲದಲ್ಲಿ ಮುದ್ದಣನು ಬದುಕಿ ಕೃತಿರಚನೆ ಮಾಡಿರುವನು. ಕನ್ನಡ ಭಾಷೆಯು ಇಂಗ್ಲಿಷ್ ಭಾಷೆಯ ಪ್ರಭಾವದಿಂದ ಹೊಸ ಸ್ಥಿತ್ಯಂತರಕ್ಕೆ ಒಳಪಡುತ್ತಿದ್ದ ಸಂದರ್ಭವದು. ಈ ಸಂದಿಗ್ಧ, ಸಂಕ್ರಮಣ ಕಾಲದ ಗೊಂದಲಗಳು, ಬದಲಾವಣೆಯ ಹಾದಿ ಮುಂತಾದವುಗಳ ಚರ್ಚೆಯನ್ನು ಮುದ್ದಣನಲ್ಲಿ ಕಾಣಬಹುದು.*

*"ಪದ್ಯಂ ವಧ್ಯಂ ಗದ್ಯಂ ಹೃದ್ಯಂ" ಎಂಬ ಅವನ ಹೇಳಿಕೆಯು ಆಧುನಿಕ ಕಾಲದ ಹುಟ್ಟಿನೊಂದಿಗೆ ಪದ್ಯವನ್ನು ಪಕ್ಕಕ್ಕೆ ಒತ್ತರಿಸಿ ಗದ್ಯ ಆ ಸ್ಥಳವನ್ನು ಆಕ್ರಮಿಸಿಕೊಳ್ಳುತ್ತಿದ್ದುದರ ಸೂಚನೆಯೂ ಆಗಿದೆ. ಗದ್ಯ ಆಧುನಿಕ ಕಾಲದ ಸಂಕೀರ್ಣತೆಯನ್ನು ವಿವರಗಳಲ್ಲಿ ಕಟ್ಟಿಕೊಟ್ಟ ಭಾಷಿಕರೂಪ. 'ಕನ್ನಡಂ ಕಸ್ತೂರಿಯಲ್ತೆ?' ಎಂಬುದು ಸಂಸ್ಕೃತ ಭೂಯಿಷ್ಠತೆಯನ್ನು ವಿರೋಧಿಸುವಂತೆಯೂ ಅಚ್ಚಗನ್ನಡದ ದೇಸಿ ಶೈಲಿಯ ಬಗೆಗಿನ ಒಲವೂ ಆಗಿದೆ.*

**ಕಾ**ಡುಂ ನಾಡುಂ ಮನೋಜ್ಞಮಾಗೆ ಸಂಪ್ರಾಪ್ತಮಾದ ವರ್ಷಕಾಲದೊಳೊಂದು ದೆವಸಂ ಬೈಗುಂಬೊಟ್ತಿ ನೊಳೆಂದಿನಂತಿರೋಲಗಂ ಪರಿಯೆ ಕಬ್ಬಿಗರ ಬಲ್ಲಹಂ ಮುದ್ದಣನರಮನೆಯಿಂ ಪೊಱಮಟ್ಟು ನೆರೆವೀದಿವಿಡಿದು ಪೊರೆವೀಡಿಂಗೈತರ್ಪುದುಮಾತನ ಮಡದಿ ಮನೋರಮೆ ದೂರದೆ ಕಂಡೆಟ್ಟಿ ಇದಿರ್ವಂದು, ಕಾಲ್ಗೆ ನೀರಂ ನೀಡಿ ಮತ್ತಂ ಕೈವಿಡಿದೊಳಚೌಕಿಗೊಯ್ದು ಮಣೆಯಿತ್ತು ಕುಳ್ಳಿರಿಸಿ ಒಡನೆಯೆ ತನಿವಣ್ಣಂ ತಿನಲಿತ್ತು, ಕೆನೆವಾಲಂ ಕುಡಿವೊಡಿತ್ತು, ಉಪಚರಿಸುತಿರ್ದಳ್ ಈ ಉಪಚಾರದಿನಾತನ ಪಸಿವುಂ ಬೞಲ್ಕೆಯುಂ ಮುಡಿಯೆ, ಕೆಳದಿ ನಱುದಂಬುಲಮಂ ಸವಿಯಲ್ಕೆಂದು ಮಡಿದೀವುತುಮಿರೆ, ಇಂತು ಸುಖಸಲ್ಲಾಪಂಗೊಳುತಿರ್ದರ್, ಅದೆಂತೆನೆ–

*ಮನೋರಮೆ* - (ಮೆಲ್ನುಡಿಯಿಂ) ನೋಟ್ಟುದೀ ಪಗಲ್ಗಳೆಂತೊ ಪಿರಿಯವು, ಪಗಲುಮಿರುಳುಂ ಸುರಿವ ಬಲ್ಸೋನೆಯ ಜಿನುಂಗಿನತ್ತಣಿನೆನ್ನ ಬಗೆಯುಂ ಬೇಸರ್ತುದು, ಅಂತದಱಿನೇನಾನುಮೊಂದು ನಲ್ಗತೆಯಂ ಪೇೞಿ!

*ಮುದ್ದಣ* - ಪ್ರಾಣೇಶ್ವರಿ! ತಡೆಯೇಂ ಇನಿತೊಂದು ಬಯಕೆ  ತಲೆದೋಱಿಪ್ ಆವ ಗಹನಂ? ಆದೊಡ ಮಾವ ನಲ್ಗತೆಯಂ ಪೇಟ್ವೆಂ, ಏಂ ಭೋಜ ಪ್ರಬಂಧಂ? ವಿಕ್ರಮ ವಿಜಯಂ? ಮಹಾವೀರ ಚರಿತಂ?

*ಮನೋರಮೆ* - ಇಸ್ಸಿ! ಇವಱೊಳೆನಗಟ್ಟಿಱಿಲ್ಲಂ; ಉಱಿದೊಡಮಱಿದೊಡಂ ಬಟ್ಟೆದೋಱಿಪ ರಸಭರಿತಂ ಚರಿತಮ್ಮೆಸೆ.

*ಮುದ್ದಣ* - ನಿನಗಾವ ರಸದೊಳಿಷ್ಟಂ? ಶೃಂಗಾರರಸದೊಳೆ? ವೀರರಸದೊಳೆ? ಹಾಸ್ಯರಸದೊಳೆ?

*ಮನೋರಮೆ* - ಆವ ರಸದೊಳೆಂದೊಡೇಂ? ನವರಸದೊಳಂ.

*ಮುದ್ದಣ* - ಅಂತಿರೆ ಮತ್ತಮಾ ಕತೆ ಯಾವುದು?

ಮನೋರಮೆ - ರಾಮಾಯಣದೊಳೇನಾನುಮೊಂದು.

ಮುದ್ದಣ - ಅಂತೆಯೆ ಅಕ್ಕೆ. ಸೀತಾಸ್ವಯಂವರಮಂ ಪೇೞ್ವೆಂ

ಮನೋರಮೆ - ಆಂ ಮುನ್ನಮೆ ಕೇಳ್ದಿರ್ಪೆನಲ್ತೆ?

ಮುದ್ದಣ - ಏಂ ಸೀತಾಪಹರಣಕಥನದೊಳ್ ಬಯಕೆಯೆ?

ಮನೋರಮೆ - ಉಃ! ಆನೊಲ್ಲೆಂ.

ಮುದ್ದಣ - ಮೇಣಾವ ನಲ್ಗತೆಯಂ ಪೇೞ್ವೆನೋ.

ಮನೋರಮೆ - ಇಂತೇಕುಸಿರ್ವಯ್, ನಾಡೊಳೆನಿತ್ತೋ ರಾಮಾಯಣಂಗಳೊಳವು. ನೀಂ ಕೇಳ್ದುದಱೊಳೊಂದಂ ನಲ್ಮೆದೋಱೆ ಕಂಡು ಪೇೞ್ವುದು.

ಮುದ್ದಣ - ನೀನೆ ಒಂದನಾಯ್ದುಕೊಳ್ವುದು.

ಮನೋರಮೆ - ಶ್ರೀರಾಮನಶ್ವಮೇಧಮಂ ಕೈಕೊಂಡನೆಂಬರಲ್ತೆ; ಆ ಕತೆಯೆ ಅಕ್ಕುಂ.

ಮುದ್ದಣ - ಈಗಳಱಿತೆಂ; ಶೇಷರಾಮಾಯಣಮಂ ಪೇೞ್ವುದೆಂಬೆಯ?

ಮನೋರಮೆ - ಅಪ್ಪುದಪ್ಪುದು. ಆದೊಡೆ ಮುನ್ನಮಾರಾರ್ಗಿದನೊರೆದರ್?

ಮುದ್ದಣ - ಮುನ್ನಂ ಶೇಷಂ ವಾತ್ಸಾಯನಂಗೆ ಪೇೞ್ದಿನದನೆಯೆ ನಿನಗೆ ಬಿತ್ತರಿಪೆಂ. ಆದೊಡೆ ಬಲ್ಗತೆ ಕಣಾ. ಒಂದೆರಡ್ದಿವಸಕ್ಕೆ ಮುಡಿಯದು.

ಮನೋರಮೆ - ಇರ್ಕೆ, ಓರೊಂದು ದೆವಸಮಿನಿಸಿನಿಸಂ ಪೇೞ್ದೊಡೇಂ?

ಮುದ್ದಣ - ಅಕ್ಕುಂ, ಆವ ದಾಟಿಯೊಳ್ ಪೇೞ್ವೆಂ? ಪದ್ಯದೊಳ್ ಪೇೞ್ವೆನೊ? ಗದ್ಯದೊಳ್?

ಮನೋರಮೆ - ಪದ್ಯಂ ವಧ್ಯಂ; ಗದ್ಯಂ ಹೃದ್ಯಮದಱಿಂ ಹೃದ್ಯಮಪ್ಪ ಗದ್ಯದೊಳೆ ಪೇೞ್ವುದು.

ಮುದ್ದಣ - (ನಸುನಗೆಯಿಂ) ಅದಂತಿರ್ಕೆ, ಇಂತಪ್ಪ ನಲ್ಗತೆಯಂ ಬಿತ್ತರಿಸಿದೊಡೆ ಅರಮನೆಯೊಳ್ ರನ್ನಗಡಗಮಂ ಪೊನ್ನ ಕಂಠಿಕೆಯಂ ಮೆಚ್ಚನೀವರ್. ನೀನೀವುದೇಂ?

ಮನೋರಮೆ - ಪೇೞಱಿತೇಂ. ಎನ್ನನೆ ಆನೀವೆಂ.

ಮುದ್ದಣ - ಬಲ್ಗಡುಸುಗಾರ್ತಿಯೈಸೆ! ಅಱಿಯೆಯಾ ಮುನ್ನಮೆ ನಿನ್ನ ತಾಯ್ತಂದೆವಿರೆನಗಿತ್ತರೆಂಬುದಂ?

ಮನೋರಮೆ - ಇದೇತಱ ನುಡಿ? ಪೋಕೆ. ಆಂ ಪರಾಧೀನೆ ಗಡ! ಪುರಾಣಮನೋದಿದಿಂ ಬೞಿಯಮಲ್ತೆ ದಕ್ಷಿಣೆಯನೀವುದು. ಅರಮನೆಯವರುಂ ಕಬ್ಬಮಂ ಕಂಡಲ್ತೆ ಕಚ್ಚಟೆಯನಿತ್ತರ್. ಆನುಂ ಕತೆಯಂ ಕೇಳ್ದು ಸೊಗಸಾಗೆ ಬಲ್ಲಂತೆ ಸಮ್ಮಾನಿಸುವೆಂ.

ಮುದ್ದಣ - ಒಳ್ಳಿತೊಳ್ಳಿತು! ಕತೆಯಂ ಲಾಲಿಸಿ ಬೞಿಕ್ಕಮೀಯೆನೆಂದೊಡೆ ಬಿಡೆಂ ನೋೞ್ಪೆಂ.

ಮನೋರಮೆ - ಆನುಂ ನೋೞ್ಪೆಂ ಕತೆಯ ಪುರುಳೆಂತಿರ್ಕುಮೆಂದು.

ಮುದ್ದಣ - ಆದೊಡಾಲಿಸು. ಸ್ವಸ್ತಿ ಶ್ರೀಮತ್ಸುರಾಸುರೇಂದ್ರನರೇಂದ್ರ ಮುನೀಂದ್ರ ಫಣೀಂದ್ರಮಣಿಮಕುಟತಟ ಘಟಿತ–

ಮನೋರಮೆ - ಓ‍ಓ! ತಡೆ! ತಡೆ! ವಸುಧೆಗೊಡೆಯನಪ್ಪ ರಾಮಚಂದ್ರನ ಕತೆಯಂ ಪೇಳೆನೆ ಬಸದಿಗೊಡೆಯರಪ್ಪ ಸುರೇಂದ್ರರ ಚರಿತೆಯಂ ಪೇಳ್ವುದೇಂ? ಸಾಲ್ಗುಂ ಸಾಲ್ಗುಂ. ಇಂತೆರ್ದೆಗೊಳ್ವ ಕತೆಗೆಂತುಡು ಗೊಱೆಗೆಯ್ವನೊ!

ಮುದ್ದಣ - ನಲ್ನುಡಿಯಿದು ರಮಣಿ! ಕಚಂಗಳಾಣೆ. ಅಲ್ತು ಬಸದಿಯಿಂದ್ರರ ಕತೆಯಲ್ತು; ರಾಮಚಂದ್ರನ ಕತೆಯನೆ ಪೊಗಟ್ಟು ಪೇಳ್ವುದಿದು ಸಕ್ಕದದೊಂದು ಚೆಲ್ವು.

ಮನೋರಮೆ - ಲೇಸು! ಲೇಸು! 'ನೀರಿಟೆಯದ ಗಂಟಲೊಳ್ ಕಡುಬಂ ತುಱಿಕಿದಂತಾಯ್ತು'; ಕನ್ನಡದ ಸೊಗಸನಱಿಯಲಾರ್ತೆನಿಲ್ಲೆನಗೆ ಸಕ್ಕದದ ಸೊಗಸಂ ಪೇೞ್ವುದು ಗಡ!

ಮುದ್ದಣ - ಅಪ್ಪೊಡಿನ್ನೆಂತೊ ಒಱೆವೆಂ?

ಮನೋರಮೆ - ತಿರುಗಳ್ಗನ್ನಡದ ಬೆಳ್ನುಡಿಯೊಳೆ ಪುರುಳೊಂದೆ ಪೇೞ್ವುದು. 'ಕನ್ನಡಂ ಕತ್ತುರಿ'ಯಲ್ತೆ.

ಮುದ್ದಣ - ಅಪ್ಪುದಪ್ಪುದು. ಆದೊಡಂ ಸಕ್ಕದಮೊಂದೆ ರನ್ನವಣಿಯಂ ಪೊನ್ನಿಂ ಬಿಗಿದಂತೆಸೆಗುಂ. ಅದಱಿಂ ಕರ್ಮಣಿಸರದೊಳ್ ಚೆಂಬವಳಮಂ ಕೋದಂತಿರೆ, ರಸಮೊಸರೆ, ಲಕ್ಕಣಂ ಮಿಕ್ಕಿರೆ, ಎಡೆಯೆಡೆಯೊಳ್ ಸಕ್ಕದದ ನಲ್ನುಡಿ ಮೆಱೆಯೆ, ತಿರುಳ್ಗನ್ನಡದೊಳ್ ಕಥೆಯನುಸಿರ್ವೆಂ.

## ಲೇಖಕರ ಪರಿಚಯ :



**'ಮುದ್ದಣ'** (೧೮೬೯–೧೯೦೧) ಎಂಬುದು **ಲಕ್ಷ್ಮೀನಾರಾಯಣಪ್ಪ** ಎಂಬ ಕವಿಯ ಕಾವ್ಯನಾಮ. ಉಡುಪಿ ಜಿಲ್ಲೆಯ ನಂದಳಿಕೆ ಎಂಬ ಗ್ರಾಮ ಈತನ ಹುಟ್ಟೂರು. ಪಾತಾಳಿ ತಿಮ್ಮಪ್ಪಯ್ಯ ಮತ್ತು ಮಹಾಲಕ್ಷ್ಮಮ್ಮ ಈತನ ತಂದೆ–ತಾಯಿಯರು. ಬಡತನ ಮತ್ತು ಕ್ಷಯರೋಗಕ್ಕೆ ಬಲಿಯಾಗಿ ಚಿಕ್ಕವಯಸ್ಸಿನಲ್ಲೇ ತೀರಿಕೊಂಡ ಮುದ್ದಣ ಕವಿಯು ಉಡುಪಿಯ ಹೈಸ್ಕೂಲಿನಲ್ಲಿ ವ್ಯಾಯಾಮ ಶಿಕ್ಷಕನಾಗಿಯೂ, ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಕನ್ನಡ ಪಂಡಿತನಾಗಿಯೂ ಕೆಲಸ ನಿರ್ವಹಿಸಿದ್ದನು. ಪ್ರಯೋಗಶೀಲ ವ್ಯಕ್ತಿತ್ವದ ಮುದ್ದಣನು ಸಾಹಿತ್ಯ, ಸಂಗೀತ, ಯಕ್ಷಗಾನ ಕಲೆಗಳಲ್ಲಿ ವಿಶೇಷ ಆಸಕ್ತಿ ಮತ್ತು ಪರಿಶ್ರಮ ಹೊಂದಿದ್ದನು. 'ಅದ್ಭುತ ರಾಮಾಯಣ', 'ಶ್ರೀರಾಮ ಪಟ್ಟಾಭಿಷೇಕ', 'ರಾಮಾಶ್ವಮೇಧ' ಮುಂತಾದ ಕೃತಿಗಳನ್ನು ಈತ ರಚಿಸಿರುವನು. 'ರತ್ನಾವತೀ ಕಲ್ಯಾಣ' 'ಕುಮಾರ ವಿಜಯ' ಎಂಬೆರಡು ಯಕ್ಷಗಾನ ಪ್ರಸಂಗಗಳನ್ನೂ ರಚಿಸಿರುವ ಈತ ವಾಲ್ಮೀಕಿ ರಾಮಾಯಣ ಮತ್ತು ಭಗವದ್ಗೀತೆಗಳನ್ನೂ ಕನ್ನಡಕ್ಕೆ ಅನುವಾದಿಸಿದ್ದಾನೆ. ಕಾಮಶಾಸ್ತ್ರ ಕುರಿತ ಗ್ರಂಥವೊಂದು ಈತನ ಹೆಸರಿನಲ್ಲಿದೆ. 'ಗೋದಾವರಿ' ಎಂಬ ಅಪೂರ್ಣ ಕಾದಂಬರಿಯನ್ನು ಈತ ರಚಿಸಿದ್ದನು.

## ಗದ್ಯಭಾಗವನ್ನು ಕುರಿತು :

"ತಿರುಳ್ಗನ್ನಡದ ಬೆಳ್ನುಡಿ" ಎಂಬ ಪ್ರಸ್ತುತ ಭಾಗವು ಮುದ್ದಣ–ಮನೋರಮೆಯರ ಪ್ರಸಂಗವೆಂದೇ ಜನಜನಿತವಾಗಿದೆ. ಈ ಪ್ರಸಂಗವು 'ರಾಮಾಶ್ವಮೇಧ' ಕಾವ್ಯಕ್ಕೆ ಕವಿ ಮುದ್ದಣನು ನಿರ್ಮಿಸಿದ ಸುಂದರ ಚೌಕಟ್ಟು ಎಂಬ ಖ್ಯಾತಿ ಹೊಂದಿದೆ. ಪರಂಪರೆಯ ಅರಿವಿನ ಜೊತೆಗೆ ಹೊಸಕಾಲದ ಬೇಕು ಬೇಡಗಳ ಸ್ಪಂದನ, ಚರ್ಚೆ ಇಲ್ಲಿದೆ. ಮೇಲ್ನೋಟಕ್ಕೆ ಸತಿಪತಿಯರ ಸರಸದ ಮಾತುಗಳಂತೆ ಕಂಡರೂ ಈ ಪ್ರಸಂಗವು ಹೊಸಕಾಲದ ಕನ್ನಡ ಓದುಗರ ಅಪೇಕ್ಷೆ, ನಿರೀಕ್ಷೆಗಳನ್ನು ಧ್ವನಿಸುತ್ತದೆ. ತಿರುಳ್ಗನ್ನಡದ ಬಗ್ಗೆ ಅಭಿಮಾನ, ಕ್ಲಿಷ್ಟ ಸಂಸ್ಕೃತ ವಾಕ್ಯರಚನೆಯ ಬಗ್ಗೆ ವಿರೋಧ, ವಸ್ತು, ರಸ, ಶೈಲಿ, ಪ್ರಕಾರ – ಈ ಎಲ್ಲದರ ಬಗ್ಗೆ ಇಲ್ಲಿ ಸಂವಾದವಿದೆ. ಮುದ್ದಣ ಸೃಷ್ಟಿಸಿರುವ ಮನೋರಮೆಯ ಪಾತ್ರವು ಏಕಕಾಲಕ್ಕೆ ಪ್ರೇಮಿ, ಶುದ್ಧ ಸಹೃದಯಿ, ಪ್ರಬುದ್ಧ ವಿಮರ್ಶಕಿಯೂ ಆಗಿ ಕಂಡುಬರುವುದು ಇಲ್ಲಿನ ವಿಶೇಷ. ಕನ್ನಡದ ಕಸ್ತೂರಿಯ ಪರಿಮಳ ಈ ಸಂಭಾಷಣೆಯಲ್ಲಿ ತುಂಬಿಕೊಂಡಿದೆ.

## ಟಿಪ್ಪಣಿ :

**ಶೇಷ ರಾಮಾಯಣ :** ಪಠ್ಯದಲ್ಲಿ ಶೇಷರಾಮಾಯಣದ ಪ್ರಸ್ತಾಪವಿದೆ. ರಾಮಾಯಣವನ್ನು ಮೊದಲು ರಚಿಸಿದವರು ವಾಲ್ಮೀಕಿ ಮಹರ್ಷಿ. ವಾಲ್ಮೀಕಿಕೃತ ರಾಮಾಯಣವು ಶ್ರೀರಾಮನ ಪಟ್ಟಾಭಿಷೇಕದ ಕಥೆಯೊಂದಿಗೆ ಅಂತ್ಯಗೊಳ್ಳುತ್ತದೆ. ಸೀತಾ ಪರಿತ್ಯಾಗ, ಲವಕುಶ ಜನನ ಮುಂತಾದ ಸಂಗತಿಗಳು ವಾಲ್ಮೀಕಿ ರಾಮಾಯಣದಲ್ಲಿಲ್ಲ. ಈ ಮುಂತಾದ ಸಂಗತಿಗಳು ಶೇಷ ರಾಮಾಯಣದಲ್ಲಿ ಉಲ್ಲೇಖಿತಗೊಂಡಿವೆ. ಶೇಷನು ವ್ಯಾತ್ಸಾಯನನಿಗೆ ಈ ಕಥೆಯನ್ನು ಮೊದಲಿಗೆ ಹೇಳಿದನೆಂದು ಮುದ್ದಣ ತಿಳಿಸಿದ್ದಾನೆ. ಶೇಷ ಎಂಬುದಕ್ಕೆ 'ಉಳಿದ ಭಾಗ' ಎಂಬ ಅರ್ಥವೂ ಇದೆ. ಶೇಷ ರಾಮಾಯಣದಂತೆ ಆನಂದ ರಾಮಾಯಣ, ಅಧ್ಯಾತ್ಮ ರಾಮಾಯಣ, ವಸಿಷ್ಠ ರಾಮಾಯಣ ಮುಂತಾದವುಗಳು ವಾಲ್ಮೀಕಿ ರಾಮಾಯಣದ ನಂತರ ಪ್ರಚಲಿತದಲ್ಲಿರುವುವು.

## ಶಬ್ದಾರ್ಥ :

ಸಂಪ್ರಾಪ್ತ–ಒದಗಿ ಬಂದಿರುವ; ವರ್ಷಕಾಲ–ಮಳೆಗಾಲ; ದೆವಸ–ದಿವಸ; ಬೈಗುಂಬೊಟ್ತು–ಸಂಜೆಯ ಹೊತ್ತು; ಓಲಗ–ರಾಜನ ಸಭೆ, ದರ್ಬಾರು; ಕಬ್ಬಿಗರ ಬಲ್ಲಹ–ಕವಿಗಳ ವಲ್ಲಭ, ಕವಿಗುರು; ಪೊಱಮಟ್ಟು–ಹೊರಹೊರಟು; ಪೊರೆವೀಡು–ವಾಸದ ಮನೆ; ಎೞ್ದು–ಎದ್ದು; ಚೌಕಿ–ಒಳಮನೆ; ತನಿವಣ್ಣು–ರುಚಿಯಾದ ತಾಜಾ ಹಣ್ಣು; ಬಟಲ್ಕೆ–ಆಯಾಸ, ಬಳಲಿಕೆ; ಮುಡಿ–ಪರಿಹಾರವಾಗು, ಮುಕ್ತಾಯವಾಗು; ಕೆಳದಿ–ಗೆಳತಿ; ನಱುದಂಬುಲ–ರಸವತ್ತಾದ ಕಂಪುಭರಿತ ತಾಂಬೂಲ; ಬಲ್ಸೋನೆ–ಭಾರೀಮಳೆ, ಜಡಿಮಳೆ; ಬಗೆ–ಮನಸ್ಸು; ನಲ್ಗತೆ–ಸುಂದರವಾದ ಕಥೆ, ಹಿತಕರವಾದ ಕಥೆ; ಆವ ಗಹನ–ಅದು ಯಾವ ಕಷ್ಟ; ಪ್ರಬಂಧ–ಕಾವ್ಯ; ಅಟ್ಕಿರು–ಪ್ರೀತಿ; ಬಟ್ಟೆದೋಱಪ–ದಾರಿತೋರಿಸುವ, ಬದುಕಿನ ಮಾರ್ಗ ತಿಳಿಸುವ; ರಸ–ಕಾವ್ಯಾನುಭವದಿಂದ ದೊರೆಯುವ ಒಂದು ಅನುಭೂತಿ, ರಸಾನುಭವ (ರಸಗಳು ಒಂಬತ್ತು : ಶೃಂಗಾರ, ಹಾಸ್ಯ, ರೌದ್ರ, ಕರುಣ, ಬೀಭತ್ಸ, ವೀರ, ಭಯಾನಕ, ಅದ್ಭುತ ಮತ್ತು ಶಾಂತ); ಒಳವು–ಇವೆ, ಇರುವವು; ನಲ್ಮೆ–ಪ್ರೀತಿ, ಅನುಗ್ರಹ, ಕೃಪೆ; ಒರೆ–ಹೇಳು; ಬಿತ್ತರಿಪು–ವಿಸ್ತರಿಸಿ ಹೇಳು, ನಿರೂಪಿಸು; ಬಲ್ಗತೆ–ದೊಡ್ಡಕಥೆ; ಇರ್ಕೆ–ಇರಲಿ; ಓರೊಂದು–ಒಂದೊಂದು; ಇನಿಸಿನಿಸು–ಇಷ್ಟಿಷ್ಟು;

ವಧ್ಯಂ–ಅಪ್ರಿಯವಾದುದು, ತಿರಸ್ಕರಿಸಲು ಯೋಗ್ಯವಾದುದು; ಹೃದ್ಯಂ–ಹಿತಕರವಾದುದು, ಪ್ರಿಯವಾದುದು, ಮನೋಹರವಾದುದು; ರನ್ನಗಡಗ–ರತ್ನದ ಕಡಗ; ಪೊನ್ನ ಕಂಠಿಕೆ–ಬಂಗಾರದ ಒಂದೆಳೆಯ ಸರ, ಏಕಾವಳಿ, ಮುತ್ತಿನಹಾರ; ಮೆಚ್ಚು–ಉಡುಗೊರೆ; ಪೆಱತೇಂ–ಮತ್ತಿನ್ನೇನು, ಬೇರೆ ಏನು; ಗಡಸುಗಾರ್ತಿ–ಗಟ್ಟಿಗಿತ್ತಿ; ಪೋಕೆ–ಹೋಗಲಿ; ಬೞಿಯಮಲ್ತೆ–ನಂತರವಲ್ಲವೆ; ಕಬ್ಬ–ಕಾವ್ಯ; ಕಚ್ಚಟಿ–ಕೈಕಡಗ, ಬಹುಮಾನವಾಗಿ ನೀಡುವ ಬಳೆ(ಕಡಗ); ಈಯೆನ್–ಕೊಡುವುದಿಲ್ಲ; ನೋೞ್ಪೆಂ–ನೋಡುವೆನು; ಪುರುಳ್–ಸಾರ, ಸತ್ತ್ವ; ಫಣೀಂದ್ರ–ನಾಗೇಂದ್ರ, ಆದಿಶೇಷ; ವಸುಧೆ–ಭೂಮಿ; ಬಸದಿ–ಚೈತ್ಯಾಲಯ, ಜೈನರ ಪೂಜಾಮಂದಿರ; ರಮಣಿ–ಪ್ರಿಯೆ, ಸುಂದರಿ; ಕಚ–ಮುಡಿ, ತಲೆಗೂದಲು; ಸಕ್ಕದ–ಸಂಸ್ಕೃತ; ಅಱಿ–ತಿಳಿ; ಆರ್ತನಿಲ್ಲ–ಸಮರ್ಥಳಿಲ್ಲ; ಬೆಳ್ನುಡಿ–ಸವಿಮಾತು, ತಿಳಿಯಾದ ಭಾಷೆ; ತಿರುಳ್ಗನ್ನಡ–ಸಾರವತ್ತಾದ, ಅರ್ಥಪೂರ್ಣವಾದ ಕನ್ನಡ, ದೇಸಿ ಮಾತು: ಕತ್ತುರಿ–ಕಸ್ತೂರಿ; ಪುರುಳು–ಸಾರ; ರನ್ನವಣಿ–ರತ್ನದ ಮಣಿ, ರತ್ನದ ಹರಳು; ಪೊನ್ನು–ಬಂಗಾರ; ಒಸರು–ಜಿನುಗು; ಚೆಂಬವಳ–ಕೆಂಪು ಹವಳ; ಲಕ್ಕಣ–(ಕಾವ್ಯ) ಲಕ್ಷಣ; ಎಡೆಯೆಡೆ–ಅಲ್ಲಲ್ಲಿ, ನಡುನಡುವೆ; ಉಸಿರ್ವೆಂ–ಹೇಳುವೆನು.

## : ಅಭ್ಯಾಸ ಭಾಗ :

### ಅ) ಸಾಂದರ್ಭಿಕ ವಿವರಣೆ ಬಯಸುವ ವಾಕ್ಯಗಳು:

೧. ಬಲ್ಲೋನೆಯ ಜಿನುಂಗಿನತ್ತಣಿನೆನ್ನ ಬಗೆಯುಂ ಬೇಸರ್ತುದು.

೨. ನಿನಗಾವ ರಸದೊಳಿಷ್ಟಂ?

೩. ಸೀತಾಪಹರಣ ಕಥನದೊಳ್ ಬಯಕೆಯೆ?

೪. ಪದ್ಯ ವಧ್ಯಂ; ಗದ್ಯಂ ಹೃದ್ಯಂ.

೫. ಕಬ್ಬಮಂ ಕಂಡಲ್ತೆ ಕಚ್ಚವೆಯನಿತ್ತರ್.

೬. ನೀರಿೞಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು.

೭. ಕನ್ನಡಂ ಕತ್ತುರಿಯಲ್ತೆ.

### ಆ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):

೧. ಮುದ್ದಣ ಅರಮನೆಯಿಂದ ಬರುತ್ತಿರುವುದನ್ನು ನಿಂತು ನೋಡಿದವರಾರು?

೨. ಯಾವ ಕತೆ ಹೇಳಬೇಕೆಂದು ಮನೋರಮೆ ಕೇಳಿದಳು?

೩. ಶೇಷನು ರಾಮಾಯಣದ ಕತೆಯನ್ನು ಯಾರಿಗೆ ಹೇಳಿದನು?

೪. ಎಂತಹ ಗದ್ಯದಲ್ಲಿ ಕತೆ ಹೇಳೆಂದು ಮನೋರಮೆ ಕೇಳುವಳು ?

೫. ಮನೋರಮೆ ಬಹುಮಾನವಾಗಿ ಏನನ್ನು ಕೊಡುವೆನೆಂದಳು?

೬. ವಸುಧೆಗೆ ಒಡೆಯನೆನಿಸಿದವನು ಯಾರು?

೭. ಕನ್ನಡವು ಕಸ್ತೂರಿಯಲ್ಲವೆ! ಎಂದವರಾರು?

**ಇ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):**

೧. ಮುದ್ದಣನನ್ನು ಮನೋರಮೆ ಹೇಗೆ ಉಪಚರಿಸಿದಳು?

೨. ಮನೋರಮೆ ಕತೆ ಹೇಳೆಂದು ಕೇಳಲು ಕಾರಣವೇನು?

೩. ಕತೆಯನ್ನು ಯಾವ ರಸಗಳಲ್ಲಿ ಹೇಳಲೆಂದು ಮುದ್ದಣ ಕೇಳಿದನು?

೪. ಯಾವ ಧಾಟಿಯಲ್ಲಿ ಕಥೆಯನ್ನು ಹೇಳೆಂದು ಮನೋರಮೆ ಕೇಳಿದಳು?

೫. ಅರಮನೆಯಿಂದ ಎಂತಹ ಬಹುಮಾನ ಸಿಗಬಹುದೆಂದು ಮುದ್ದಣ ಹೇಳಿದನು?

೬. 'ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕಿದಂತಾಯ್ತು' ಎಂದು ಮನೋರಮೆ ಹೇಳಿದ್ದೇಕೆ?

೭. ಸಂಸ್ಕೃತ–ಕನ್ನಡಗಳು ಸೇರಿದರೆ ಹೇಗೆ ಸೊಗಯಿಸುತ್ತದೆ?

**ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):**

೧. ಮುದ್ದಣ ಅರಮನೆಯಿಂದ ಬಂದ ಪರಿಯನ್ನೂ ಮನೋರಮೆಯ ಉಪಚಾರವನ್ನೂ ವಿವರಿಸಿ.

೨. ಒಳ್ಳೆಯದೊಂದು ಕತೆ ಹೇಳಬೇಕೆಂದಾಗ ಮುದ್ದಣನ ಪ್ರತಿಕ್ರಿಯೆಯೇನು?

೩. ಎಂತಹ ತಿರುಳು ಕನ್ನಡದಲ್ಲಿ ಕತೆಯನ್ನು ಹೇಳುವುದಾಗಿ ಮುದ್ದಣ ಹೇಳುವನು?

೪. ಮುದ್ದಣ–ಮನೋರಮೆಯರ ಸಂವಾದದ ಸ್ವಾರಸ್ಯವನ್ನು ವಿವರಿಸಿ.

## ಭಾಷಾಭ್ಯಾಸ :

೧. ಕೆನೆವಾಲಂ – ಕೆನೆಹಾಲನ್ನು. ಈ ರೀತಿಯಲ್ಲಿ ಕೆಳಕಂಡ ಪದಗಳಿಗೆ ಹೊಸಗನ್ನಡ ರೂಪಗಳನ್ನು ಬರೆಯಿರಿ:
ಇದಿರ್ವಂದು, ಪಸಿವುಂ, ಬೇಸರ್ತುದು, ಪೇೞ್ವೆಂ, ಆನೊಲ್ಲೆಂ, ಮೆಚ್ಚನೀವರ್, ಪೊಗೞ್ದು, ಕಥೆಯನುಸಿರ್ವೆಂ.

೨. ಈ ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ:
ಮನೋಜ್ಞಮಾಗೆ, ಇದಿರ್ವಂದು, ತಿನಲಿತ್ತು, ಪಗಲುಮಿರುಳಂ, ಸೀತಾಪಹರಣ, ಒಂದನಾಯ್ದು, ಮೆಚ್ಚನೀವರ್, ನೀರಿೞಿಯದ.

೩. ಇವುಗಳ ವಿಭಕ್ತಿ ಪ್ರತ್ಯಯಗಳನ್ನು ಹೆಸರಿಸಿ:
ಪಿರಿಯವು, ನಲ್ಗತೆಯಂ, ವಾತ್ಸ್ಯಾಯನಂಗೆ, ರಾಮಚಂದ್ರನ, ಗದ್ಯದೊಳ್.

೪. ಇವುಗಳಿಗೆ ನಾನಾರ್ಥ ಬರೆಯಿರಿ:
ಮುಡಿ, ಬಟ್ಟೆ, ರಸ, ಉಸಿರು, ಬಗೆ

೫. ಈ ದ್ವಿರುಕ್ತಿಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ:
ಒಳ್ಳಿತೊಳ್ಳಿತು, ತಡೆತಡೆ, ಲೇಸುಲೇಸು.

## ಚಟುವಟಿಕೆ :

೧. ಮುದ್ದಣ–ಮನೋರಮೆಯರ ಸಲ್ಲಾಪವನ್ನು ನಿಮ್ಮ ಮಾತುಗಳಲ್ಲಿ ಸಂಗ್ರಹಿಸಿ ಬರೆಯಿರಿ.

೨. ಮುದ್ದಣ ಕವಿಯ ಜೀವನ ವಿವರಗಳನ್ನು ಸಂಗ್ರಹಿಸಿ ಒಂದು ಲೇಖನ ರಚಿಸಿ.

೩. ರಾಮಾಶ್ವಮೇಧ ಕೃತಿಯ ಬಗ್ಗೆ ವಿವರ ಸಂಗ್ರಹಿಸಿ.

## ಆಕರ :

ಕೃತಿ : 'ಮುದ್ದಣ ಭಂಡಾರ'
ಮೂಲ : ರಾಮಾಶ್ವಮೇಧ
ಲೇಖಕರು : ಮುದ್ದಣ
ಪ್ರಕಾಶನ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕರ್ನಾಟಕ ಸರ್ಕಾರ

## ಹೆಚ್ಚಿನ ಓದಿಗೆ :

೧. ಪಾರ್ಥಿಸುಬ್ಬನ ಯಕ್ಷಗಾನ ಪ್ರಸಂಗ.

೨. ಮುದ್ದಣ ಕವಿಯ ರಾಮಾಶ್ವಮೇಧ ಸಂಗ್ರಹ.

**ಕನ್ನಡವು ಕನ್ನಡವ ಕನ್ನಡಿಸುತಿರಬೇಕು**
*– ದ.ರಾ. ಬೇಂದ್ರೆ*

# ೮. ಹಳ್ಳಿಯ ಚಹಾ ಹೋಟೇಲುಗಳು

– *ವೀರೇಂದ್ರ ಸಿಂಪಿ*

*ಭಾರತೀಯರನ್ನು ತಮ್ಮ ಗ್ರಾಹಕರನ್ನಾಗಿ ಮಾಡಿಕೊಳ್ಳಲು ಇಂಗ್ಲಿಷರು ಮೊದಮೊದಲು ಪುಕ್ಕಟೆಯಾಗಿ ಜನರಿಗೆ ಚಹಾ ಕುಡಿಸುತ್ತಾ ಚಹಾ ಉದ್ಯಮ ಭಾರತದಲ್ಲಿ ಬೆಳೆಸಿದ್ದುಂಟು. ಕಾಡು ನಾಶವಾಗಿ ಚಹಾದ ತೋಟ ತಲೆ ಎತ್ತಿದಾಗ ಪಟ್ಟಣಿಗರು ಹಾಗೂ ಹಳ್ಳಿಗರು ಮೆಲ್ಲಮೆಲ್ಲನೆ ಇದಕ್ಕೆ ಎಷ್ಟು ಹೊಂದಿಕೊಂಡರೆಂದರೆ ಊಟವಿಲ್ಲದಿದ್ದರು ಅಡ್ಡಿಯಿಲ್ಲ ಪ್ರತಿಯೊಬ್ಬ ವ್ಯಕ್ತಿಗೂ ಇಂದು ನಿಯಮಿತವಾಗಿ ಚಹಾ ಸೇವನೆ ಬೇಕೇಬೇಕು. ಹಾಗೂ ಪರಸ್ಪರ ಗೌರವ ಆದರಗಳ ಚಹಾರಾಧನೆ ಇಂದು ಅತ್ಯವಶ್ಯಕವಾಗಿದೆ.*

*'ಹಳ್ಳಿಯ ಚಹಾ ಹೋಟೇಲುಗಳು' ಹಳ್ಳಿಗರ ಬದುಕಿನಲ್ಲಿ ಆಧುನಿಕತೆಯ ಗಾಳಿ ಬೀಸುವುದರೊಂದಿಗೆ ಬಹುಮುಖಿ ಸಾಮಾಜಿಕ ಸ್ತರಗಳ ಎಲ್ಲಾ ಸಮುದಾಯಗಳ, ವಯದ ಅಂತರವಿರದೆ ಒಂದೇ ಕಡೆ ಕೂಡುವಂತೆ ಮಾಡಿವೆ. ಮನರಂಜನೆ ಹಾಗೂ ಸಾರ್ವಜನಿಕ ಸುದ್ದಿಗಳ ತಾಣವಾಗಿವೆ.*

**ಹ**ಳ್ಳಿಯ ಮುರುಕು ಚಪ್ಪರದ ಚಹಾ ಫಳಾರದ ಅಂಗಡಿಗೆ ನೀವೆಂದಾದರೂ ಹೋಗಿರದಿದ್ದರೆ, ಅಲ್ಲಿ ಕುಳಿತು ಕಲಿಯುಗದ ಅಮೃತವೆನಿಸಿಕೊಂಡ ಚಹಾ ಸೇವನೆ ಮಾಡಿರದಿದ್ದರೆ ನಿಮ್ಮ ಜೀವನ ಅಪೂರ್ಣವಾಯಿತೆಂದೇ ನನ್ನ ತಿಳುವಳಿಕೆ. ಪಟ್ಟಣದ ಹೊಟೇಲುಗಳಲ್ಲಿ ಎಲ್ಲ ಇದೆ. ಮನವನ್ನಾಕರ್ಷಿಸುವ ಭವ್ಯ ಕಟ್ಟಡವಿದೆ. ನಡೆದರೆ ಕಾಲು ಜಾರುವ ನಯವಾದ ಫರಸಿಯ ನೆಲವಿದೆ. ಕೂತರೆ ಮಾಸಿಹೋದೀತೆನ್ನುವ ಖುರ್ಚಿ ಇದೆ. ತಂಪಾದ ಫ್ಯಾನಿನ ಗಾಳಿಯಿದೆ. ಡೆಕೋಲಮ್‌ದಿಂದ ಅಲಂಕೃತವಾದ ಟೇಬಲ್ಲೂ ಇದೆ. ಟೇಬಲ್ ಮೇಲೆ ಗ್ಲಾಸೂ ಇದೆ. ಗ್ಲಾಸಿನಲ್ಲಿ ನೀರೂ ಇದೆ. ನೀವು ಕುಳಿತಿರೋ, ಏನು ಬೇಕು ಎಂದು ಯಂತ್ರದ ಗೊಂಬೆಯಂತೆ ಮೂಕಸನ್ನೆ ಮಾಡಿ ಕೇಳುವ, ಶುಭ್ರ ಸಮವಸ್ತ್ರದ ಮಾಣಿಯೂ ಇದ್ದಾನೆ. ಏನಿದೆ? ಎಂದು ನೀವು ನೀರಸವಾಗಿ ಮಾಣಿಗೆ ಕೇಳಿದರೆ ಬೋಂಡ, ದೋಸೆ, ಉತ್ತಪ್ಪ, ಉಪಮಾ, ಪೂರಿ, ಭಜಿ ಎಂದು ನಿಮಗಿಂತಲೂ ನೀರಸವಾಗಿ ಪಟಪಟನೆ ಒದರುತ್ತಾನೆ. ಆದರೆ ಅದರಲ್ಲಿ ಬಿಸಿ ಯಾವುದು ಹಸಿ ಯಾವುದು ತಾಜಾ ಯಾವುದು ಹಳಸಿದ್ದಾವುದು– ಯಾರಿಗೆ ಗೊತ್ತು? ಸ್ವತಃ ಮಾಣಿಗೂ ಅದೂ ಗೊತ್ತಿಲ್ಲ. ನೂರು ಹೆಸರುಗಳಲ್ಲಿ ಯಾವುದೋ ಹೆಸರಿಗೆ ಜೋತುಬಿದ್ದು ಬೋಂಡ ತರಿಸಿದಿರೋ ಅದು ನಿಮ್ಮ ಗಂಟಲಲ್ಲೇ ಇಳಿಯದು. ವಡೆ ತರಿಸಿದಿರೋ ಅದು ಯಾವ ಶಸ್ತ್ರಕ್ಕೂ ಮಣಿಯದು. ಇಡ್ಲಿಯಂತೂ ನೋಡಲು ಬೆಳ್ಳಗಿದೆ. ಚಿಕ್ಕಚಿಕ್ಕದೂ ಆಗಿದೆ. ಆದರೆ ಬಾಯಲ್ಲಿ ಇಡಲಿಯೋ ಪ್ಲೇಟಿನಲ್ಲಿ ಇಡ್ಲಿಯೋ ಎಂದು ದಿಗಿಲು ಹುಟ್ಟಿಸುವ ಮಿನಿ ಸೈಜಿನ ತಿಂಡಿಯದು. ಇಷ್ಟಾಗಿ ನಿಮ್ಮ ಸ್ಥಳವನ್ನಾಕ್ರಮಿಸಲು ನಾ ಮುಂದು ನೀ ಮುಂದು ಎಂದು ಸ್ಪರ್ಧೆ ನಡೆಸುತ, ಜನರು ನಿಮ್ಮ ತಿಂಡಿತೀರ್ಥಗಳ ಮೇಲೆ ಕಣ್ಣಿಟ್ಟು ನಿಂತಿರುತ್ತಾರೆ. ಅಂಥ ಮಹನೀಯರೋ ಮಹಿಳೆಯರೋ ನಿಮ್ಮ ಎದೆಯ ಮೇಲೆ ನಿಂತಂತೆ ನಿಂತುಬಿಟ್ಟಿದ್ದರೆ, ನೀವು ತಿಂಡಿ ತೀರ್ಥವನ್ನು ಸೊಗಸಾಗಿ ಅದು ಹೇಗೆ ತಿನ್ನಬಲ್ಲಿರಿ? ಪಟ್ಟಣದ ಹೊಟೇಲುಗಳ ನೂಕುನುಗ್ಗಲುಗಳು, ಗಲಭೆ ಗಲೀಜುಗಳು ಸಾಕಪ್ಪ ಇದರ ಸಹವಾಸ ಎಂದು ಎನಿಸಿಬಿಡುತ್ತದೆ. ತಿಂಡಿ ತಿಂದು ಚಹಾ ಕುಡಿದು ಹೊರಬಿದ್ದರೆ ಅದ್ಭುತ ಸಾಹಸ ಮಾಡಿಬಂದ ಅನುಭವ ನಿಮಗಾಗುತ್ತದೆ. ಪಟ್ಟಣದ ಹೊಟೇಲೆಂದರೆ ನಯನಾಜೂಕಿನ ಹೆಣ್ಣಿದ್ದಂತೆ, ಹಳ್ಳಿಯ ಚಹಾ ಫಳಾರದ ಅಂಗಡಿಯೆಂದರೆ ಇಳಕಲ್ಲ ಸೀರೆ ಉಟ್ಟು ಗುಳೇದಗುಡ್ಡದ ಕುಬಸತೊಟ್ಟ ಹೆಣ್ಣಿದ್ದಂತೆ. ನೋಡಲು ಅಂದವಾಗಿರದಿದ್ದರೇನಂತೆ? ಸ್ವರ್ಗಸುಖ ಕೊಡಬಲ್ಲದು. 'ಜೀವನದಾಗ ಹುಟ್ಟಿದ ಮ್ಯಾಲ

ಏನೇನ್ ಕಂಡಿ' ಎಂದು ಕವಿ ಜೋಗದ ಜೋಕು ಬರೆದ. ಅದೇ ಕವಿ ನಮ್ಮ ಹಳ್ಳಿಯ ಚಂದ್ರಭವನಕ್ಕೆ ಭೇಟ್ಟಿಯಿತ್ತಿದ್ದರೆ, ಇಲ್ಲಿ ಚಹಾ ಕುಡಿಯದ ಭಜಿಯಂ ತಿನ್ನದ ಜನ್ಮ ವ್ಯರ್ಥವೆಂದು ಹಾಡಿಬಿಡುತ್ತಿದ್ದ.

ಹಳ್ಳಿಯ ಚಹಾ ಫಳಾರದ ಅಂಗಡಿಯಲ್ಲಿ ಮುರುಕು ಬೆಂಚು ಇದೆ. ಮೂರುಕಾಲಿನ ಖುರ್ಚಿಯಿದೆ. ಆದರೆ ನಮ್ಮೂರ ಚಂದ್ರಭವನದ ಮಲ್ಲಣ್ಣ ಸೋಸುವ ಚಹಾವನ್ನು ಇನ್ನಾವ ಇಂದ್ರಭವನದಲ್ಲಿ ಕಾಣುವೆವು? ಆ ಚಹಾದ ಕಂಪೇನು? ಬಣ್ಣವೇನು? ಅದರಲ್ಲಿ ಹಾಕಿದ ಗಟ್ಟಿಹಾಲಿನ ಹೆಡಸೇನು? ಅದನ್ನು ಅನುಭವಿಸಿಯೇ ತಿಳಿಯಬೇಕು. ಹಳ್ಳಿಯ ಚಹಾ ಹೊಟೇಲಿನಲ್ಲಿ ಸಿಗುವ ಆತ್ಮೀಯತೆಯಾಗಲಿ, ಆತಿಥ್ಯವಾಗಲಿ ಇನ್ನೆಲ್ಲಿ ದೊರಕೀತು? ನಿಮ್ಮ ಬೇಕು ಬೇಡಗಳನ್ನು ಅರಿತ ಮಾಣಿ ಒಂದು ಕೈಯಿಂದ ಬೆವರನ್ನು ಒರೆಸಿಕೊಳ್ಳುತ್ತ ಇನ್ನೊಂದು ಕೈಯಿಂದ ನಿಮ್ಮ ನೆಚ್ಚಿನ ಪೂರಿಸಾಗುಗಳನ್ನು ತಂದು ನಿಮ್ಮ ಮುಂದೆ ಇಡುತ್ತಾನೆ. ಪೂರಿಯ ಎಣ್ಣೆ ನಿಮ್ಮ ಪ್ರಕೃತಿಗೆ ಒಗ್ಗದು ಎಂಬುದು ಅವನಿಗೆ ಗೊತ್ತಿದೆ. ಅದಕ್ಕೆಂತಲೇ ಅವನು ಪೂರಿಯ ಎಣ್ಣೆಯನ್ನು ಒರೆಸಿ ತೆಗೆಯಲು ರದ್ದಿ ಕಾಗದದ ಚೂರುಗಳನ್ನೂ ತಂದು ಇರಿಸುತ್ತಾನೆ. ಯಾವ ಹೆಂಡತಿ ಇಂದಿನವರೆಗೆ ಈ ರೀತಿ ತನ್ನ ಗಂಡನ ಉಪಚಾರ ಮಾಡಿದ್ದಾಳೆ? ನನಗೆ ದಯವಿಟ್ಟು ತಿಳಿಸಿ. ಪೂರಿಯ ಪ್ಲೇಟನ್ನು ಸರಿಸುತ್ತಲೇ ನೀವು ಕೇಳದೆ ಭಜಿಯೂ ಬಂದು ನಿಮ್ಮೆದುರು ಕೂಡುತ್ತದೆ. ಆಗ ಒಲ್ಲೆನೆಂದರೆ ನಡೆದೀತೆ? ಇಂದು ಸ್ಪೆಶಲ್ ಅವಲಕ್ಕಿ ಸೂಸಲ ಮಾಡಿದ್ದೇನೆ. ತರಲೇನು ಕೇವಲ ನಿಮಗಾಗಿಯೆ–ಎಂದು ಭ್ರಮೆ ಹುಟ್ಟುವಂತೆ ಕಿವಿಯಲ್ಲಿ ಬಂದು ಉಸುರಿದಾಗ ನಿಮಗೆ ರೋಮಾಂಚನವಾಗದಿದ್ದೀತೆ? ಎರಡೂ ಕಾಲುಗಳನ್ನು ಬೆಂಚಿನ ಮೇಲಿರಿಸಿ, ಹೊಟ್ಟೆರಾಯನ ಸೇವೆಯನ್ನು ಮಾಡಿದ ನೀವು ಪ್ಲೇಟಿನಲ್ಲಿ ಕೈ ತೊಳೆದು, ನಂತರ ಕೈಯನ್ನು ಒರೆಸಿಕೊಂಡು ಅಥವಾ ಬಿಟ್ಟು ಅಃಬ್ ಅಂದು ತೃಪ್ತಿಯ ತೇಗನ್ನು ಹೊಡೆಯುತ್ತ, ಇಂಜಿನ್ ಹೊಗೆಯಂತೆ ಬೀಡಿಯ ಹೊಗೆಯನ್ನು ಬಿಡುತ್ತ ಕೆಮ್ಮುತ್ತ ತಾಸುಗಟ್ಲೆ ಅಲ್ಲಿ ಕೂಡಬಹುದು. ನಿಮಗೆ ಯಾರಾದರೂ ಅಲ್ಲಿಂದ ಏಳೆನ್ನುವರೇ? ಛೇ ಎಂದಿಗೂ ಇಲ್ಲ. ಕೂತು ಬೇಸತ್ತಾಗ, ಮಾತಾಡಿ ಬಾಯಿ ದಣಿದಾಗ ಎದ್ದು ಹೊರಡುವಿರಿ. ನೀವು ತಿಂದದ್ದಕ್ಕೆ ಹಣ ಕೊಡಬೇಕಾಗಿಲ್ಲ, ಎಂಥ ಸೌಲಭ್ಯವಿದು, ಇದಕ್ಕೆಲ್ಲ ಪುಕ್ಕಟೆಯೇ? ಎಂದು ನೀವು ಕೇಳಬಹುದು. ಇಲ್ಲ, ಇದಕ್ಕೆನ್ನುವರು ಉದ್ರಿ, ಕೌಂಟರ ಮುಂದೆ ನಿಂತು 'ನನ್ನ ಹೆಸರ್ಲೆ ಹಚ್ರಿ' ಎಂದು ಹೇಳಿದರೆ ಸಾಕು. ಹಚ್ಚುವುದೊಂದೇ ಹಳ್ಳಿ ಫಳಾರದಂಗಡಿಯ ಮಾಲೀಕನ ಕರ್ಮ. ಸುಗ್ಗಿಗೊಮ್ಮೆ ನಾಲ್ಕು ಚೀಲ ಜೋಳ ತಂದು ಹೊಟೇಲಿಗೆ ಹಚ್ಚಿದರೆ ಬಾಕಿ ಚುಕ್ತಾ ಆಯ್ತು. ವರ್ಷದವರೆಗೂ ಪೂರಿ ಬಜಿಗಳನ್ನು ತಿನ್ನುತ್ತ ಊರಸುದ್ದಿಯನ್ನು ಮಾತಾಡುತ್ತ, ಎದುರಿಗಿರಲಾರದವರ ಗೇಲಿ ಮಾಡುತ್ತ ಹೊತ್ತನ್ನು ಕಳೆಯಬಹುದು.

ಇಂಗ್ಲೆಂಡಿನಲ್ಲಿ ಪ್ರತಿಯೊಂದು ಹಳ್ಳಿಯಲ್ಲಿ ಕ್ರಿಕೆಟ್ ಗ್ರೌಂಡು ಹಾಗೂ ಚರ್ಚು ಇವೆ ಎಂದು ಹೇಳುತ್ತಾರೆ. ಅನ್ನಜೀವಿಗಳಾದ ನಮ್ಮ ದೇಶದಲ್ಲಿ ಸಾಂಪ್ರದಾಯಿಕರ ಗುಡಿಗಳೂ ಇವೆ. ಹೊಟೇಲೆಂಬ ಆಧುನಿಕರ ಗುಡಿಗಳೂ ಇವೆ. "ಒಳಗೆ ಬಾ ತಲುಬಿಗನೇ ಇಲ್ಲಿಹುದು ಹೊಟೇಲಲ್ಲ, ನಿನ್ನ ಜಿಹ್ವಾಚಾಪಲ್ಯವ ತಣಿಸುವ ಅಪ್ಸರೆಯ ಮಂದಿರ." ಹಳ್ಳಿಯ ಹೊಟೇಲೆಂದರೆ ಏನೆಂದು ತಿಳಿದಿದ್ದೀರಿ ಸ್ವಾಮಿ! ಅದೊಂದು ಸಾರ್ವಜನಿಕರ ಕೂಟ. ರಸಿಕರ ಉಂಡಾಡಿಗಳ ನಿವಾಸ, ತರುಣರ ಕ್ಲಬ್ಬು, ಗೃಹಸ್ಥರ ವಿಶ್ರಾಮಗೃಹ, ವೃದ್ಧರ ಬಾಯಚಪಲ ತಣಿಸುವ ಅಕ್ಷಯಪಾತ್ರೆ, ಅನಕ್ಷರಸ್ಥರ ಪಾರ್ಲಿಮೆಂಟು, ಸರ್ವ ವಯಸ್ಸಿನ, ಸರ್ವ ಅಭಿರುಚಿ ಹವ್ಯಾಸಗಳ, ಸರ್ವ ಉದ್ಯೋಗದ, ಸರ್ವಜಾತಿಗಳ ಜನರಿಗೆ ಇಲ್ಲಿ ಸಮನಾದ ಸ್ಥಾನವಿದೆ. ಹಳ್ಳಿಗಳಲ್ಲಿ ಸಮಾನತೆಯ ಬೀಜವನ್ನು ಬಿತ್ತಿ ಬೆಳೆದ ಸಂಸ್ಥೆಯೆಂದರೆ ಚಹಾಫಳಾರದ ಅಂಗಡಿಯೇ ಆಗಿದೆ. ವಿಶ್ರಾಂತಿಯ ಸ್ಥಳವೂ ಇದೇ. ಶಕ್ತಿ ಗಳಿಸುವ ಸ್ಥಳವೂ ಇದೇ. ಭಾವೈಕ್ಯತೆ ಎಂದು ಬಾಯಿ ಬಾಯಿ ಬಡಕೊಂಡರೆ ಭಾವೈಕ್ಯತೆ ಹುಟ್ಟದು. ಭಾವೈಕ್ಯತೆ ನಮ್ಮ ದೇಶದಲ್ಲಿ ಎಲ್ಲಿಯಾದರೂ ಇದ್ದಿದ್ದರೆ ಅದು ನಮ್ಮ ಹಳ್ಳಿಯ ಚಹಾಫಳಾರದಂಗಡಿಯಲ್ಲಿ. ಇದನ್ನು ತಿಳಿದುಕೊಳ್ಳದಿದ್ದರೆ ನಮಗೆ ಉಳಿಗಾಲವಿಲ್ಲ.

ಇಲ್ಲಿ ಬರುವ ಜನರ ವೈಶಿಷ್ಟ್ಯವೆಂಥದು ಬಲ್ಲಿರಾ? ಮುಂಜಾನೆ ಚಹಾ ಬೀಳದೆ ಪ್ರಾತಃರ್ವಿಧಿ ತೀರಿಸಲಿಕ್ಕಾಗದ ಜನ ತಂಬಿಗೆ ತಕ್ಕೊಂಡು ಬಯಲಿಗೆ ಹೋಗುವ ಮೊದಲು ಇಲ್ಲಿಗೆ ಬರುತ್ತಾರೆ. ಇವರು ಚಹಾದಂಗಡಿಯ ಪರಮಭಕ್ತರು. ಮನೆಯಲ್ಲಿ ಹಲ್ಲು ಬಾಯನ್ನು ತೊಳೆದುಕೊಳ್ಳದೆ, ತಮ್ಮ ತವರುಮನೆಯಾದ ಚಹಾಫಳಾರದ ಅಂಗಡಿಯಲ್ಲಿ ಒಂದು ಗ್ಲಾಸು ನೀರಿನಲ್ಲಿ ಮುಕ್ಕಳಿಸಿ, ಬಾಯಿ ತೊಳೆದುಕೊಂಡು, ಉಗುಳಿ, ಚಹಾ ಸೇವನೆ ಮಾಡುವ ವರ್ಗವಿದು. ಭೂಮಾತೆಯ ಚೊಚ್ಚಿಲು ಮಗನಾದ ರೈತ ಎತ್ತುಗಳನ್ನು ಬಿಚ್ಚಿಕೊಂಡು ಹೊಲಕ್ಕೆ ನಡೆದಿದ್ದಾನೆ. ಫಳಾರದ ಅಂಗಡಿ ಬಂದೊಡನೆ ಎತ್ತುಗಳೇ ಗಕ್ಕೆಂದು ನಿಲ್ಲುತ್ತವೆ. ಪಾಪ ಅವನೇನೋ ಹೊಲಕ್ಕೆ ಬೇಗನೇ ಹೋಗಬೇಕೆನ್ನುತ್ತಾನೆ. ಆದರೆ ಎತ್ತುಗಳ ಮನಸ್ಸಿನ ತೃಪ್ತಿಗಾಗಿ ಫಳಾರದ ಅಂಗಡಿಯೊಳಕ್ಕೆ ಹೋಗಿ ಹೊರಗೆ ನಿಂತ ಎತ್ತುಗಳನ್ನೇ ಮರೆಯುತ್ತಾನೆ. ಇನ್ನು ಮನೆಯಲ್ಲಿ ಸ್ನಾನಮಾಡಿ ಪೂಜೆಯೆಂಬ ಶಾಸ್ತ್ರವನ್ನು ವೇಗವಾಗಿ ಮುಗಿಸಿ, ತಡವಾದೀತೆಂದು ಧಾವಿಸಿ ಬರುವ ವೇಳೆಯ ನಿಷ್ಠೆಯುಳ್ಳ ನಿಷ್ಠಾವಂತ ರಸಿಕರೂ ಇದ್ದಾರೆ. ಹುಟ್ಟಿಬಂದ ಬಳಿಕ ತಿನ್ನುವುದು, ಚೆನ್ನಾಗಿ ತಿನ್ನುವುದು–ಇದನ್ನೇ ತಮ್ಮ ಜೀವನದ ಧ್ಯೇಯವನ್ನಾಗಿ ಮಾಡಿಕೊಂಡ, ಹೆಂಡಿರು ಮಕ್ಕಳು ಸತ್ತರೆ ಸಾಯಲಿ ಅದು ಅವರವರ ಕರ್ಮ ನಾನೇನು ಮಾಡಲಿಕ್ಕಾಗುತ್ತದೆ? ಎಂದು ಅನ್ನುತ್ತ ತಮ್ಮ ಗಳಿಕೆಯ ಸಿಂಹಪಾಲನ್ನು ಚಹಾಫಳಾರದ ಅಂಗಡಿಗೆ ಸುರಿಯುವ ಶೂರರೂ ಇಲ್ಲಿ ಕಾಣಸಿಗುತ್ತಾರೆ. ವೃದ್ಧರಿಗೆ, ಪೇನ್‌ಶನ್‌ದಾರರಿಗೆ ಬಾಯಿಚಪಲ ಜಾಸ್ತಿ. ಮನೆಯಲ್ಲಿ ವ್ಯವಸ್ಥೆಯಾಗುವುದಿಲ್ಲ, ಮಗ ಸೊಸೆ ಇವರದೇ ಕಾರುಬಾರು–ಏನು ಮಾಡಬೇಕು? ಎಂದೆನ್ನುತ್ತ ಅವರೂ ಚಹಾಫಳಾರದ ಆಜೀವ ಸದಸ್ಯರಾಗಿ ಬಿಡುತ್ತಾರೆ. ಅವರಲ್ಲಿ ರೋಗಿಗಳೂ ಇದ್ದಾರೆ. ಮನೆಯಲ್ಲಿ ಪಥ್ಯ ಮಾಡುತ್ತ ಇಲ್ಲಿ ಕರಿದ ಪದಾರ್ಥಗಳನ್ನು ಜಡಿಯುವ ಇವರ ಜಡ್ಡೆಂದೂ ನೆಟ್ಟಗಾಗದು, ಹಾಗೂ ಸಾಯುತ್ತೇವೆ, ಹೀಗೂ ಸಾಯುತ್ತೇವೆ, ಕರಿದಿದ್ದನ್ನು ತಿಂದು ಸಾಯುತ್ತೇವೆ ಎನ್ನುವುದು ಇವರ ಜಿದ್ದು. ಈ ನೆವದಲ್ಲಿ–ಯಾವುದು ಶಾಶ್ವತ? ಈ ಜಗತ್ತಿನಲ್ಲಿ ಎಲ್ಲವೂ ನಶ್ವರವೆಂದು ಹೇಳುವ ತತ್ವಜ್ಞಾನಿಗಳಿವರು. ಇನ್ನೂ ತರುಣರು, ಹೇಳಿ ಕೇಳಿ ಉತ್ಸಾಹಿಗಳು. ಇವರಿಗೆ ಜವಾಬ್ದಾರಿಯಿಲ್ಲ. ಮಾಡಲು ಕೆಲಸವಿಲ್ಲ. ಕೆಲಸವಿದ್ದರೂ ಮಾಡುವ ಮನಸ್ಸಿಲ್ಲ. ಇವರಿಗೆ ಹೊತ್ತು ಹೋಗದು. ಅದಕ್ಕಾಗಿ ಪಣತೊಟ್ಟು ಇಡೀ ದಿವಸ ಚಹಾದ ಅಂಗಡಿಯಲ್ಲಿ ಚಹಾ ಕುಡಿಯುತ್ತ, ಕೇರಂ ಬೋರ್ಡನ್ನು ಆಡುತ್ತ ಕೂಡುತ್ತಾರೆ. ಹಳ್ಳಿಯ ಪಟೇಲರು, ಊರ ಪುಢಾರಿಗಳು, ಸ್ವಯಂಘೋಷಿತ ದಳ್ಳಾಳಿಗಳು, ಪಟ್ಟಣದ ಶಾಲೆ ಕಾಲೇಜು ನರ್ಸರಿಗಳಲ್ಲಿ ಸೀಟು ಕೊಡಿಸುವೆವೆಂದು ಅಡ್ವಾನ್ಸ್ ಎತ್ತುವ ಲೀಡರರು, ಗ್ರಾಮಪಂಚಾಯಿತಿಯ ಸರಪಂಚರು, ಈಗಿನ ಹಾಲಿ ಸದಸ್ಯರು, ಶಾಲೆಗೆ ಆಗಾಗ ಅನಿರೀಕ್ಷಿತ ಭೆಟ್ಟಿ ಕೊಡುವ ಶಾಲಾ ಶಿಕ್ಷಕರು, ಅಂಗಡಿಯಲ್ಲಿ ಲೋಡಿಗಾನಿಸಿ ಕೂತು ಬೇಸತ್ತ ವ್ಯಾಪಾರಿಗಳು, ದಿನಕ್ಕೆ ಸರಾಸರಿ ೫–೬ ತಾಸುಗಳನ್ನಾದರೂ ಚಹಾಫಳಾರದ ಅಂಗಡಿಯಲ್ಲಿ ಕಳೆಯುತ್ತಾರೆಂದರೆ ಅದೊಂದು ಆಶ್ಚರ್ಯದ ಮಾತಲ್ಲ. ಇತ್ತೀಚೆಗೆ ಹಳ್ಳಿಯ ಚಹಾಫಳಾರದ ಅಂಗಡಿ ಮಟ್ಕಾ ಆಡುವವರ ಅಡ್ಡೆಯೂ ಆಗಿದೆಯೆಂಬ ದಟ್ಟವಾರ್ತೆ ಎಲ್ಲೆಡೆಗೆ ಹಬ್ಬಿದೆ.

ಹಳ್ಳಿಯ ಚಹಾ ಫಳಾರದ ಅಂಗಡಿ ನನ್ನ ದೃಷ್ಟಿಯಲ್ಲಿ ವಾರ್ತಾ ಇಲಾಖೆಯಿದ್ದಂತೆ. ಹಳ್ಳಿಯ ಹೆಣ್ಣುಮಕ್ಕಳು ನೀರಿಗೆಂದು, ಬಟ್ಟೆ ಒಗೆಯಲಿಕ್ಕೆಂದು ಹೋದಾಗ ತಮ್ಮ ಸುಖದುಃಖಗಳನ್ನು ಹೇಳಿಕೊಳ್ಳುತ್ತ, ಅನ್ಯರ ಬಗ್ಗೆ ಅಸಹ್ಯ ಪಡುತ್ತ ತನ್ನ ಬಣ್ಣಿಸುತ್ತ, ಪರರ ಮನೆಯ ತೂತುಗಳನ್ನು ಎಣಿಸುತ್ತ ಕೂಡುತ್ತಾರಷ್ಟೇ. ಪಾಪ ಕಾಲುಬಿಟ್ಟ ಕತ್ತೆಯಂತೆ ಊರಸುತ್ತ ತಿರುಗಾಡುವ ಹಳ್ಳಿಯ ಗಂಡಸರಿಗೆ ಸಾಮಾಜಿಕ ವಿಷಯಗಳ ಬಗ್ಗೆ ಮಾತನಾಡಲು ಹೊಟೇಲಿಗಿಂತ ಹೆಚ್ಚಿನ ಪ್ರಶಸ್ತವಾದ ಸ್ಥಳವಿರಲಾರದು. ತಮ್ಮ ಮನೆಯ ಸಮಾಚಾರ ತಮಗೆ ತಿಳಿದಿರದಿದ್ದರೂ ಊರ ಮೂಲೆ ಮೂಲೆಗಳಲ್ಲಿ ಏನು ನಡೆದಿದೆ, ಯಾರು ಹುಟ್ಟಿದರು, ಯಾರು ಸತ್ತರು, ಎಂಬುದೆಲ್ಲ ಅವರಿಗೆ ಗೊತ್ತು. ಯಾರ ಮನೆಯಲ್ಲಿ ಆಕಳು ಈಯಿತು, ಯಾರ ಕೊಟ್ಟಿಗೆಯಲ್ಲಿ ಎಮ್ಮೆ ಸತ್ತಿತು, ಯಾರ ಬಣವೆಗೆ ಬೆಂಕಿ ಹಚ್ಚಿದರು, ಯಾರ ಮನೆ ದರೋಡೆಯಾಯ್ತು.... ಎಂಬ ಸಣ್ಣ ದೊಡ್ಡ ವಿಷಯಗಳೆಲ್ಲ ಹೊಟೇಲಿನ ಸದಸ್ಯರ, ಶಾಶ್ವತ ಸದಸ್ಯರ ಪಾಲಿಗೆ ಸುದ್ದಿಯ ಸಾಮಗ್ರಿಗಳು! ಗಿಡ್ಡ ಮಾಸ್ತರರು ಶಾಲೆಯಲ್ಲಿ ಹುಡುಗರಿಗೆ ಬಹಳ

ಹೊಡೆಯುತ್ತಿದ್ದಾರೆ. ಆ ರೀತಿ ಹೊಡೆಯುವುದಕ್ಕೆ ಮನೆಯಲ್ಲಿ ಅವರ ಹೆಂಡತಿಯ ಕಾಟವೇ ಕಾರಣವೆಂದು ನಿರ್ಣಯಿಸುತ್ತಾರೆ. ವಿಧವೆಯಾದ 'ಅಕ್ಕಾ ಅವರು' ಏಕೆ ಅಷ್ಟು ಬೆಳ್ಳಗಿನ ಸೀರೆ ಉಡಬೇಕು ಎಂಬುದು ಅವರ ಜಿಜ್ಞಾಸೆಯ ವಿಷಯ. ಹೊಸದಾಗಿ ವರ್ಗವಾಗಿ ಬಂದ ವೈದ್ಯಾಧಿಕಾರಿ ರೋಗಿಗಳಿಗೆ ಬರೀ ಪ್ರಿಸ್ಕ್ರಿಪ್ಶನ್ ಮಾತ್ರ ಬರೆದುಕೊಡುತ್ತಿದ್ದಾರೆಂದು ಅವರ ಆಕ್ಷೇಪ. ಬಿಸಿಯೂಟ ಬಂದಮೇಲೆ ಹೆಡ್‌ಮಾಸ್ತರರು ಬಹಳ ಹಣ ಗಳಿಸಿದ್ದಾರೆಂದು ಅವರ ಬಗ್ಗೆ ಮೂಕರ್ಜಿಯೊಂದನ್ನು ಬರೆದುಹಾಕುತ್ತಾರೆ ಇದೇ ಚಹಾ ಹೊಟೇಲಿನಲ್ಲಿ. ವರದಕ್ಷಿಣೆಯನ್ನು ನಾನೆಂದೂ ಮುಟ್ಟೆನೆಂದು ಹೇಳುತ್ತಿದ್ದ ಸುಶಿಕ್ಷಿತ ತರುಣನೊಬ್ಬ ದೂರದ ಊರಲ್ಲಿ ಹೋಗಿ ಲಗ್ನ ನಿಶ್ಚಯ ಮಾಡಿಕೊಂಡು ೩ ಲಕ್ಷ ವರದಕ್ಷಿಣೆ ತೆಗೆದುಕೊಂಡದ್ದು ಶುದ್ಧ ನಾಚಿಕೆಗೇಡು ಎಂಬುದು ಇವರ ಅಭಿಪ್ರಾಯ. ಈಗಿನ ಹುಡುಗರಿಗೆ ನೀತಿ ನಿಯಮಗಳೇ ಇಲ್ಲವೆಂದು ದೊಗಳೆಪ್ಯಾಂಟು ಶರ್ಟುಗಳನ್ನು ಧರಿಸಿ ತಿರುಗುತ್ತಿವೆ ಎಂದು ಗುಂಡಣ್ಣ ಹೇಳಿದರೆ, ಆ ಹುಡುಗರ ಮುಖಂಡ ನಿಮ್ಮ ಮಗನೇ ಅಲ್ಲವೆ? ಎಂದು ಚಂದ್ರಣ್ಣ ಕೇಳುತ್ತಾನೆ. ಅದಕ್ಕೆ ನಿರುತ್ತರವೇ ಸರಿಯಾದ ಉತ್ತರ. "ತಳವಾರ ಎಲ್ಲಪ್ಪನಿಗೆ ಸೊಕ್ಕು ಬಂದಿದೆ. ನಿನ್ನೆ ನಾನು ಎದುರಿಗೆ ಬರುತ್ತಿದ್ದರೂ ಅವನು ನನಗೆ ನಮಸ್ಕರಿಸಲಿಲ್ಲ, ಏನಂತ ತಿಳಿದಿದ್ದಾನೆ–ಮಗ" ಎಂದು ಪಟೇಲರು ಘೂತ್ಕರಿಸುತ್ತಾರೆ. ಆ ಶಿವಶರಣಪ್ಪನಿಗೆ ಅಷ್ಟು ಸುಂದರ ಹೆಂಡತಿ ಯಾಕಿರಬೇಕು? ಎಂದು ರಸಿಕ ಶಿಖಾಮಣಿ ಮಹಾನ್ ಕಚ್ಚೆಹರುಕ ಶ್ರೀಮಂತ ಕಲ್ಲಪ್ಪನವರ ಗೂಢಪ್ರಶ್ನೆ. ಹೀಗೆ ತಮ್ಮ ಹೊಟ್ಟೆಕಿಚ್ಚು, ಸಿಟ್ಟು, ದರ್ಪ, ಧಕ್ಕೆಗೊಂಡ ಗರ್ವ, ಅಳಲುಗಳಿಗೆ ಇದೇ ಚಹಾ ಹೊಟೇಲು ಅರ್ಥಾತ್ ಹಳ್ಳಿಯ ಪಾರ್ಲಿಮೆಂಟಿನಲ್ಲಿ ಅಭಿವ್ಯಕ್ತಿಯನ್ನೀಯುತ್ತಾರೆ. ದೇಶ ವಿದೇಶಗಳ ಸುದ್ದಿಗಳಿಗೂ ಇಲ್ಲಿ ಪ್ರಾಶಸ್ತ್ಯವುಂಟು. ಆದರೆ ಲೋಕಲ್ ಸುದ್ದಿಗಳಿಗಿರುವ ಮಹತ್ವ ಹೊರಗಿನ ಸುದ್ದಿಗಳಿಗಿರುವುದಿಲ್ಲ.

ಪಟ್ಟಣಗಳಲ್ಲಿ ನೋಡಿ ಬಂದ ಅದ್ಭುತ ದೃಶ್ಯಗಳನ್ನು ವರ್ಣಿಸುವ ಸುದ್ದಿಯ ಸೂರಪ್ಪನವರಿಗೂ ಹಳ್ಳಿಯ ಹೊಟೇಲಿನಲ್ಲಿ ಸ್ಥಾನವಿದೆ. ಆಜನ್ಮ ಬ್ರಹ್ಮಚಾರಿ ಹನುಮಾನ್ ಭಕ್ತ ಭರಮಣ್ಣ–ತಾನು ಪಟ್ಟಣಕ್ಕೆ ಹೋದಾಗ ಶೋರೂಂನ ಎದುರಿಗೆ ನಿಲ್ಲಿಸಿದ ಹೆಣ್ಣು ಗೊಂಬೆಯನ್ನು ಎವೆಯಿಕ್ಕದೆ ನೋಡಿ ಬಂದು, "ಏನ್ ಹೆಣ್ಣಪ್ಪಾ ಅದು. ಕೈ ತೊಳೆದು ಮುಟ್ಟಬೇಕು ಅದನ್ನು" ಎಂದು ಬಾಯಿ ಚಪ್ಪರಿಸುತ್ತಾ ಹೇಳಿದ್ದುಂಟು. ಇದನ್ನು ಕೇಳಿದ ಇನ್ನೊಬ್ಬ ಭೂಪ ನಗರದ ರೋಡಿನಲ್ಲಿ ಹೊರಟಾಗ, ಸಾಯಕಲ್ ಮೇಲೆ ಪ್ಯಾಂಟು ಬುಶ್‌ಷರ್ಟ್ ಧರಿಸಿ ಆಫೀಸಿಗೆ ಹೊರಟ ಹೆಣ್ಣನ್ನು ತರುಬಿ 'ಯಜಮಾನ, ನಮ್ಮ ಸಾವುಕಾರ ಶಂಕರಪ್ಪನವರ ಮನೆ ಎಲ್ಲಿದೆ?' ಎಂದು ಕೇಳಿದೆನೆಂದೂ, ಅವಳು stupid ಎಂದು ಬೈದುಹೋದದ್ದನ್ನು ಕಥೆ ಮಾಡಿ ಇದೇ ನಮ್ಮ ಚಂದ್ರಭವನದಲ್ಲಿ ಹೇಳಿದ್ದನ್ನು ನಾನು ಕಿವಿಯಾರೆ ಕೇಳಿದ್ದೇನೆ. ಅದೇ ಭೂಪ ಮುಂದುವರೆಯುತ್ತ ಪಟ್ಟಣದಲ್ಲಿ ಈಗ ಗಂಡು–ಹೆಣ್ಣುಗಳಿಗೆ ಯಾವ ಅಂತರವೂ ಇಲ್ಲವೆಂದೂ, ಗಂಡು ಹೆಣ್ಣಾಗುತ್ತಿವೆಯೆಂದೂ, ಹೆಣ್ಣು ಗಂಡಾಗುತ್ತಿವೆಯೆಂದೂ ಬುರುಡೆ ಬಿಟ್ಟ.

ಹಳ್ಳಿಯ ಹೊಟೇಲಿನಲ್ಲಿ ಈಗ ಸಿನೆಮಾ ದೇವತೆಗಳ ದರ್ಶನವೂ ಆಗುತ್ತದೆ. ಒಂದು ಕಡೆ ತಿರುಪತಿ ವೆಂಕಟೇಶ್ವರನ ಫೋಟೋ ನೇತಾಡುತ್ತಿದ್ದರೆ, ಇನ್ನೊಂದು ಕಡೆ ಐಶ್ವರ್ಯರೈ, ಹೇಮಾಮಾಲಿನಿ, ಧರ್ಮೇಂದ್ರರ ಕ್ಯಾಲೆಂಡರುಗಳೂ ಶೋಭಿಸುತ್ತವೆ. ಅಷ್ಟರಮಟ್ಟಿಗೆ ನವೀನತೆಯ ಗಾಳಿ ಹಳ್ಳಿಯ ಚಹಾ ಫಳಾರದ ಅಂಗಡಿಯಲ್ಲಿ ಬೀಸಿದೆ. ಇಪ್ಪತ್ತು ವರ್ಷಗಳ ಹಿಂದೆ ಗ್ರಾಮಾಫೋನದ ರೆಕಾರ್ಡುಗಳು ಜನರನ್ನು ತಣಿಸುತ್ತಿದ್ದಂತೆ, ಇಂದು ಟಿ.ವಿ., ರೇಡಿಯೋ, ಸ್ಟೀರಿಯೋ, ಟೇಪ್‌ರೇಕಾರ್ಡರುಗಳಿಂದ ಹಿಡಿದು ಎಫ್.ಎಂ. ರೇಡಿಯೋ ಶ್ರೋತೃಗಳ ಕರ್ಣಪಟಲವನ್ನು ಹರಿದುಬಿಡುವಷ್ಟು ಕೀಸರಿಟ್ಟಿವೆ. ರಾಮಾಯಣ ಮಹಾಭಾರತ ಸೀರಿಯಲ್ ಬರುವಾಗಂತೂ ಟಿವಿಗೆ ಪೂಜೆ ಸಲ್ಲಿಸಿ ಧಾರಾವಾಹಿಗಳನ್ನು ಬಹಳ ಭಯಭಕ್ತಿಯಿಂದ ನೋಡಿದ್ದುಂಟು. ಆದರೂ ತರುಣರು ಆ ಹಾಡುಗಳನ್ನು ಆಸಕ್ತಿಯಿಂದ ಕೇಳುತ್ತ ಗುನುಗುನಿಸುತ್ತಿದ್ದರೆ ವೃದ್ಧರೂ ಯಾರೂ ತಮ್ಮನ್ನು ನೋಡದಿರುವುದನ್ನು ಖಾತ್ರಿ ಮಾಡಿಕೊಂಡು ತಲೆದೂಗುತ್ತಾರೆ.

ನನಗೆ ಹಳ್ಳಿಯ ಚಹಾ ಫಳಾರದ ಅಂಗಡಿಯೆಂದರೆ ಬಹಳ ಅಭಿಮಾನ; ಅಷ್ಟೇ ಏಕೆ ಪ್ರೀತಿಯೂ ಕೂಡ ಇದೆ. ಗಾಳಿ ಭರ್ರನೆ ಬೀಸುತ್ತಿರಬೇಕು. ಮಳೆ ಧೋ ಎಂದು ಬೀಳುತ್ತಿರಬೇಕು. ಅಂಥ ವೇಳೆಯಲ್ಲಿ ಹಳ್ಳಿಯ ಚಹಾವನ್ನು ಗುಟುಕುಗುಟುಕಾಗಿ ಕುಡಿಯುತ್ತ ಕೂಡ್ರಬೇಕು. ಆಗ ನನಗೆ ದೊರೆಯುವ ಸುಖ-ಸಂತೋಷಗಳ ಸಮನಾಗಿ ಭೂಲೋಕದ ಯಾವುದೇ ಸಿರಿ ಸಂಪತ್ತು ನಿಲ್ಲಲಾರದು. ಇಷ್ಟೆಲ್ಲ ಕೇಳಿದ ಮೇಲೆ ನೀವೂ ಕೂಡ ನಿಮ್ಮ ಸಮೀಪದ ಹಳ್ಳಿಯ ಚಹಾ ಫಳಾರದ ಅಂಗಡಿಗೆ ಭೇಟಿಕೊಟ್ಟೇ ತೀರುತ್ತೀರೆಂದು ನಾನು ನಂಬಿದ್ದೇನೆ.

## ಲೇಖಕರ ಪರಿಚಯ :



**ವೀರೇಂದ್ರ ಸಿಂಪಿ** (೧೯೩೮): ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಚಡಚಣದಲ್ಲಿ ಜನನ. ತಂದೆ ಡಾ॥ ಸಿಂಪಿ ಲಿಂಗಣ್ಣ, ತಾಯಿ ಸೋಬಲವ್ವ. ೧೯೬೩ ರಿಂದ ೧೯೯೭ರ ವರೆಗೆ ಬೀದರಿನ ಬಿ.ವ್ಹಿ. ಭೂಮರೆಡ್ಡಿ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ಈಗ ಬೀದರ್‌ನಲ್ಲಿಯೇ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ.

ಕಾಗದದ ಚೂರು, ಭಾವ-ಮೈದುನ, ಸ್ವಚ್ಛಂದ ಮನದ ಸುಳಿದಾಟ, ಪರಿಸರ ಸ್ಪಂದನ ಇವರ ಪ್ರಮುಖ ಲಲಿತ ಪ್ರಬಂಧ ಸಂಕಲನಗಳಾಗಿವೆ. ವಿಶ್ವಕಲ್ಯಾಣ ಪತ್ರಿಕೆ ಮತ್ತು ದಿಕ್ಸೂಚಿ ಮಾಸಪತ್ರಿಕೆಗೆ ನಿಯಮಿತ ೮೦ಕ್ಕೂ ಮೇಲ್ಪಟ್ಟು ಅಂಕಣಗಳು ಬರೆದಿರುತ್ತಾರೆ. ಜೀವನಚರಿತ್ರೆ, ಅನುವಾದ, ಸಂಪಾದನೆ, ವೈಚಾರಿಕ ಲೇಖನಗಳು ಮುಂತಾಗಿ ಇಲ್ಲಿಯವರೆಗೆ ಇವರು ೩೨ ಕೃತಿಗಳನ್ನು ಪ್ರಕಟಿಸಿದ್ದಾರೆ.

'ಭಾವ-ಮೈದುನ' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದ್ದು, ಎರಡು ಬಾರಿ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ ಸೇವೆಸಲ್ಲಿಸಿರುತ್ತಾರೆ. ಪ್ರಸಕ್ತ ಪ್ರಬಂಧವು ಇವರ 'ಸಮಗ್ರ ಲಲಿತ ಪ್ರಬಂಧ' ಸಂಕಲನದಿಂದ ಆಯ್ದುಕೊಳ್ಳಲಾಗಿದೆ. 'ಬಹುಶ್ರುತತ್ವ ಹಾಗೂ ಜೀವನಾನುಭವದ ತಮ್ಮ ಆತ್ಮವೃತ್ತದ ಎಳೆಗಳೊಂದಿಗೆ ಸಮೂಹ ಚಿಂತನೆಯನ್ನು ಜೋಡಿಸುವುದು' ಇವರ ಪ್ರಬಂಧಗಳ ವೈಶಿಷ್ಟ್ಯವಾಗಿದೆ.

## ಶಬ್ದಾರ್ಥ :

ಫಳಾರ-ತಿಂಡಿ; ಮಾಣಿ-ಹೋಟಲಲ್ಲಿ ತಿಂಡಿತಿನಿಸುಗಳು, ಚಹಾ ಕೊಡುವ ಹುಡುಗ; ಹಚ್ಚ-ಖಾತೆಯಲ್ಲಿ ಬರೆಯುವುದು; ತರುಬಿ-ನಿಲ್ಲಿಸಿ; ಫರಸಿ-ಕಲ್ಲುಹಾಸು.

## ಟಿಪ್ಪಣಿ :

೧. **ಇಳಕಲ್ಲಿನ ಸೀರೆ :**

ಇಳಕಲ್ಲ ಎಂಬುದು ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಒಂದು ಪಟ್ಟಣ. ಕೈಮಗ್ಗದ ನೇಕಾರಿಕೆ ಇಲ್ಲಿನ ಮುಖ್ಯ ಕಸಬು. ಇಲ್ಲಿ ತಯಾರಾಗುವ ಸೀರೆ ಪಾರಂಪರಿಕವಾಗಿ ಶ್ರೇಷ್ಠತೆಯನ್ನು ಉಳಿಸಿಕೊಂಡು ಬಂದಿದೆ. ಸಂಪ್ರದಾಯಸ್ಥರು ಈ ಸೀರೆಯನ್ನು ಬಳಸುವುದು ವಾಡಿಕೆಯಾದರೂ ಆಧುನಿಕರೂ ಇಷ್ಟಪಡುವಂತೆ ಹಲವು ವಿನ್ಯಾಸಗಳಲ್ಲಿ ಸಿದ್ಧಪಡಿಸುವ ಕೌಶಲ್ಯವನ್ನು ಇಲ್ಲಿನ ನೇಕಾರರು ಮೆರೆದಿದ್ದಾರೆ.

೨. **ಗುಳೇದಗುಡ್ಡದ ಖಣ :**

ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಮತ್ತೊಂದು ಕೈಮಗ್ಗದ ನೇಕಾರಿಕೆಯ ಪಟ್ಟಣವಿದು. ಇಲ್ಲಿ ಕುಪ್ಪಸದ ಬಟ್ಟೆ(ರವಿಕೆ ಬಟ್ಟೆ)ಯನ್ನು ಹಲವಾರು ಬಣ್ಣ, ವಿನ್ಯಾಸಗಳಲ್ಲಿ ಕೈಮಗ್ಗಗಳಲ್ಲಿ ನೇಕಾರರು ತಯಾರಿಸುತ್ತಾರೆ. ಸಂಪ್ರದಾಯಸ್ಥರು ಈ ಕುಪ್ಪಸವನ್ನು ವಿಶೇಷವಾಗಿ ಧರಿಸುವುದು ವಾಡಿಕೆ. ಗುಳೇದಗುಡ್ಡದ ಖಣವು (ಖಣ ಎಂದರೆ ಕುಪ್ಪಸದ ಬಟ್ಟೆಗಿರುವ ಇನ್ನೊಂದು ವಾಡಿಕೆಯ ಹೆಸರು) ಇಳಕಲ್ಲಿನ ಸೀರೆಗೆ ಅನುರೂಪವಾದ, ಹೊಂದಾಣಿಕೆಯ ವಸ್ತ್ರ ವೈಶಿಷ್ಟ್ಯವೆನಿಸಿದೆ (Matching Speciality).

## : ಅಭ್ಯಾಸ ಭಾಗ :

### ಅ) ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು:

೧. ಅದು ಯಾವ ಶಸ್ತ್ರಕ್ಕೂ ಮಣಿಯದು.

೨. ಇಂದು ಸ್ಪೆಶಲ್ ಅವಲಕ್ಕಿ ಸೂಸಲ ಮಾಡಿದ್ದೇನೆ.

೩. ಅನಕ್ಷರಸ್ಥರ ಪಾರ್ಲಿಮೆಂಟು.

೪. ನನ್ನ ದೃಷ್ಟಿಯಲ್ಲಿ ವಾರ್ತಾ ಇಲಾಖೆ ಇದ್ದಂತೆ.

೫. ಇಳಕಲ್ ಸೀರೆ ಉಟ್ಟ ಗುಳೇದಗುಡ್ಡ ಕುಪ್ಪಸ ತೊಟ್ಟ ಹೆಣ್ಣಿದ್ದಂತೆ.

### ಆ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):

೧. ಕಲಿಯುಗದ ಅಮೃತ ಯಾವುದು?

೨. ಮೂರು ಕಾಲಿನ ಕುರ್ಚಿ ಎಲ್ಲಿದೆ?

೩. ಎತ್ತುಗಳು ಗಕ್ಕೆಂದು ಎಲ್ಲಿ ನಿಲ್ಲುತ್ತವೆ?

೪. ಬಾಯಿಚಪಲ ಯಾರಿಗೆ ಜಾಸ್ತಿ ಇರುತ್ತದೆ?

೫. ಲೇಖಕರ ದೃಷ್ಟಿಯಲ್ಲಿ ಹಳ್ಳಿಯ ಚಹಾದ ಅಂಗಡಿ ಹೇಗೆ?

೬. ಯಾರ ಬಗ್ಗೆ ಮೂಕರ್ಜಿಯ ದೂರನ್ನು ಹಳ್ಳಿಗರು ಕೊಡುತ್ತಾರೆ?

೭. ಕಲ್ಲಪ್ಪನವರ ಗೂಢ ಪ್ರಶ್ನೆ ಯಾವುದು?

೮. ಲೋಕಲ್ ಸುದ್ದಿಗಳಿಗೆ ಎಲ್ಲಿ ಪ್ರಾಶಸ್ತ್ಯವಿದೆ?

೯. ಲೇಖಕರು ಹೇಳುವ ಹಳ್ಳಿಯ ಹೊಟೇಲಿನ ಹೆಸರೇನು?

೧೦. ಯಾವುದಕ್ಕೆ ಭೇಟಿ ಕೊಡಬೇಕೆಂದು ಲೇಖಕರು ಹೇಳುತ್ತಾರೆ?

## ಇ) ಎರಡು ಅಂಕಗಳ ಪ್ರಶ್ನೆಗಳು (ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ):

೧. ಪಟ್ಟಣದ ಹೊಟೇಲಿನ ಕಟ್ಟಡ ಹೇಗಿದೆ?

೨. ಹಳ್ಳಿಯ ಚಹಾದ ಅಂಗಡಿಯೆಂದರೆ ಹೇಗಿರುತ್ತದೆ?

೩. ಭಾವೈಕ್ಯತೆ ಈ ದೇಶದಲ್ಲಿ ಎಲ್ಲಿದೆ?

೪. ರೋಗಿಗಳ ಹಾಗೂ ಪಥ್ಯ ಮಾಡುವವರ ಜಿದ್ದು ಎಂತಹುದು?

೫. ಗಿಡ್ಡ ಮಾಸ್ತರು ಶಾಲೆಯಲ್ಲಿ ಹುಡುಗರಿಗೆ ಏಕೆ ಹೊಡೆಯುತ್ತಾರೆ?

೬. ಹಳ್ಳಿಗರ ಆಕ್ಷೇಪದ ವಿಷಯ ಯಾವುದು?

೭. ಸುದ್ದಿಯ ಸೂರಪ್ಪನಾದ ಭರಮಣ್ಣ ಗೊಂಬೆಯನ್ನು ಹೇಗೆ ವರ್ಣಿಸುತ್ತಾನೆ?

## ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):

೧. ಹಳ್ಳಿಯ ಚಹಾದಂಗಡಿಯನ್ನು ಪರಿಚಯಿಸಿ.

೨. ಪಟ್ಟಣದ ಚಹಾದಂಗಡಿಗಳು ಹೇಗಿರುತ್ತವೆ?

೩. ಹಳ್ಳಿ ಮತ್ತು ಪಟ್ಟಣ ಹೊಟೇಲುಗಳ ಮಾಣಿಯ ಕುರಿತು ಬರೆಯಿರಿ.

೪. ಹಳ್ಳಿಗರು ಹೊತ್ತನ್ನು ಹೇಗೆ ಕಳೆಯುತ್ತಾರೆ? ವಿವರಿಸಿರಿ.

೫. ಹಳ್ಳಿಯ ಹೊಟೇಲುಗಳಲ್ಲಿ ಬಂದ ನವೀನತೆಯ ಕುರಿತು ಬರೆಯಿರಿ.

## ಭಾಷಾಭ್ಯಾಸ :

೧. ಈ ಪಠ್ಯದಲ್ಲಿ ಬಂದಿರುವ ಅನ್ಯದೇಶ್ಯ ಪದಗಳನ್ನು ಗಮನಿಸಿ:
ಹೊಟೇಲ್, ಫ್ಯಾನ್, ಡೆಕೋಲಮ್, ಟೇಬಲ್, ಗ್ಲಾಸು, ಪ್ಲೇಟ್, ಮಿನಿ, ಸೈಜ್, ಜೋಕ್, ಬೆಂಚ, ಸ್ಪೆಶಲ್, ಇಂಜಿನ್, ಕೌಂಟರ್, ಕ್ರಿಕೆಟ್, ಗ್ರೌಂಡ್, ಚರ್ಚ್, ಕ್ಲಬ್, ಪಾರ್ಲಿಮೆಂಟ್, ಪೆನ್‌ಶನ್, ಕೇರಂ ಬೋರ್ಡ್, ಕಾಲೇಜ್, ನರ್ಸರಿ, ಸೀಟ್, ಅಡ್ವಾನ್ಸ, ಲೀಡರ್, ಪ್ರಿಸ್ಕ್ರಿಪ್ಶನ್, ಮಿಡಡೇ ಮೀಲ್ಸ್, ಹೆಡ್ ಮಾಸ್ಟರ, ಪ್ಯಾಂಟ್, ಶರ್ಟ, ಲೋಕಲ್, ಸ್ಟುಪಿಡ್, ಗ್ರಾಮಫೋನ್, ರೆಕಾರ್ಡ್, ರೇಡಿಯೋ, ಸ್ಟೀರಿಯೋ, ಟೇಪ್‌ರಿಕಾರ್ಡ್, ಸೀರಿಯಲ್, ಟಿ.ವಿ.

೨. ಹಚ್ಚಿ, ಮ್ಯಾಲ, ಹೆಸರ್ಲೆ, ಉದ್ರಿ – ಇವುಗಳ ಗ್ರಾಂಥಿಕ ರೂಪಗಳನ್ನು ಬರೆಯಿರಿ.

೩. ಪಠ್ಯಭಾಗದಲ್ಲಿ ಬಂದಿರುವ ಹೊಟೇಲು ತಿಂಡಿಗಳ ಪಟ್ಟಿ ಮಾಡಿ.

೪. ಹೊಡೆಯುತ್ತ, ಬರುತ್ತಾರೆ, ಹಬ್ಬಿದೆ, ಹಾಕುತ್ತಾರೆ – ಈ ಪದಗಳ ಕಾಲವನ್ನು ಸೂಚಿಸಿ.

೫. ಎ.ಎನ್. ಮೂರ್ತಿರಾವ್ ಮತ್ತು ಅ.ರಾ. ಮಿತ್ರರ 'ಹೊಟೇಲುಗಳು' ಪ್ರಬಂಧವನ್ನು ಪ್ರಸ್ತುತ ಪ್ರಬಂಧದೊಂದಿಗೆ ತೌಲನಿಕ ಅಧ್ಯಯನ ಮಾಡಿ.

## ಆಕರ :

ಕೃತಿ : ಸಮಗ್ರ ಲಲಿತ ಪ್ರಬಂಧಗಳು
ಲೇಖಕರು : ಪ್ರೊ. ವೀರೇಂದ್ರ ಸಿಂಪಿ
ಪ್ರಕಾಶನ : ಬಸವ ಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳು
ಕಲಬುರಗಿ – ೫೮೫ ೧೦೧.

## ಹೆಚ್ಚಿನ ಓದಿಗೆ :

೧. ಸುವರ್ಣ ಕರ್ನಾಟಕ – ಲಲಿತ ಪ್ರಬಂಧಗಳು.
೨. ಹುರುಳಿ ಕಟ್ಟು (ಆಯ್ದ ಪ್ರಬಂಧಗಳು) – ಈರಪ್ಪ ಎಂ. ಕಂಬಳಿ, ಅಕ್ಷರ ಮಂಟಪ, ಹಂಪಿನಗರ ಬೆಂಗಳೂರು.
೩. ಎ.ಎನ್. ಮೂರ್ತಿರಾಯರ ಸಮಗ್ರ ಲಲಿತ ಪ್ರಬಂಧಗಳು.
೪. ಗೊರೂರು ರಾಮಸ್ವಾಮಿ ಅಯ್ಯಂಗಾರರ ಸಮಗ್ರ ಲಲಿತ ಪ್ರಬಂಧಗಳು.
೫. ಅ.ರಾ. ಮಿತ್ರ ಅವರ ಸಮಗ್ರ ಲಲಿತ ಪ್ರಬಂಧಗಳು.
೬. ರಾ.ಯ. ಧಾರವಾಡಕರ, ರಾಕು, ಎನ್ಕೆ ಮುಂತಾದ ಪ್ರಬಂಧಕಾರರ ಬರಹಗಳು.
೭. ವೈದೇಹಿ, ಸುನಂದಾ ಬೆಳಗಾಂವ್‌ಕರ, ಟಿ. ಸುನಂದಮ್ಮನವರ ಪ್ರಬಂಧಗಳು.

*ಕಷ್ಟವೂ ಬಡತನವೂ, ಬೋಧಿಸುವಂತೆ ಬೇರೆ*
*ಯಾವುದೂ ಬೋಧಿಸಲಾರದು*
*– ಸ್ವಾಮಿ ವಿವೇಕಾನಂದ*

# ಟಿಪ್ಪಣಿಗಾಗಿ

## ದೀರ್ಘಗದ್ಯ

# ಕೃಷ್ಣೇಗೌಡನ ಆನೆ



ಕೆ.ಪಿ. ಪೂರ್ಣಚಂದ್ರ ತೇಜಸ್ವಿ

ಶ್ರೀಯುತ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯು ಅವರ ಅತ್ಯಂತ ಮಹತ್ವದ ರಚನೆಗಳಲ್ಲಿ ಒಂದೆನಿಸಿದೆ. ಆನೆಯ ನೆಪದಲ್ಲಿ ಊರಿನಲ್ಲಿ ನಡೆಯುವ ಎಲ್ಲ ದುರಂತ ಘಟನೆಗಳಿಗೆ ವಿಚಿತ್ರವಾದ ಸಂಬಂಧಗಳು ಬೆಳೆದು ನಿಗೂಢವಾಗಿ ಮನುಷ್ಯ ಮತ್ತು ಪರಿಸರದ ನಡುವೆ ವಿಷಮತೆಗೆ ಕಾರಣವಾಗುವ ಸಾಮಾಜಿಕ ಸನ್ನಿವೇಶದ ಮುಖವನ್ನು 'ಕೃಷ್ಣೇಗೌಡನ ಆನೆ' ಕಥೆಯು ಚಿತ್ರಿಸುತ್ತದೆ. ಬದುಕಿನ ಗಂಭೀರ ಕಾಳಜಿಗಳನ್ನು ಮತ್ತು ಕಾಣದ ಕ್ಷುದ್ರ ರಹಸ್ಯಗಳನ್ನು ಪತ್ತೆದಾರಿ ರೀತಿಯಲ್ಲಿ ಕಾಣಿಸುವ ನೆಲೆ ಈ ಕಥೆಯಲ್ಲಿದೆ.

ಇಲ್ಲಿ ಬರುವ ಮಾವುತ ವೇಲಾಯುಧ, ಫಾರೆಸ್ಟರ್ ನಾಗರಾಜ, ತಿಪ್ಪಣ್ಣ, ಡ್ರೈವರ್ ಅಬ್ಬಾಸ್, ಕ್ಲೀನರ್ ಕೃಷ್ಣ, ಸುಬ್ಬಣ್ಣನ ಮೇಕೆಗಳು – ಈ ಎಲ್ಲರ ಸಾವಿಗೆ ಕೃಷ್ಣೇಗೌಡನ ಆನೆಯೇ ಕಾರಣ ಎಂದು ಆರೋಪಿಸುವುದು ವ್ಯವಸ್ಥೆಯ ವ್ಯಂಗ್ಯವಾಗಿದೆ. ಹಿಂದೆ ಅದು ಮಠವೊಂದರ ಪಟ್ಟದಾನೆಯಾಗಿತ್ತು. ಹರಾಜಿನಲ್ಲಿ ಕೊಂಡುಕೊಂಡ ಮೇಲೆ ಈಗ ಅದು ಕೃಷ್ಣೇಗೌಡನ ಜೀತದಾನೆಯಾಗಿದೆ. ಊರಿನಲ್ಲಿ ಆಗುವ ದುರಂತಗಳಿಗೆ, ಅನಾಹುತಗಳಿಗೆ, ಸಾವುಗಳಿಗೆ, ಕಳ್ಳ ಸಾಗಾಣಿಕೆ, ಗಂಧ ಸಾಗಾಣಿಕೆ ಈ ಎಲ್ಲಾ ವ್ಯವಹಾರಗಳಿಗೆ ಆ ಆನೆಯೇ ಕಾರಣ ಎಂದು ಆರೋಪಿಸುವುದು ಹಾಸ್ಯಾಸ್ಪದವಾಗಿದೆ. ಪ್ರಸ್ತುತ ಭಾರತದ ಸಾಮಾಜಿಕ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಅಧಿಕಾರಶಾಹಿ ವ್ಯವಸ್ಥೆಯ ಕರಾಳ ಸತ್ಯಗಳನ್ನು ಈ ಕಥೆ ಚಿತ್ರಿಸಿದೆ. ವ್ಯವಸ್ಥೆಯ ಭ್ರಷ್ಟತೆ, ನಿಷ್ಕ್ರಿಯತೆ, ಈರ್ಷ್ಯೆಗಳಿಂದ ಎದುರಾಗುವ ದುರಂತಗಳ ಆಶಯ ಈ ಕಥೆಯ ಮುಖ್ಯ ಭಿತ್ತಿಯಾಗಿದೆ. ಮನುಷ್ಯನ ಸಣ್ಣತನ ಹಾಗೂ ಸ್ವಾರ್ಥಗಳಿಗೆ ಮನುಷ್ಯನೇ ಕಾರಣನಾದರೂ ಈ ಕಥೆಯಲ್ಲಿ ನಡೆಯುವ ವೈರುಧ್ಯ ಹಾಗೂ ದುರಂತಗಳಿಗೆ ಆನೆಯೇ ಅಪರಾಧಿಯಾಗುವುದು ಮತ್ತು ಆನೆ ಕೊನೆಗೆ ಇದ್ದಕ್ಕಿದ್ದಂತೆ ಮಾಯವಾಗುವುದು ಒಂದು ದುರಂತ ವ್ಯಂಗ್ಯವಾಗಿದೆ.

ತೇಜಸ್ವಿ ಅವರ ಕಾಳಜಿಯ ಕೇಂದ್ರವೇ ಗ್ರಾಮಭಾರತ. ಇಲ್ಲಿಯೇ ನಿಂತು ಜಾಗತಿಕ ವಿದ್ಯಮಾನಗಳನ್ನು, ಬದಲಾವಣೆಗಳನ್ನು ವೀಕ್ಷಿಸುವ ತೇಜಸ್ವಿಯವರಿಗೆ, ಈ ವಿದ್ಯಮಾನಗಳ ಬಲೆಯಲ್ಲಿ ಗ್ರಾಮಭಾರತ ಸಿಕ್ಕು ಒದ್ದಾಡುತ್ತಿರುವಂತೆಯೂ ಕಾಣಿಸುತ್ತದೆ. ಈ ಕಥೆಯಲ್ಲಿನ ಕೃಷ್ಣೇಗೌಡನ ಆನೆ ಪಾಪದ ಪ್ರಾಣಿ. ಭಾರೀ ಶರೀರ ಮತ್ತು ಅಪಾರ ಶಕ್ತಿಯನ್ನು ಹೊಂದಿದ್ದರೂ ಈ ಆನೆ 'ಬಾಯಿಯಿಲ್ಲದ' ಪ್ರಾಣಿಯಾಗಿರುವ ಕಾರಣ 'ಬಾಯಿಯಿರುವ' ಎಲ್ಲರ ಶೋಷಣೆಗೆ ವಸ್ತುವಾಗುತ್ತದೆ. ಪ್ರತಿಯೊಬ್ಬನಿಂದಲೂ ತನಗೆ ಕಂಡ ರೀತಿಯಲ್ಲಿ ಈ ಪ್ರಾಣಿಯನ್ನು ಅರ್ಥೈಸುವುದು, ಇದಕ್ಕೊಂದು ವ್ಯಕ್ತಿತ್ವ ಆರೋಪಿಸುವುದು ನಡೆಯುತ್ತದೆ. ಎಲ್ಲ ಪಾಪಕೃತ್ಯಗಳ ಅಪರಾಧವನ್ನು ಆನೆ ಹೊತ್ತುಕೊಳ್ಳಬೇಕಾಗುತ್ತದೆ. 'ಬಾಯಿಯಿಲ್ಲದ' ಎಲ್ಲರಿಗೂ, ಎಲ್ಲದಕ್ಕೂ ಸಂಕೇತದಂತೆ ಕಾಣುವ ಈ ಆನೆಯನ್ನು ಕೇಂದ್ರವಾಗಿರಿಸಿಕೊಂಡು ಲೇಖಕರು ಅನೇಕ ಸಂಗತಿಗಳನ್ನು, ದುರಂತಗಳನ್ನು ನಿರೂಪಿಸಿದ್ದಾರೆ. ಪಾತ್ರಗಳ ಮೂಲಕ ಪ್ರಸ್ತುತ ಸಮಾಜದ ಅನೇಕ ಅಂಶಗಳನ್ನು ಹಾಸ್ಯಮಿಶ್ರಿತ ವ್ಯಂಗ್ಯದ ಮೂಲಕ ನಮ್ಮ ಮುಂದಿಡುವ ಜೀವಂತಿಕೆಯ ಬರವಣಿಗೆಯ ಮಾದರಿ ತೇಜಸ್ವಿಯವರದ್ದಾಗಿದೆ. ಈ ಕಾರಣದಿಂದ ಅವರು ಸಮಕಾಲೀನ ಕಥೆಗಾರರ ನಡುವೆ ಭಿನ್ನವಾಗಿ ಕಾಣುತ್ತಾರೆ.

ಕೃಷ್ಣೇಗೌಡನ ಬಳಿಯಿರುವ ಆನೆ ಪಟ್ಟಣವಾಸಿಯಾಗಿದೆ. ಈ ಕಾರಣದಿಂದಾಗಿ ಪಟ್ಟಣದ ಜನ ಅದಕ್ಕೂ ತಮ್ಮಂತೆಯೇ ಒಂದು ವ್ಯಕ್ತಿತ್ವವನ್ನು ಆರೋಪಿಸಿದ್ದಾರೆ. ಆನೆಯೂ ಕಾಡಾನೆಗಳಿಂದ ಸಂಪೂರ್ಣವಾದ ಭಿನ್ನ ನಡವಳಿಕೆಯನ್ನು ಹೊಂದಿದೆ. ಕಾಡಾನೆಗಳಲ್ಲಿ ಪ್ರಾಕೃತಿಕವಾದ ಚಲನವಲನಗಳು ಪ್ರಧಾನವಾಗಿದ್ದರೆ, ಈ ಆನೆಯು ಮಾನವನ ಬದುಕಿನ ನಡವಳಿಕೆ ಮತ್ತು ನಿಯಂತ್ರಣಕ್ಕೆ ಒಳಗಾಗಿದೆ. ಮಾನವನ ಸ್ವಾರ್ಥಮೂಲ ನೆಲೆಯಿಂದ ಉತ್ಪನ್ನವಾದ ಬಲವಂತದಲ್ಲಿ ತನ್ನ ಸಹಜ ಸ್ವಭಾವವನ್ನು ಬಿಟ್ಟುಕೊಟ್ಟಿದೆ. ಅದು ತನಗಾಗಿ ಅಲ್ಲದ ಪರರ ಇಚ್ಛೆ ಮತ್ತು ನಿಯಂತ್ರಣದಲ್ಲಿ ಬದುಕಬೇಕಾಗಿದೆ. ತೇಜಸ್ವಿ ಅವರ ಮಹತ್ವಾಕಾಂಕ್ಷೆಯ ಈ ಕಥೆಯು ತೇಜಸ್ವಿ ಅವರ ಬದುಕಿನ ಮತ್ತು ಬರವಣಿಗೆಯ ಸಮಗ್ರ ಗ್ರಹಿಕೆಯನ್ನು ಹಿಡಿದಿಡಲು ಪ್ರಯತ್ನಿಸಿದೆ. ಈ ಕಥೆಯು ಇಂಗ್ಲಿಷ್, ಹಿಂದಿ, ಮರಾಠಿ ಮತ್ತು ಮಲೆಯಾಳಿ ಭಾಷೆಗಳಿಗೆ ತರ್ಜುಮೆಗೊಂಡಿದೆ.

# ಅಧ್ಯಾಯ – ೧

ನನ್ನ ಹಳೆಯ ಫೋರ್ಡ್ ಜೀಪಿನ ಗೇರ್‌ಬಾಕ್ಸ್ ಆಗಿಂದಾಗ್ಗೆ ತೊಂದರೆ ಕೊಡುತ್ತಲೇ ಇರುತ್ತದೆ. ಅದನ್ನು ನಾನು ಸದಾ ರಿಪೇರಿ ಮಾಡುತ್ತಿರುವುದು ನೋಡಿ ಕೆಲವರು ಹಳೆಯ ಮಿಲಿಟರಿ ಜೀಪುಗಳ ಹಣೆಬರಹವೇ ಇಷ್ಟು. ಅದರ ಗೇರ್‌ಬಾಕ್ಸ್ ತೆಗೆದುಹಾಕಿ ಹೊಸ ಮಾಡೆಲಿನ ವಿಲ್ಲೀರ್ಸ್ ಜೀಪ್ ಗೇರ್‌ಬಾಕ್ಸ್ ಜೋಡಿಸಿಬಿಡು ಎಂದು ಸಲಹೆ ಮಾಡಿದರು. ಆದರೆ ನನಗೆ ಈ ಪುರಾತನ ಕಾಲದ ಜೀಪಿನ ಹಳೆಯ ಭಾಗಗಳನ್ನು ಬದಲಿಸಿ ಅದರ ಒರಿಜಿನಾಲಿಟಿ ಹಾಳು ಮಾಡುವುದು ಸರಿತೋರಲಿಲ್ಲ. ನನ್ನ ಈ ಒರಿಜಿನಾಲಿಟಿ ಉಳಿಸುವ ಪ್ರಯತ್ನದಿಂದ ತಿಂಗಳಿಗೊಮ್ಮೆ ಜೀಪಿನ ಅಡಿ ಬಿದ್ದುಕೊಂಡು ಅದರ ಗೇರ್‌ಬಾಕ್ಸ್ ಬಿಚ್ಚಿ ರಿಪೇರಿಮಾಡುವ ಕೆಲಸ ಖಾಯಮ್ಮಾಗಿತ್ತು.

ಆವತ್ತು ಜೀಪಿನ ಅಡಿ ಬಿದ್ದುಕೊಂಡು ಅದರ ಗೇರ್‌ಬಾಕ್ಸ್ ರಿಪೇರಿಯಲ್ಲಿ ತೊಡಗಿರಬೇಕಾದರೆ ಎರಡು ಖಾಕಿ ಪ್ಯಾಂಟ್‌ಧಾರಿ ಕಾಲುಗಳು ನನ್ನತ್ತ ಬರುತ್ತಿರುವುದು ನನಗೆ ಜೀಪಿನ ಅಡಿಯಿಂದ ಕಾಣಿಸಿತು. ನನಗೆ ಪೋಲೀಸ್ ಡಿಪಾರ್ಟ್‌ಮೆಂಟ್ ಥಟ್ಟನೆ ಜ್ಞಾಪಕಕ್ಕೆ ಬಂದು ಗಾಬರಿಯಾದರೂ, ಅವು ಬೂಡ್ಸಿಲ್ಲದ ಕಾಲುಗಳಾದ್ದರಿಂದ ಬೇರೆ ಯಾವ ಡಿಪಾರ್ಟ್‌ಮೆಂಟಿನವು ಎಂದು ಬೋಲ್ಟುಗಳನ್ನು ಬಿಚ್ಚುತ್ತಾ ಹಾಗೇ ಯೋಚಿಸಿದೆ. ಬಂದಾತ ನಾನು ಜೀಪಿನ ಅಡಿ ಇದ್ದುದರಿಂದ ಅವನು ಬಂದುದನ್ನು ಗಮನಿಸಿಲ್ಲವೆಂದು ಬಗೆದು ಒಂದೆರಡು ಬಾರಿ ಕೆಮ್ಮಿದ.

ನಮ್ಮ ಕಡೆ ಕೆಮ್ಮು ಕಾಲಿಂಗ್‌ಬೆಲ್ ಇದ್ದಹಾಗೆ. ಮನೆಯಬಳಿ ಯಾರೂ ಕಣ್ಣಿಗೆ ಬೀಳದಿದ್ದರೆ ಕೆಮ್ಮಿ ಕ್ಯಾಕರಿಸಿ ಗಲಾಟೆ ಮಾಡುತ್ತಾರೆ. ಬಹುಶಃ ಭಾಷೆ ಉಪಯೋಗಿಸಿ ಕರೆಯಬೇಕೆಂದಾದರೆ ಕೆಲವು ತೊಂದರೆಗಳಿವೆ ಎಂದು ತೋರುತ್ತದೆ. ಮನೆಯವರ ಹೆಸರು ಏನು? ಹೆಸರು ಹಿಡಿದು ಕರೆಯಬೇಕೋ? ಸ್ವಾಮೀ ಎನ್ನಬೇಕೋ? ಬಹುವಚನ ಉಪಯೋಗಿಸಬೇಕೋ? ಏಕವಚನವೋ? ಭಾಷೆ ಉಪಯೋಗಿಸಿ ಕರೆಯಬೇಕೆಂದರೆ ಏನೆಲ್ಲ ಬಿಕ್ಕಟ್ಟುಗಳನ್ನು ಎದುರಿಸಬೇಕು. ಅದರ ಬದಲು ಒಂದೆರಡು ಸಾರಿ ಕೆಮ್ಮಿದರೆ ಈ ಎಲ್ಲ ತೊಂದರೆಗಳೇ ಇರುವುದಿಲ್ಲ. ಆದ್ದರಿಂದ ಬಂದವ ಮತ್ತೂ ಒಂದೆರಡುಸಾರಿ ಕೆಮ್ಮಿದ.

"ಯಾರಪ್ಪಾ ನೀನು?" ಎಂದು ಕೇಳಿದೆ.

"ನಾನು ಸ್ವಾಮಿ"

"ನಾನು ಅಂದರೆ ಯಾರಪ್ಪಾ? ನನಗೆ ಇಲ್ಲಿ ನಿನ್ನ ಕಾಲು ಮಾತ್ರ ಕಾಣೋದು"

"ನಾನು ಲೈನ್‌ಮನ್ ಸ್ವಾಮಿ"

"ಯಾರು ಲೈನ್‌ಮನ್ ತಿಪ್ಪಣ್ಣಾನೇನಯ್ಯಾ?"

"ಥುಥು! ಟೆಲಿಫೋನ್ ಡಿಪಾರ್ಟ್‌ಮೆಂಟ್ ಅಲ್ಲ ಸ್ವಾಮಿ. ನಾವು ಕರೆಂಟಿನೋರು. ನಾನು ಲೈನ್‌ಮನ್ ದುರ್ಗಪ್ಪ ಸ್ವಾಮಿ."

“ಅದ್ಯಾಕೆ ಟೆಲಿಫೋನ್ ಡಿಪಾರ್ಟ್‌ಮೆಂಟಿಗೆ ಥೂ ಅಂತೀಯ? ಅವರನ್ನ ಕಂಡರೆ ನಿಮಗೆ ಆಗೊಲ್ಲವ? ಇಬ್ರದೂ ಕೆಲಸ ಕಂಬ ಹತ್ತೋದೇ ತಾನೇ?”

“ಅದೊಂದು ತರ್ಲೆ ಡಿಪಾರ್ಟ್‌ಮೆಂಟ್ ಅಲ್ಲವ ಸಾರ್. ನಮ್ಮ ತಂತಿ ಹತ್ರ ತಂತಿ ತರಬ್ಯಾಡ್ರಿ. ಟೆಲಿಫೋನು ಗೊರಾಗೊರಾ ಅನ್ನುತ್ತೆ, ಹಾಗೆ, ಹೀಗೆ, ಅಂತೆಲ್ಲಾ ದಿನಾ ನಮ್ಮ ಜೊತೆ ಪುಕಾರು ತೆಗೀತಾನೇ ಇರ್ತಾರೆ.”

ನಾನು ಜೀಪಿನ ಅಡಿಯಿಂದ ಹೊರಬಂದೆ. ದುರ್ಗಪ್ಪ ಕೈಯಲ್ಲಿ ಕಟ್ಟಿಂಗ್ ಪ್ಲೈಯರು ತಂತಿ ಸಿಂಬಿ ಹಿಡಿದುಕೊಂಡು ನಿಂತಿದ್ದ.

“ಏನಯ್ಯಾ! ಏನು ಸಮಾಚಾರ?” ಎಂದು ಕೇಳಿದೆ.

“ಸಮಾಚಾರ ಏನಿಲ್ಲ ಸ್ವಾಮಿ”

“ಮತ್ತೇನು ಬಂದೆ?”

“ಸುಮ್ಮನೆ ಹಿಂಗೇ” ಎಂದ.

ಅವನ ಮಾತು ಕೇಳಿದರೆ ಏನೂ ಕೆಲಸವಿಲ್ಲದೆ ಪುರುಸೊತ್ತಾಗಿದ್ದರಿಂದ ಇಲ್ಲಿಯವರೆಗೂ ಬಂದಿದ್ದಾನೆಂದು ಅರ್ಥ ಬರುತ್ತಿತ್ತು. ಹಾಗಿದ್ದರೆ ಏನೋ ಇನಾಮು ಕೇಳಲೋ ಅಥವಾ ಚಂದಾ ವಸೂಲಿಗೋ, ಇಲ್ಲವೇ ಮನೆ ಉಪಯೋಗಕ್ಕೆ ಕಾಫಿ ಬೀಜವನ್ನೋ ಏಲಕ್ಕಿಯನ್ನೋ ಕೇಳಲು ಈ ರೀತಿ ಪೀಠಿಕೆ ಹಾಕುತ್ತಿದ್ದಾನೆಂದು ಯೋಚಿಸಿದೆ. ನಮ್ಮಲ್ಲಿ ಇದೊಂದು ದೊಡ್ಡ ಗೋಳು. ಬಂದವರು ಬಂದ ಕೆಲಸ ಏನೆಂದು ಚಟ್‌ಪಟ್ ಹೇಳುವುದೇ ಇಲ್ಲ. ನಮ್ಮ ಮೂಡು ಹೇಗಿದೆ ಎಂದು ಲೆಕ್ಕ ಹಾಕುತ್ತ, ಹೇಳಲೋ ಬೇಡವೋ ಎಂದು ಧೇನಿಸುತ್ತ, ಅದೂ ಇದೂ ಮಾತಾಡುತ್ತ ನಿಂತಿರುತ್ತಾರೆ. ನಾವೇ ನಾನಾ ಪರಿಯಲ್ಲಿ ಅವರನ್ನು ಕೇಳಿಕೊಂಡು ಅವರ ಬಾಯಿಬಿಡಿಸಬೇಕು. ಅಲ್ಲಿಯವರೆಗೂ ಅವರು ಬಂದುದಕ್ಕೆ ಅರ್ಥಾತ್ ಸಂಬಂಧವಿಲ್ಲದ ವಿಷಯ ಮಾತಾಡುತ್ತ ಅನ್ಯಮನಸ್ಕರಾಗಿ ನಿಂತಿರುತ್ತಾರೆ. ನನಗೆ ಅವತ್ತು ಇದಕ್ಕೆಲ್ಲ ತಾಳ್ಮೆ ಇರಲಿಲ್ಲ.

“ಸುಮ್ಮನೆ ಹಿಂಗೇ ಯಾಕೆ ಇಲ್ಲೀವರೆಗೆ ಬರ್ತೀಯ? ಬಂದ ವಿಷಯ ಏನಂತ ಜರೂರಾಗಿ ಹೇಳೋ ಮಾರಾಯ. ನಿನ್ನತ್ರ ಮಾತಾಡ್ತ ನಿಂತುಕೊಳ್ಳೋದಕ್ಕೆ ನನಗೆ ಪುರುಸೊತ್ತೇ ಇಲ್ಲ” ಎಂದು ಅಸಹನೆಯ ದನಿಯಲ್ಲಿ ಹೇಳಿದೆ.

“ಏನಿಲ್ಲ, ಸ್ವಲ್ಪ ಕೊಡಲಿ ಇದ್ರೆ ಬೇಕಿತ್ತು ಸ್ವಾಮಿ”

“ಅಷ್ಟೇನಾ! ಮತ್ಯಾಕೆ ಏನೂ ಇಲ್ಲಾಂತ ಹೇಳಿದೆ?”

“ಇದೇನು ದೊಡ್ಡ ವಿಷಯಾಂತ ಹೇಳಲಿ ಹೇಳಿ”

“ಕರೆಂಟು ಕೆಲಸಕ್ಕೆ ಕೊಡಲಿ ಯಾಕೋ?”

"ಒಂದು ಮರ ಮುರ್ಕೊಂಡು ತಂತಿಮ್ಯಾಲೆ ಬಿದ್ದೋಗಿದೆ ಸ್ವಾಮಿ. ಅದ್ನ ಕಡಿದು ಲೈನು ಕ್ಲಿಯರ್ ಮಾಡಬೇಕು, ಆ ದರಿದ್ರ ಕೃಷ್ಣೇಗೌಡರ ಆನೆ ಮಾಡಿರೋ ಕೆಲಸ ಇರಬೇಕು. ಮರದ ಹತ್ರ ಅದರ ಲದ್ದಿ ಬಿದ್ದಿದೆ. ಮರದ ಎಲೆ ಕಿತ್ಕೊಳ್ಳೋಕೆ ಹೋಗಿ ಕೊಂಬೇನೆ ಮುರ್ದಾಕಿದೆ."

"ಅದು ಹೇಗೆ ಆನೆ ಕೆಲಸ ಅಂತೀಯ. ತಂತಿ ಮೇಲೆ ಕೊಂಬೆ ಎಳೆದರೆ ಅದಕ್ಕೆ ಕರೆಂಟು ಹೊಡೆದು ಸತ್ತೋಗೋದಿಲ್ವೇನೋ?"

"ಮತ್ತಿನ್ನೇನು. ಅದ್ರದೇ ಕೆಲಸ. ಆ ಮರದ ಕೆಳಗೆ ಬುಟ್ಟಿಗಟ್ಲೆ ಬಿದ್ದಿಲ್ಲವ ಅದರ ಲದ್ದಿ! ಭಾನುವಾರ ರಿಪೇರಿ ಕೆಲಸ ಅಂತ ಲೈನು ಓಪನ್ ಮಾಡಿರ್‍ತೀವಿ. ಲೈನು ಚಾರ್ಜಲ್ಲಿ ಇದ್ದಿದ್ದರೆ ಇಷ್ಟು ಹೊತ್ತಿಗೆ ಭಸ್ಮ ಆಗೋಗಿರೋದು, ಕಿಡಿಗೇಡಿ ಮುಂಡೇದು. ನಾನು ಬೆಳಗಿಂದ ನಾಕೈದು ಸಾರಿ ಲೈನ್ ಚಾರ್ಜ್ ಮಾಡಿದೆ. ಏನ್ ಮಾಡಿದ್ರು ಫೀಜೇ ನಿಲ್ಲಾಕಿಲ್ಲ. ಲೈನು ಟ್ರಬಲ್ಲಿದೆ ಅಂತ ಲೈನು ಮೇಲೆ ನೋಡಿಕೊಂಡು ಬಂದೆ. ಶಿವೇಗೌಡರ ಸಾಮಿಲ್ ಹತ್ರ ಕೊಂಬೆ ಲೈನು ಮೇಲೆ ಬಿದ್ದಿದೆ."

"ಕೊಡಲಿ ಅಟ್ಟದ ಮೇಲೆ ಹಾಕಿದೀವಿ ದುರ್ಗಪ್ಪ, ನೀನೇ ಹತ್ತಿ ತಗೊಂಡು ಹೋಗಬೇಕು" ಎಂದು ಹೇಳಿ ಮತ್ತೆ ಜೀಪಿನ ಅಡಿಗೆ ನುಗ್ಗಿದೆ. ದುರ್ಗಪ್ಪ ಅಟ್ಟ ಹತ್ತಿ ದಡಬಡ ಸದ್ದು ಮಾಡುತ್ತಾ ಕೊಡಲಿ ಹುಡುಕಿದ. ಕೆಲ ಹೊತ್ತಿನ ಮೇಲೆ ಕೊಡಲಿ ಸಿಕ್ಕಿತೆಂದು ಹೇಳಿ ಹೊರಟು ಹೋದ.

ದುರ್ಗಪ್ಪ ಕೊಡಲಿ ತಗೊಂಡು ನಿರ್ಗಮಿಸಿದವ ಮತ್ತೆ ಬರಲೇ ಇಲ್ಲ. ಮೂರು ನಾಲ್ಕು ದಿನವಾದರೂ ದುರ್ಗಪ್ಪನೂ ಪತ್ತೆ ಇಲ್ಲ. ಕೊಡಲಿಯೂ ಪತ್ತೆ ಇಲ್ಲ.

ಆ ಕೊಡಲಿಯಾದರೋ ಸುಳ್ಳು ಹೇಳಿ ಕದ್ದುಕೊಂಡು ಹೋಗಬೇಕಾದಷ್ಟು ಅಮೂಲ್ಯವಾದುದೇನೂ ಅಲ್ಲ. ಕೆರೆ ಕೆಲಸಕ್ಕೆಂದು ಬಂದಿದ್ದ ಮಣ್ಣು ಒಡ್ಡರು ಅಗೆಯುವಾಗ ಅಡ್ಡಾಗುವ ಬೇರುಗಳನ್ನು ಕಡಿಯಲೆಂದು ನನ್ನ ಕೊಡಲಿ ತಗೊಂಡು ಕಲ್ಲುಮಣ್ಣು ನೋಡದೆ ಯರ್‍ರಾಬಿರ್‍ರಿ ಜಪ್ಪಿ ಅದರ ಹಿಂಭಾಗ ಯಾವುದು ಮುಂಭಾಗ ಯಾವುದು ಗೊತ್ತಾಗದಷ್ಟು ಹಾಳುಮಾಡಿದ್ದರು. ಈಗ ಅದನ್ನು ಸುತ್ತಿಗೆ ಎಂದು ಸಹ ಕರೆಯಬಹುದಿತ್ತು. ಅದರಲ್ಲಿ ದುರ್ಗಪ್ಪ ಹೇಗೆ ಮರ ಕಡಿಯುತ್ತಾನೋ ಗೊತ್ತಾಗಲಿಲ್ಲ. ಏನೇ ಇರಲಿ ಅದನ್ನು ಅವನೇ ಹುಡುಕಿ ತಗೊಂಡು ಹೋಗಿದ್ದರಿಂದ ಮೊಂಡು ಕೊಡಲಿ ಕೊಟ್ಟಿದ್ದಕ್ಕೆ ನನ್ನನ್ನು ಅವನು ದೂಷಿಸುವಂತೆ ಇರಲಿಲ್ಲ. ಅದನ್ನು ಅವನು ಅಕಸ್ಮಾತ್ ಕದ್ದರೂ ನನಗೇನೂ ಕೊಡಲಿ ಹೋಯ್ತೆಂದು ದುಃಖವಾಗುತ್ತಿರಲಿಲ್ಲ. ಹಾಗಾಗಿ ನಾನು ದುರ್ಗಪ್ಪನನ್ನು ಹುಡುಕಿ ಕೊಡಲಿ ವಸೂಲಿ ಮಾಡುವ ಗೋಜಿಗೆ ಹೋಗಲಿಲ್ಲ.





# ಅಧ್ಯಾಯ – ೨

ದುರ್ಗಪ್ಪ ಹಾಗಾದರೆ ಕೊಡಲಿ ತಗೊಂಡು ಎತ್ತ ಹೋದ? ಚಿಂತಿಸಿದಾಗೆಲ್ಲ ನನಗೆ ಅವನು ಕೃಷ್ಣೇಗೌಡರ ಆನೆಯನ್ನು ದೂಷಿಸಿದ್ದು ನೆನಪಿಗೆ ಬರುತ್ತಿತ್ತು.

ಕೃಷ್ಣೇಗೌಡರ ಆನೆ ಕಾಡಿನಿಂದ ಹಿಡಿದುತಂದು ಪಳಗಿಸಿದ ಆನೆಯಲ್ಲ. ಘಟ್ಟದ ಕೆಳಗಿದ್ದ ಗೂಳೂರು ಮಠದ ಆನೆ ಹಾಕಿದ ಮರಿಯೇ ಕೃಷ್ಣೇಗೌಡರ ಬಳಿ ಇದ್ದ ಆನೆ. ಇದು ಹುಟ್ಟಿದ್ದು ಬೆಳೆದಿದ್ದು ಎಲ್ಲ ಊರಿನಲ್ಲಿ ಜನಗಳ ನಡುವೆಯೇ. ಹಾಗಾಗಿ ಅದಕ್ಕೆ ಕಾಡಿನ ಬಗ್ಗೆಯಾಗಲಿ ಕಾಡಿನಲ್ಲಿರುವ ಇತರ ಕಾಡಾನೆಗಳ ಬಗ್ಗೆಯಾಗಲಿ ಏನೂ ತಿಳುವಳಿಕೆ ಇರಲಿಲ್ಲವೆಂದು ಕಾಣುತ್ತದೆ. ಅದು ಮೂಡಿಗೆರೆಯ ಪೇಟೆಗೆ ಎಷ್ಟೊಂದು ಒಗ್ಗಿತ್ತೆಂದರೆ ಯಾವ ಲಂಗುಲಗಾಮಿಲ್ಲದೆ ದನಕರುಗಳ ರೀತಿಯಲ್ಲಿ ಪೇಟೆಯೊಳಗೆ ತಿರುಗಿಕೊಂಡಿರುತ್ತಿತ್ತು. ಸ್ಕೂಲು ಮಕ್ಕಳು ಅದರ ಹತ್ತಿರ ಬರಲು ಹೆದರುತ್ತಿದ್ದವಾದರೂ ಅವರು ದೂರದಿಂದಲೇ ಗೌರಿ ಎಂದು ಕೂಗಿದರೆ ಸಾಕು ಸೊಂಡಿಲೆತ್ತಿ ಸಲಾಮ್ ಮಾಡುತ್ತಿತ್ತು. ದಾರಿ ಬದಿಯ ಪೆಟ್ಟಿಗೆ ಅಂಗಡಿಗಳವರು ಹಣ್ಣು ಖರ್ಚಾದ ಬಾಳೆಗೊನೆಗಳ ದಿಂಡು, ಸಿಪ್ಪೆಗಳನ್ನೂ, ಜಜ್ಜಿದ, ಹಾಳಾದ ಹಣ್ಣುಗಳನ್ನೂ, ಅದಕ್ಕೆ ಕೊಡಲು ಇಟ್ಟಿರುತ್ತಿದ್ದರು. ಈ ಆನೆ ಖಾಯಮ್ಮಾಗಿ ಎಲ್ಲಾ ಪೆಟ್ಟಿಗೆ ಅಂಗಡಿಗಳ ಬಳಿಗೂ ಹೋಗಿ ಅವನ್ನೆಲ್ಲಾ ಸೊಂಡಿಲಲ್ಲಿ ತಗೊಂಡು ತಿನ್ನುತ್ತಿತ್ತು.

ಮಠದ ಜಗದ್ಗುರುಗಳನ್ನು ಜನರು ಅಡ್ಡಪಲ್ಲಕ್ಕಿಯಲ್ಲಿ ತಮ್ಮ ಹೆಗಲಮೇಲೇ ಹೊರತೊಡಗಿದ್ದರಿಂದ ಆನೆಗೆ ಜಗದ್ಗುರುಗಳನ್ನು ಹೊರುವ ಕೆಲಸ ತಪ್ಪಿಹೋಯ್ತು. ಹೀಗಾಗಿ ನಿರುಪಯುಕ್ತವೆನ್ನಿಸಿದ ಈ ಆನೆಯನ್ನೂ, ಅದಕ್ಕಿಂತ ಮುಖ್ಯವಾಗಿ ಅದರ ಮಾವುತನನ್ನೂ ಹೊರಹಾಕಿ ಕೈ ತೊಳೆದುಕೊಳ್ಳಲು ಮಠದವರು ಹವಣಿಸುತ್ತಿದ್ದರು. ಅದರ ಮಾವುತ ವೇಲಾಯುಧನನ್ನು ಸಾಕುವುದು ಆ ಆನೆಯನ್ನು ಸಾಕುವುದಕ್ಕಿಂತ ಹೆಚ್ಚು ತ್ರಾಸದಾಯಕವಾಗಿತ್ತು ಮಠದವರಿಗೆ. ಇಪ್ಪತ್ತನಾಲ್ಕು ಗಂಟೆಯೂ ಕುಡಿದೇ ಇರುತ್ತಿದ್ದ ಈ ಮಾವುತ ಮಠದ ಸಾತ್ವಿಕ ವಾತಾವರಣಕ್ಕೆ ದೊಡ್ಡ ತಲೆ ನೋವಾಗಿದ್ದ. ದುರ್ನಡತೆಗಾಗಿ ಅವನಿಗೆ ಛೀಮಾರಿ ಹಾಕಿ ಒಮ್ಮೆ ಓಡಿಸಿದಾಗ ಆನೆ ಅನೇಕ ದಿನಗಳವರೆಗೆ ಯಾರ ಮಾತನ್ನೂ ಕೇಳದೆ ಊಟವನ್ನೇ ವರ್ಜಿಸಿತ್ತು. ಕೊನೆಗೆ ಆನೆಯ ಸಲುವಾಗಿ ವೇಲಾಯುಧನನ್ನು ಹುಡುಕಿಕೊಂಡು ಕೇರಳದವರೆಗೂ ಹೋಗಿ ಕರೆತಂದರು. ಆನೆ ಇರುವವರೆಗೆ ತನ್ನ ಅನಿವಾರ್ಯತೆಯನ್ನು ಅರಿತ ಅವನು ಮಠಕ್ಕೆ ಇನ್ನಷ್ಟು ಕಿರುಕುಳ ಕೊಡಲಾರಂಭಿಸಿದ. ಇದೆಲ್ಲಾ ಬಹಳ ಹಿಂದಿನ ಕತೆ. ಆನೆ ಮೂಡಿಗೆರೆಗೆ ಬರುವುದಕ್ಕೂ ಬಹಳ ಹಿಂದೆ ನಡೆದದ್ದು.

ಚಾರ್ಮಡಿ ಹತ್ತಿರದ ದಟ್ಟ ಕಾಡನ್ನು ಸರ್ಕಾರ ವಿಮ್‌ಕೋ ಕಂಪನಿಗೆ ಬೆಂಕಿಕಡ್ಡಿ ಮರ ಕಡಿಯಲು ಗುತ್ತಿಗೆ ಕೊಟ್ಟಿತು. ಚಾರ್ಮಡಿ ಕಣಿವೆಯ ಪಾತಾಳದಲ್ಲಿದ್ದ ಮರಗಳನ್ನು ಲಾರಿ ದಾರಿಗೆ ಸಾಗಿಸಲು ಆನೆಯಲ್ಲದೆ ಮತ್ಯಾರಿಂದಲೂ ಸಾಧ್ಯವಿರಲಿಲ್ಲ. ಕೇರಳದಿಂದ ಆನೆ ಬಾಡಿಗೆಗೆ ತರಲು ಯೋಚಿಸುತ್ತಿದ್ದ ವಿಮ್‌ಕೋ ಕಂಪನಿಯವರ ಬಳಿ ಕೃಷ್ಣೇಗೌಡ ಅದನ್ನು ತನಗೇ ಕಂಟ್ರಾಕ್ಟ್ ಕೊಡಿ ಎಂದು ಕೇಳಿದ. ಕೃಷ್ಣೇಗೌಡ ದೂರದ ಗೂಳೂರು ಮಠದ ಈ ಹೆಣ್ಣಾನೆಯನ್ನು ಕೊಂಡು ಮೂಡಿಗೆರೆಗೆ ತಂದಿದ್ದು ಆಗಲೇ. ಆನೆಯೊಡನೆ ಆನೆಯ ಮಾವುತ ವೇಲಾಯುಧನೂ ಸಂಸಾರ ಸಮೇತವಾಗಿ ಮೂಡಿಗೆರೆಗೆ ಆಗಮಿಸಿದ. ಆ ಆನೆಗೆ ಭಾರಿ ಹಣಕೊಟ್ಟು ತಂದೆ ಎಂದು ಕೃಷ್ಣೇಗೌಡ ಬಡಾಯಿ ಕೊಚ್ಚುತ್ತಿದ್ದುದೇ ಹೊರತು ಆತ ಕೊಟ್ಟ ಹಣ ನಿಜಕ್ಕೂ ಆ ಆನೆಯ ಬಾಲಕ್ಕೂ ಸಾಲದು. ಮಠದವರು ಮೊದಲೇ ಈ ಆನೆಯನ್ನೂ ಆನೆಯ ಮಾವುತನನ್ನೂ ಯಾರಿಗಾದರೂ ದಾಟಿಸಬೇಕೆಂದು ನೋಡುತ್ತಿದ್ದುದರಿಂದ ಕೃಷ್ಣೇಗೌಡ ಆ ಆನೆಯನ್ನು ಕೇಳಿದ ಕೂಡಲೇ ವೇಲಾಯುಧ ಮಠದಲ್ಲಿ ಮಾಡಿದ್ದ ನಾಲ್ಕೈದು ಸಾವಿರ ಸಾಲ ಹಿಂದಿರುಗಿಸಿದರೆ ಸಾಕು ಎಂದು ಕೊಡಲು ಒಪ್ಪಿದರು.

ಎಲ್ಲಾ ತರಹದ ವ್ಯವಹಾರಗಳನ್ನೂ ಮಾಡಿ ಎಲ್ಲದರಲ್ಲೂ ನಷ್ಟ ಅನುಭವಿಸಿ ಸೋತು ಹೋಗಿದ್ದ ಕೃಷ್ಣೇಗೌಡ ಆನೆಯನ್ನು ತಂದಾಗ ಇಲ್ಲಿಗೆ ಇವನ ಕತೆ ಮುಗಿದಂತೆಯೇ ಎಂದು ಎಲ್ಲಾ ತೀರ್ಮಾನಿಸಿದರು. ಆನೆ ಸಾಕುವುದು ಎಂದರೆ ಎಲೆಕ್ಷನ್ನಿಗೆ ನಿಂತ ಹಾಗೆ! ಮನೆ ಮಠ ಸಂಪೂರ್ಣ ಹಾಳುಮಾಡಿಕೊಂಡು ಹೆಂಡತಿ ಮಕ್ಕಳ ಬಾಯಿಗೆ ಮಣ್ಣು ಹಾಕುವ ಕ್ಷಿಪ್ರ ಮಾರ್ಗ ಇದೆಂದು ಎಲ್ಲರೂ ದೃಢವಾಗಿ ನಂಬಿದ್ದರು. ಆದರೆ ಆಗಿದ್ದು ಇದರ ತದ್ವಿರುದ್ಧ! ಮಠದಲ್ಲಿ ಬರಿ ಒಣಹುಲ್ಲು ಮೊಸರನ್ನ ತಿಂದು ಸೊರಗಿದ್ದ ಈ ಆನೆಗೆ ಬಯನೆ ಸೊಪ್ಪು, ಹಸಿ ಹುಲ್ಲು, ಹಿಂಡಿ, ಬೆಲ್ಲ ಗೆಣಸು ಎಲ್ಲ ಕೊಟ್ಟು ಕೃಷ್ಣೇಗೌಡ ಪಗಡುದಸ್ತಾಗಿ ಬೆಳೆಸಿದ. ಆನೆ ಮರ ಎಳೆದು ತಂದ ಬಾಡಿಗೆಯಿಂದ ಕೃಷ್ಣೇಗೌಡನಿಗೆ ಒಳ್ಳೆಯ ಲಾಭ ಬಂತು. ಕೃಷ್ಣೇಗೌಡ ದುಡ್ಡಿನ ಮುಖ ನೋಡಿದ್ದೇ ಆನೆ ಬಂದಮೇಲಿಂದ.

ಆದರೆ ಪ್ರತಿ ಬೇಸಿಗೆಯಲ್ಲೂ ಈ ಆನೆಯದು ಏನಾದರೊಂದು ರಾದ್ಧಾಂತ ಗ್ಯಾರಂಟಿ. ಅದೇನು ಆನೆಯೇ ಏನಾದರೂ ಕಿತಾಪತಿ ಮಾಡುತ್ತಿತ್ತೋ ಅಥವಾ ಉರಿ ಬಿಸಿಲಿನ ಸೆಖೆಗೆ ಸೈರಣೆ ಕಳೆದುಕೊಳ್ಳುತ್ತಿದ್ದ ಜನಗಳ ಅಸಹನೆಯೇ ಇದಕ್ಕೆ ಕಾರಣವೋ ಹೇಳುವುದು ತುಂಬಾ ಕಷ್ಟ.

ಆನೆ ಒಮ್ಮೆ ರಹಮಾನ್ ಸಾಬಿಯ ಪೆಟ್ಟಿಗೆ ಅಂಗಡಿ ದೂಡಿ ಬೀಳಿಸಿತು ಎಂದು ಗಲಾಟೆಯಾಗುತ್ತಿತ್ತು. ಜನರ ಗುಂಪು ನೋಡಿ ಸ್ಕೂಟರ್ ನಿಲ್ಲಿಸಿ ನಾನು ಅವರ ಬಳಿಗೆ ಹೋದೆ. ಗುಂಪಿನ ಪಕ್ಕ ಆನೆ ನಿಂತಿತ್ತು. ಜನ ರಹಮಾನನ ಪುಕಾರುಗಳನ್ನು ಆಲಿಸುತ್ತಿದ್ದರು. ಬಾಳೆಹಣ್ಣು ಕೊಡಲಿಲ್ಲವೆಂದು ಪೆಟ್ಟಿಗೆ ಅಂಗಡಿಯನ್ನೇ ದೂಡಿ ಬೀಳಿಸಿದೆ. ಇದಕ್ಕೆಲ್ಲಾ ಕೃಷ್ಣೇಗೌಡರು ನಷ್ಟ ಕಟ್ಟಿಕೊಡಬೇಕು ಎಂದು ದೊಡ್ಡ ಗಂಟಲಿನಲ್ಲಿ ಕೂಗುತ್ತ, ಒಡೆದ ಸೋಡ ಬಾಟಲಿಗಳನ್ನೂ ಚೆಲ್ಲಾಪಿಲ್ಲಿಯಾಗಿ ಬಿದಿದ್ದ ಬೀಡಿ ಬೆಂಕಿಪೊಟ್ಟಣ ಪೆಪ್ಪರಮೆಂಟುಗಳನ್ನೂ ನೆರೆದವರಿಗೆ ಅವನು ತೋರಿಸುತ್ತಿದ್ದ. ಕೆಲವರು ಆನೆಯನ್ನು ದೂಷಿಸುವುದು ತಪ್ಪೆಂದೂ, ಕುಡುಕ ವೇಲಾಯುಧನ ಅವಜ್ಞೆಯೇ ಇದಕ್ಕೆ ಕಾರಣವೆಂದೂ ಬಯ್ಯುತ್ತ ಅವನನ್ನು ಗುಂಪಿನೊಳಗೆ ಹುಡುಕಾಡುತ್ತಿದ್ದರು. ಕೊಂಚಹೊತ್ತು ಮಾತುಕತೆಯಾಗುವುದರೊಳಗೆ ವೇಲಾಯುಧ ಬಂದ. ಅಪರಾಧಿ ಮೋರೆ ಹಾಕಿಕೊಂಡು ನಿಂತಿದ್ದ ಆನೆಗೆ ಏನೇನೋ ಮಲಯಾಳಿ ಭಾಷೆಯಲ್ಲಿ ಬಯ್ದ. ಆನೆ ಏನೂ ಪ್ರತಿಕ್ರಿಯೆ ತೋರದೆ ಕಿವಿ ಬೀಸುತ್ತ ಸೊಂಡಿಲಾಡಿಸುತ್ತ ಅತ್ತಿತ್ತ ನೋಡಿತು. ವೇಲಾಯುಧ ರಹಮಾನ್ ಕಡೆ ತಿರುಗಿ "ಆನೆ ಬಾಳೆಹಣ್ಣಿಗಾಗಿ ನಿನ್ನ ಅಂಗಡಿ ಬೀಳಿಸಿತು ಎನ್ನುವುದು ಸುಳ್ಳು, ಇಲ್ಲೆಲ್ಲಾ ಬಾಳೆಹಣ್ಣು ಚೆಲ್ಲಾಪಿಲ್ಲಿಯಾಗಿ ಬಿದ್ದಿದೆಯಲ್ಲ, ಒಂದನ್ನಾದರೂ ಆನೆ ಮುಟ್ಟಿದೆಯಾ ನೋಡು. ಅಷ್ಟಕೂ ದಿನಾ ಬಾಳೆಹಣ್ಣು ಕೊಟ್ಟು ಅದಕ್ಕೆ ಅಭ್ಯಾಸ ಮಾಡಿಸಿದ್ದು ಯಾರು? ನಾನೋ ನೀನೋ?" ಎಂದು ಕೂಗಿದ. ಅಲ್ಲಿದ್ದವರೆಲ್ಲಾ ಕೊಂಚ ಆನೆ ಪರವಾಗಿ ಸಹಾನುಭೂತಿ ಇದ್ದವರೇ ಎಂಬಂತೆ ಕಾಣುತ್ತಿತ್ತು. ವೇಲಾಯುಧ ಬಂದ ನಂತರವೂ ಜಗಳ ಬಗೆಹರಿಯುವಂತೆ ಕಾಣಲಿಲ್ಲ.

ರಹಮಾನ್ "ಬೇಕಾದರೆ ಇವಳನ್ನೇ ಕೇಳಿ. ಆನೆಗೆ ನಾನೇನು ಮಾಡಿದೆ ಅಂತ" ಎಂದು ಅಲ್ಲೇ ನಿಂತಿದ್ದ ಜುಬೇದಳ ಕಡೆ ಕೈ ತೋರಿಸಿದ. ಜುಬೇದ ನನ್ನ ತೋಟಕ್ಕೆ ಆಗಾಗ್ಗೆ ಕೆಲಸಕ್ಕೆ ಬರುತಿದ್ದಳು. ಅವಳನ್ನು "ಐ ವಿಟ್‌ನೆಸ್" ಎಂದು ಹೇಳಿದ್ದರಿಂದ ನಾನು "ಏನು ನಡೆಯಿತು ಹೇಳಮ್ಮ" ಎಂದು ಕೇಳಿದೆ.

ದುರದೃಷ್ಟವಶಾತ್ ಅವಳು ರಹಮಾನ್ ನಿರೀಕ್ಷಣೆಗೆ ವ್ಯತಿರಿಕ್ತವಾಗಿ "ರಹಮಾನ್ ಎರಡು ಮಾತು ಅನ್ನಬಾರದ್ದನ್ನು ಅಂದುಬಿಟ್ಟ" ಎಂದು ಹೇಳಿದಳು.

"ಏನಂದ ಅವನು?" ಎಂದು ನಾನೆಷ್ಟು ಕೇಳಿದರೂ "ಅನ್ನಬಾರದ್ದನ್ನು ಈಗ ನಾನ್ಯಾಕೆ ಅನ್ನಲಿ" ಎಂದು ಹೇಳಲೇ ಇಲ್ಲ. ಆನೆಗೆ ಮರ್ಮಕ್ಕೆ ತಾಗುವಂಥ ಬೈಗುಳ ಅದೇನಿರಬಹುದೆಂದು ಕುತೂಹಲದಿಂದ ನಾನು ರಹಮಾನ್‌ನನ್ನೂ ಅದೇನನ್ನು ಅಂದೆ ಹೇಳೆಂದು ಕೇಳಿದೆ. ರಹಮಾನ್ ತಾನೇನನ್ನೂ ಅಂದಿಲ್ಲವೆಂದು ಪ್ರತಿಭಟಿಸಿ ಜುಬೇದಳ ಮೇಲೆ ಜಗಳಕ್ಕೆ ಹೋದ. ಜನರೆಲ್ಲಾ "ಆನೆಗೂ ಮಾನ ಮರ್ಯಾದೆ ಇರುತ್ತೆ ತಿಳುಕೋ" ಎಂದು ರಹಮಾನ್‌ಗೆ ಉಗಿದು ಆನೆಗೆ ಒಂದು ವ್ಯಕ್ತಿತ್ವವನ್ನು ಆರೋಪಿಸಿದರು.

ಎರಡನೆಯ ಬೇಸಿಗೆಯಲ್ಲಿ ರಾದ್ಧಾಂತ ಆಗಿದ್ದು ನಮ್ಮ ತೋಟಕ್ಕೆ ಎಲ್ಲಿಂದಲೋ ನಾಲ್ಕು ಕಾಡಾನೆಗಳು ಬಂದಾಗ. ನನಗೆ ಕಾಡಾನೆಗಳು ಆಗಮಿಸಿದ್ದು ಮೊದಲಿಗೆ ಗೊತ್ತಾಗಲೇ ಇಲ್ಲ. ಏಕೆಂದರೆ ಆವರೆಗೂ ನಾನು ಕಾಡಾನೆಗಳ ಹಾವಳಿ ಯಾವ ತರ ಇರುತ್ತದೆಂದು ಕಂಡವನೇ ಅಲ್ಲ.

ಮನೆ ನಲ್ಲಿಗೆ ಹಾಕಿದ್ದ ಪೈಪಿನಲ್ಲಿ ನೀರು ಬರುವುದು ನಿಂತುಹೋಯ್ತು. ಮನೆಯ ಪಕ್ಕದ ಗುಡ್ಡದ ಮೇಲಿನ ಒರತೆಗೆ ನೇರ ಪೈಪು ಹಾಕಿ ನೀರು ಬರುವಂತೆ ಮಾಡಿಕೊಂಡಿದ್ದೆ. ಪೈಪಿನೊಳಗೆ ಆಗೀಗ ಕಪ್ಪೆಗಳೋ ನೀರಹಾವುಗಳೋ ನುಗ್ಗಿ ಸಿಕ್ಕಿಕೊಂಡು ನೀರು ಬರಲು ಅಡಚಣೆ ಒಡ್ಡುತ್ತಿದ್ದವು. ಹಾಗೇ ಆಗಿರಬಹುದೆಂದು ತಿಳಿದು ಪೈಪಿನ ಉದ್ದಕ್ಕೂ ನೋಡುತ್ತಾ ಹೋದೆ. ಕೊಂಚ ದೂರದೊಳಗೆ ಪೈಪು ಇಡಲು ಮಾಡಿದ್ದ ದಾರಿ ಎಲ್ಲಾ ಗುಂಡಿ ಬಿದ್ದು ಪೈಪುಗಳು ಪುಡಿಪುಡಿಯಾಗಿ ಗುಂಡಿಯ ಒಳಗೆ ಹುಗಿದುಹೋಗಿದ್ದು ಕಾಣಿಸಿತು. ಗುಂಡಿಗಳೊಳಗೆಲ್ಲಾ ನೀರು ತುಂಬಿಕೊಂಡಿತ್ತು. ತೇವದ ನೆಲದಲ್ಲಿ ಆನೆಗಳು ಹೆಜ್ಜೆ ಇಟ್ಟರೆ ಸಣ್ಣ ಸಣ್ಣ ಬಾವಿಗಳೇ ನಿರ್ಮಾಣವಾಗುತ್ತವೆಂದಾಗಲಿ, ಪೈಪುಗಳು ಪುಡಿಪುಡಿಯಾಗಿ ಪಾತಾಳದವರೆಗೆ ಹುಗಿದು ಹೋಗುತ್ತವೆಂದಾಗಲೀ ನನಗೆ ಅಂದಾಜೇ ಆಗಲಿಲ್ಲ. ಎಲ್ಲರೂ ಆನೆಕಾಟ ಎಂದು ಕೂಗಾಡುವವರೆಗೂ ನನ್ನ ಪೈಪಿಗೆ ಯಾರು ಈ ರೀತಿ ಜಖಂ ಮಾಡಿದ್ದು ಎಂದೇ ಯೋಚಿಸುತ್ತಿದ್ದೆ.

ಈ ಆನೆಗಳಿಂದ ಜನಕ್ಕೆ ಏನು ತೊಂದರೆಯಾಯ್ತೋ ನನಗೆ ಸರಿಯಾಗಿ ಗೊತ್ತಿಲ್ಲ. ನನಗಂತೂ ಬೇಲಿ ಹಲವೆಡೆ ಹಾಳಾಗಿದ್ದು, ಪೈಪು ತುಂಡಾಗಿದ್ದು ಬಿಟ್ಟರೆ ಹೆಚ್ಚಿನ ಹಾನಿ ಏನೂ ಆಗಲಿಲ್ಲ. ಆದರೂ ಆಗೀಗ ಹಳೆಕೊಪ್ಪದ ಬಳಿ ಯಾರೋ ಸೈಕಲ್ಲಿನವನನ್ನು ಓಡಿಸಿದುವಂತೆ, ಬಿದಿರಳ್ಳಿ ಬಳಿ ಕಾಫಿ ತೋಟದೊಳಗೆ ನುಗ್ಗಿ ಕೆಲಸ ಮಾಡುತ್ತಿದ್ದವರಿಗೆ ಹೆದರಿಸಿ ತೊಂದರೆ ಮಾಡಿದುವಂತೆ ಎಂದು ವರ್ತಮಾನ ಬರುತ್ತಿತ್ತು. ಮೂಡಿಗೆರೆಗೆ ನನ್ನ ಇಕಾಲಜಿಸ್ಟ್ ಗೆಳೆಯ ಪ್ರಕಾಶ್ ಬರುವವರೆಗೂ ಕಾಡಾನೆಗಳ ಕಾಟದ ಬಗ್ಗೆ ಗೊಣಗಾಡುವ ಹಂತದಲ್ಲೇ ಜನರ ಪ್ರತಿಕ್ರಿಯೆ ಇತ್ತು.

ಪ್ರಕಾಶ ಬಂದಿದ್ದು ಅಪ್ಪರ್ ಭದ್ರಾ ಅಣೆಕಟ್ಟಿನಿಂದ ಮುಳುಗಡೆಯಾಗುವ ಕಾಡುಗಳನ್ನು ಸರ್ವೇ ಮಾಡಲು. ಅವನು ಮೂಡಿಗೆರೆಯಲ್ಲಿ ಒಂದು ಭಾಷಣ ಮಾಡುತ್ತ ಕಾಡಾನೆಗಳು ಊರಿನಕಡೆ ಬಂದು ಜನರ ಪೈರು ಫಸಲಿಗೆ ಹಾನಿ ಮಾಡಲು ಕಾರಣ ಅರಣ್ಯ ಇಲಾಖೆಯವರು ಕಾಡಿನ ಮರಗಳನ್ನು ತೆಗೆದು ನೀಲಗಿರಿ ಅಕೇಶಿಯಾ ಮುಂತಾದ ಆನೆಗಳಿಗೆ ನಿರುಪಯುಕ್ತವಾದವನ್ನು ನೆಡುತ್ತಿರುವುದು ಎಂದು ಹೇಳಿದ. ಪ್ರಕಾಶ ಭಾಷಣದ ಮಧ್ಯೆ ಕ್ವಚಿತ್ತಾಗಿ ಪ್ರಸ್ತಾಪಿಸಿದ ಈ ವಿಷಯ ದೊಡ್ಡ ತರಲೆಗೆ ಕಾರಣವಾಯ್ತು. ಗಂಧಸಾಗಣೆ ಪ್ರತಿಬಂಧಿಸುತ್ತಾ, ಮರ ಸಾಗಿಸಲು ಪರ್ಮಿಟ್ಟಿಗೆ ಸತಾಯಿಸುತ್ತಾ, ಶಿಕಾರಿಗೆ ಅಡ್ಡಿ ಮಾಡುತ್ತ, ಹಲವು ಹದಿನೆಂಟು ರೀತಿಗಳಿಂದ ಜನಗಳ ಸಿಟ್ಟಿಗೆ ಕಾರಣವಾಗಿದ್ದ ಅರಣ್ಯ ಇಲಾಖೆಯವರ ಮೇಲೆ ಎಲ್ಲ ಸಿಟ್ಟಿಗೆದ್ದರು. ರೈತ ಸಂಘದ ಚಳವಳಿಯೊಳಗೆ ಈ ಖದೀಮರೆಲ್ಲ ಸೇರಿಕೊಂಡು ಅರಣ್ಯ ಇಲಾಖೆಯವರ ನೀಲಗಿರಿ ನರ್ಸರಿಗಳನ್ನೆಲ್ಲಾ ಹಾಳುಮಾಡಿ ಕಛೇರಿ

ಮುಂದೆ ಕರಿಬಾವುಟ ಹಿಡಿದು ಧರಣಿ ಕುಳಿತರು. ಅರಣ್ಯ ಇಲಾಖೆಯ ಫಾರೆಸ್ಟರ್ ನಾಗರಾಜ ಕೃಷ್ಣೇಗೌಡನ ಹೆಣ್ಣಾನೆ ದೆಸೆಯಿಂದಲೇ ಕಾಡಾನೆಗಳು ಊರಿಗೆ ಬರುತ್ತಿವೆ ಎಂದು ವಿನಾಕಾರಣ ಕೃಷ್ಣೇಗೌಡನ ಆನೆಯ ಮೇಲೆ ದೂರು ಹಾಕಿದ. ಆದರೆ ಜನ ನಾಗರಾಜನ ವಾದಕ್ಕೆ ಸೊಪ್ಪು ಹಾಕದೆ ಅರಣ್ಯ ಇಲಾಖೆ ವಿರುದ್ಧ ಗಲಾಟೆ ಮುಂದುವರಿಸಿದ್ದರು.

ಭದ್ರಾ ಅರಣ್ಯದಲ್ಲಿ ಪ್ರಕಾಶನ ಜೊತೆ ನಾನು ತಿರುಗುತ್ತಿರಬೇಕಾದರೆ ಮೂಡಿಗೆರೆ ಕಾಡಪ್ಪಶೆಟ್ಟರು ಹೊಸದೊಂದು ವರ್ತಮಾನ ನಮಗೆ ಮುಟ್ಟಿಸಿದರು. ಅವರು ವೇಲಾಯುಧನೊಡನೆ ಜೀಪಿನಲ್ಲಿ ಕಾಡೊಳಗಿನ ದಾರಿಯಲ್ಲಿ ನಮಗೆ ಸಿಕ್ಕು "ಕೃಷ್ಣೇಗೌಡನ ಆನೆಯ ಮೇಲೆ ಅಯ್ಯಪ್ಪಸ್ವಾಮಿ ಫೋಟೋ ಇಟ್ಟು ಮೆರವಣಿಗೆ ಮಾಡುತ್ತಿದ್ದಾಗ ಅದಕ್ಕೆ ಇದ್ದಕ್ಕಿದ್ದಂತೆ ತಲೆಕೆಟ್ಟು ಅಂಬಾರಿ ಸಮೇತ ಕಾಡಿಗೆ ಓಡಿಹೋಯ್ತು" ಎಂದು ಹೇಳಿದರು.

ಮೆರವಣಿಗೆ ಮಾಡುತ್ತಿರಬೇಕಾದರೆ ಅದರ ಬೆನ್ನ ಮೇಲಿನ ಅಂಬಾರಿ ದಾರಿ ನಡುವೆ ಜೋಲು ಬಿದ್ದಿದ್ದ ಎಲೆಕ್ಟ್ರಿಕ್ ಲೈನಿಗೆ ತಾಗಿ ಫಟಾರ್ ಎಂದು ಪಟಾಕಿ ಹೊಡೆದಂತೆ ಶಬ್ದವಾಯ್ತಂತೆ. ಗಾಬರಿಯಾದ ಆನೆ ವೇಲಾಯುಧನ ಮಾತನ್ನೂ ಕೇಳದೆ ರಸ್ತೆ ಬಿಟ್ಟು ಗದ್ದೆಗಿಳಿದು ಕಾಡು ಬಿದ್ದು ಓಡಿಹೋಯ್ತಂತೆ. ಏಳೆಂಟು ಸಾವಿರ ರೂಪಾಯಿ ಹಿತ್ತಾಳೆ ಆಭರಣಗಳಿಂದ ಅದಕ್ಕೆ ಸಿಂಗಾರ ಮಾಡಿದ್ದರು. ಅವನ್ನೆಲ್ಲಾ ಕಾಡಪ್ಪಶೆಟ್ಟರು ಎಲ್ಲಿಂದಲೋ ಎರವಲು ತಂದುಕೊಟ್ಟಿದ್ದರಿಂದ ಕೊನೇ ಪಕ್ಷ ಅವನ್ನಾದರೂ ದೊರಕಿಸಿಕೊಳ್ಳಲು ಕಾಡಿನಲ್ಲಿ ಆನೆಗೆ ಹುಡುಕಾಡುತ್ತಿದ್ದರು. "ಕೃಷ್ಣೇಗೌಡರ ಆನೆ ಇಂಥ ಪುಂಡು ಆನೆ ಎಂದು ಗೊತ್ತಿರಲಿಲ್ಲ. ಗೂಳೂರು ಮಠದ ಜಗದ್ಗುರುಗಳು ಯಾವ ಧೈರ್ಯದ ಮೇಲೆ ಇದರ ಮೇಲೆ ಕುಳಿತುಕೊಳ್ಳುತ್ತಿದ್ದರೋ" ಎಂದು ಕಾಡಿನಲ್ಲಿ ಆನೆಗೆ ಬಾಯಿ ತುಂಬಾ ಬೈದರು. ಆನೆ ಓಡಿಬಂದು ಕಾಡಿನ ಆನೆಗಳ ಜೊತೆ ಸೇರಿಕೊಂಡಿರಬಹುದೆಂದು ಊಹಿಸಿ ಕಾಡಿನಲ್ಲಿ ಅದನ್ನು ಹುಡುಕಿ ವೇಲಾಯುಧನೊಡನೆ ತಿರುಗುತ್ತಿದ್ದರು. ಮೈ ತುಂಬಾ ಸಿಂಗಾರ ಮಾಡಿಕೊಂಡು ಬೆನ್ನ ಮೇಲೆ ಅಂಬಾರಿ ಹೊತ್ತುಕೊಂಡಿದ್ದ ಈ ಆನೆಯನ್ನು ಕಾಡಾನೆಗಳು ತಮ್ಮ ಗುಂಪಿಗೆ ಸೇರಿಕೊಳ್ಳುತ್ತವೆಯೇ ಎಂದು ನನಗೆ ಅನುಮಾನ ಆಯ್ತು.

ಅದು ಕಾಡಿಗೆ ಓಡಿಹೋಗಿದ್ದನ್ನು ಮುಂದು ಮಾಡಿ ಅದು ಬೆದೆಗೆ ಬಂದ ಹೆಣ್ಣಾನೆಯಾದ್ದರಿಂದಲೇ ಕಾಡಿನ ಆನೆಗಳು ಊರಿಗೆ ಬಂದು ತೊಂದರೆ ಕೊಡುತ್ತಿದ್ದಾವೆಂದು ನಾಗರಾಜ ಹೇಳಿದ. ಚಳವಳಿಗಾರರು ಆನೆಗೆ ಕರೆಂಟ್ ಶಾಕ್ ಹೊಡೆದುದರಿಂದಲೇ ಅದು ಓಡಿದೆ ಎಂದು ಹೇಳಿ ಅಷ್ಟೊಂದು ಕೆಳಗೆ ತಂತಿ ಎಳೆದಿದ್ದ ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟಿನವರನ್ನು ಬಯ್ದರು.

ಒಟ್ಟಿನಲ್ಲಿ ಕಾಡಾನೆಗಳ ಆಗಮನದೊಂದಿಗೆ ಪ್ರಾರಂಭವಾದ ರಾದ್ಧಾಂತಗಳೆಲ್ಲ ಕೃಷ್ಣೇಗೌಡನ ಆನೆ ನಿರ್ಗಮಿಸುವುದರೊಂದಿಗೆ ನಿಂತುಹೋದವು. ಮಳೆಗಾಲ ಶುರುವಾಗಿ ಜನಗಳ ಕೋಪ ತಣ್ಣಗಾಯ್ತು. ಅವರು ಗಲಾಟೆ ನಿಲ್ಲಿಸಿ ವ್ಯವಸಾಯದ ಕೆಲಸಕ್ಕೆ ಹೋದರು. ಆನೆ ಇಲ್ಲದ್ದರಿಂದ ಕೆಲಸವಿಲ್ಲದ ವೇಲಾಯುಧ ಶಿವೇಗೌಡರ ಸಾಮಿಲ್ಲಿನಲ್ಲಿ ಕೆಲಸಕ್ಕೆ ಸೇರಿದ.

ಜುಲೈನ ಜಡಿ ಮಳೆಯಲ್ಲಿ ಒಂದು ದಿನ ಕೃಷ್ಣೇಗೌಡರ ಆನೆ ಹೋದಹಾಗೇ ಮತ್ತೆ ಪ್ರತ್ಯಕ್ಷವಾಯ್ತು. ಬೆಳಗ್ಗೆ ಎದ್ದು ನೋಡಿದಾಗ ಖಾಲಿ ಇದ್ದ ಲಾಯದಲ್ಲಿ ಕೃಷ್ಣೇಗೌಡರ ಆನೆ ಏನೂ ಆಗಿಲ್ಲ ಎನ್ನುವಂತೆ ಸೊಂಡಿಲಾಡಿಸುತ್ತ ನಿಂತಿತ್ತು. ಮೊದಲಲ್ಲಿ ಯಾರಿಗೂ ಹತ್ತಿರ ಹೋಗಲು ಭಯವಾಗಿತ್ತು. ಕಾಡಿಗೆ ಹೋಗಿ ಬಂದಿದ್ದ ಅದರ

ವ್ಯಕ್ತಿತ್ವದಲ್ಲಿ ಏನು ಪರಿವರ್ತನೆಯಾಗಿದೆಯೋ ಎಂದು. ಅದು ಎಂದಿನಂತೆ ಅಂಗಡಿಗಳ ಬಳಿಗೆಲ್ಲಾ ಹೋಗಿ ಬಾಳೆಹಣ್ಣು ಬೇಡತೊಡಗಿದ ಮೇಲೆ ಜನರಿಗೆ ಸಮಾಧಾನ. ಆದರೂ ತನ್ನದೇ ಆದ ವೈಯಕ್ತಿಕ ಆಸೆ ಆಕಾಂಕ್ಷೆಗಳಿರುವ ಪ್ರಾಣಿ ಎಂದು ಜನ ಮೊದಲಿನಷ್ಟು ಸಲಿಗೆ ವಹಿಸುತ್ತಿರಲಿಲ್ಲ.

## ಅಧ್ಯಾಯ – ೩

ದುರ್ಗಪ್ಪ ನನ್ನ ಬಳಿ ಕೊಡಲಿ ತಗೊಂಡು ಹೋಗಿ ಮೂರು ದಿನ ಕಳೆದಮೇಲೆ ನಾನು ಪೋಸ್ಟಾಫೀಸಿನ ಬಳಿ ಹೋಗುತ್ತಿರಬೇಕಾದರೆ ಲೈನ್‌ಮನ್ ನಾರಾಯಣನ ಜೊತೆ ಮೈ ಕೈ ಕೆರೆದುಕೊಳ್ಳುತ್ತಾ ನಿಂತಿದ್ದ.

"ಏನಯ್ಯಾ ದುರ್ಗಪ್ಪ, ಕೊಡಲಿ ಹೊತ್ಕೊಂಡು ಎತ್ಲಾಗೆ ಹೋದೆಯೋ? ಪತ್ತೇನೆ ಇಲ್ವಲ್ಲಾ?" ಎಂದು ಕೇಳಿದೆ.

"ಅದ್ಕೆ ಸ್ವಾಮಿ ಇಲ್ಲಿ ನಿಂತಿರೋದು" ಎಂದ

"ಇಲ್ಲಿ! ಇಲ್ಯಾಕೆ ನಿಂತಿದಿಯೋ?"

"ಕೊಂಬೆ ಸವರಿ ಲೈನ್ ಕ್ಲಿಯರ್ ಮಾಡ್ತಿರಬೇಕಾದರೆ ಫಾರೆಸ್ಟಿನವರು ಬಂದು ಡಿಪಾರ್ಟ್‌ಮೆಂಟಿನ ಮರ ಯಾಕೆ ಕಡೀತೀಯಾ ಅಂತ ಕೊಡ್ಲಿ ಕಿತ್ಕೊಂಡುಬಿಟ್ಟಿದಾರೆ ಸಾರ್. ಕೇಳಿದರೆ ಕೋರ್ಟಿನಲ್ಲಿ ಕೇಸಾಕ್ತೀವಿ. ಕೋರ್ಟಿನಾಗೇ ಇಸ್ಕೋ ಅಂತಾರೆ."

"ಅರೆ! ಕೊಡ್ಲಿ ನಂದಲ್ಲವೇನಯ್ಯ?"

"ಹಂಗಂತ ಹೇಳಿದರೆ ಕೇಳ್ಬೇಕಲ್ಲ ಸಾರ್. ನನ್ನ ಡ್ಯೂಟಿ ನಾನು ಮಾಡ್ತಿದ್ದೀನಿ ಅಂದ್ರೂ ಕೇಳದೆ ಜೂರತ್ ಮಾಡಿ ಕೊಡಲಿ ಕಿತ್ಕೊಂಡುಬಂದು ಆಫೀಸಿನಲ್ಲಿ ಮಡಗವ್ರೆ"

ನನ್ನ ಕೊಡಲಿ ಮೇಲೆ ನನಗೆ ಯಾವ ವ್ಯಾಮೋಹವೂ ಇರಲಿಲ್ಲ. ಆದರೂ ನ್ಯಾಯ ಮುಖ್ಯ ಅಲ್ಲವೇ! ಇಂಥ ತರಲೆ ಕೇಸುಗಳ ಜಾಡು ಹಿಡಿದು ವಿಷಯ ತಿಳಿದುಕೊಳ್ಳುವ ಕೆಟ್ಟ ಕುತೂಹಲ ಬೇರೆ. ನನ್ನ ಎಷ್ಟೋ ಕತೆಗಳ ಮೂಲ ಇಂಥ ಕ್ಷುದ್ರ ಗೋಜಲುಗಳಲ್ಲೇ ಹುದುಗಿರುತ್ತದೆ.

"ಅದು ಹೇಗೆ ನನ್ನ ಕೊಡಲಿ ಕಿತ್ಕೊಂಡಿದಾರಂತೆ. ಒಂದ್ಮಾತು ಕೇಳ್ತೀನಿ ಬಾ" ಎಂದು ದುರ್ಗಪ್ಪನನ್ನೂ ಕರೆದುಕೊಂಡು ನಾಗರಾಜನ ಆಫೀಸಿನ ಕಡೆಗೆ ನಡೆದೆ.

ಒಳಗೆ ಫಾರೆಸ್ಟರ್ ನಾಗರಾಜ ಪೋಲೀಸು ಇನ್‌ಸ್ಪೆಕ್ಟರ್ ಥರದ ಡ್ರಸ್ಸು ಹಾಕಿಕೊಂಡು ಫೈಲುಗಳ ರಾಶಿಯ ಪಕ್ಕ ಕುಳಿತಿದ್ದ. ಯೂನಿಫಾರಂ ಹಾಕಿಕೊಂಡ ಕೂಡಲೇ ಮನುಷ್ಯರ ವ್ಯಕ್ತಿತ್ವದಲ್ಲಿ ಏನೋ ಬದಲಾವಣೆ ಆಗುತ್ತದೆಂದು ತೋರುತ್ತದೆ. ವಿಚಿತ್ರ ಗತ್ತಿನಲ್ಲಿ ನನ್ನ ಕಡೆಗೆ ನೋಡಿದ.

"ಅಲ್ರೀ ನಾಗರಾಜ್ ನಿಮ್ಮ ಡಿಪಾರ್ಟ್‌ಮೆಂಟಿನ ಮರ ಕಡಿದರೆ ನೀವು ಅವನ ಮೇಲೆ ಕ್ರಮ ತಗೊಳ್ಳಿ. ಆದರೆ ನನ್ನ ಕೊಡಲಿ ಯಾಕೆ ತಂದು ಆಫೀಸಿನಲ್ಲಿ ಇಟ್ಕೊಂಡಿದ್ದೀರ?" ಎಂದು ಕೇಳಿದೆ.

"ಕೂತ್ಕೊಳ್ಳಿ" ಎಂದು ತನ್ನ ಎದುರಿನ ಕುರ್ಚಿ ತೋರಿಸುತ್ತ ನಾಗರಾಜ ತನ್ನ ತುತ್ತೂರಿ ಊದಲು ಪೀಪಿ ಸರಿಮಾಡಿಕೊಂಡ.

"ವೆಪನ್ ಸಾರ್. ವೆಪನ್ ನಮಗೆ ಮುಖ್ಯ. ಯಾವುದೇ ಅಪರಾಧ ಮಾಡಿದರೂ ಅದಕ್ಕೆ ಸಂಬಂಧಿಸಿದ ಆಯುಧ ನಮಗೆ ತುಂಬಾ ಮುಖ್ಯ. ಕೋರ್ಟಿನ ವ್ಯವಹಾರ ನಿಮಗೆ ಗೊತ್ತಿಲ್ಲಾಂತ ಕಾಣ್ತದೆ. ನಾಳೆ ಕೋರ್ಟಿನಲ್ಲಿ ಕೇಳ್ತಾರೆ ಅವನು ಯಾವುದರಿಂದ ಮರ ಕಡಿದ ಅಂತ. ಕತ್ತೀಲಿ ಕಡಿದನೋ, ಕೊಡಲೀಲಿ ಕಡಿದನೋ, ಗರಗಸದಲ್ಲಿ ಕುಯ್ದನೋ? ಅಂತ. ಆವಾಗ ನಾವು ವೆಪನ್ ಹಾಜರು ಪಡಿಸಬೇಕೋ ಬೇಡವೋ ಹೇಳಿ. ನೀವು ಯಾಕೆ ಇಂಥ ಕಾನೂನುಬಾಹಿರ ಕೆಲಸಕ್ಕೆ ಕೊಡಲಿ ಕೊಟ್ರಿ? ಒಂದು ರೀತಿಯಲ್ಲಿ ನಿಮ್ಮದೂ ತಪ್ಪಲ್ಲವೆ?"

"ಅಲ್ರೀ ಲೈನ್ ಮೇಲೆ ಬಿದ್ದ ಮರ ತೆಗೆದು ಹಾಕೋದು ಕಾನೂನುಬಾಹಿರ ಕೆಲಸ ಅಂತ ನಿಮ್ಮ ಬಾಯಲ್ಲೇ ನಾನು ಕೇಳ್ತಿರೋದು. ನಿಮ್ಮ ಡಿಪಾರ್ಟ್‌ಮೆಂಟಿನ ಮರ ಅವನ ಡಿಪಾರ್ಟ್‌ಮೆಂಟಿನ ಕಂಬದ ಮೇಲೆ ಬಿದ್ದರೆ ಅವನು ಅದನ್ನು ತೆಗೆದುಹಾಕ ಬೇಕೋ ಬೇಡವೋ ಹೇಳಿ?"

"ನೋಡಿ ಸಾರ್, ಬೆಳ್ಳಗಿರೋದೆಲ್ಲ ಹಾಲೂಂತ ನಂಬೋರು ನೀವು. ಇದೆಲ್ಲಾ ನೀವು ಹೇಳ್ತಿರೋ ಅಷ್ಟು ಸಿಂಪಲ್ಲಾಗಿಲ್ಲಾ ಸಾರ್. ನೀವಾಗೆ ಕೇಳ್ತಿರೋದ್ರಿಂದ ವಿಧಿ ಇಲ್ಲದೆ ಹೇಳ್ತಿದೇನೆ. ಪಿಡಬ್ಲ್ಯುಡಿನವರು, ಕರೆಂಟಿನವರು, ಟೆಲಿಫೋನಿನವರು, ಈ ಮೂರು ಡಿಪಾರ್ಟ್‌ಮೆಂಟುಗಳು ನಮಗೆ ಎನಿಮಿ ನಂಬರ್ ಒನ್. ಇವರಿಗೆ ಬುದ್ಧಿ ಕಲಿಸೋದಕ್ಕೆ ನಮಗೆ ಗೊತ್ತಿದೆ. ರಸ್ತೆಗೆ ಟಾರು ಹಾಕಲು ನಮ್ಮ ರಸ್ತೆ ಮರಾನೆಲ್ಲ ಕಡಿದು ಟಾರು ಕಾಯಿಸ್ಕೋತಾರೆ ಪಿಡಬ್ಲ್ಯುಡಿನವರು. ಈ ಕರೆಂಟಿನವರು ಟೆಲಿಫೋನಿನವರು ಅವರ ಲೈನು ಎಳೆಯೋದಕ್ಕೆ ಫಾರೆಸ್ಟು ಕ್ಲಿಯರ್ ಮಾಡ್ತೀವಿ ಅಂತ ಎಲ್ಲೆಂದರಲ್ಲಿ ಸಾವಿರಾರು ಎಕರೆ ಕಾಡು ಕಡಿದು ಹಾಳುಮಾಡಿದ್ದಾರೆ. ಈಗ ಹಳ್ಳಿಹಳ್ಳಿಗೆ ಕರೆಂಟು, ಟೆಲಿಫೋನ್ ಕೊಡಬೇಕಂತ ಸರ್ಕಾರ ಪಾಲಿಸಿಮಾಡಿ ಇವರ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಿದೇ ಸಾರ್! ಲೈನು ಕ್ಲಿಯರ್ ಮಾಡೋ ನೆವದಲ್ಲಿ ಇವರು ಯಾರೂ ಮನೆಗೆ ಸೌದೆ ಕೊಳ್ತಾನೆ ಇಲ್ಲಾ. ನೀವು ಹೇಳಿದ ಹಾಗೆ ಇವರೂ ಸರ್ಕಾರದ ಡಿಪಾರ್ಟ್‌ಮೆಂಟೇ, ನಾವೂ ಡಿಪಾರ್ಟ್‌ಮೆಂಟೇ. ಆದರೆ ಇವರನ್ನು ಹೀಗೇ ಬಾಲಬಿಚ್ಚೋದಕ್ಕೆ ಬಿಟ್ರೆ ಫಾರೆಸ್ಟು ಡಿಪಾರ್ಟುಮೆಂಟು ಬಾಗಿಲು ಮುಚ್ಚಬೇಕಾಗುತ್ತೆ. ಇವರಿಗೆ ಬುದ್ಧಿ ಕಲಿಸಬೇಕೋ ಬೇಡವೋ ನೀವೇ ಹೇಳಿ."

ನನಗೆ ನಾಗರಾಜ ಕೊಂಚ ಪರಿಚಯ ಇದ್ದ ಮನುಷ್ಯ. ನನ್ನ ಬೆನ್ನ ಹಿಂದೆ ನಿಂತಿರುವ ದುರ್ಗಪ್ಪನನ್ನು ನೋಡಿಯೇ ಈ ರೀತಿ ಠೇಂಕಾರದಲ್ಲಿ ಮಾತಾಡುತ್ತಿರಬಹುದೆಂದು ಊಹಿಸಿದೆ. ದುರ್ಗಪ್ಪ ಮಾಡಿದ ಕೆಲಸದಲ್ಲಿ ಅಂಥ ದುರುದ್ದೇಶ ಏನೂ ಇರುವುದು ನನಗೆ ಕಾಣಲಿಲ್ಲ. ನಾಗರಾಜ ಅವನನ್ನ ಕೋರ್ಟಿಗೆಳೆಯುವುದೂ ಕೇಸು ಹಾಕುವುದೂ ಅಸಂಭವವೆಂದೇ ನನಗನ್ನಿಸಿತು. ದುರ್ಗಪ್ಪನಿಗೆ ಗಾಬರಿ ಮಾಡಲು ಈತ ಹೀಗೆ ಮಾತಾಡುತ್ತಿರ ಬಹುದೆಂದು ಊಹಿಸಿದೆ.

"ಹಾಗಾದರೆ ನನ್ನ ಕೊಡಲಿಗೆ ತರ್ಪಣ ಬಿಡೋದು ಒಳ್ಳೆಯದು ಅನ್ನಿ."

"ಅದ್ಯಾಕೆ ತರ್ಪಣ ಕೊಡ್ತೀರಾ? ಕೇಸು ನಡೀಲಿ ಸಾರ್. ನಂದು ತಪ್ಪೋ, ಅವಂದು ತಪ್ಪೋ ತೀರ್ಮಾನ ಆಗ್ಲಿ."

"ಅಲ್ರಿ ನಾಗರಾಜ್ ಇವು ಯಾವುದಾದರೂ ತೀರ್ಮಾನ ಆಗೋ ಕೇಸುಗಳೇನ್ರಿ. ನೀವು ಬೇರೆ ಡಿಪಾರ್ಟ್‌ಮೆಂಟಿಗೆ ಬುದ್ಧಿ ಕಲಿಸ್ತೀನಿ ಅಂದ್ರಲ್ಲಾ ಹಾಗೇ ಅವರೂನು ನಿಮಗೆ ಕಲಿಸಬೇಕು ಅಂತಿರ್ತಾರೆ. ಕಲಿಯೋದಕ್ಕೆ ಯಾರಾದರೂ ತಯ್ಯಾರಿದ್ರೆ ತಾನೆ ಕೇಸು ತೀರ್ಮಾನ ಆಗೋದು."

ನಾಗರಾಜ್ ನಿರ್ಧಾರದ ಧ್ವನಿಯಲ್ಲಿ "ನೋಡಿ ಸಾರ್, ಈಗ ಕೊಡಲಿ ಕೊಡೋದಕ್ಕೆ ಆಗೊಲ್ಲ. ನಮ್ಮ ಆಫೀಸಿನ ಹೊರಗೆ ನೋಡಿದಿರಾ! ನಿಂತಿದಾವೆ ಅಂಬಾಸಿಡರ್ ಕಾರುಗಳು. ಅವೆಲ್ಲ ನಿಮ್ಮ ಕೊಡಲಿ ತರಾನೆ ಕಾನ್‌ಫಿಸಿಕೇಟ್ ಮಾಡಿ ತಂದವು, ಗಂಧ ಕಳ್ಳಸಾಗಣಿಕೆ ಮಾಡೋರದ್ದು. ಕಾರೂ ಕದ್ದಿದ್ದು. ಮಾಲೂ ಕದ್ದಿದ್ದು. ಸದ್ಯಕ್ಕೆ ನಿಮ್ಮ ಕೊಡಲಿ ಕದ್ದ ಮಾಲಲ್ಲ ಬಿಡಿ. ಆ ಕಾರುಗಳನ್ನೂ ಕೇಸು ಇತ್ಯರ್ಥವಾದ ಮೇಲೆ ಕೊಟ್ಟುಬಿಡ್ತೀವಿ. ವಾರಸುದಾರರಿಲ್ಲದಿದ್ರೆ ಹರಾಜು ಹಾಕಿಬಿಡ್ತೀವಿ" ನಾಗರಾಜ್ ತಾನು ವಶಕ್ಕೆ ತಗೊಂಡಿರೋ ಕಾರುಗಳ ಬಗ್ಗೆ ಹೇಳಿದ.

ಮಲೆನಾಡಿನ ಮಳೆಗೆ ಕಾರುಗಳೆಲ್ಲ ತುಕ್ಕು ಹಿಡಿದು ಕುಗುರುತ್ತಾ ಕುಳಿತಿದ್ದವು. ಒಂದು ಕಾರಿನ ಚಕ್ರದ ಮೇಲೆ ಹುತ್ತವೇ ಬೆಳೆದಿತ್ತು. ಇನ್ನೊಂದೆರಡರ ಮೇಲೆ ಯಾವೋ ಕಾಡುಬಳ್ಳಿಗಳು ಹಬ್ಬತೊಡಗಿದ್ದವು. ಅವುಗಳ ಸದ್ಯದ ಶೋಚನೀಯ ಸ್ಥಿತಿ ನೋಡಿದರೆ ಅವು ಎಂದಾದರೂ ರಸ್ತೆ ಮೇಲೆ ಓಡಾಡಿದ್ದುವೆ ಊಹಿಸಲು ಸಾಧ್ಯವಿರಲಿಲ್ಲ. ಅವುಗಳ ಮೇಲಿನ ಕೇಸು ಇತ್ಯರ್ಥವಾಗುವುದರೊಳಗೆ ಅವುಗಳೆಲ್ಲ ತುಕ್ಕಿನ ಮುದ್ದೆಗಳಾಗಿ ಗುಜರಿಯವರಿಗೂ ಕೆಲಸಕ್ಕೆ ಬರುತ್ತಿರಲಿಲ್ಲ.

"ಸರಿ ಬಿಡಿ ನಾಗರಾಜ್, ನಾನು ಇನ್ನೊಂದು ಕೊಡಲಿ ತಗೊಳ್ಳುತ್ತೇನೆ. ನಾನು ಬಂದಿದ್ದು ಮುಖ್ಯವಾಗಿ ಇಬ್ಬರೂ ಸರ್ಕಾರಿ ಇಲಾಖೆಗಳೇ ಆಗಿದ್ದು ಅದು ಹೇಗೆ ಒಬ್ಬರ ಮೇಲೆ ಒಬ್ಬರು ಕೇಸು ಹಾಕಿಕೊಳ್ಳುತ್ತೀರ ಕೇಳೋದಕ್ಕೆ. ಕೊಡಲಿ, ನೀವು ನಿಧಾನವಾಗಿ ಕೇಸು ಇತ್ಯರ್ಥ ಆಗಿ, ಎಲ್ಲರಿಗೂ ಬುದ್ಧಿ ಕಲಿಸಿಯಾದ ಮೇಲೆ ಕೊಡಿ" ಎಂದೆನ್ನುತ್ತ ಎದ್ದೆ.

ನಾಗರಾಜನಿಗೆ ಏನೆನ್ನಿಸಿತೋ ಏನೋ. ದುರ್ಗಪ್ಪನ ಕಡೆ ತಿರುಗಿ "ಏನೋ ಮರ ಯಾಕೆ ಕಡೀತೀಯಾಂತ ಕೇಳಿದರೆ ಮ್ಯಾಲಿನೋರ್ನ ಕೇಳ್ಕಳಿ ಅಂತ ಉಚಾಯಿಸಿ ಮಾತಾಡ್ತೀಯಾ? ಹೇಳದೆ ಕೇಳದೆ ಡಿಪಾರ್ಟ್‌ಮೆಂಟಿನ ಮರ ಕಡಿದರೆ ಇನ್ನೊಂದು ಸಾರಿ, ಮತ್ತೇನಿಲ್ಲ! ನಿನ್ನೇ ಲಾಕಪ್ಪಿಗೆ ಹಾಕಿಸಿ ಬಿಡ್ತೀನಿ. ಏನಂತ ತಿಳ್ಕೊಂಡಿದ್ದೀಯ" ಎಂದು ಕೂಗಿ ಗಾರ್ಡ್ ರಾಮಪ್ಪನಿಗೆ ಇವನ ಕೊಡಲಿ ಕೊಟ್ಟುಬಿಡು ಎಂದು ಆಜ್ಞೆ ಮಾಡಿದ.

ದುರ್ಗಪ್ಪ ಮತ್ತೆ ಮರ ತಾನು ಕಡಿದಿಲ್ಲವೆಂದೂ, ಕೃಷ್ಣೇಗೌಡರ ಆನೆ ಮುರಿದು ಬೀಳಿಸಿದ್ದೆಂದೂ ಹಳೆ ಪ್ರವರ ಪುನರಾವರ್ತನೆ ಮಾಡಿದ.

ಅವನು ಹೇಳಿದ್ದನ್ನೆ ಮತ್ತೆ ಮತ್ತೆ ಹೇಳುವುದನ್ನು ನೋಡಿ ರೇಗಿದ ನಾಗರಾಜ "ಹಾಗಂತ ಹೇಳಿಕೆ ಬರ್ಕೊಡ್ತೀಯಾ? ಹಾಗಿದ್ರೆ ಹೇಳು. ಅದ್ನೂ ಎಳಕೊಂಡು ಬಂದು ಅಂಬಾಸಿಡರ್ ಕಾರಿನ ಜೊತೆ ಕಟ್ಟಾಕಿ ಬರೆ ಹಾಕಿಬಿಡ್ತೀನಿ, ನಿನ್ನ ಪುಕಾರೇನಿದ್ರೂ ಬರ್‍ವಣಿಗೇಲಿ ಇರಬೇಕು. ಹಂಗಿದ್ರೆ ಮಾತ್ರ ನಾನು ಆಕ್ಷನ್ ತಗೊಳ್ಳೋದು" ಎಂದು ಗುಡುಗಿದ.

ದುರ್ಗಪ್ಪ ತಾನು ಕಣ್ಣಲ್ಲಿ ನೋಡದೆ ಹೇಗೆ ಹೇಳಿಕೆ ಕೊಡಲಿ ಎಂದೇನನ್ನೋ ಗೊಣಗುತ್ತ ಗಾರ್ಡು ರಾಮಪ್ಪನ ಜೊತೆ ಸ್ಟೋರಿನ ಕಡೆಗೆ ಹೋದ. ಆನೆಯನ್ನು ಕಾನ್‌ಫಿಸಿಕೇಟ್ ಮಾಡಿ ತರುವುದು ಅಂಬಾಸಿಡರ್ ಕಾರು ತಂದಷ್ಟು ಸುಲಭವಾಗಿರಲಾರದೆಂದು ನನಗೆನ್ನಿಸಿತು.

# ಅಧ್ಯಾಯ – ೪

ಆ ಆನೆ ಮಾಡುವ ಕೆಲಸ ನೋಡಿದರೆ ಯಾರೂ ಅದನ್ನು ತಂದು ಕಟ್ಟಿಹಾಕಿ ಬರೆ ಎಳೆಯುತ್ತೇನೆನ್ನುವ ನಾಗರಾಜನ ಮಾತನ್ನು ನಂಬುತ್ತಿರಲಿಲ್ಲ. ನಮ್ಮೂರಿನ ಮರದ ವ್ಯಾಪಾರಿಗಳು, ಸಾಮಿಲ್ಲಿನವರು, ಆ ಆನೆಗೆ ಬಾಡಿಗೆ ಕೊಟ್ಟು ಕೆಲಸಕ್ಕೆ ಕರೆದೊಯ್ಯುತ್ತಿದ್ದರು. ಆನೆಯ ಅಪಾರ ಶಕ್ತಿ ಅದು ಕೆಲಸ ಮಾಡುವಾಗ ನೋಡಿದರೆ ಮಾತ್ರ ಊಹೆಗೆ ನಿಲುಕುವಂಥದು. ವೇಲಾಯುಧನ ಹಿಂದೆ ತಲೆ ತಗ್ಗಿಸಿಕೊಂಡು ನಡೆದು ಹೋಗುವಾಗ ನೋಡಿದರೆ ನಮಗೆ ಅಂದಾಜು ಸಿಗುವುದೇ ಇಲ್ಲ. ದೊಡ್ಡ ದೊಡ್ಡ ಮರಗಳಿಗೆ ಹಣೆ ಹಚ್ಚಿ ಅದು ಒಮ್ಮೆ ತಳ್ಳಿದರೆ ಸಾಕು ಬೇರುಗಳೆಲ್ಲ ಪಟಪಟ ನೆಲದಿಂದೆದ್ದು, ಮರ ಬುಡ ಸಮೇತ ಪಲ್ಟಾಯಿಸಿ ಬಿಡುತ್ತದೆ. ತೀರಾ ದೊಡ್ಡ ಮರಗಳಾದರೆ ಅವುಗಳ ಬುಡದಲ್ಲಿನ ಮಣ್ಣು ಬಿಡಿಸಿ ಅಡ್ಡ ಬೇರುಗಳನ್ನು ಕಡಿದು ಆನೆಗೆ ತಳ್ಳಲು ಹೇಳುತ್ತಿದ್ದರು. ಎಂಥ ಮರಗಳಾದರೂ ಆನೆಯ ದೈತ್ಯಶಕ್ತಿಯ ಎದುರು ಚೀತ್ಕರಿಸಿ ನೆಲಕ್ಕೆ ಉರುಳುತ್ತಿದ್ದವು.

ಅದು ಮರ ಉರುಳಿಸುವ ಪರಿ ನೋಡಿದರೆ ಕಾಡಿನಲ್ಲಿ ಆನೆಗಳ ಕೈಯ್ಯಿಂದ ತಪ್ಪಿಸಿಕೊಳ್ಳಲು ಮರ ಹತ್ತುವವರು ಮೂರ್ಖರೆಂದೇ ನನ್ನ ಅಭಿಮತ. ನಿಜವಾಗಿಯೂ ಕೊಲ್ಲಬೇಕೆಂದು ಮನಸ್ಸು ಮಾಡಿದರೆ ಮರವೇರಿದವರನ್ನು ಮರದ ಸಮೇತ ನೆಲಕ್ಕಪ್ಪಳಿಸುವುದು ಆನೆಗೆ ಖಂಡಿತಾ ಕಷ್ಟದ ಕೆಲಸವಲ್ಲ. ಹಿಂದಿನ ಕಾಲದ ರಾಜಮಹಾರಾಜರುಗಳು ಆನೆಗಳ ಸೈನ್ಯದ ಬೆಟಾಲಿಯನ್ ಇಟ್ಟುಕೊಂಡಿರುತ್ತಿದ್ದರೆಂದು ಕೇಳಿದ್ದೇವೆ. ಈಗಿನ ಕಾಲದ ಯುದ್ಧದ ಟ್ಯಾಂಕುಗಳಂತೆಯೇ ಇವು ಶತ್ರು ಸೈನ್ಯವನ್ನು ಧ್ವಂಸ ಮಾಡುತ್ತಿದ್ದವೆಂದು ತೋರುತ್ತದೆ.

ಬಲಭೀಮನಂತಿದ್ದ ಈ ಆನೆ ನರಪೇತಲ ನಾರಾಯಣನಂತಿದ್ದ ವೇಲಾಯುಧನ ಆಜ್ಞೆಗಳಿಗೆ ತಲೆಬಾಗಿ ಅವನು ಹೇಳಿದಂತೆ ಕೇಳುತ್ತಿದ್ದುದು ಮಾತ್ರ ತಮಾಷೆಯಾಗಿ ಕಾಣುತ್ತಿತ್ತು. ಮೂಡಿಗೆರೆಯ ಪಕ್ಕ ಹರಿಯುವ ಹಳ್ಳಕ್ಕೆ ಅಡ್ಡಲಾಗಿ ವಾರಕ್ಕೊಮ್ಮೆ ಆನೆ ದೊಡ್ಡ ಬಂಡೆಯಂತೆ ಮಲಗುತ್ತಿತ್ತು. ವೇಲಾಯುಧ ಅದರ ಮೈಮೇಲೆಲ್ಲ ಹತ್ತಿ ಇಳಿದು ತಿಕ್ಕಿ ಸ್ನಾನ ಮಾಡಿಸುತ್ತಿದ್ದ. ಆದರೆ ಮೇಲೆ ಬಂದೊಡನೆ ರಸ್ತೆ ಧೂಳನ್ನೆಲ್ಲಾ ತಗೊಂಡು ಪೌಡರಿನಂತೆ ಮೈಮೇಲೆಲ್ಲಾ ಎರಚಿಕೊಳ್ಳುವ ಈ ಆನೆಗೆ ಸ್ನಾನ ಯಾಕೆ ಮಾಡಿಸುತ್ತಿದ್ದನೋ! ಆನೆಗೆ ಹೆಚ್ಚಿನ ಕೆಲಸ ಬಿದ್ದಾಗಲೆಲ್ಲಾ ಕೃಷ್ಣೇಗೌಡರು ಅದಕ್ಕೆ ಎರಡು ಲೀಟರು ಷರಾಬು ಬಹುಮಾನ ಕೊಡುತ್ತಾರೆ ಎಂದು ವೇಲಾಯುಧ ಹೇಳುತ್ತಿದ್ದ. ವೇಲಾಯುಧ ಅದರಲ್ಲಿ ಎಷ್ಟನ್ನು ಆನೆಗೆ ಕೊಡುತ್ತಿದ್ದನೋ! ಎಷ್ಟನ್ನು ತಾನೆ ಕುಡಿಯುತ್ತಿದ್ದನೋ ಗೊತ್ತಿಲ್ಲ!

ಆದರೆ ಈ ಇಬ್ಬರ ಮದ್ಯಪಾನದ ದೆಸೆಯಿಂದ ಈ ಬೇಸಗೆಯಲ್ಲಿ ಮತ್ತೆ ಇವರ ಹಗರಣಗಳು ಪ್ರಾರಂಭವಾದವು. ಆನೆ ಒಬ್ಬ ಲಾರಿ ಡ್ರೈವರ್ ಮರಣಕ್ಕೆ ಕಾರಣವಾಯ್ತೆಂದು ಗುಸುಗುಸು ಗಾಳಿ ಸುದ್ದಿ ಹಬ್ಬಿತು.

ಒಂದು ದಿನ ಶಿವೇಗೌಡರ ಸಾಮಿಲ್ಲಿನಲ್ಲಿ ಕಳ್ಳನಾಟ ಇಳಿಸಲು ರಾತ್ರೋರಾತ್ರಿ ಆನೆ ಕರೆದುಕೊಂಡು ಹೋದರಂತೆ. ಈಚೆಗೆ ಮರ ಕಡಿಯುವುದರ ಬಗ್ಗೆ ನಾಟ ಸಾಗಿಸುವುದರ ಬಗ್ಗೆ ಸರ್ಕಾರದ ಕಾನೂನು ನಿಬಂಧನೆಗಳು ವಿಪರೀತ ಬಿಗಿಯಾದ್ದರಿಂದ ಸಾಮಿಲ್ಲಿನವರ ಅರ್ಧಕ್ಕರ್ಧ ಕೆಲಸವೆಲ್ಲ ರಾತ್ರಿಯೇ ನಡೆಯುತ್ತಿದ್ದುದು. ಆನೆಯ ಮಾವುತ ಇಬ್ಬರೂ ತಮ್ಮ ತಮ್ಮ ಕೋಟ ಷರಾಬು ಕುಡಿದು ಬಿಗಿಯಾಗಿದ್ದರು. ವೇಲಾಯುಧನಿಗೆ ರಾತ್ರಿ ಸಹ ಕೆಲಸ ಮಾಡಬೇಕಲ್ಲ ಎಂದು ಸಿಟ್ಟೇ ಬಂದಿತ್ತು.

ಸಾಮಿಲ್ಲಿನ ಒಳಗೆ ಲೋಡುಲಾರಿ ನಿಂತಿತ್ತು. ಕ್ಲೀನರು ನಾಯರ್ ಹೋಟೆಲಿನಲ್ಲಿ ಚಾ ಕುಡಿದು ಬರಲು ಹೋಗಿದ್ದ. ಡ್ರೈವರ್ ಒಬ್ಬನೆ ನಿದ್ರೆ ಮಂಪರಿನಲ್ಲಿ ತೂಕಡಿಸುತ್ತ ಸ್ಟಿಯರಿಂಗ್ ಚಕ್ರದ ಮೇಲೆ ತಲೆ ವಾಲಿಸಿಕೊಂಡು ಅರೆನಿದ್ದೆಯಲ್ಲಿದ್ದ.

ಷರಾಬಿನ ನಿಷಾದಲ್ಲಿದ್ದ ವೇಲಾಯುಧನಿಗೆ ಲಾರಿಗೂ ನಾಟಾಗಳಿಗೂ ಹಗ್ಗ ಬಿಗಿದು ಕಟ್ಟಿದ್ದು ಬಿಚ್ಚಬೇಕೆಂದು ಮರತೇಹೋಯ್ತು. ಹಿಂದು ಮುಂದು ನೋಡದೆ ಆನೆಗೆ ಲಾರಿ ಮೇಲಿನ ದಿಮ್ಮಿಗಳನ್ನು ತಳ್ಳಿ ಉರುಳಿಸಲು ಹೇಳಿದ. ನಿದ್ದೆಯ ಜೋಂಪಿನಲ್ಲಿದ್ದ ಡ್ರೈವರಿಗೆ ಎಚ್ಚರಾದಾಗ ಪ್ರಪಂಚ ಯಾಕೋ ತಲೆಕೆಳಗಾಗುತ್ತಿದೆ ಎನ್ನಿಸಿತು. ಲಾರಿಗೆ ನಾಟ ಬಿಗಿದು ಕಟ್ಟಿದ್ದರಿಂದ ನಾಟ ಉರುಳದೆ ಲಾರಿ ಸಮೇತ ಮೆಲ್ಲಗೆ ವಾಲಿ ಒಂದು ಕಡೆಗೆ ಧೊಪ್ಪನೆ ಉರುಳಿ ಬಿತ್ತು. ಲಾರಿ ಮೆಲ್ಲಗೆ ವಾಲುತ್ತ ಒಂದು ಕಡೆಗೆ ಉರುಳಿದ್ದರಿಂದ ಡ್ರೈವರ್ ಮಹಾಶಯನಿಗೆ ಹೆಚ್ಚಿಗೆ ಏನೂ ಅಪಾಯವಾಗುವ ಸಂಭವವೇ ಇರಲಿಲ್ಲ. ಆದರೆ ಕ್ಯಾಬಿನಿನ್ನಲ್ಲಿ ಇಟ್ಟಿದ್ದ ಮಣಭಾರದ ಲಾರಿ ಜಾಕ್ ಧೊಪ್ಪನೆ ಅವನ ಬುರುಡೆಯ ಮೇಲೆ ಬಿದ್ದ ಹೊಡೆತಕ್ಕೆ ಅವನ ತಲೆ ಜಜ್ಜಿ ಕಮಕ್ ಕಿಮಕ್ ಎನ್ನದೆ ಪರಂಧಾಮಕ್ಕೆ ಹೋದ.

ಕುಡಿದ ಮತ್ತಿನಲ್ಲಿ ವೇಲಾಯುಧನಿಗೆ ಇದೇಕೆ ನಾಟಾ ಉರುಳುವುದರ ಬದಲು ಲಾರಿಯೇ ಉರುಳುತ್ತಿದೆ ಅರ್ಥವಾಗಲಿಲ್ಲ. ಮೊದಲಿಗೆ ಆನೆಯದೇ ಏನೋ ಕಿತಾಪತಿ ಎಂದು ಕೋಪಗೊಂಡ. ಆದರೆ ನಿಧಾನವಾಗಿ ಹೊಳೆಯಿತು. ಕ್ಲೀನರ್ ಸೂಳೆಮಗ ನಾಟಾಕ್ಕೆ ಕಟ್ಟಿದ್ದ ಹಗ್ಗವನ್ನೇ ಬಿಚ್ಚದೆ ಎತ್ತಲೋ ಹೋಗಿದ್ದಾನೆ! ಲಾರಿ ಧಡಾರನೆ ಉರುಳಿದ ಸದ್ದು ಕೇಳಿ ಏನಾಯ್ತೆಂದು ಗಾಬರಿಯಾದ ಶಿವೇಗೌಡರು, ಲಾರಿ ಕ್ಲೀನರು ಎಲ್ಲಾ ಓಡಿಬಂದರು. ಉರುಳಿಬಿದ್ದಿರುವ ಲಾರಿ ನೋಡಿ ಕಂಗಾಲಾಗಿ ಹೋದರು. ನಾಟಾಕ್ಕೆ ಕಟ್ಟಿದ ಹಗ್ಗಗಳನ್ನು ಬಿಚ್ಚಿ ಲಾರಿ ನೆಟ್ಟಗೆ ಮಾಡಲು ಹೇಳಿದರು.

ಕ್ಲೀನರ್ ಹಗ್ಗ ಬಿಚ್ಚುವ ಬದಲು ಯಾರನ್ನೋ ಹುಡುಕುತ್ತಿರುವುದು ಕಂಡಿತು. ಏನೆಂದು ಕೇಳಿದಾಗ "ಡ್ರೈವರಣ್ಣ ಎತ್ಲಾಗಿ ಹೋದ! ಇಲ್ಲೇ ಇದ್ದನಲ್ಲ!" ಎಂದು ಗೊಣಗಿದ.

ಡ್ರೈವರ್ ಹೆಣ ಕಂಡು ಎಲ್ಲರೂ ಮತ್ತಷ್ಟು ಗಾಬರಿ ಆದರು. ಮುಂದೇನು ಮಾಡುವುದು ತೋಚದೆ ಮಂಕಾಗಿ ನಿಂತರು. ಲಾರಿಯಲ್ಲಿ ತಂದಿದ್ದೇ ಕಳ್ಳನಾಟ. ಅದಕ್ಕೇ ರಾತ್ರೋರಾತ್ರಿ ಅನ್‌ಲೋಡ್ ಮಾಡಲು ಆನೆ ಕರೆಸಿದ್ದು. ಪೊಲೀಸರಿಗೆ ಈ ಆಕಸ್ಮಿಕ ತಿಳಿದರೆ ಎಲ್ಲ ಕ್ರಮಬದ್ಧವಾಗಿ ಮಾಡಬೇಕಾಗುತ್ತದೆ. ಕಳ್ಳನಾಟಾ ದಂಧೆ ಎಲ್ಲ ಹೊರಬರುತ್ತೆ. ಲಾರಿಯನ್ನೂ ಸೀಜ್ ಮಾಡುತ್ತಾರೆ. ಆನೆಯನ್ನು ಸೀಜ್ ಮಾಡುತ್ತಾರೆ. ಸಾಮಿಲ್ಲಿಗೆ ಬೀಗ! ಮಾವುತನಿಗೂ ಕ್ಲೀನರ್‌ನಿಗೂ ಕೋಳ!

"ಕುಡುಕ್‌ನನ್ನಮಗನೆ ಎಂಥ ಗಂಡಾಂತ್ರ ತಂದಿಟ್ಟೆ ನೋಡು" ಎಂದು ವೇಲಾಯುಧನಿಗೆ ಶಿವೇಗೌಡರು ಬಯ್ದರು. ಅವನು ತಾನು ಕುಡಿದೇ ಇಲ್ಲವೆಂದೂ ಆನೆ ಕುಡಿದಿರುವುದೆಂದೂ ಅದರ ಮೇಲೆ ಅಪರಾಧ ಎತ್ತಿಹಾಕಿ, ಹಗ್ಗ ಬಿಚ್ಚದೆ ಯಾಕೆ ನಾಟಾ ಉರುಳಿಸಲು ಹೇಳಿದೆ ಎಂದು ಕ್ಲೀನರ್ ಮೇಲೆ ಜಗಳಕ್ಕೆ ಹೋದ.

ಮುಂದೇನಾಯ್ತೆಂದು ಯಾರಿಗೂ ಸರಿಯಾಗಿ ಗೊತ್ತಿಲ್ಲ.

ಬೆಳಿಗ್ಗೆ ನೋಡಬೇಕಾದರೆ ಲಾರಿ ಸರಿಯಾಗಿ ನಿಂತಿತ್ತು. ಈ ವಾರ್ತೆ ಬರೇ ಪಿಸುಮಾತಿನಲ್ಲೇ ಮುಕ್ತಾಯವಾದ್ದರಿಂದ ಶಿವೇಗೌಡರು ಕೃಷ್ಣೇಗೌಡರು ಇಬ್ಬರೂ ಸೇರಿ ಇದನ್ನು ಮುಚ್ಚಿಹಾಕಿರಬೇಕು. ಯಾರೂ ದೂರು ಕೊಡದ ಕಾರಣ ಕಾನೂನಿನ ಕ್ರಮ ಯಾರ ಮೇಲೂ ಜಾರಿ ಆಗಲಿಲ್ಲ. ಲಾರಿ ಟ್ರಿಪ್ಪಿಗೆ ಹೋದ ದಿಕ್ಕಿನಲ್ಲೆಲ್ಲ

ಆ ಡ್ರೈವರಿಗೆ ಒಂದೊಂದು ಸಂಸಾರ ಇದ್ದಿದ್ದರಿಂದ ಆ ಹದಿನೇಳು ಜನರಲ್ಲಿ ಯಾರು ಅಧಿಕೃತ ಯಾರು ಅನಧಿಕೃತ ನಿರ್ಧರಿಸಲಾರದೆ ಕ್ಲೀನರ್ ಯಾರಿಗೂ ವಿಷಯ ತಿಳಿಸಹೋಗಲಿಲ್ಲ.

ಕೊಡಲಿ ವಾಪಸ್ ಕೊಡಲೆಂದು ಬಂದ ದುರ್ಗಪ್ಪ ಕೃಷ್ಣೇಗೌಡರ ಆನೆಯನ್ನು ಮನಸಾರೆ ಶಪಿಸಿದ್ದಲ್ಲದೆ, ಅದು ಕೊಂದ ಡ್ರೈವರ್ ಹೆಣವನ್ನು ಮರದ ಹೊಟ್ಟಿನೊಳಗೆ ಹಾಕಿ ಆಗಾಗ ಬೆಂಕಿ ಕೊಡುವಂತೆ ಬೆಂಕಿ ಕೊಟ್ಟು ಬೂದಿ ಮಾಡಿರೆಂದು ಹೇಳಿದ.

"ಆ ಆನೆಗೆ ಹೆಂಡ ಕುಡಿಸಿದರೆ ಹೇಗಾಗಬಹುದು ಹೇಳಿ. ಮಕ್ಕಳೂ ಮರಿ ಓಡಾಡೋ ಜಾಗದಲ್ಲಿ ಓಡಾಡುತ್ತದೆ. ಕುಶಾಲಿಗಂತ ಸೊಂಡಿಲು ಬೀಸಿದರೆ ಸಾಕಲ್ಲ. ನಮ್ಮಂತೋರು ನಮಃಶಿವಾಯ ಅನ್ನೋದಕ್ಕೆ" ಎಂದ.

"ಏನೋ ದುರ್ಗಪ್ಪ ಅಷ್ಟೊಂದು ಜೀವಭಯನೇನೋ ನಿಂಗೆ! ನಮ್ಮ ತೋಟಕ್ಕೆ ಸುಮಾರು ಕಾಡಾನೆಗಳು ಬಂದಿದ್ವು ಗೊತ್ತಾ" ಎಂದೆ.

"ಏನು ಸ್ವಾಮಿ, ಸಾಯೋದಕ್ಕೆ ಹೆದರೋವ ನಾನು ಅಂತ ತಿಳುಕೊಂಡ್ರ? ಲೈನ್‌ಮನ್ ಕೆಲಸಕ್ಕೆ ಸೇರಿದ ಮೇಲೆ ಪ್ರಾಣದ ಆಸೆ ಇಟ್ಕೊಂಡ್ರೆ ಆಗುತ್ತ? ನಮ್ಮ ಡಿಪಾರ್ಟ್‌ಮೆಂಟಿನ ಲೈನ್‌ಮನ್‌ಗಳ್ಯಾರಾದ್ರೂ ಈವರೆಗೆ ಸರ್ವಿಸ್ ಮುಗಿಸಿ ರಿಟೈರಾಗಿರೋದನ್ನ ನೋಡಿದ್ದೀರಾ? ಕರೆಂಟಿನ ಜೊತೆ ಕೆಲಸ ಅದು. ಒಂದಲ್ಲ ಒಂದು ದಿನ ಎಚ್ಚರ ತಪ್ಪಿದ್ರೂ ಅಲ್ಲಿಗೆ ನಮ್ಮ ಸರ್ವಿಸ್ ಮುಗಿದಂಗೇ ಅಲ್ವಾ" ಎಂದು ತನ್ನ ಕೆಲಸ ಇಡೀ ಜಗತ್ತಿನಲ್ಲೇ ಅತ್ಯಂತ ಅಪಾಯಕಾರಿ ಕೆಲಸ ಎಂದು ವಿವರಿಸಿದ.

ದುರ್ಗಪ್ಪನಿಗೆ ಲೈನ್‌ಮನ್ ಕೆಲಸ ರೋಸಿಹೋದಂತೆ ಕಂಡಿತು. ಅದಕ್ಕೆ ಮುಖ್ಯ ಕಾರಣ ಅವನಿಗೆ ಶಿವೇಗೌಡರ ಸಾಮಿಲ್ಲಿನ ಎದುರು ಹೋಗಿದ್ದ ಕಳಸಾ ಲೈನು ನೋಡಿಕೊಳ್ಳಲು ಕೊಟ್ಟಿದ್ದರು. ಆ ವಿದ್ಯುತ್ ಲೈನು ಇಡೀ ಮೂಡಿಗೆರೆಗೆ ತರಲೆ ಲೈನು ಎಂದು ಹೆಸರುವಾಸಿಯಾಗಿತ್ತು. ಒಂದು ಕಡೆ ಹಳೇಕೋಟೆ, ಗೌಡಳ್ಳಿ, ಭೈರಾಪುರದವರೆಗೆ, ಇನ್ನೊಂದು ಕಡೆ ಬಣಕಲ್ಲು, ನಿಡುವಾಳೆ, ಜಾವಳಿವರೆಗೆ, ಎಲ್ಲೆಲ್ಲೋ ಕಗ್ಗಾಡಿನ ನಡುವೆ ಎಲ್ಲಾ ನುಗ್ಗಿ ನುಸುಳಿ ಹೋಗಿತ್ತು. ಈ ದರಿದ್ರ ಲೈನಿನ ಯೋಗಕ್ಷೇಮ ನೋಡಿಕೊಳ್ಳಲು ಹೋಗಿ ಅವನಿಗೆ ಬದುಕಿನ ಆಸೆಯೇ ಬತ್ತಿಹೋಗಿತ್ತು. ಕಾಡಿನ ಯಾವ ಮೂಲೆಯಲ್ಲಿ ಕೊಂಬೆ ಮುರಿದು ಬೀಳಲಿ, ಎಲ್ಲಿ ಲೈನಿಗೆ ಬಾವಲಿಗಳು ಸಿಕ್ಕಿಕೊಳ್ಳಲಿ ಇಡೀ ಲೈನು ಕಟ್ಟಾಗುತಿತ್ತು. ಬೆಳಿಗ್ಗೆ ಎದ್ದು ದುರ್ಗಪ್ಪ ತಂತಿ ಸುರುಳಿ ಕಟಿಂಗ್‌ಪ್ಲೆಯರ್ರು ಹಿಡಿದು ಎಲ್ಲಿ ಟ್ರಬಲ್ ಇದೆ ಎಂದು ಹುಡುಕಿ ಹೊರಡುತ್ತಿದ್ದ. ಜನಕ್ಕಾಗಲೀ ಡಿಪಾರ್ಟ್‌ಮೆಂಟಿನವರಿಗಾಗಲಿ ಫಾರೆಸ್ಟಿನವರಿಗಾಗಲಿ ಅವನ ಕಷ್ಟ ಏನು ತಾನೆ ಗೊತ್ತಾದೀತು? ನಾಗರಾಜ ಸೌದೆ ಮಾಡುತ್ತಾರೆ ಎಂದು ಜರೆದರೆ, ಡಿರ್ಪಾಮೆಂಟಿನವರು ಲೈನು ಸರಿಯಾಗಿ ಮೇಂಟೇನ್ ಮಾಡಿಲ್ಲ ಎಂದು ಬಯ್ಯುತ್ತಿದ್ದರು.

ಒಟ್ಟಿನಲ್ಲಿ ಜೇಡರ ಬಲೆಯಂತೆ ಸಹ್ಯಾದ್ರಿ ಕಾಡಿನೊಳಗೆಲ್ಲಾ ಹಬ್ಬಿದ್ದ ಈ ಬಣಕಲ್ಲು ಲೈನಿನಲ್ಲಿ ಹುಳು ಸಿಕ್ಕಿಕೊಂಡಂತೆ ಸಿಕ್ಕಿದ್ದ ದುರ್ಗಪ್ಪ ವಿನಾಕಾರಣ ಕೃಷ್ಣೇಗೌಡರ ಆನೆಗೆ ಬಯ್ದುದು ಆನೆಯ ಕಿಡಿಗೇಡಿತನಕ್ಕಿಂತ ಅವನ ರೇಜಿಗೆಯ ಕಾರಣವಾಗಿ.

# ಅಧ್ಯಾಯ – ೫

ನಾನು ಎಲೆಕ್ಟ್ರಿಕ್ ಬಿಲ್ ಕಟ್ಟಲು ವೆಟರ್ನರಿ ಆಸ್ಪತ್ರೆ ಎದುರು ಹೋಗುತ್ತಿರಬೇಕಾದರೆ ಪೋಸ್ಟ್‌ಮನ್ ಜಬ್ಬಾರನ ಲೂನಾ ಅಲ್ಲೇ ದಾರಿ ಬದಿಯಲ್ಲಿ ನಿಂತಿತ್ತು. ಪೋಸ್ಟ್ ಕೊಡುವುದರ ಜೊತೆಗೆ ಆತ ಪೇಪರ್ ಮತ್ತು ಮ್ಯಾಗಝೀನುಗಳ ಏಜನ್ಸಿಯನ್ನೂ ಮಾಡುತ್ತಿದ್ದುದರಿಂದ ಅವೆಲ್ಲವನ್ನೂ ಚೀಲದಲ್ಲಿ ತುಂಬಿ ಅಗಸರ ಕತ್ತೆಯ ಮೇಲೆ ಹೇರು ಹೊರಿಸುವಂತೆ ಲೂನಾದ ಎರಡು ಪಾರ್ಶ್ವಕ್ಕೂ ನೇತುಹಾಕಿದ್ದ. ಮೂರುದಿನದಿಂದ ಪೋಸ್ಟ್ ಕೊಟ್ಟಿರಲಿಲ್ಲ. ಯಾವಾಗ ಆಕ್ಷೇಪಿಸಿದರೂ "ಅಯ್ಯೋ ಯಾವೋ ಮದ್ವೆಮನೆ ಕಾಗದ ಸಾರ್. ನೀವೇನು ಹೋಗೋದಿಲ್ಲ ಏನಿಲ್ಲ. ಅವನ್ನು ಇವತ್ತು ಕೊಟ್ಟರೂ ಒಂದೆ, ನಾಳೆ ಕೊಟ್ಟರೂ ಒಂದೆ" ಎಂದು ಅಸಡ್ಡೆಯಿಂದ ಹೇಳುತ್ತಿದ್ದ. ವೆಟರ್ನರಿ ಆಸ್ಪತ್ರೆಯ ಎದುರು ನನ್ನನ್ನು ನೋಡಿದವನೆ ಕುಂಟುತ್ತಾ ನನ್ನತ್ತ ಬಂದ.

ಜಬ್ಬಾರ್, ಲೈನ್‌ಮನ್ ದುರ್ಗಪ್ಪನ ರೀತಿಯಲ್ಲೇ ತೊಂದರೆಗೆ ಸಿಕ್ಕಿಕೊಂಡಿದ್ದ ಮನುಷ್ಯ. ಹೆಸರಿಗೆ ಇವನು ಕೇಂದ್ರ ಸರ್ಕಾರದ ನೌಕರನಷ್ಟೆ. ಹದಿನಾರು ವರ್ಷದಿಂದ ಕೆಲಸ ಮಾಡುತ್ತಿದ್ದರೂ ಇನ್ನೂ 'ಟೆಂಪರರ್ವರಿ'ಯಾಗೆ ಇದ್ದುದರಿಂದ ಅವನ ಸಂಬಳ ಅರವತ್ತು ರೂಪಾಯಿ. ಆ ಸಂಬಳದಿಂದ ಹೊಟ್ಟೆಹೊರೆಯಲು ಸಾಧ್ಯವಿಲ್ಲದೆ ನೂರೆಂಟು ಪತ್ರಿಕೆಗಳ ಏಜನ್ಸಿ ತಗೊಂಡು ಪೋಸ್ಟ್ ಕೊಡುವಲ್ಲೆಲ್ಲಾ ಚಂದಾದಾರರನ್ನು ಮಾಡಲು ಪ್ರಯತ್ನಿಸುತ್ತಿದ್ದ. ಪೋಸ್ಟಿನ ಜೊತೆಗೆ ಮ್ಯಾಗಝೀನುಗಳ ಕಂತೆಯನ್ನೂ ಹೊತ್ತುಕೊಂಡು ಅವನು ತಿರುಗಬೇಕಾಗಿತ್ತು. ಅದೂ ಎಷ್ಟು ದೂರ? ದಿನಾ ಹದಿನೆಂಟು ಕಿಲೋಮೀಟರು ಹೋಗಿ ಬರಬೇಕಿತ್ತು. ನಾನೊಮ್ಮೆ ಹೊಸದಾಗಿ ತಗೊಂಡ ಕ್ಯಾಲಿಕ್ಯುಲೇಟರಿನಲ್ಲಿ ಲೆಕ್ಕ ಹಾಕಿ ಹನ್ನೆರಡು ವರ್ಷಕ್ಕೆ ಕಡಿಮೆ ಎಂದರೂ ಎರಡು ಲಕ್ಷ ಕಿಲೋಮೀಟರು ನಡೆದಿದ್ದೀಯ. ನಿನ್ನ ಮೂಗಿನ ನೇರಕ್ಕೆ ನೆಟ್ಟಗೆ ನಡೆದಿದ್ದರೆ ಇಡೀ ಭೂಮಂಡಲ ಸುತ್ತಿ ಬರಬಹುದಿತ್ತು ಎಂದು ಹೇಳಿದೆ. ಅದನ್ನು ಕೇಳಿ ಅವನು ಮುಖ ಹಿಂಜಿಕೊಂಡು ತನ್ನನ್ನು ಈ ದುರ್ದೆಸೆಯಲ್ಲಿಟ್ಟಿರುವ ಕೇಂದ್ರ ಸರ್ಕಾರವನ್ನೂ ಪ್ರಧಾನಮಂತ್ರಿಗಳನ್ನೂ ಶಪಿಸಿದ.

ಮೂಡಿಗೆರೆಯಂಥ ಕುಗ್ರಾಮ ಆಧುನೀಕರಣಗೊಳ್ಳುತ್ತ ಟೆಲಿಫೋನ್ ಎಕ್ಸ್‌ಛೇಂಜ್, ವಿದ್ಯುತ್ ಎಲ್ಲ ಬಂದಹಾಗೆ ಪೋಸ್ಟಲ್ ಡಿಪಾರ್ಟ್‌ಮೆಂಟಿನವರೂ ತಮ್ಮ ಸೇವೆಯನ್ನು ವಿಸ್ತರಿಸುತ್ತ ಹೋದರು. ಹ್ಯಾಂಡ್‌ಪೋಸ್ಟ್ ಬಿದಿರಳ್ಳಿ ಇಲ್ಲೆಲ್ಲ ಒಂದೊಂದು ಕೆಂಪು ಪೋಸ್ಟ್‌ಬಾಕ್ಸ್‌ಗಳನ್ನು ನೇತುಹಾಕಿದರು. ಪೋಸ್ಟಾಫೀಸ್ ಶಾಖೆ ತೆರೆಯುವ ಬದಲು ಪೋಸ್ಟುಬಾಕ್ಸ್‌ಗಳನ್ನು ನೇತುಹಾಕುವುದು ಕಡಿಮೆ ಖರ್ಚಲ್ಲವೆ! ಈ ವಿಸ್ತರಣೆಯಿಂದ ತೊಂದರೆಗೆ ಸಿಕ್ಕಿಕೊಂಡವ ಎಂದರೆ ಪೋಸ್ಟ್‌ಮನ್ ಜಬ್ಬಾರ್ ಸಾಹೇಬ. ಪೋಸ್ಟ್ ಕೊಡುವುದಲ್ಲದೆ ಪ್ರತಿ ದಿನ ಪೋಸ್ಟ್‌ಬಾಕ್ಸ್ ಇರುವವರೆಗೂ ಹೋಗಿ ಪೋಸ್ಟ್ ಸಂಗ್ರಹಿಸಿ ಹೆಡ್ದಾಫೀಸಿಗೆ ಕೊಡಬೇಕಾಗಿತ್ತು. ನಡೆದಾಗಲೀ ಸೈಕಲ್ಲಿನಲ್ಲಾಗಲೀ ತಿರುಗಲಾರದೆ ಸೋತುಹೋದ ಅವನು ಒಂದು ಸೆಕೆಂಡ್‌ಹ್ಯಾಂಡ್ ಲೂನಾ ಮೋಪೆಡ್ ತಗೊಂಡ. ಅದೂ ಅವನಿಗೆ ಲೂನಾ ಕೊಳ್ಳಲು ಸಾಲ ಕೊಡುವ ಸ್ಕೀಮ್ ಬಂದುದರಿಂದ. ಮೂಡಿಗೆರೆಯಿಂದ ಬಿದಿರಳ್ಳಿವರೆಗೆ ಇಳಿಜಾರೇ ಇದ್ದುದರಿಂದ ಲೂನಾ ಸ್ಟಾರ್ಟ್ ಮಾಡದೆ ಮೇಲೆ ಕುಳಿತು ಸದ್ದಿಲ್ಲದೆ ಅವನು ಬಿದಿರಹಳ್ಳಿ ತಲುಪಿಬಿಡಬಹುದಿತ್ತು. ಇದರಿಂದ ತನಗೆ ಅರ್ಧಕ್ಕರ್ಧ ಪೆಟ್ರೋಲ್ ಉಳಿತಾಯ ಆಗುತ್ತಿದೆ ಎಂದು ಅವನು ತಿಳಿದಿದ್ದ. ಆದರೆ ವಾಪಸ್ ಹೋಗುತ್ತಾ ಅವನನ್ನೂ ಅವನ ಪುಸ್ತಕದ ಹೊರೆಯನ್ನೂ ಹೊತ್ತ ಲೂನಾ ಮೂಡಿಗೆರೆಯವರೆಗೂ ಇದ್ದ ಉಬ್ಬಿನಲ್ಲಿ ಕಿರ್ರೋ ಎಂದು ರಸ್ತೆಯನ್ನು ಪರಚುವಂತೆ ಕೂಗುತ್ತಾ ಹೋಗುವಾಗ, ಬರುವಾಗ ಉಳಿಸಿದ ಪೆಟ್ರೋಲ್ ಅಷ್ಟನ್ನೂ ಕುಡಿದು ಬಿಡುತ್ತದೆ ಎನ್ನುವುದು ಅವನಿಗೆ ಅಂದಾಜಾಗಿರಲಿಲ್ಲ.

ವೆಟರ್ನರಿ ಆಸ್ಪತ್ರೆ ಎದುರು ಕುಂಟುತ್ತಾ ಅವನು ನನ್ನತ್ತ ನಡೆದು ಬಂದಾಗ "ಏನಯ್ಯಾ ಜಬ್ಬಾರ್? ನಾಲ್ಕು ದಿನದಿಂದ ನಿನ್ನ ಮುಖಾನೇ ನೋಡಲಿಲ್ಲವಲ್ಲೋ" ಎಂದು ಕೇಳಿದೆ.

"ಹ್ಯಾಂಡ್‌ಪೋಸ್ಟಿನಲ್ಲಿ ಒಂದು ನಾಯಿ ಕಚ್ಚಿಬಿಡ್ತು ಸಾರ್. ಅದ್ಕೇ ಇಂಜೆಕ್ಷನ್ ತಗೊಳ್ಳಬೇಕಾಗಿದೆ" ಎಂದ ಜಬ್ಬಾರ್ ನಾಲ್ಕುದಿನದ ಪೋಸ್ಟಿನ ಕಂತೆ ಕೊಟ್ಟ.

"ಅಲ್ಲಯ್ಯಾ ನಾಯಿ ಕಚ್ಚಿ ಇಂಜೆಕ್ಷನ್ ತಗೊಳ್ಳೋದಕ್ಕೂ, ನೀನು ಪೋಸ್ಟ್ ಡೆಲಿವರಿ ಕೊಡದೆ ಜೋಳಿಗೆ ಒಳಗೆ ಹಾಕಿಕೊಂಡು ತಿರುಗಾಡೋದಕ್ಕೂ ಏನಯ್ಯಾ ಸಂಬಂಧ?" ಎಂದು ಗದರುವ ದನಿಯಲ್ಲಿ ಕೇಳಿದೆ.

ಜಬ್ಬಾರನಿಗೆ ತಾನು ಕುಂಟಿದ್ದು ನನ್ನಲ್ಲಿ ಸಾಕಷ್ಟು ಮರುಕ ಹುಟ್ಟಿಸಲಿಲ್ಲ ಎಂದೆನ್ನಿಸಿತು. "ಏನ್ಮಾಡ್ತೀರ ಸಾರ್! ಹುಚ್ಚುನಾಯಿ ಹೆಚ್ಚಾಗಿ ಇದ್ದಬದ್ದೋರಿಗೆಲ್ಲಾ ಕಚ್ಚಿಬಿಟ್ಟಿದಾವೆ. ನಮ್ಮಾಸ್ಪತ್ರೇಲಿ ಇಂಜೆಕ್ಷನ್ ಇಲ್ವಂತೆ. ಅದಕ್ಕೆ ಕೇಳ್ಕೊಂಡು ಚಿಕ್ಕಮಗಳೂರಿಗೆ ಹೋಗಿದ್ದೆ. ಅಲ್ಲೂ ಖರ್ಚಾಗಿ ಹೋಗಿದೆಯಂತೆ. ಯಾರೋ ವೆಟರ್ನರಿ ಆಸ್ಪತ್ರೇಲಿ ಇರುತ್ತೇಂತ ಹೇಳಿದರು. ಅದಕ್ಕೇ ಈ ಕಡೆ ಬಂದೆ. ಪೋಸ್ಟು ಕೊಡೋಕೆ ಹೋದರೆ ಎಲ್ಲರ ಮನೇ ಮುಂದೇನೂ ನಾಲ್ಕು ನಾಲ್ಕು ನಾಯಿ ಮಲಗಿರ್ತವೆ. ಅದ್ಯಾವ ಕಳ್ರನ್ನ ಕಾದುಕೊಂಡು ಮಲಗಿರ್ತವೋ ಏನೋ! ಪ್ರತೀ ವರ್ಷ ಒಂದಲ್ಲ ಒಂದು ನಾಯಿ ಕಚ್ಚೇಕಚ್ಚುತ್ತೆ ನೋಡಿ ನಂಗೆ. ಹುಚ್ಚು ಬಂದ ಮೇಲೆ ಅದಕ್ಕೇ ಔಷಧೀನೇ ಇಲ್ವಂತೆ. ಅದಕ್ಕೇ ನಾನು ಹುಚ್ಚು ನಾಯೋ! ಅಲ್ವೋ! ಒಟ್ನಲ್ಲಿ ಹದಿನಾಲ್ಕು ಇಂಜೆಕ್ಷನ್ ಹೊಟ್ಟೇಗೆ ಚುಚ್ಚಿಸ್ಕೋತೀನಿ."

ವೆಟರ್ನರಿ ಸ್ಟಾಕ್‌ಮನ್ ಪುಟ್ಟಯ್ಯ ಅಲ್ಲೇ ಗೇಟಿಗೆ ವಾಲಿಕೊಂಡು ಹೋಗಿ ಬರುವವರತ್ತ ಹಲ್ಕಿರಿಯುತ್ತ ನಿಂತಿದ್ದ. ಜಬ್ಬಾರ್ ಇಂಜೆಕ್ಷನ್ ವಿಚಾರ ಎತ್ತಿದ್ದನ್ನು ಕೇಳಿ ನಮ್ಮೊಡನೆ ಮಾತಿಗೆ ಬಂದ.

"ಹುಚ್ಚುನಾಯಿ ಇಂಜೆಕ್ಷನ್ ಏನೋ ಇದೆ. ಆದರೆ ಅದು ಗ್ಯಾರಂಟಿ ಇಲ್ಲ. ದನ ಎಮ್ಮೆಗಾದ್ರೆ ಹ್ಯಾಗೋ ರಿಸ್ಕ್ ತಗೊಂಡು ಅದನ್ನೇ ಚುಚ್ಚಬಹುದು. ಆದರೆ ಮನ್‌ಷರ ವಿಷಯಕ್ಕೆ ಸ್ವಲ್ಪ ಯೋಚನೆ ಮಾಡಬೇಕು. ಒಂದು ವಾರದಿಂದ ನಮಗೆ ಕರೆಂಟ್ ಇಲ್ಲ ನೋಡಿ. ರೆಫ್ರಿಜಿರೇಟರ್ ಒಳಗೆ ಸಾವಿರಾರು ರೂಪಾಯಿ ಔಷಧಿ ಇಟ್ಟಿರ್ತೀವಿ. ಕರೆಂಟಿನವರಿಗೆ ಏನು ಗೊತ್ತಾಗುತ್ತೆ ಹೇಳಿ ಅವೆಲ್ಲಾ. ಒಟ್ಟಿನಲ್ಲಿ ಲೈನು ಟ್ರಬಲ್ಲಿದೆ ಅಂತ ಕರೆಂಟು ತೆಗೆದು ಹಾಕಿಬಿಡುತ್ತಾರೆ. ಯಾರ್ಯಾರಿಗೆ ಎಷ್ಟೆಷ್ಟು ನಷ್ಟ ಆಗುತ್ತೆ ಅಂತ ಏನಾದರೂ ಯೋಚನೆ ಮಾಡ್ತಾರ ಸಾರ್! ನಿಮ್ಮಂತೋರು ಚೆನ್ನಾಗಿ ಉಗೀಬೇಕು ಸಾರ್. ಇಲ್ಲದಿದ್ರೆ ಸರಿ ಹೋಗಲ್ಲ. ನಮ್ಮಂತೋರ ಮಾತಿಗೆ ಅವರು ಬಿಲ್‌ಕುಲ್ ಬಗ್ಗೋದಿಲ್ಲ. ಇವತ್ತು ಹುಚ್ಚುನಾಯಿ ಕಚ್ಚಿದೆ ಅಂತ ಸುಮಾರು ದನಗಳು ಬಂದಿದ್ವು. ರೆಫ್ರಿಜಿರೇಟರ್ ಕೆಲಸಮಾಡುತ್ತಿಲ್ಲ, ಸಿರಂ ಕೆಟ್ಟೋಗಿದೆ ಅಂತ ಹೇಳಿ ಅವನ್ನೆಲ್ಲಾ ಹಿಂದಕ್ಕೆ ಕಳಿಸಿದೀನಿ. ಹೊಸ ಸಿರಂ ಕಳಿಸೋದಕ್ಕೆ ಕೂನೂರಿಗೆ ಇಂಡೆಂಟ್ ಹಾಕಿದ್ದೇನೆ. ಯಾವಾಗ ಕನ್‌ಸೈನ್‌ಮೆಂಟ್ ಕಳಿಸ್ತಾರೋ ನೋಡಬೇಕು" ಎಂದು ಪುಟ್ಟಯ್ಯ ಪ್ಲೇಟು ಹಾಕಿದ.

ಇವರೆಲ್ಲರ ಮಾತುಕತೆಯಿಂದ ನನಗೆ ನಮ್ಮೂರಿನ ಕಂತ್ರಿನಾಯಿಗಳ ಸಮೂಹವೆಲ್ಲಾ ಕಣ್ಣೆದುರು ಮೂಡಿತು.

ಇಲ್ಲಿ ದಾರಿಯಲ್ಲಿ ನಡೆದುಹೋದರೆ ಅಕ್ಷರಶಃ ಮಾರಿಗೊಂದೊಂದರಂತೆ ಕಂತ್ರಿ ನಾಯಿಗಳು ಮಲಗಿ ಗೊರಕೆ ಹೊಡೆಯುತ್ತಿರುವುದನ್ನು ನೋಡಬಹುದು. ಒಂದೊಂದು ಹೆಣ್ಣು ನಾಯಿಯ ಹಿಂದೆ ಹತ್ತು ಹದಿನೈದು ನಾಯಿಗಳು ಪರಸ್ಪರ ಕಚ್ಚಾಡುತ್ತಾ ಎಷ್ಟೋ ಸಾರಿ ಲಾರಿ ಬಸ್ಸುಗಳೆಲ್ಲಾ ನಿಂತು ವಾಹನ ಸಂಚಾರಕ್ಕೆ ಸಹ

ಅಡ್ಡಿಯಾಗುತ್ತದೆ. ರಾತ್ರಿ ಕಾಡಿನ ನರಿಗಳಿಗಿಂತ ಭಯಂಕರವಾಗಿ ಊಳಿಡುತ್ತಾ ಊರಿಗೆ ಸ್ಮಶಾನದ ಕಳೆ ತರುತ್ತವೆ. ಮಳೆಗಾಲದಲ್ಲಂತೂ ಹಣ್ಣಾಗಿ ಕೆಳಗೆ ಬೀಳುವ ಹಲಸಿನ ಹಣ್ಣು ತಿಂದು, ಮುಸುಡಿಯೆಲ್ಲಾ ಮೇಣ ಅಂಟಿಸಿಕೊಂಡು ವಿಕಾರವಾಗಿ, ಎಲ್ಲ ಹುಚ್ಚುನಾಯಿಗಳ ತರವೇ ಕಾಣುತ್ತವೆ. ಹಲಸಿನ ಸಿಪ್ಪೆ ತಿನ್ನಬರುವ ದನಗಳಿಗೆಲ್ಲಾ ಕಚ್ಚಿ ಎಷ್ಟೋ ದನಗಳು ರೇಬಿಸ್ ರೋಗದಲ್ಲಿ ಸಾಯುತ್ತವೆ. ಈ ಎಲ್ಲ ನೆನಪುಗಳಿಂದ ಮತ್ತು ಸ್ಟಾಕ್‌ಮನ್ ಪುಟ್ಟಯ್ಯನ ಚಿತಾವಣೆಯಿಂದ ನನಗೆ ಎಲ್ಲರ ಮೇಲೆ ಕೋಪ ಏರುತ್ತಾ ಹೋಯ್ತು.

"ನೋಡಿ ಸಾರ್ ಈ ಊರಿನ ಮುನಿಸಿಪಾಲಿಟಿಯವರು ಸ್ವಲ್ಪವೂ ಜವಾಬ್ದಾರಿ ಇಲ್ಲದ ಜನ. ಇವರಿಂದ ಮತ್ತೇನು ಆಗದಿದ್ರೂ ಪರ್ವಾಗಿಲ್ಲ. ಈ ಊರಿನ ಕಂತ್ರಿ ನಾಯಿಗಳನ್ನು ಕಡಿಮೆ ಮಾಡೋದಕ್ಕೆ ಆಗೋಲ್ವೇ? ನಾವು ಹುಚ್ಚುನಾಯಿ ಸಿರಂಗೆ ಖರ್ಚು ಮಾಡೋ ಹಣದ ನೂರರಲ್ಲಿ ಒಂದು ಭಾಗ ಖರ್ಚು ಮಾಡಿದರೂ ಸಾಕಲ್ಲ ಸಾರ್ ಎಷ್ಟೊಂದು ಜೀವ ಉಳಿಸಬಹುದು. ನಾವಾದರೂ ಎಷ್ಟು ಅಂತ ದನಗಳಿಗೆ ಚಿಕಿತ್ಸೆ ಮಾಡಬಹುದು ಹೇಳಿ" ಎಂದು ಪುಟ್ಟಯ್ಯ ತನ್ನ ಪುಕಾರುಗಳನ್ನು ಮುಂದುವರಿಸಿದ. ಅವನ ವಾಕ್ ಸರಣಿಗೆ ನನ್ನ ಕೋಪ ತನ್ನಿಂದ ತಾನೆ ಯಾಂತ್ರಿಕವಾಗಿ ಏರುತ್ತಾ ಇರುವುದನ್ನು ನೋಡಿ ಅವರಿಬ್ಬರಿಗೂ ಒಳಗೊಳಗೇ ಖುಷಿಯಾಗುತ್ತಿತ್ತು. ಕರೆಂಟ್ ಬಿಲ್ ಕಟ್ಟಿ ಮನೆಗೆ ಹೋಗಲು ಹೊರಟ ನನ್ನನ್ನು ಇಬ್ಬರೂ ಹಿಡಿದುಕೊಂಡು ಸಮಾಜಸುಧಾರಕನನ್ನಾಗಿ ಪರಿವರ್ತಿಸಲು ಪ್ರಯತ್ನ ಮಾಡುತ್ತಿದ್ದರು.

"ನಿಮ್ಮ ಡಾಕ್ಟರಿಗೆ ಹೇಳಿ ಮುನಿಸಿಪಲ್ ಪ್ರೆಸಿಡೆಂಟರಿಗೆ ಒಂದು ಕಂಪ್ಲೇಟು ಕೊಡಿಸಬಾರದೇನ್ರಿ? ನೋಡ್ರಿ ಜಬ್ಬಾರ್‌ಗೂ ಹುಚ್ಚುನಾಯಿ ಕಚ್ಚಿದೆಯಂತೆ" ಎಂದೆ.

"ಹೌದಾ ಎಲ್ಲಿ ಕಚ್ಚಿತೋ ಜಬ್ಬಾರ್?" ಎಂದ.

ಜಬ್ಬಾರನ ಮುಖ ಕೊಂಚ ಇರುಸುಮುರುಸಿಗೆ ಸಿಕ್ಕಿದಂತೆ ಕಂಡಿತು. ನಾಯಿ ಕಚ್ಚಿದ್ದೇ ಸುಳ್ಳಿರಬಹುದು ಎಂದು ನನಗೆ ಅನುಮಾನ ಆಯ್ತು. "ಹೋಗಲಿ ಬಿಡಿ. ಅದು ಬೀದೀಲಿ ತೋರಿಸೋ ಹಂಗಿಲ್ಲ. ನನ್ಮಗಂದು ಅಂಥಾ ಜಾಗದಲ್ಲಿ ಕಚ್ಚಿದೆ. ಪ್ಯಾಂಟು ಬಿಚ್ಚಬೇಕಾಗುತ್ತೆ" ಎಂದು ದನಿ ತಗ್ಗಿಸಿ ಜಬ್ಬಾರ್ ಹೇಳಿದ.

"ಛೆ!ಛೆ!, ನಾನು ಕೇಳಿದ್ದು, ಎಲ್ಲಿ? ಯಾವ ಬೀದೀಲಿ? ಅಂತ ಕಣಯ್ಯ. ಅದಕ್ಯಾಕೆ ನೀನು ಪ್ಯಾಂಟು ಬಿಚ್ತೀಯ" ಎಂದು ಪುಟ್ಟಯ್ಯ ಬೇಗ ಬೇಗ ತನ್ನ ಪ್ರಶ್ನೆಯನ್ನು ವಿವರಿಸಿ ಜಬ್ಬಾರನ ಪ್ಯಾಂಟು ಬಿಚ್ಚುವ ಪ್ರೋಗ್ರಾಮಿಗೆ ತಡೆ ಹಾಕಿದ. ನನ್ನ ಕಡೆ ತಿರುಗಿ "ಇನ್ನು ಮೇಲೆ ಮುನಿಸಿಪಾಲಿಟಿಯವರೇ ಹುಚ್ಚುನಾಯಿ ಇಂಜಕ್ಷನ್ ತರಿಸಿ ಕಚ್ಚಿಸಿಕೊಂಡೋರಿಗೆಲ್ಲಾ ಬಿಟ್ಟಿ ಚುಚ್ಚಿಸ್ತಾರಂತೆ! ಹ್ಯಾಗಿದೆ ನೋಡಿ ಇವರದ್ದು ಕರಾಮತ್ತು" ಎಂದ.

ನನಗೆ ಇನ್ನಷ್ಟು ಕೋಪ ಬಂತು. ಇವರಿಬ್ಬರೂ ಕೊಂಚವೂ ಜವಾಬ್ದಾರಿ ಇಲ್ಲದ ಅವಿವೇಕಿಗಳೆಂದು ನನ್ನ ಬುದ್ಧಿಗೆ ತಿಳಿದೂ ಇವರ ಮಾತಿಗೆ ನನ್ನ ಭಾವನೆಗಳು ಯಾಂತ್ರಿಕವಾಗಿ ಪ್ರತಿಕ್ರಿಯಿಸುತ್ತಲೇ ಹೋದುದನ್ನು ನೋಡಿದರೆ ಹೊಗಳಿಕೆ ತೆಗಳಿಕೆ ಚಾಡಿ ಇವುಗಳಿಗೆಲ್ಲಾ ನಮ್ಮ ಮನಸ್ಸಿನ ಮೇಲೆ ಎಂಥ ಹಿಡಿತ ಇದೆ ಎಂದು ಆಶ್ಚರ್ಯ ಆಗುತ್ತದೆ.

"ಅಲ್ಲರೀ ಮುನಿಸಿಪಾಲಿಟಿಯವರು ಪಾಷಾಣ ತರಿಸಿ ಆ ಕಂತ್ರಿ ನಾಯಿಗಳನ್ನು ಸಾಯಿಸೋದು ಬಿಟ್ಟು ಸಾವಿರಾರು ರೂಪಾಯಿ ಖರ್ಚುಮಾಡಿ ಇಂಜಕ್ಷನ್ ತರಿಸಿ ಮೂಡಿಗೆರೆಯ ಸಾರ್ವಜನಿಕರಿಗೆಲ್ಲಾ ಪುಗಸಟ್ಟೆ ಹದಿನಾಲ್ಕು ಚುಚ್ಚಿಸುತ್ತಾರೆ ಎಂದರೆ ಏನರ್ಥ" ಎಂದು ಕೂಗಿದೆ.

"ನೋಡಿ ಸಾರ್. ನಿನ್ನೆ ಒಂದು ಹುಚ್ಚು ನಾಯಿ ಏಳು ಜನಕ್ಕೆ, ಹತ್ತಾರು ದನಗಳಿಗೆ ಕಚ್ಚಿದೆ. ಅವರಿಗೆಲ್ಲಾ ಎಲ್ಲಿಂದ ಇಂಜೆಕ್ಷನ್ ಸಪ್ಲೆ ಮಾಡೋಕಾಗುತ್ತೆ ಹೇಳಿ" ಎಂದು ಹೇಳಿದ ಪುಟ್ಟಯ್ಯ, ಕೊಂಚ ದನಿ ತಗ್ಗಿಸಿ "ಕೃಷ್ಣೇಗೌಡರ ಆನೆಗೂ ಕಚ್ಚಿದೆ ಅಂತ ವರ್ತಮಾನ ಉಂಟಪ್ಪ. ಅವರು ಆನೆ ಕರಕೊಂಡು ಬಂದು ಇಂಜೆಕ್ಷನ್ ಕೊಡು ಅಂದರೆ ನಾವು ಏನು ಮಾಡೋಣ ಹೇಳಿ? ಅದಕ್ಕೆ ಚುಚ್ಚೋ ಸೂಜೀನೂ ನಮ್ಮತ್ರ ಇಲ್ಲ. ಆನೆಗೆ ಕೊಡೋ ಡೋಸೇಜೂ ಗೊತ್ತಿಲ್ಲ. ಬಾಡಿ ತೂಕದ ಮೇಲೆ ಡೋಸೇಜೂ ತೀರ್ಮಾನ ಮಾಡಬೇಕಂತೆ. ದುಣ್ಣಮುಂಡೆ ಆನೆಯನ್ನು ತೂಗೋದಕ್ಕೆ ತಕ್ಕಡಿ ಎಲ್ಲಿಂದ ತರ್ತೀರ ಹೇಳಿ" ಎಂದ.

ಆನೆಗೆ ಹುಚ್ಚು ಹಿಡಿದರೆ ಏನು ಕತೆ ಎಂದು ಯೋಚಿಸಿ ನನಗೆ ಗಾಬರಿಯಾಯ್ತು.

"ಹೋಗ್ರಿ ಹೋಗ್ರಿ! ಆನೆಗಳ ಹತ್ರ ಹೋಗೋದಕ್ಕೆ ನಾಯಿಗಳಿಗೆ ಧೈರ್ಯ ಇದೆಯೇನ್ರಿ? ಕಚ್ಚಿದರೆ ಆನೆ ಚರ್ಮಕ್ಕೆ ನಾಯಿಹಲ್ಲು ನಾಟುವುದಾದರೂ ಹ್ಯಾಗೆ? ಸುಮ್ಮಸುಮ್ಮನೆ ಊಹಾಪೋಹ ಹಬ್ಬಿಸಬಾರದು" ಎಂದೆ.

"ಹುಚ್ಚುನಾಯಿ ಹತ್ರ ಧೈರ್ಯದ ಪ್ರಶ್ನೇನೆ ಬರೋಲ್ಲ ಸಾರ್, ಅವಕ್ಕೆ ತಲೆಕೆಟ್ಟು ಕಂಡಕಂಡಿದ್ದಕ್ಕೆಲ್ಲಾ ಕಚ್ಚುತ್ತವೆ ಅಷ್ಟೆ. ಆಸ್ಪತ್ರೆಗೆ ತಗೊಂಡು ಬಂದವನ್ನ ನೋಡಿದೀನಲ್ಲ. ಮೇಜು ಕುರ್ಚಿ ಕಾಲಿಗೆಲ್ಲಾ ಕಚ್ಚುತ್ತವೆ. ಆನೆ ಚರ್ಮಕ್ಕೆ ಹಲ್ಲು ನಾಟೋದಿಲ್ಲ ನಿಜ. ಆದರೆ ಹಲ್ಲು ನಾಟಬೇಕೆಂದೇನೂ ಇಲ್ಲ ತಗೊಳ್ಳಿ. ಅದರ ಮೈ ಮೇಲೆ ಒಂದು ಸಣ್ಣ ಗೀರುಗಾಯ ಇದ್ರೂ ಸಾಕು. ಹುಚ್ಚುನಾಯಿ ಜೊಲ್ಲು ತಾಗಿದರೆ ಇವತ್ತಲ್ಲ ಇನ್ನು ಒಂದು ವರ್ಷಕ್ಕಾದರೂ ಹುಚ್ಚು ಬಂದೇಬರ್ತದೆ" ಎಂದ ಪುಟ್ಟಯ್ಯ.

ನನಗೆ ಮುನಿಸಿಪಾಲಿಟಿಯವರ ಮೇಲೆ ರೋಷ ಏರಿದ್ದನ್ನು ನೋಡಿ "ನಿಮ್ಮಂತೋರು ಒಂದ್ಮಾತು ಹೇಳಬೇಕು ಸಾರ್ ಪ್ರೆಸಿಡೆಂಟರಿಗೆ. ನಾಳೆ ಪೇಪರಲ್ಲಿ ಬರೀತೀರ ಅಂತಾದ್ರು ಹೆದರ್ಕೊಂಡು ಬಂದೋಬಸ್ತ್ ಮಾಡುತ್ತಾರೆ" ಎಂದ ಜಬ್ಬಾರ್.

"ಈ ಊರಲ್ಲಿ ಯಾರೂ ಹೇಳೋರ್ ಕೇಳೋರ್ ಇರೋಹಂಗೆ ಕಾಣೊಲ್ಲ. ನಡೀರಿ ಒಂದ್ಮಾತು ಸರ್ಯಾಗಿ ಹೇಳೇಬಿಡೋಣ ಪ್ರೆಸಿಡೆಂಟರಿಗೆ" ಎಂದ ನಾನು ತೀರ್ಮಾನಕ್ಕೆ ಬಂದೆ.

"ಗೌಡ್ರೂ ಲಿಂಗಾಯ್ತರೂ ಜಗಳ ಆಡ್ಕೊಂಡು ಆ ಖಾನ್ ಸಾಬರನ್ನ ಪ್ರೆಸಿಡೆಂಟು ಮಾಡಿದ್ದಾರೆ. ಆ ಮನ್ಷ ಇಪ್ಪತ್ನಾಲ್ಕು ಗಂಟೆ ನಮಾಜ್ ಮಾಡ್ತ ಮಸೀದೀಲೇ ಕೂತಿರ್ತಾನೆ. ಕೇಳಿದರೆ ನಾನು ಕುರಾನ್ ಪ್ರಕಾರ ನಡ್ಕೋಳ್ತಿದ್ದೀನಿ ಅಂತಾನೆ. ಮುನಿಸಿಪಾಲಿಟಿಯವರೆಲ್ಲಾ ಮಸೀದಿ ಸುತ್ಮುತ್ತಾ ಕಸಾ ತೆಗೀತ ಕೂತಿರ್ತಾರೆ" ಎಂದು ನಿರರ್ಗಳವಾಗಿ ಚಾಡಿ ಒದರುತ್ತಿದ್ದ ಪುಟ್ಟಯ್ಯ ಫಕ್ಕನೆ ಮಾತಿನ ಮಧ್ಯೆ ಜಬ್ಬಾರನೂ ಮುಸಲ್ಮಾನನೆಂಬುದನ್ನು ಗಮನಿಸಿ "ಹಂಗಂತಾ ಸಾಬರಮೇಲೆ ನಂಗೇನೂ ಸಿಟ್ಟಿಲ್ಲಾ. ನಂದೇನಪ್ಪಾಂದರೆ ಇರೋ ವಿಷ್ಯ ಮುಚ್ಚುಮರೆ ಇಲ್ಲದೆ ಹೇಳ್ಬಿಡೋದು. ಹಿಂದೊಂದು ಮುಂದೊಂದು ಮಾಡೋರನ್ನ ಕಂಡರೆ ನಂಗಾಗೋದೇ ಇಲ್ಲ" ಎಂದು ಜಾಗರೂಕನಾದ.

"ನಾವು ಬರ್ತೀವಿ, ನೀವು ಮುಂದೆ ನಡೀರಿ ಸಾರ್. ಈ ತರ ತೊಂದರೆ ಆಗಿದೆ ಅಂತ ಹೇಳೋದಕ್ಕೆ ನಮಗೇನು ಭಯವ? ಹುಚ್ಚು ನಾಯಿ ಕೈಲಿ ಕಚ್ಚಿಸ್ಕೊಂಡು ಪ್ರಾಣ ಕಳ್ಕೊಳ್ಳೋರು ನಾವಲ್ವ? ಪ್ರೆಸಿಡೆಂಟ್ರಿಗೇನು ಗೊತ್ತಾಗುತ್ತೆ ಹೇಳಿ" ಎಂದು ನಿರ್ಧಾರದ ದನಿಯಲ್ಲಿ ಜಬ್ಬಾರ್ ಹೇಳಿದ.

ನಾನು ಸ್ಕೂಟರ್ ಸ್ಟಾರ್ಟ್ ಮಾಡಿಕೊಂಡು ಅವರಿಬ್ಬರಿಗೂ ಬರಲು ಹೇಳಿ ಮುನಿಸಿಪಲ್ ಆಫೀಸಿನ ಕಡೆಗೆ ಹೊರಟೆ. ಕೊಂಚ ದೂರ ಹೋಗಿ ಹಿಂದಿರುಗಿ ನೋಡಿದರೆ ಜಬ್ಬಾರ್, ಪುಟ್ಟಯ್ಯ ಇಬ್ಬರೂ ಸಂಪೂರ್ಣ ವಿರುದ್ಧ ದಿಕ್ಕಿನಲ್ಲಿ ಕಾಲು ಕೀಳುತ್ತಿರುವುದು ಕಂಡಿತು. ನನಗೆ ತಕ್ಷಣ ಈ ಅವಿವೇಕಿಗಳ ಮಾತಿನ ತಾಳಕ್ಕೆ ತಕ್ಕಂತೆ ಕುಣಿದ ನನ್ನ ನಡವಳಿಕೆ ಬಗ್ಗೆ ನಗುಬಂತು. ಇವರಾರಿಗೂ ಇಲ್ಲದ ಆಸ್ಥೆ ನನಗೇಕೆ ಎಂದು ಚಿಂತಿಸಿದೆ. ಆದರೂ ಪ್ರೆಸಿಡೆಂಟರ ಹತ್ತಿರ ಜಗಳ ಮಾಡಲು ಮಾನಸಿಕವಾಗಿ ತಯ್ಯಾರಾಗಿದ್ದರಿಂದ ನನ್ನ ಕೋಪಕ್ಕೊಂದು ಹೊರದಾರಿ ತೋರಿಸಲೇಬೇಕೆಂದು ದೃಢಮನಸ್ಸಿನಲ್ಲಿ ಮುನಿಸಿಪಲ್ ಆಫೀಸಿನತ್ತ ನಡೆದ.

## ಅಧ್ಯಾಯ – ೬

“ಒಳ್ಳೆ ಹೇಳ್ತೀರಿ. ನಂಗೇನು ಈ ನಾಯಿಗಳನ್ನ ಕಂಡರೆ ಪ್ರೀತೀನಾ ಸ್ವಾಮಿ! ಖುರಾನ್ ಪರ್ಕಾರ ಈ ನಾಯಿಗಳೂ ನಮಗೆ ಹಂದಿಗಳಿಗೆ ಸಮ. ನಿಜವಾದ ಮುಸಲ್ಮಾನ್ ಆದೋನು ನಾಯಿ ಮುಟ್ಟಿಸಿಕೊಳ್ಳಲೇ ಕೂಡದು. ಅದು ಮುಟ್ಟಿಸಿಕೊಂಡರೆ ಮೈಗೆಲ್ಲಾ ಕೆಮ್ಮಣ್ಣು ಹಚ್ಕೊಂಡು ಸ್ನಾನಮಾಡಬೇಕಂತೆ! ಅಂಥದರಲ್ಲಿ ನಾನು ಈ ನಾಯಿಗಳನ್ನು ಸಾಕಿಕೊಂಡಿದ್ದೀನಿ ಅಂತೀರಲ್ಲ. ಅವನ್ನೆಲ್ಲ ಎರಾಡಿಕೇಟ್ ಮಾಡೊದಕ್ಕೆ ನಾವು ಕೈಲಾದದ್ದೆಲ್ಲ ಮಾಡಿದ್ದೇವೆ. ಶೂಟ್ ಮಾಡಿಸಿದ್ದೇನೆ. ಪಾಯ್ಸನ್ ತರಿಸಿ ಹಾಕಿಸಿದ್ದೇನೆ. ಒಬ್ಬ ಮುನಿಸಿಪಲ್ ಪ್ರೆಸಿಡೆಂಟ್ ಆದೋನು ಇನ್ನೇನು ಮಾಡಬಹುದು ಹೇಳ್ರಿ? ಈ ಸಾರಿ ನಾವು ತರಿಸಿದ ಡಾಗ್ ಪಾಯ್ಸನ್ ಅಷ್ಟೊಂದು ಎಫೆಕ್ಟಿವ್ ಆದ ಹಾಗೆ ಕಾಣಲಿಲ್ಲ. ಅದೇನು ಅದನ್ನೂ ಕಲಬೆರಕೆ ಮಾಡ್ತಾರೋ ಏನೋ. ಆದರೂ ಈ ವರ್ಷ ಇನ್ನೂರು ಮುನ್ನೂರು ನಾಯಿನಾದ್ರೂ ಸಾಯಿಸಿದ್ದೇವೆ ನೋಡಿ. ಏನಪ್ಪಾ ಅಂದರೆ ಅವು ಮುನಿಸಿಪಾಲಿಟಿ ಹದ್ದುಬಸ್ತಿನ ಒಳಗೆ ಇದ್ರೆ ಮಾತ್ರ ನಾವು ಆಕ್ಷನ್ ತಗೋಬಹುದು” ಎಂದು ಬಿಳಿಯ ಗಡ್ಡದ ಖಾನ್ ಸಾಹೇಬರು ತಮ್ಮ ಗಡ್ಡ ನೀವಿಕೊಳ್ಳುತ್ತ ತಮ್ಮ ಡಾಗ್ ಎರಾಡಿಕೇಶನ್ ಪ್ರೋಗ್ರಾಮನ್ನು ವಿವರಿಸಿದರು.

“ನಿಮ್ಮ ನೌಕರರು ಒಂದೇ ಒಂದು ನಾಯನ್ನೂ ಕೊಲ್ಲದೆ ನಿಮಗೆ ಸುಳ್ಳು ಲೆಕ್ಕ ಕೊಟ್ಟಿದ್ದಾರೆ ಖಾನ್‌ಸಾಬ್. ಒಂದು ಸಾರಿ ನೀವು ಪೇಟೆ ಬೀದಿಯಲ್ಲಿ ತಿರುಗಾಡಿದರೆ ಗೊತ್ತಾಗುತ್ತೆ. ಒಂದು ಕೆಲಸ ಮಾಡಿ, ಇನ್ನು ಮೇಲೆ ನಾಯಿ ಕೊಂದರೆ ಬಾಲ ತಗೊಂಡು ಬಂದು ತೋರಿಸಬೇಕು ಅಂತ ಹೇಳಿ. ಅವರ ಲೆಕ್ಕ ಸುಳ್ಳೋ ನಿಜವೋ ನಿಮಗೆ ಗೊತ್ತಾಗುತ್ತೆ.”

“ಮೂಡಿಗೆರೆ ಒಳಗೆ ಇನ್ನೂ ತುಂಬಾ ಕಂತ್ರಿ ನಾಯಿಗಳಿರೋದು ನಿಜ. ಅದಕ್ಕೆ ಕಾರಣ ಹೇಳ್ತೀನಿ ಕೇಳಿ. ಅವೆಲ್ಲಾ ಇಲ್ಲೀ ನಾಯಿಗಳಲ್ಲಾ! ಹೊರಗಡೆಯಿಂದ ಇಲ್ಲಿಗೆ ಎಕ್ಸ್‌ಪೋರ್ಟ್ ಆದವು. ಲಾರೀಲಿ ನಾಯಿಗಳನ್ನ ತುಂಬಿಕೊಂಡು ಬಂದು ಇಲ್ಲಿ ರಾತ್ರೋರಾತ್ರಿ ಬಿಟ್ಟು ಹೋಗಿದ್ದಾರೆ. ಅವರ ಧರ್ಮದ ಪರ್ಕಾರ ಪ್ರಾಣಿ ಹಿಂಸೆ ಮಾಡೊಹಾಗಿಲ್ಲ. ಅದಕ್ಕೆ ನಾಯಿಕಾಟ ವಿಪ್ರೀತ ಆದ ಕೂಡಲೆ ಲಾರೀಲಿ ತುಂಬಿಸಿ ದೂರ ಎಲ್ಲಾದರೂ ಬಿಟ್ಬಿಡ್ತಾರೆ.”

“ಸರ್ಕಾರಕ್ಕೆ ಯಾಕೆ ನೀವು ಕಂಪ್ಲೇಟು ಮಾಡಬಾರದು?”

“ನಾನೂ ಆಕ್ಷನ್ ತಗೊಂಡೇಬಿಡ್ತಿದ್ದೆ. ಆದರೆ ಇವನ್ನೆಲ್ಲಾ ಯಾರು ನೋಡಿದ್ದಾರೆ? ಏನು ದಾಖಲೆ ಇದೆ? ಯಾರು ಸಾಕ್ಷಿ ಹೇಳ್ತಾರೆ? ಎಲ್ಲಾ ರಾತ್ರೋರಾತ್ರಿ ನಡೆಯೋ ಕೆಲಸ.”

“ಅವರ ಅಹಿಂಸೆಗೆ ಬೆಂಕಿ ಹಾಕಲಿ! ನಿನ್ನೆ ಏಳು ಜನಕ್ಕೆ, ಸುಮಾರು ದನಗಳಿಗೆ ಹುಚ್ಚುನಾಯಿ ಕಚ್ಚಿದೆಯಂತೆ. ನೀವು ಕಂಪ್ಲೇಟು ಕೊಡದಿದ್ದರೆ ಬೇಡ. ನಿಮಗೆ ಗ್ಯಾರಂಟಿ ಗೊತ್ತಿದ್ದರೆ ಹೇಳಿ. ನಾನಾದರೂ ಪತ್ರಿಕೆಗಳಿಗೆ ಬರೆಯುತ್ತೇನೆ.”

"ಅಯ್ಯಯ್ಯೋ ಹಂಗೆಲ್ಲಾ ಮಾಡಬೇಡಿ ಸಾರ್. ಇದು ಭಾಳ ಸೆನ್ಸಿಟಿವ್ ಮ್ಯಾಟರು. ನಾನು ಮುಸಲ್ಮಾನ್ ಆಗಿದ್ದುಕೊಂಡು ಬೇರೆ ಧರ್ಮದವರ ವಿರುದ್ಧ ಹೇಳಿಕೆ ಕೊಟ್ಟರೆ ತುಂಬಾ ಅಪಾರ್ಥ ಬಂದುಬಿಡುತ್ತೆ. ಹಿಂದೂಗಳ ಮನಸ್ಸಿಗೆ ಯಾಕೆ ನೋವು ಮಾಡಬೇಕು? ಅವರವರ ಧರ್ಮ ಅವರಿಗೆ ದೊಡ್ಡದಲ್ಲವೆ?"

"ಅಲ್ರೀ ಖಾನ್ ಸಾಹೇಬ್ರೆ, ಆ ನಾಯಿಗಳ ಕೈಲಿ ಕಚ್ಚಿಸಿಕೊಳ್ಳಬೇಕಾದರೆ, ಹೊಟ್ಟೆಗೆ ಹದಿನಾಲ್ಕು ಇಂಜೆಕ್ಷನ್ ಚುಚ್ಚಿಸಿಕೊಳ್ಳಬೇಕಾದರೆ, ಆಗ ನೋವಾಗೋದಿಲ್ಲೇನ್ರಿ?"

"ಏನ್ಮಾಡ್ತೀರಿ ಜನಕ್ಕೆ ತಿಳುವಳಿಕೆ ಕಡಿಮೆ. ಉಳಿದವರ ಮೇಲೆ ಸುಳ್ಳು ಆಪಾದನೆ ಮಾಡ್ತಿದಾನೆ ಅಂದು ಬಿಡ್ತಾರೆ ಸಲೀಸಾಗಿ. ಎಷ್ಟು ನಾಯಿ ಕೊಂದರೂ ಮತ್ತೆ ಹೊಸಾ ನಾಯಿಗಳು ಎಲ್ಲಿಂದ ಬರ್ತಿವೆ ಅಂತ ಚೂರೂ ಯೋಚನೆ ಮಾಡೋಲ್ಲ."

ನನ್ನ ಎಲ್ಲ ಪ್ರಶ್ನೆ ತಕರಾರುಗಳಿಗೂ ಈತನ ಹತ್ತಿರ ರೆಡಿಮೇಡ್ ಉತ್ತರಗಳು ಸಿದ್ಧವಾಗಿರುವಂತೆ ಕಂಡಿತು. ಸರ್ಕಾರಿ ವ್ಯವಹಾರದ ರೀತಿ ನಿರ್ಭಾವದಲ್ಲಿ ಈತ ನನ್ನ ಬಳಿ ಮಾತಾಡುತ್ತಿದ್ದ. ಸ್ಟಾಕ್‌ಮನ್ ಪುಟ್ಟಯ್ಯ ಚಿತಾವಣಿ ಮಾಡಿ ಎಬ್ಬಿಸಿದ್ದ ಸಿಟ್ಟೆಲ್ಲಾ ಖಾನ್ ಸಾಹೇಬರ ದೇಶಾವರಿ ಉತ್ತರಗಳಿಂದ ಇಳಿದೇಹೋಯ್ತು.

"ಖಾನ್ ಸಾಹೇಬ್ರೆ ನೀವು ಸಣ್ಣಪುಟ್ಟ ವಿಷಯ ಎಲ್ಲ ತಗೊಂಡುಬಂದು ಧರ್ಮಕ್ಕೆ ಗಂಟಾಕಿ ಸುಮ್ಮಸುಮ್ಮನೆ ಕಾಂಪ್ಲಿಕೇಟ್ ಮಾಡ್ತಿದ್ದೀರ. ಮುನಿಸಿಪಲ್ ಪ್ರೆಸಿಡೆಂಟಾಗಿ ಈ ಊರನ್ನು ಸ್ವಚ್ಛವಾಗಿಡೋದು ನಿಮ್ಮ ಕರ್ತವ್ಯ. ಅದು ಬಿಟ್ಟು ಅದರಿಂದ ಬರೋ ರೋಗಗಳಿಗೆ ಉಚಿತ ಔಷಧಿ ಹಂಚುತ್ತೀನಿ ಎನ್ನುತ್ತಿದ್ದೀರ."

ಈ ಊರಿನೋರೆಲ್ಲ ನಿಮ್ಮ ತರಾನೆ ಯೋಚನೆ ಮಾಡಿದ್ರೆ ನಂಗ್ಯಾಕೆ ಕಷ್ಟಾ ಇತ್ತು ಸಾರ್. ಈ ಕುರ್ಚಿ ಮೇಲೆ ಕೂತ್ಕೊಂಡೋನು ಎಲ್ರಿಗೂ ಒಪ್ಪಿಗೆ ಆಗೋಹಾಗೆ ನಡ್ಕೊಬೇಕಾಗುತ್ತೆ. ಅದು ಬಂದಿರೋದು ಕಷ್ಟ ನಂಗೆ. ನಾನ್ಯಾಕೆ ಕಾಂಪ್ಲಿಕೇಟ್ ಮಾಡೋದಕ್ಕೆ ಹೋಗಲಿ ಹೇಳಿ. ಮೊನ್ನೆ ನೋಡಿ ಆ ಕೃಷ್ಣೇಗೌಡರ ಆನೇನ ಪೇಟೆ ಬೀದೀಲಿ ಕರ್ಕೊಂಡು ಹೋಗಬೇಡಿ ಅಂದಿದ್ದಕ್ಕೆ ನೀವು ರಂಜಾನ್ ದಿನ ಒಂಟೇನ ಪೇಟೆ ಬೀದೀಲಿ ಕರ್ಕೊಂಡು ಹೋಗಬಹುದು, ನಾವು ಆನೆ ಕರಕೊಂಡು ಹೋಗಬಾರದು ಅಂತ ಹೇಳೋದಕ್ಕೆ ನೀನು ಯಾರೂಂತ ಒಂದಷ್ಟು ಜನ ಜಗಳಕ್ಕೇ ಬಂದರು. ಆನೆ ಪೇಟೆ ಬೀದಿಯಲ್ಲಿ ಹೋಗ್ತಾ ಹಣ್ಣಂಗಡಿಯವನ ಸೇಬಿನಹಣ್ಣು, ದ್ರಾಕ್ಷಿ, ತರ್ಕಾರಿ ಅಂಗಡಿಯವನ ಮೂಲಂಗಿ, ಕೊತ್ತಂಬರಿ ಸೊಪ್ಪು ಎಲ್ಲ ತಗೊಂಡು ತಿಂದಿದೆ. ಇಲ್ಲಿ ತರಬೇಡಿ ಆನೇನ ಅಂದರೆ ಅದನ್ನ ಹಿಂದೂ ಮುಸ್ಲಿಂ ಪ್ರಶ್ನೆ ಮಾಡ್ತಾರೆ. ಇಂಥಾ ಜನಗಳಿಗೆ ಏನೇಳ್ತೀರ? ಸಿಂಪಲ್ ವಿಷಯ ಕಾಂಪ್ಲಿಕೇಟ್ ಮಾಡ್ತೀನಿ ಅಂತಿದೀರ. ಈ ಕುರ್ಚಿ ಮೇಲೆ ತಾವು ಒಂದಲ್ಲ ಒಂದಿನ ಕೂತ್ಕೋಂಡ್ರೆ ಗೊತ್ತಾಗುತ್ತೆ ಹೇಗೆ ಎಲ್ಲ ಕಾಂಪ್ಲಿಕೇಟ್ ಆಗಿದೆ ಅನ್ನೋದು."

"ನಿನ್ನೆ ಹುಚ್ಚುನಾಯಿ ಅದಕ್ಕೂ ಕಚ್ಚಿದೆ ಅನ್ತಾರೆ. ಅದಕ್ಕೇನಾದ್ರೂ ಹುಚ್ಚು ಬಂದರೆ ಏನು ಕತೆ ಯೋಚಿಸಿ ಖಾನ್ ಸಾಹೇಬ್ರೆ. ನಿಮ್ಮ ಮಾತು ಕೇಳಿದರೆ ಇಂಥಾ ಪರಿಸ್ಥಿತೀಲಿ ಒಬ್ಬ ಮುನಿಸಿಪಲ್ ಪ್ರೆಸಿಡೆಂಟ್‌ಗೆ ಏನೇನೂ ಅಧಿಕಾರವೇ ಇಲ್ಲ. ಸುಮ್ಮನೆ ಇದ್ದಿದ್ದನ್ನ ಮುಂದುವರಿಸಿಕೊಂಡು ಹೋಗೋದನ್ನು ಬಿಟ್ಟು ಎಂದಾಗುತ್ತೆ."

"ಸರಿಯಾದ ಮಾತು ಹೇಳಿದಿರಿ. ಒಪ್ಪತಕ್ಕಂಥಾ ಮಾತು ಅದು. ಇದ್ದಿದ್ದನ್ನು ನಡಸ್ಕೊಂಡು ಹೋಗೋದೆ ಕಷ್ಟ ಆಗಿದೆ. ಜನಗಳ ವಿಶ್ವಾಸನೂ ಉಳಿಸ್ಕೊಂಡು, ಕುರ್ಚೀನೂ ಉಳಿಸಿಕೊಂಡು ಟರ್ಮು ಮುಗಿಸಿದರೆ ಸಾಕಾಗಿದೆ ನನಗೆ."

# ಅಧ್ಯಾಯ – ೭

ಎಲ್ಲೆಂದರಲ್ಲಿ ಎಳೆದಿರುವ ತರತರದ ನೂರಾರು ತಂತಿಗಳು ಮೂಡಿಗೆರೆ ಆಧುನಿಕವಾಗುತ್ತಿರುವುದಕ್ಕೆ ಸಾಕ್ಷಿಯಾಗಿದ್ದವು. ಮಲ್ಯರ ನಾಲ್ಕಂತಸ್ತಿನ ಲಾಡ್ಜಿಂಗ್ ಹತ್ತಿ ಕೆಳಗೆ ನೋಡಿದರೆ ಈ ತಂತಿಗಳ ಜಾಲದೊಳಗೆ ಇಡೀ ಮೂಡಿಗೆರೆ ಬಲೆಗೆ ಬಿದ್ದು ಮಿಸುಕಾಡುವ ಮೃಗದಂತೆ ಕಾಣುತ್ತದೆ. ಎಲೆಕ್ಟ್ರಿಕ್ ಆಫೀಸಿನವರ ಪ್ರೈಮರಿ ಲೈನುಗಳು ಸೆಕೆಂಡರಿ ಲೈನುಗಳು ಟೆಲಿಫೋನಿನವರ ಕನೆಕ್ಷನ್ ಲೈನುಗಳು, ಟ್ರಂಕ್ ಲೈನುಗಳು ಇದರ ನಡುವೆ ಡಿಷ್ ಆಂಟೆನಾ ಕೇಬಲ್‌ಗಳು! ಈ ತಂತಿಗಳ ಕಂಬಗಳ ನೂಕುನುಗ್ಗಲಿನಲ್ಲಿ ಕಾಗೆ ಗುಬ್ಬಿಗಳು ಸಹ ಕೆಳಮಟ್ಟದಲ್ಲಿ ಹಾರಾಡುವುದನ್ನು ಕೈ ಬಿಟ್ಟಿದ್ದವು. ಗಾಳಿ ಬೀಸುವುದು ಸಿಡಿಲು ಹೊಡೆಯುವುದು ಇರಲಿ, ಯಾರಾದರು ಗಟ್ಟಿಯಾಗಿ ಸೀನಿದರೆ ಕೆಮ್ಮಿದರೆ ಸಹ ಜೋಲಾಡುವ ತಂತಿಗಳು ಒಂದಕ್ಕೊಂದಕ್ಕೆ ತಾಗಿ ಡಿಪಾರ್ಟ್‌ಮೆಂಟ್ ಡಿಪಾರ್ಟ್‌ಮೆಂಟುಗಳಿಗೆ ಜಗಳ ಶುರುವಾಗುತ್ತಿತ್ತು. ಯಾವಾಗ ನೋಡಲಿ ಟಿವಿಯಲ್ಲಿ ಚಿತ್ರ ಸರಿಬರುತ್ತಿಲ್ಲ ಎಂದು ಟೆಕ್ನೀಶಿಯನ್‌ಗಳೂ, ಫೋನ್ ಗೊರಗೊರ ಎನ್ನುತ್ತೆ ಎಂದು ಲೈನ್‌ಮನ್‌ಗಳೂ, ಫ್ಯೂಸ್ ನಿಲ್ಲುತ್ತಿಲ್ಲ ಎಂದು ಕರೆಂಟಿನವರೂ ಕಟಿಂಗ್ ಪ್ಲೇಯರ್, ಸ್ಕ್ರೂಡ್ರೈವರ್ರು ಕೈಯಲ್ಲಿ ಹಿಡಿದುಕೊಂಡು ಆಕಾಶ ನೋಡುತ್ತಾ ಎದುರಿಗೆ ಬರುವವರಿಗೆ ಢಿಕ್ಕಿ ಹೊಡೆದುಕೊಂಡು ಓಡಾಡುತ್ತಿರುವುದು ಇಲ್ಲಿ ಕಾಣುವ ಸರ್ವೇಸಾಮಾನ್ಯ ದೃಶ್ಯ.

ಮೂಡಿಗೆರೆಯಿಂದ ನುಗ್ಗೇಹಳ್ಳಿ ಕಡೆಗೆ ಹೋಗಿರುವ ಟೆಲಿಫೋನ್ ಕಂಬಗಳಂತೂ ಹೂಬಿಟ್ಟ ಮರಗಳಂತೆ ಮೇಲಿಂದ ಕೆಳಗಿನವರೆಗೆ ಬಿಳಿಯ ಪಿಂಗಾಣಿ ಇನ್ಸುಲೇಟರುಗಳನ್ನು ಹೊತ್ತುಕೊಂಡು ನಿಂತಿದ್ದವು. ಸುಮಾರು ಮೂವತ್ತು ನಲ್ವತ್ತು ಕನೆಕ್ಷನ್‌ಗಳನ್ನು ಆ ಕಡೆಗೆ ಎಳೆದಿದ್ದರು. ಗೇಣಿಗೊಂದರಂತೆ ಇದ್ದ ತಂತಿಗಳು ಕೊಂಚ ಬಿಸಿಲಿಗೆ ಜೋಲು ಬಿದ್ದರೂ ಸಾಕು ಒಬ್ಬರಿಗೆ ಮಾಡಿದ ಫೋನು ಇನ್ನೊಬ್ಬರಿಗೆ ಹೋಗುತ್ತಿತ್ತು. ಯಾರೋಡನೆಯೋ ಮಾತಾಡಿದರೆ ಇನ್ಯಾರಿಗೋ ಕೇಳುತ್ತಿತ್ತು. ಆ ಕಡೆ ಇದ್ದವರೆಲ್ಲಾ ಒಬ್ಬರಿಗೊಬ್ಬರು ನಂಟರಾಗಿದ್ದರಿಂದ ಅವರಿಗೆ ಫೋನಿನ ಆಚೆ ತುದಿಯಲ್ಲಿ ಯಾರು ಹಲೋ ಎಂದರೂ ಪರ್ವಾಗಿರಲಿಲ್ಲ.

ಇದರಲ್ಲಿ ಜಂಕ್ಷನ್ ಬಾಕ್ಸ್ ಇದ್ದ ಹದಿನೇಳನೇ ಕಂಬ ಕತ್ತಲಾಗುತ್ತಿದ್ದಂತೆಯೇ ಮೆಲ್ಲನೆ ಮೇಲೆದ್ದು ಆಕಾಶದಲ್ಲಿ ನೇತಾಡುವುದು ಅನೇಕರು ಗಮನಿಸಿದ್ದ ಒಂದು ವಿಚಿತ್ರ. ಈ ಗೋಳು ಶುರುವಾಗಿದ್ದು ತಂತಿಗಳು ಸಡಿಲವಾಗಿ ಒಂದಕ್ಕೊಂದು ಮಿಲಾಕತ್ ಆಗುತ್ತವೆಂದು ಅವನ್ನು ಎಳೆದು ಬಿಗಿ ಮಾಡಿದ ಮೇಲೆ. ಹದಿನೇಳನೇ ಕಂಬದ ಅಕ್ಕಪಕ್ಕ ಇದ್ದ ಕಂಬಗಳೆರಡೂ ಮೇಲೆ ಎತ್ತರದಲ್ಲಿ ದಿಣ್ಣೆಯ ಮೇಲೆ ಇದ್ದುವು. ರಾತ್ರಿಯಾಗುತ್ತಿದ್ದಂತೆಯೇ ಚಳಿಗೆ ತಂತಿಗಳು ಕುಗ್ಗುತ್ತಿದ್ದುದರಿಂದ ವಿಪರೀತ ಬಿಗಿಯಾಗಿ ಕಂಬವನ್ನು ಮೆಲ್ಲಗೆ ಮೇಲಕ್ಕೆತ್ತಿಬಿಡುತ್ತಿದ್ದವು. ಬೆಳಗಿನ ಬಿಸಿಲು ತಾಗುತ್ತಿದ್ದಂತೆಯೇ ಬಿಸಿಲ ಶಾಖಕ್ಕೆ ತಂತಿಗಳು ಹಿಗ್ಗಿ ಮೆಲ್ಲಗೆ ಕಂಬ ಗುಂಡಿಯೊಳಗೆ ಕುಳಿತುಬಿಡುತ್ತಿತ್ತು. ಹೀಗಾಗಿ ಸರದಿ ಪ್ರಕಾರ ಬೆಳಿಗ್ಗೆ ಎಲ್ಲಾ ಕಂಬ ತಂತಿಯನ್ನು ಎತ್ತಿ ಹಿಡಿಯುವುದೂ, ರಾತ್ರಿ ಎಲ್ಲಾ ತಂತಿ ಕಂಬವನ್ನು ಎತ್ತಿ ಹಿಡಿಯುವುದೂ ನಡೆದಿತ್ತು.

ಟೆಲಿಫೋನ್ ಲೈನ್‌ಮನ್ ತಿಪ್ಪಣ್ಣ ಈ ಕಂಬ ಹತ್ತುವಾಗ ಇದು ತನಗೆ ಮೃತ್ಯುಸ್ಥಂಭವಾದೀತೆಂದು ತಿಳಿದಿರಲಿಲ್ಲ. ಆತ ಬೆಳಿಗ್ಗೆ ಎಕ್ಸ್‌ಚೇಂಜ್ ಬಳಿಗೆ ಬಂದಾಗ ನುಗ್ಗೇಹಳ್ಳಿ ಕಡೆಯ ಅಷ್ಟೂ ಲೈನುಗಳು ಡೆಡ್ಡಾಗಿವೆ ಎಂದು ಮೇಂಟೆನೆನ್ಸ್‌ನವರು ಹೇಳಿ ಕಳಿಸಿದರು. ಊರಿನಿಂದ ಸಾಕಷ್ಟು ದೂರದಲ್ಲಿದ್ದ ಹದಿನೇಳನೇ ಕಂಬದ ಜಂಕ್ಷನ್ ಬಾಕ್ಸ್ ಪರಿಶೀಲನೆ ಮಾಡಿ, ಯಾವ ಯಾವ ಲೈನು ಡೆಡ್ಡಾಗಿದೆ ತಿಳಿಯಲು ತಿಪ್ಪಣ್ಣ ಆ ಕಂಬ ಹತ್ತಿದ. ಮೂವತ್ತು ನಲವತ್ತು ತಂತಿಗಳ ತೊಡಕಿನೊಳಗೆ ನುಸುಳಿ ತಿಪ್ಪಣ್ಣ ಜಂಕ್ಷನ್ ಬಾಕ್ಸ್ ಬಿಚ್ಚಿ ಸ್ಕ್ರೂಡ್ರೈವರಿನಲ್ಲಿ

ಎಂಥದನ್ನೊ ಮೀಟುತ್ತಿರಬೇಕಾದರೆ ಇದ್ದಕ್ಕಿದ್ದಂತೆ ಅಲ್ಲೇ ಸತ್ತುಹೋದ. ಅನೇಕ ತಂತಿಗಳ ಗೋಜಲಿನೊಳಗೆ ಸಿಕ್ಕಿಕೊಂಡಿದ್ದ ತಿಪ್ಪಣ್ಣನ ಹೆಣ ರಿಪೇರಿ ಭಂಗಿಯಲ್ಲೇ ಕುಳಿತುಕೊಂಡು ಸತ್ತಹಾಗೇ ಕಾಣುತ್ತಲೇ ಇರಲಿಲ್ಲ. ನೋಡಿದವರೆಲ್ಲಾ ಏನೋ ಕಂಬ ಹತ್ತಿ ರಿಪೇರಿ ಮಾಡುತ್ತಿದ್ದಾನೆಂದು ತಿಳಿದು ಅಲಕ್ಷಿಸಿ ತಮ್ಮ ಪಾಡಿಗೆ ನಡೆದರು.

ದಿನ ಕಳೆದ ಮೇಲೆ ನುಗ್ಗೇಹಳ್ಳಿ ರಾಮೇಗೌಡರು ಇನ್ನೂ ಯಾಕೆ ತಮ್ಮ ಫೋನು ಸರಿಯಾಗಿಲ್ಲವೆಂದು ಎಕ್ಸ್‌ಛೇಂಜ್‌ಗೆ ಬಂದು ಕೂಗಾಡಿದಾಗಲೇ ಜೂನಿಯರ್ ಇಂಜಿನಿಯರ್ ರಮೇಶಬಾಬು ಗಮನ ಅತ್ತ ಹೋದುದು.

ರಮೇಶಬಾಬು ತಿಪ್ಪಣ್ಣನ ಸೋಮಾರಿತನ ಶಪಿಸುತ್ತ ಲೈನ್‌ಮನ್ ಶಂಕ್ರಪ್ಪನನ್ನು ಕರೆದುಕೊಂಡು ನುಗ್ಗೇಹಳ್ಳಿ ಲೈನು ನೋಡುತ್ತ ಹೊರಟ. ಜಂಕ್ಷನ್ ಬಾಕ್ಸ್ ಇದ್ದ ಹದಿನೇಳನೇ ಕಂಬದ ಮೇಲೆ ತಿಪ್ಪಣ್ಣ ಕುಳಿತಿದ್ದಾನೆ! ಕೂಗಿದರೂ ಮಾತಿಲ್ಲ! ಕರೆದರೂ ಮಾತಿಲ್ಲ!

ಕೈಯಲ್ಲಿದ್ದ ತಂತಿ ಮೇಲಿಂದಲೇ ಆಫೀಸಿಗೆ ಮಾತಾಡುವ ಫೋನ್ ಕೆಳಗಿಡುತ್ತ "ಏನ್ ಸಾರ್ ಇದೂ! ಏನಾಯ್ತು ಇವನಿಗೆ? ಕಂಬದ ಮೇಲೇ ಯಾಕೋ ಕೈಲಾಸ ಕಂಡಹಾಗೆ ಇದೆಯಲ್ಲಾ" ಎಂದ ಶಂಕರ ಕಾತರ ಕಳವಳದ ದನಿಯಲ್ಲಿ.

"ಹತ್ತಿ ಒಮ್ಮೆ ನೋಡೋ ಮಾರಾಯ. ಅಕಸ್ಮಾತ್ ಜೀವ ಇದ್ದರೆ ತಗೊಂಡು ಹೋಗಿ ಆಸ್ಪತ್ರೆಗೆ ಹಾಕೋಣ. ಯಾರ ಯಾರ ಹಣೇಲಿ ಏನೇನು ಬರ್ದಿರತ್ತೋ ಹೇಳೋದಕ್ಕೆ ಆಗೊಲ್ಲ" ಎಂದ ರಮೇಶಬಾಬು.

ಕಂಬ ಮೂರು ಸಾರಿ ಕಣ್ಣಿಗೆ ಒತ್ತಿಕೊಂಡು ಶಂಕರ ತಂತಿ ಕಂಬ ಅರ್ಧ ಹತ್ತಿದ. ಅಷ್ಟರಲ್ಲಿ ಅವನ ಕೈ ಕಾಲೆಲ್ಲ ಜುಮ್ಮೆಂದು ಇಡೀ ಜೀವ ಒಮ್ಮೆ ನಡುಗಿದಂತಾಗಿ ಅಯ್ಯಯ್ಯೋ ಎಂದು ಕಿರುಚಿದ. ಹಿಡಿತ ಸಡಿಲ ಆಗಿ ಕಂಬದ ಮೇಲೇ ಜಾರಿ ದೊಪ್ಪನೆ ಕೆಳಗೆ ಬಿದ್ದು, ಎದ್ದು, ಬೇಗ ಬೇಗ ಕಂಬದಿಂದ ದೂರ ನಿಂತ.

"ಯಾಕೋ? ಏನಾಯ್ತೋ?" ಎಂದು ರಮೇಶಬಾಬು ಕೇಳುತ್ತ ಹತ್ತಿರಕ್ಕೆ ಓಡಿದ.

"ಇದ್ಕಿದ್ದಂಗೇ ಶಿಡ್ಲು ಹೊಡೆದಂಗಾಯ್ತು ಸಾರ್. ಈ ಕಂಬದೊಳ್ಗೆ ಏನೋ ಸೇರ್ಕೊಂಡಿದೆ" ಎಂದು ಭೂತ ದರ್ಶನವಾದವನ ತರ ಶಂಕರ ತೊದಲಿದ.

ರಮೇಶಬಾಬು ಅನುಭವಕ್ಕೆ ಥಟ್ಟನೆ ಹೊಳೆಯಿತು. ಇದು ದೆವ್ವವೂ ಅಲ್ಲ, ಪಿಶಾಚಿಯೂ ಅಲ್ಲ, ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟಿನವರ ಹೈ ವೋಲ್ಟೇಜ್ ಲೈನು ಎಲ್ಲೋ ಟೆಲಿಫೋನ್ ಲೈನಿಗೆ ತಾಗುತ್ತಿದೆ! ಅದಕ್ಕೇ ನುಗ್ಗೇಹಳ್ಳಿ ಲೈನುಗಳಷ್ಟೂ ಡೆಡ್ಡಾಗಿರೋದು!

"ಕಂಬದೊಳಗೆ ಭೂತಾನೂ ಇಲ್ಲ, ದೆವ್ವಾನೂ ಇಲ್ಲ. ಆ ಹಾಳು ಸೂಳೇಮಕ್ಕಳು ಕರೆಂಟಿನವರಿಗೆ ನಿಮ್ಮ ಲೈನು ನಮ್ಮ ಲೈನತ್ರ ತರಬೇಡ್ರಿ ಅಂತ ಎಷ್ಟು ಹೇಳಿದರೂ ಕೇಳೋಲ್ಲ. ಅವರ ಲೈನು ಎಲ್ಲೋ ನಮ್ಮ ಲೈನಿಗೆ ಟಚ್ಚಾಗ್ತಾ ಇದೆ ಕಣೋ. ತಿಪ್ಪಣ್ಣ ಸತ್ತೋಗಿರೋದು ಅದಕ್ಕೇ. ನಿನ್ನ ಪ್ರಾಣ ಸ್ವಲ್ಪದರಲ್ಲಿ ಉಳ್ಕೊಂಡಿದೆ ತಿಳುಕೋ" ಎಂದ ರಮೇಶಬಾಬು.

"ಸುಖಾಸುಮ್ನೆ ತಿಪ್ಪಣ್ಣನ ಪ್ರಾಣ ತೆಗೆದ್ರಲ್ಲಾ ಸಾರ್. ಅವ್ರನ್ನ ಕರ್ಕೊಂಬಂದು ಈ ಕಂಬಕ್ಕೇ ಕಡಿದು ಬಲಿಕೊಡಬೇಕು" ಎಂದು ಗಟ್ಟಿಯಾಗಿ ವಿದ್ಯುತ್ ಇಲಾಖೆಯವರಿಗೆ ಬಯ್ದು ಗಾಳಿಗೆ ಉಗಿದ ಶಂಕ್ರಪ್ಪ.

ಕಳಸಾ ಬಣಕಲ್ಲು ಲೈನು ಓಪನ್ ಮಾಡಿಸದೆ ತಿಪ್ಪಣ್ಣನ ಹೆಣ ತೆಗೆಯುವ ಹಾಗೆ ಇರಲಿಲ್ಲ. ಇಬ್ಬರೂ ವಿದ್ಯುತ್ ಇಲಾಖೆಗೆ ಬಾಯಿಗೆ ಬಂದಹಾಗೆ ಬಯ್ಯುತ್ತ ಮೂಡಿಗೆರೆ ದಾರಿ ಹಿಡಿದರು. ವಿದ್ಯುತ್ ಇಲಾಖೆಯವರು ಬೇಕೆಂದೇ ಕರೆಂಟ್ ಕೊಟ್ಟು ತಿಪ್ಪಣ್ಣನನ್ನು ಸಾಯಿಸಿದರು ಎನ್ನುವಂತೆ ಎಕ್ಸ್‌ಛೇಂಜಿನಲ್ಲಿದ್ದ ಎಲ್ಲರಿಗೂ ಹೇಳಿದರು.

ಟೆಲಿಫೋನ್ ಸಿಬ್ಬಂದಿ ಎಲ್ಲ ಸುದ್ದಿ ಕೇಳಿ ರೇಗಿ ಬೆಂಕಿಯಾದರು. ನಾನು ಪೋಸ್ಟ್ ಮಾಡಲು ಮೂಡಿಗೆರೆಗೆ ಹೋದಾಗ ಎಲ್ಲ ಮಿಂಚಿನ ಮುಷ್ಕರ ಮಾಡಿ ಡೌನ್‌ವಿತ್ ಕೂಗುತ್ತಾ ರಸ್ತೆಯಲ್ಲಿ ಹೋಗುತ್ತಿದ್ದರು. ನಾರಾಯಣ, ದುರ್ಗಪ್ಪ ಇಬ್ಬರೂ ರಸ್ತೆ ಬದಿಯಲ್ಲಿ ಗಾಬರಿಗೊಂಡು ನಿಂತಿದ್ದರು.

ನಾರಾಯಣ ದುರ್ಗಪ್ಪ ಇಬ್ಬರೂ ನನಗೆ ನಮಸ್ಕಾರ ಮಾಡಿದಾಗ "ಇದೇನ್ರಯ್ಯ ಸಮಾಚಾರ. ನಿಮಗೆ ಧಿಕ್ಕಾರ ಕೂಗ್ತಿದಾರಲ್ಲ?" ಎಂದು ಕೇಳಿದೆ.

ದುರ್ಗಪ್ಪ ಒಂದು ನೀಳ ನಿಟ್ಟುಸಿರು ಬಿಟ್ಟು "ಏನು ಸಮಾಚಾರ ಅಂತ ಹೇಳಲಿ ಸಾರ್. ಒಂದು ಮಾತಲ್ಲಿ ಹೇಳೋದಾದ್ರೆ ಎಲ್ಲ ನಮ್ಮ ಗ್ರಾಚಾರ ಅಷ್ಟೆ" ಎಂದು ತಿಪ್ಪಣ್ಣ ಕಂಬದಮೇಲೆ ಸತ್ತು ಬಿದ್ದಿರುವುದನ್ನು ಸವಿಸ್ತಾರವಾಗಿ ನನಗೆ ಹೇಳಿದ.

"ಅಲ್ಲೋ ದುರ್ಗಣ್ಣಾ, ಕರೆಂಟು ಲೈನು ಕಟ್ಟಾಗಿ ಟೆಲಿಫೋನು ಲೈನು ಮೇಲೆ ಬಿದ್ರೆ ಟ್ರಾನ್ಸ್‌ಫಾರ್ಮರ್ ಸೆಂಟ್ರಲ್ಲಿ ಫೀಜು ಹೋಗಬೇಕಲ್ಲೋ? ಅದೆಂಗೆ ತಿಪ್ಪಣ್ಣ ಸತ್ತಿದ್ದು. ನಮ್ಮಿಂದ್ಲೇ ಅಂತಾರಿವ್ರು" ಎಂದು ನಾರಾಯಣ ದುರ್ಗಪ್ಪನನ್ನು ಪ್ರಶ್ನಿಸಿದ.

"ನೀನೇಳೋದು ಕರೆಕ್ಟೂ. ಆದ್ರೆ ಹಾಳ್ ಲೈನು ಕಟ್ಟಾಗಿ ಬಿದ್ದಿದ್ರೆ ತಿಪ್ಪಣ್ಣ ಕಂಬದ ಮೇಲೆ ಹತ್ತುತ್ತಾನೆ ಇರ್ಲಿಲ್ವೊ. ಕಂಬ ಮುಟ್ಟಿದಂಗೆ ಶಾಕ್ ಬಂದ್ಬಿಡೋದು. ಈಗಾಗ್ತ ಇರೋದು ಏನು ಗೊತ್ತಾ, ಸುಮ್ನೆ ಟಚ್ಚಾಗ್ತ ಇದೆ ಕಣೋ. ತಿಪ್ಪಣ್ಣ ಕಂಬ ಹತ್ತೋವರ್ಗೂ ಸುಮ್ನೆ ಇದ್ದು ಆಮೇಲೆ ಟಚ್ಚಾಗಿದೆ. ತಿಪ್ಪಣ್ಣನ ಗ್ರಾಚಾರ ಅಷ್ಟೆ" ಎಂದು ದುರ್ಗಪ್ಪ ಟೆಕ್ನಿಕಲ್ ಪಾಯಿಂಟ್ ವಿವರಿಸಿದ.

"ಅದೆಂಗಣ್ಣಾ ಟಚ್ಚಾಗ್ತದೆ? ನಾವೇನು ಟೆಲಿಫೋನು ತಂತೀನೂ ಕರೆಂಟಿನದನ್ನೂ ಒಂದೇ ಕಂಬದ ಮೇಲೆ ಎಳ್ದಿದ್ದೀವಾ? ಸುಂಸುಮ್ನೆ ಟಚ್ಚಾಗ್ತದೆ ಅಂತಿಯಲ್ಲ?"

"ಆಗ್ತದೆ ಕಣಯ್ಯಾ ಆಗ್ತದೆ. ಆ ದರಿದ್ರ ಕೃಷ್ಣೇಗೌಡರ ಆನೆ ದೆಸೆಯಿಂದ ಕಣಯ್ಯಾ" ಎಂದ ದುರ್ಗಪ್ಪ. ಆನೆ ವಿಷಯ ಎತ್ತುತ್ತಲೂ ನನಗೆ ಕೊಂಚ ಕುತೂಹಲವಾಯ್ತು "ಅದೇನ್ಮಾಡುತ್ತಯ್ಯಾ ಆನೆ. ಎಲ್ಲೋ ಕಂಬದ ಮೇಲೆ ಸತ್ತಿರೋ ತಿಪ್ಪಣ್ಣನಿಗೂ, ಎಲ್ಲೋ ಓಡಾಡಿಕೊಂಡಿರೋ ಆನೆಗೂ ಕಟ್ಟೇರಲ್ಲಯ್ಯ. ಬಾಯಿಲ್ಲದೋರು ಈ ಪ್ರಪಂಚದಲ್ಲಿ ಬದುಕೋಹಂಗೇ ಇಲ್ಲವೇನಯ್ಯ?" ಎಂದೆ.

"ಅದ್ಕೇನಾಗಿದೆ ಸ್ವಾಮಿ ರೋಗ. ಕೊಬ್ಬಿ ಕಲ್ಲುಗುಂಡು ಇದ್ದಂಗಿದೆ. ಬದ್ಕೋದಕ್ಕೆ ಗಂಡಾಂತ್ರ ಬಂದಿದ್ದು ತಿಪ್ಪಣ್ಣಂಗೋ ಆನೇಗೋ ಹೇಳಿ? ಆನೆ ಏನ್ಮಾಡುತ್ತೆ ಅಂತೀರಾ, ಕೇಳಿ ಹೇಳ್ತೀನಿ. ಏನ್ಮಾಡುತ್ತೆ ಅಂದ್ರೆ ಮೈ ತುರಿಕೆ ಆಗುತ್ತೂ ಕಂಬಕ್ಕೋ ಗೈವೈರಿಗೋ ಬೆನ್ನು ತಿಕ್ಕುತ್ತೆ. ಅದು ಒಂದು ಸಾರಿ ಬೆನ್ನು ತಿಕ್ತೂ ಅಂದ್ರೆ ಇಲ್ಲಿಂದ ಕೊಟ್ಟಿಗೆಹಾರದವರೆಗೆ ತಂತಿ ಎಲ್ಲ ಗಲಗಲ ಬುಡುಬುಡಿಕೆ ತರ ಅಳ್ಳಾಡ್ತವೆ. ಕಂಬ ಎಲ್ಲಾ ಗೆಜ್ಜೆಕಟ್ಕೊಂಡು

ಕುಣೀತವೆ. ಗೊತ್ತಾಯಿತ್ರಾ. ಮೊನ್ನೆ ಕಾಡೊಳಗೆ ತಂತಿಗೆ ತಂತಿ ನುಲುಕೊಂಡಿತ್ತು ಅಂತ ಗಳಾ ತಗೊಂಡು ಬಿಡಿಸೋದಕ್ಕೆ ಹೋಗಿದ್ದೆ. ದನಾ ಕಾಯೋ ಹುಡುಗ್ರೆಲ್ಲಾ ಹೇಳಿದರಲ್ಲ, ಅದು ಮೈ ತಿಕ್ಕಿದ ಹೊಡ್ತಕ್ಕೆ ತಂತಿ ಎಲ್ಲಾ ಅಲ್ಲಾಡಿ ಅಲ್ಲಾಡಿ ಫಟ್ ಫಟಾರಂತ ಉದ್ದುಕ್ಕೂ ಮಿಂಚು ಎದ್ದುಬಿಡ್ತಂತೆ. ಹುಡುಗ್ರೆಲ್ಲಾ ಸತ್ವೋ ಕೆಟ್ವೋ ಅಂತ ಕಾಡುಬಿದ್ದು ಓಡೋದವಂತೆ." ಎಂದು ದುರ್ಗಪ್ಪ ವಿವರಿಸಿದ.

"ಹಂಗಾದರೆ ಒಂದು ದಿನ ಅದಕ್ಕೂ ಉಂಟು ಗ್ರಾಚಾರ" ಎಂದ ನಾರಾಯಣ.

"ಅದು ಸತ್ರೆ ಸಾಯಲಿ ಬಿಡೋ. ಅದ್ಕೇನು ಮಕ್ಳಾ ಮರಿಯಾ? ಪೋಲಿ ಮುಂಡೇದು. ಈಗ ತಿಪ್ಪಣ್ಣ ಹೋದ್ನಾ? ನಂಗೆ ಚೆನ್ನಾಗಿ ಗೊತ್ತು ಇದರದ್ದೇ ಈ ಕೆಲಸಾ ಅಂತ."

"ಹಂಗಾರೆ ಹೋಗಿ ಫಾರೆಸ್ಟ್‌ನೋರಿಗೆ ಕಂಪ್ಲೇಂಟು ಕೊಡಬೇಕು" ಎಂದ ನಾರಾಯಣ.

"ಆ ಗಾಂಚಾಲಿ ಮನ್‌ಷ ನಾಗರಾಜ ನಿಮ್ಗೆಲ್ಲಾ ಬುದ್ಧಿ ಕಲಿಸ್ತೀನಿ. ಕೋಳ ಹಾಕಿಸ್ತೀನಿ ಅಂತ ಹಾರಾಡ್ತಾನಲ್ಲಯ್ಯ. ಅವನ ಹತ್ರ ಮಾತಾಡೋದು ಹೇಗಯ್ಯ? ಏನಿದ್ರೂ ರೈಟಿಂಗಿನಲ್ಲಿ ಕೊಡಬೇಕಂತೆ! ನಾನೇನು ನೋಡಿದೀನಾ ಆನೆ ಅಲ್ಲಾಡಿಸ್ತಿರೋದನ್ನ, ರೈಟಿಂಗ್‌ನಾಗೆ ಕೊಟ್ಬಿಟ್ಟು ಕೋರ್ಟು ತಿರುಗಿಕೊಂಡು ಕಾಲ ಕಳೀತೀಯ?"

"ಹಂಗಾರೆ ಈಗೇನ್ಮಾಡೋದೋ ದುರ್ಗಣ್ಣಾ" ಎಂದ ಚಿಂತೆಯಿಂದ ನಾರಾಯಣ. "ಹೋಗಿ ಲೈನು ಓಪನ್ ಮಾಡಿಸಿ ತಿಪ್ಪಣ್ಣನ ಹೆಣಾ ಕೆಳಗಿಳಿಸ್ಕೋಬೇಕು. ಅದೇನು ಅಷ್ಟು ಸಲೀಸಿಲ್ಲ ತಗೋ. ಸತ್ತು ಎರಡು ದಿನ ಆದರೆ ಹೆಣ ಶೆಟಗೊಂಡು ಕಲ್ಲಾಗಿರ್ತದೆ. ಇಪ್ಪತ್ತಾರು ತಂತಿ ಒಳಗೆ ಸಿಕ್ಕಾಕಿಕೊಂಡಿದೆ. ತಂತಿ ಕಟ್ ಮಾಡದೆ ತೆಗಿಯೋದಕ್ಕೆ ಆಗಲ್ಲ ಅದನ್ನ" ಎಂದು ಸ್ವಗತದ ಧಾಟಿಯಲ್ಲಿ ಕಳವಳದಿಂದ ಚಿಂತಿಸಿದ ದುರ್ಗಪ್ಪ.

## ಅಧ್ಯಾಯ – ೮

ಆನೆಗೆ ಜಾತಿಯಸ್ತರ ಬೆಂಬಲವಾಗಲಿ ರಾಜಕಾರಣಿಗಳ ಅಭಯಹಸ್ತವಾಗಲಿ ರಕ್ಷಣೆಗೆ ಕಾಣಲಿಲ್ಲ. ಅದು ಏನೂ ಆಗದ ಹಾಗೆ ಸೊಂಡಿಲಾಡಿಸುತ್ತ ತನ್ನ ದಿನಚರಿಯಲ್ಲಿ ತೊಡಗಿತ್ತು. ಯಾರಿಗೂ ಆನೆ ಬಗ್ಗೆ ಅಂಥ ಕ್ರೋಧವಾಗಲೀ ದ್ವೇಷವಾಗಲೀ ಇರಲಿಲ್ಲ. ಅದೇರೀತಿ ಪ್ರೀತಿ ವಿಶ್ವಾಸಗಳೂ ಇರಲಿಲ್ಲ. ಎಲ್ಲರ ದೇಶಾವರಿ ಮಾತುಗಳಿಂದ, ತಮ್ಮ ಸಂಭಾಷಣೆಯ ಕೊನೆಯಲ್ಲಿ ಅದನ್ನು ಕ್ವಚಿತ್ತಾಗಿ ಪ್ರಸ್ತಾಪಿಸುತ್ತಿದ್ದುದರಿಂದ ಆನೆ ನಿಧಾನವಾಗಿ ಅಪರಾಧಿಯಾಗುತ್ತಾ ಹೋಯ್ತು. ಆನೆ ಒಮ್ಮೆ ಕಾಡಿಗೆ ಹೋಗಿ ಬಂದ ಮೇಲೆ ಯಾಕೋ ಊರಿನ ಜನಗಳ ಧೋರಣೆ ಬದಲಾಗುತ್ತಿತ್ತು. ಯಾರಿಗೂ ಸತ್ಯವೂ ಬೇಕಿರಲಿಲ್ಲ. ನ್ಯಾಯವೂ ಬೇಕಿರಲಿಲ್ಲ. ಆನೆಗಂತೂ ಅದರ ಪರಿವೆಯೇ ಇರಲಿಲ್ಲ. ಅದು ಶೆಖೆ ತಡೆಯಲಾರದೆ ರಸ್ತೆ ಧೂಳೆರಚಿಕೊಳ್ಳುತ್ತ, ಬೀಸಣಿಗೆ ಕಿವಿಗಳನ್ನು ಅತ್ತಿತ್ತ ಆಡಿಸುತ್ತ ತನ್ನ ಪಾಡಿಗೆ ತಾನು ಓಡಾಡಿಕೊಂಡಿತ್ತು. ಊರಿನ ಜನಗಳೆಲ್ಲ ತಮ್ಮ ತಮ್ಮ ಮನೋವಿಕಲತೆಗಳಿಗೆ ಹೊರದಾರಿ ಹುಡುಕುತ್ತಿದ್ದಂತೆ ನನಗೆ ಕಂಡಿತು. ಒಂದು ಸಾರಿ ಎಲ್ಲ ಸಭೆ ಸೇರಿ ಆ ಆನೆಯನ್ನು ಷೂಟ್ ಮಾಡಬೇಕೆಂದು ಕೂಗಾಡುವುದಕ್ಕೆ ಮೊದಲು ಇನ್ನೂ ಒಂದೆರಡು ಘಟನೆಗಳು ನಡೆದವು.

ಹಳೆಕೊಪ್ಪದ ಸುಬ್ಬಣ್ಣನ ಮನೆಯ ಹಿತ್ತಿಲಲ್ಲಿ ಒಂದು ವಿಚಿತ್ರ ವಿದ್ಯಮಾನ ಜರುಗಿತು. ಮೂಡಿಗೆರೆಗೂ ಅದರ ಹಿನ್ನೆಲೆಯಲ್ಲಿರುವ ಮನ್ನಾಜಂಗ್ಲಿಗೂ ನಡುವೆ ಹಳೆಕೊಪ್ಪ ಬರುತ್ತದೆ. ತೋಟದ ಮನೆಯಲ್ಲಿ ಮಲಗಿದ್ದ

ಸುಬ್ಬಣ್ಣನಿಗೆ ಮನೆಯ ಹಿತ್ತಲಲ್ಲಿ ರಾತ್ರಿ ಇದ್ದಕ್ಕಿದ್ದಂತೆ ಅನೇಕ ನಾಯಿಗಳು ಬೊಗಳುವುದು ಕೇಳಿಸಿತು. ಇಷ್ಟೊಂದು ನಾಯಿಗಳು ಎಲ್ಲಿಂದ ತನ್ನ ಮನೆ ಹಿತ್ತಲಿಗೆ ಬಂದವು ಎಂದು ಅಚ್ಚರಿಪಡುತ್ತ ಏನು ಗಲಾಟೆ ನೋಡಲು ಸುಬ್ಬಣ್ಣ ಲಾಟೀನು ಹಿಡಿದು ಹೊರಬಂದ. ಕೊಟ್ಟಿಗೆ ಬಳಿ ಗಲಭೆ ಮಾಡುತ್ತಿದ್ದ ನಾಯಿಗಳನ್ನು ಓಡಿಸಲು ಹಚಾ ಎಂದು ಕೂಗುತ್ತ ಸುಬ್ಬಣ್ಣ ಅತ್ತ ಸಾಗುತ್ತಲೂ ಕೊಟ್ಟಿಗೆ ಕಂಬಗಳು ಲಟಲಟ ಮುರಿದಿದ್ದೂ ಎಂಥದೋ ಕತ್ತಲಲ್ಲಿ ಧಡಧಡ ನಡೆದ ಸದ್ದೂ ಅದರ ಹಿಂದೆಯೇ ನಾಯಿಗಳ ದಂಡು ಬೊಗಳಿಕೊಂಡು ಓಡಿದ್ದೂ ಕೇಳಿಸಿತು. ಗಾಬರಿಯಿಂದ ನೋಡುತ್ತಿದ್ದ ಸುಬ್ಬಣ್ಣನ ಕಣ್ಣೆದುರೇ ಇಡೀ ಕೊಟ್ಟಿಗೆಯ ಮಾಡು ದೊಪ್ಪನೆ ಕುಸಿದುಬಿತ್ತು. ಕೊಟ್ಟಿಗೆಯೊಳಗಿದ್ದ ಹಲವಾರು ಮೇಕೆಗಳು ಅರಚಲು ಶುರುಮಾಡಿದವು. ಅಕ್ಕಪಕ್ಕದ ಮನೆಯವರೂ ಆಳುಗಳೂ ಸೇರಿ ಕುಸಿದು ಬಿದ್ದಿದ್ದ ಮಾಡನ್ನು ಆಚೀಚೆ ಸರಿಸಿ ಮೇಕೆಗಳನ್ನು ಹೊರತೆಗೆಯುವುದರೊಳಗೆ ಕೆಲವು ಸತ್ತೇಹೋದವು.

ಕೊಟ್ಟಿಗೆಯನ್ನೇ ಉರುಳಿಸಿ ಓಡಿ ಹೋಗಬೇಕಾದರೆ ಇದು ಆನೆಯಂಥ ಪ್ರಾಣಿಗೆ ಮಾತ್ರ ಸಾಧ್ಯ ಎಂದು ಊಹಿಸಿದ ಅವರು ಮೇಕೆಯ ಮೇವನ್ನು ಕದ್ದಿರಬೇಕಾದರೆ ಇದು ಕೃಷ್ಣೇಗೌಡರ ಆನೆಯೇ ಸರಿ ಎಂದು ನಿರ್ಧರಿಸಿ ಸತ್ತ ಮೇಕೆಗಳನ್ನು ಎದುರಿಗಿಟ್ಟುಕೊಂಡು ಕೃಷ್ಣೇಗೌಡರ ಆನೆಗೆ ಬಗೆಬಗೆಯಾಗಿ ನಿಂದಿಸತೊಡಗಿದರು. "ಇನ್ನೊಂದು ಸಾರಿ ಅದು ಇತ್ತಲಾಗಿ ಮುಖ ಹಾಕಲಿ, ಅದನ್ನು ಕೋವೀಲೆ ಹೊಡೀತೀನಿ" ಎಂದು ಸುಬ್ಬಣ್ಣ ಅಲ್ಲಿ ಅನುಕಂಪ ಸೂಚಿಸುತ್ತ ನಿಂತಿದ್ದ ಅಕ್ಕಪಕ್ಕದ ಮನೆಯ ಪ್ರೇಕ್ಷಕರೆದುರು ಕೂಗಾಡಿದ.

ಸರಿಯೋ! ತಪ್ಪೋ! ಅವನಿಗಾದ ಅನ್ಯಾಯಕ್ಕೆ ಯಾರಿಗಾದರೂ ಶಿಕ್ಷೆಯಾಗದೆ ಅವನ ಮನಸ್ಸಿಗೆ ಸಮಾಧಾನ ಆಗುವ ಹಾಗೆ ಕಾಣಲಿಲ್ಲ.

ಅದೇ ದಿನ ರಾತ್ರಿ ಶಿವೇಗೌಡರ ಸಾಮಿಲ್ಲಿಗೆ ಕಳ್ಳನಾಟ ಸಾಗಿಸುತ್ತಿದ್ದ ಅಬ್ಬಾಸನ ಲಾರಿ ರಸ್ತೆ ಪಕ್ಕದ ಗೋಣಿ ಮರಕ್ಕೆ ಢಿಕ್ಕಿ ಹೊಡೆದು ಮರದ ದಿಮ್ಮಿಗಳಿಗೂ ಗೋಣಿಮರಕ್ಕೂ ನಡುವೆ ಸಿಕ್ಕಿಬಿದ್ದ ಡ್ರೈವರ್ ಅಬ್ಬಾಸ್, ಕ್ಲೀನರ್ ಕೃಷ್ಣ ಇಬ್ಬರೂ ಅಪ್ಪಚ್ಚಿಯಾಗಿ ಹೋದರು.

ಲೋಡು ಲಾರಿ ಬಿಟ್ಟುಕೊಂಡು ಬರುತ್ತಿದ್ದ ಅಬ್ಬಾಸಿಗೆ ಇದ್ದಕ್ಕಿದ್ದಂತೆ ಎರಡು ದಂ ಬೀಡಿ ಎಳೆಯುವ ತೆವಲು ಶುರುವಾಯ್ತು. ಕ್ಲೀನರ್ ಕೃಷ್ಣನಿಗೆ ಚೂರು ಸ್ಟೇರಿಂಗ್ ಹಿಡಿಯೋ, ಬೀಡಿ ಹತ್ತಿಸಿಕೋತಿನಿ, ಬಾಯಿ ಯಾಕೋ ಒಂಥರಾ ಆಗ್ತಿದೆ ಎಂದು ಅವನ ಕೈಗೆ ಸ್ಟೇರಿಂಗ್ ಕೊಟ್ಟ. ಜೇಬಿನಿಂದ ಬೀಡಿ ತೆಗೆದು ಬಾಯಿಗಿಟ್ಟು, ಬೆಂಕಿ ಕಡ್ಡಿ ಗೀರಿ ಒಂದು ದಂ ಎಳೆದು, ಅದರ ಹೊಗೆಯಲ್ಲೇ ಊದಿ ಕಡ್ಡಿ ನಂದಿಸಿ, ತಲೆ ಎತ್ತಿ ಎದುರು ನೋಡಿದ! ಲಾರಿ ಎದುರು ಮರದ ದೊಡ್ಡ ಕಾಂಡ ಒಂದು ನೇರವಾಗಿ ನುಗ್ಗುತ್ತಿದೆ. ಆದರೂ ಕೈ ಮೀರಿಲ್ಲ, "ಏ ಕೃಷ್ಣಾ, ಸ್ಟೇರಿಂಗ್ ಬಿಡೋ" ಎಂದು ಕೂಗುತ್ತಾ ಸ್ಟೇರಿಂಗಿಗೆ ಕೈ ಹಾಕಿ ಲಾರಿ ಮೂತಿಯನ್ನು ದಾರಿ ಕಡೆಗೆ ತಿರುಗಿಸಲು ಯತ್ನಿಸಿದ. ಆದರೆ ಕೃಷ್ಣನಿಗೆ ಮೈಮೇಲಿನ ಪರಿವೆ ಇದ್ದ ಹಾಗೆ ಕಾಣಲಿಲ್ಲ. ಸ್ಟೇರಿಂಗ್ ಹಿಡಿ ಎಂದು ಡ್ರೈವರಣ್ಣಾ ಹೇಳಿದ್ದೊಂದೇ ಅವನ ತಲೆಯೊಳಗಿತ್ತೋ ಏನೋ. ಸ್ಟೇರಿಂಗ್ ಅಲ್ಲಾಡದ ಹಾಗೆ ವಜ್ರಮುಷ್ಟಿಯಲ್ಲಿ ಹಿಡಿದಿದ್ದ. ಗಡಿಬಿಡಿಯಲ್ಲಿ ನಿಸ್ಸಹಾಯಕನಾಗಿ ಒದ್ದಾಡುತ್ತಿದ್ದ ಅಬ್ಬಾಸಿಗೆ ಬ್ರೇಕ್ ಹಾಕಬೇಕೆಂದು ತಲೆಗೆ ಹೊಳೆದಿದ್ದು ತುಂಬಾ ತಡವಾಗಿ. ಲಾರಿ ಮರಕ್ಕೆ ಢಿಕ್ಕಿ ಹೊಡೆದ ಕೂಡಲೆ ಹಿಂದುಗಡೆ ಇದ್ದ ಅಪಾರ ತೂಕದ ದಿಮ್ಮಿಗಳು ಕ್ಯಾಬಿನ್ ಮುರಿದು ಮುನ್ನುಗ್ಗಿದವು. ಮರಕ್ಕೂ ದಿಮ್ಮಿಗಳಿಗೂ ನಡುವೆ ಸಿಕ್ಕಿದ ಕ್ಲೀನರ್, ಡ್ರೈವರ್ ಇಬ್ಬರೂ ಅಲ್ಲೇ ಸತ್ತುಹೋದರು.

ಬೆಳಿಗ್ಗೆ ಮೂಡಿಗೆರೆಗೆ ಹೋಗುತ್ತ ಅಪಘಾತ ನಡೆದ ಜಾಗದಲ್ಲೇ ಸುಬ್ಬಣ್ಣ ನನಗೆ ಸಿಕ್ಕ. ಅವನು ಬೆಳಿಗ್ಗೆ ಎದ್ದು ತನ್ನ ಕೊಟ್ಟಿಗೆ ಬೀಳಿಸಿದ ಪ್ರಾಣಿ ಯಾವುದೆಂದು ನೋಡಹೋದಾಗ ಅದರ ಹೆಜ್ಜೆ ಗುರುತಿನಿಂದ ಅವನು

ಊಹಿಸಿದಂತೆ ಅದು ಆನೆ ಎನ್ನುವುದು ನಿಜವಾಗಿತ್ತು. ಕೃಷ್ಣೇಗೌಡರ ತೋಟದ ದಿಕ್ಕಿನಲ್ಲಿ ಸಾಗಿದ್ದ ಹೆಜ್ಜೆ ಗುರುತುಗಳನ್ನು ನೋಡುತ್ತ ಆತ ಗೋಣಿ ಮರದವರೆಗೂ ಬಂದಾಗ ಅಲ್ಲಿ ಅಪ್ಪಚ್ಚಿಯಾದ ಲಾರಿ ಕಣ್ಣಿಗೆ ಬಿತ್ತು. ತನ್ನ ಕೊಟ್ಟಿಗೆ ಉರುಳಿಸಿದ್ದು ಕೃಷ್ಣೇಗೌಡರ ಆನೆಯೇ ಎಂದು ತೀರ್ಮಾನಿಸಿ, ಹೆಜ್ಜೆ ಗುರುತು ಹಿಂಬಾಲಿಸುವುದನ್ನು ಕೈ ಬಿಟ್ಟು ಲಾರಿ ಅಪಘಾತದ ಬಳಿ ನೆರೆಯುತ್ತಿದ್ದ ಜನಕ್ಕೆ ನಿನ್ನೆ ರಾತ್ರೆ ತನ್ನ ಮನೆ ಹಿಂದೆ ನಡೆದ ಅನಾಹುತವನ್ನು ವಿವರಿಸುತ್ತ ನಿಂತ.

ಸುಬ್ಬೇಗೌಡ ತನ್ನ ವರದಿ ಎಲ್ಲ ಹೇಳಿ ಮುಗಿಸಿ ಲಾರಿಯೊಳಗೆ ಇಣುಕಿದಾಗ ಕ್ಲೀನರ್, ಡ್ರೈವರ್ ಇಬ್ಬರ ಹೆಣಗಳೂ ಸ್ಟೇರಿಂಗನ್ನು ಬಿಗಿಮುಷ್ಟಿಯಲ್ಲಿ ಹಿಡಿದೇ ಸತ್ತಿರುವುದು ಕಂಡಿತು. ಅಬ್ಬಾಸ್ ಬೀಡಿ ಕಚ್ಚಿಕೊಂಡೇ ಪ್ರಾಣ ಬಿಟ್ಟಿದ್ದ. ನೋಡಿದ ಯಾವನಿಗೂ ಅಪಘಾತ ಏಕೆ ಆಗಿರಬಹುದೆಂದು ಗೊತ್ತಾಗಿತ್ತು.

ಪೋಲೀಸರು ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಎಲ್ಲ ಮಹಜರ್ ಮಾಡಲು ಬಂದರು. ಆದ ಅನಾಹುತಕ್ಕೆ ಕಳವಳ ಸಹಾನುಭೂತಿ ಒಂದನ್ನೂ ಸೂಚಿಸದೆ ಕಳ್ಳನಾಟ ಸಾಗಿಸುತ್ತಿದ್ದವರು ಯಾರು? ಮರ ಎಲ್ಲಿಯದು? ಇತ್ಯಾದಿಗಳನ್ನೇ ತನಿಖೆ ಮಾಡುತ್ತ ಕೇಸು ಬಿಲ್ಡ್‌ಅಪ್ ಮಾಡಲು ನಾಗರಾಜ ಕಾತರನಾಗಿರುವುದನ್ನು ಕಂಡು ಅಲ್ಲಿ ಗುಂಪುಗೂಡಿದ್ದ ಜನಕ್ಕೆಲ್ಲಾ ಕೋಪಬಂತು. ಡ್ರೈವರ್ ಕ್ಲೀನರ್ ಇಬ್ಬರ ಸಾವಿನ ಎದುರು ಮಿಕ್ಕವೆಲ್ಲಾ ಅವರಿಗೆ ಕ್ಷಮಾರ್ಹ ಅಪರಾಧಗಳಾಗಿ ತೋರಿದ್ದವು.

ಗೋಣಿ ಮರದ ಬಳಿ ಇದ್ದ ಆನೆ ಹೆಜ್ಜೆ ಗುರುತುಗಳನ್ನು ತೋರಿಸಿ "ಆನೆ ತಪ್ಪಿಸಲು ಹೋಗಿ ಲಾರಿ ಮರಕ್ಕೆ ಢಿಕ್ಕಿ ಹೊಡೆದಿದೆ. ಆನೆ ಕಾಟಕ್ಕೆ ಬಂದೋಬಸ್ತು ಮಾಡುವುದನ್ನು ಯೋಚಿಸದೆ ಕಳ್ಳನಾಟ ಯಾರದ್ದೂ ಅಂತ ಫಾರೆಸ್ಟ್ರು ನೋಡ್ತಿದ್ದಾನೆ. ಇವನಿಗೆ ಬುದ್ಧಿಗಿದ್ಧಿ ಇದೆಯ? ತಾನಾಯ್ತು ತನ್ನ ಕಾನೂನಾಯ್ತು, ಬೇರೆಯೋರ ಕಷ್ಟ ತೊಂದರೆ ಇವನ ಕಣ್ಣಿಗೆ ಕಾಣುವುದೇ ಇಲ್ಲ. ಆನೆ ನನ್ನ ಕೊಟ್ಟಿಗೆ ಬೀಳಿಸಿ ನಾಕೈದು ಮೇಕೆ ಸಾಯಿಸಿದೆ. ಡಿಪಾರ್ಟ್‌ಮೆಂಟಿನವರು ನಷ್ಟ ಕಟ್ಟಿಕೊಡ್ತಾರ?" ಎಂದು ಮೆಲ್ಲಗೆ ಗೊಣಗುತ್ತ ಸುಬ್ಬಣ್ಣ ಅಲ್ಲಿದ್ದವರನ್ನೆಲ್ಲಾ ವಿನಾಕಾರಣ ನಾಗರಾಜನ ಮೇಲೆ ಎತ್ತಿ ಕಟ್ಟಿದ.

"ಸತ್ತಿರೋದು ನಿಮ್ಮದು ಇವತ್ತಲ್ಲಾ ನಾಳೆ ನೀವೇ ಕೊಂದು ತಿನ್ನೋ ಪ್ರಾಣಿ. ಅದಕ್ಕೆ ಯಾಕ್ರಿ ನಷ್ಟ ಕಟ್ಟಿ ಕೊಡಬೇಕು? ನಾಳೆ ಮಾಡೋ ಸಾರು ಇವತ್ತೇ ಮಾಡ್ರಿ" ಎಂದು ನಾಗರಾಜ ತಿರುಗಿ ಅಂದು, ಅಲ್ಲಿ ನಿಂತಿದ್ದವರನ್ನು ಇನ್ನಷ್ಟು ಕೆರಳಿಸಿದ.

ಪೋಲೀಸ್ ಇನ್‌ಸ್ಪೆಕ್ಟರ್ ಇಲ್ಲದಿದ್ದರೆ ಮಾತಿಗೆ ಮಾತು ಬೆಳೆದು ಅಲ್ಲೇ ಗಲಾಟೆ ಹೊಡೆದಾಟ ಆಗುವ ಸಂಭವ ಇತ್ತು. ಬೇಸಿಗೆ ಬಂದರೆ ಸಾಕು ಜನರೆಲ್ಲಾ ಜಗಳ ಕಾಯುವ ಮೂಡಿನಲ್ಲಿ ಇರುತ್ತಾರೆ. ಅದಕ್ಕೆ ಸರಿಯಾಗಿ ಸರ್ಕಾರದ ಲೆವಿ ಭತ್ತ ವಸೂಲಿ, ಕಂದಾಯ ವಸೂಲಿ, ಬೇಸಿಗೆ ಭತ್ತಕ್ಕೆ ಕಾಡುಪ್ರಾಣಿಗಳ ಕಾಟ. ಹೀಗೆ, ಒಂದೊಂದಲ್ಲ ರೇಜಿಗೆಗಳು, ಉರಿಯುವ ಬೆಂಕಿಗೆ ತುಪ್ಪ ಸುರಿವ ಹಾಗೆ.



# ಅಧ್ಯಾಯ – ೯

ಒಂದು ಮಧ್ಯಾಹ್ನ ಮುನಿಸಿಪಲ್ ಪ್ರೆಸಿಡೆಂಟ್ ಖಾನ್ ಸಾಹೇಬರು ಮೂಡಿಗೆರೆ ಪುರಪ್ರಮುಖರ ಮೀಟಿಂಗ್ ಕರೆದರು. ಮೀಟಿಂಗ್ ಅಟೆಂಡ್ ಮಾಡಲು ಪುರಸೊತ್ತಿದ್ದವರೆಲ್ಲಾ ಪುರಪ್ರಮುಖರೆ! ಸಭೆ ಕರೆದರೆ ಜನ ಬರುವುದೇ ಕಡಿಮೆಯಾದ್ದರಿಂದ ಸಂತೆ ದಿನವೇ ಕರೆದು ಬಂದವರಿಗೆಲ್ಲಾ ಕುರ್ಚಿ ಕೊಟ್ಟು ಕೂರಿಸಿದ್ದರು. ಸಂತೆಗೆ ಬಂದ ಸುತ್ತಮುತ್ತಲ ಹಳ್ಳಿಯವರೆಲ್ಲಾ ಬಿಸಿಲಿನ ಹೊಡೆತ ತಾಳಲಾರದೆ ಮೀಟಿಂಗಿಗೆ ಬಂದು ಕುಳಿತು ಟೋಪಿ ತೆಗೆದು ಬೀಸಿಕೊಳ್ಳುತ್ತ ಗಾಳಿ ಹಾಕಿಕೊಳ್ಳುತ್ತಿದ್ದರು.

ಆ ಮೀಟಿಂಗಿಗೆ ರೇಂಜ್ ಫಾರೆಸ್ಟ್ ಆಫೀಸರ್ ಸಹ ಬಂದು ಕುಳಿತಿದ್ದರಿಂದ ಕೃಷ್ಣೇಗೌಡರ ಆನೆಯದೇ ಪ್ರಧಾನ ವಿಷಯವಾಗಿಹೋಯ್ತು. ಕಂತ್ರಿ ನಾಯಿಗಳ ಕಾಟ ಪ್ರಸ್ತಾಪಿಸಬೇಕೆಂದು ಹೋಗಿದ್ದ ನನಗೆ ಬಾಯಿ ಬಿಡಲು ಅವಕಾಶವೇ ಸಿಗಲಿಲ್ಲ. ಕೃಷ್ಣೇಗೌಡನ ಆನೆ ವಿಷಯ ಪ್ರಸ್ತಾಪಿಸಿದ ಖಾನ್ ಸಾಹೇಬರು ಅದನ್ನು ಹದ್ದುಬಸ್ತಿನಲ್ಲಿ ಇಡುವುದು ನಿಮ್ಮ ಜವಾಬ್ದಾರಿ. ಆನೆಯಂಥ ಪ್ರಾಣಿಯನ್ನು ಹಿಡಿದು ಕಟ್ಟಿಹಾಕುವುದಕ್ಕಾಗಲೀ ದೊಡ್ಡಿಗೆ ಹೊಡೆಯುವುದಕ್ಕಾಗಲೀ ಸಾಮಾನ್ಯರಿಂದ ಸಾಧ್ಯವೇ? ಎಂದು ರೇಂಜರಿಗೆ ವಿವರಿಸಿದರು. ಆತ ಆನೆಯನ್ನು ಹಿಂದೂ ಮತಾಂಧತೆಯ ಸಂಕೇತವೆಂದು ಬಗೆದನೋ ಏನೋ!

ಅದೇ ಸಮಯವೆಂದು ಗಂಧದ ಕಳ್ಳಸಾಗಣಿಕೆಯ ಗಂಗಾಧರ, ಫಾರೆಸ್ಟರ್ ನಾಗರಾಜ ಮರದ ವ್ಯಾಪಾರಿಗಳಿಂದ, ಸಾಮಿಲ್ಲಿನವರಿಂದ ಲಂಚ ತಿಂದು ಆನೆಯ ಮೇಲೆ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲವೆಂದು ಸಾರ್ವಜನಿಕವಾಗಿ ದೂರಿದ. ಜೊತೆಗೆ ವಿದ್ಯುತ್ ಇಲಾಖೆಯವರು, ಟೆಲಿಫೋನಿನವರು ತಮ್ಮ ಪುಕಾರುಗಳನ್ನೂ ದನಿಗೂಡಿಸಿದರು.

ಎಲ್ಲಾ ಇಲಾಖೆಗಳಿಗೂ ಬುದ್ದಿ ಕಲಿಸಿ, ಕೇಸ್ ಫೈಲ್ ಮಾಡಿ ಕೋಳ ಹಾಕಿಸುತ್ತೇನೆಂದು ಜಬರ್‌ದಸ್ತ್ ಮಾಡುತ್ತಾ, ಕಳ್ಳಸಾಗಣಿಕೆಯವರ ಕಾರುಗಳನ್ನೆಲ್ಲಾ ಸೀಜ್ ಮಾಡಿ ಸ್ಟ್ರಿಕ್ಟ್ ಆಫೀಸರೆಂದು ಮೇಲಿನವರಿಂದ ಶಭಾಸ್‌ಗಿರಿ ಪಡೆಯಲೆತ್ನಿಸುತ್ತಿದ್ದ ನಾಗರಾಜನಿಗೆ, ತನಗೆ ಯಾವ ಸಂಬಂಧವೂ ಇಲ್ಲದ ದರಿದ್ರ ಆನೆಯೊಂದರ ವಕ್ತಾರನಾಗಬೇಕಾಗಿ ಬಂದುದು ಅಸಹನೀಯವಾಯ್ತು. ಅಲ್ಲಿ ನಿಜವಾಗಿಯೂ ಸಭೆಯ ನಡವಳಿಕೆಗಳನ್ನು ಗಮನಿಸುತ್ತಿದ್ದವನು ಅವನೊಬ್ಬನೇ. ಮಿಕ್ಕವರೆಲ್ಲಾ ಕುರ್ಚಿಯಲ್ಲಿ ಆದಷ್ಟು ಹೊತ್ತು ಕುಳಿತಿದ್ದು ಬಿಸಿಲು ಇಳಿದ ಮೇಲೆ ಹೋಗೋಣವೆಂದೇ ಸಭೆಯಲ್ಲಿ ಭಾಗವಹಿಸುತ್ತಿದ್ದುದು. ಆನೆಯನ್ನು ಉಪಯೋಗಿಸಿಕೊಂಡು ತನ್ನ ವೈರಿಗಳೆಲ್ಲಾ ಒಟ್ಟಾಗುತ್ತಿರುವುದನ್ನು ನೋಡಿ ನಾಗರಾಜನಿಗೆ ರೇಗಿಹೋಯ್ತು.

ಹಲವರು ಕೃಷ್ಣೇಗೌಡನಿಗೆ "ನೀನು ಆನೆ ಕಾಲಿಗೆ ಸರಪಳಿ ಯಾಕೆ ಹಾಕುತ್ತಿಲ್ಲ" ಎಂದು ಆಕ್ಷೇಪಿಸಿದರು. ಕೃಷ್ಣೇಗೌಡನೂ ಆನೆಯಿಂದ ತನಗಾಗುತ್ತಿರುವ ಕಿರುಕುಳಕ್ಕೆ ರೋಸಿಹೋಗಿದ್ದ. ಹಿಂದೊಮ್ಮೆ ಮಠದವರು ಅದನ್ನು ಯಾರಿಗಾದರೂ ದಾಟಿಸಿದಂತೆ ತಾನೂ ದಾಟಿಸಿಬಿಡಬೇಕೆಂದು ಯೋಚಿಸಿದ್ದ. ಆದರೆ ಯಾರಿಗೆ ಮಾರುವುದು? ಸರ್ಕಸ್ ಕಂಪನಿಗಳೆಲ್ಲಾ ಪಾಪರ್ ಎದ್ದಿವೆ. ಜಗದ್ಗುರುಗಳೆಲ್ಲಾ ಅಡ್ಡಪಲ್ಲಕ್ಕಿ ಇಲ್ಲವೇ ಬೆಂಜ್ ಕಾರುಗಳನ್ನು ಹಿಡಿದಿದ್ದಾರೆ. ಮರದ ವ್ಯಾಪಾರಿಗಳಂತೂ ಸರ್ಕಾರದ ಬಿಗಿ ಧೋರಣೆಯಿಂದ ಮತ್ತು ಲಂಚದ ಕಾಟದಿಂದ ಸುಸ್ತಾಗಿ ಹೋಗಿದ್ದಾರೆ. ಕಾಡಿಗೇ ಅಟ್ಟಿಬಿಡೋಣ ಎಂದರೆ ಅದು ಊರಿನ ಆನೆ. ಕಾಡಿಗೆ ಹೋಗಿದ್ದು ಸಹ ಮತ್ತೆ ಬಂದು ಲಾಯದೊಳಗೆ ನಿಂತಿದೆ. ಆತನಿಗೆ ಆನೆ ಕುತ್ತಿಗೆಗೆ ಕಟ್ಟಿಕೊಂಡ ಕಲ್ಲುಗುಂಡಿನಂತೆ ಭಾಸವಾಯ್ತು.

ಹಿಂದೊಮ್ಮೆ ಮನೆಗೆ ಲಕ್ಷ್ಮೀ ಬಂದ ಹಾಗಾಯ್ತು ಎಂದು ತಿಳಿದಿದ್ದವ ಈಗ ಅದಕ್ಕೆ ಸಂಪೂರ್ಣ ವ್ಯತಿರಿಕ್ತವಾಗಿ ಯೋಚಿಸಿದ.

ಆನೆ ಕಾಲಿಗೆ ಸರಪಳಿ ಹಾಕುವ ಜಾಗದಲ್ಲಿ ಕೊಂಚ ಗಾಯವಾಗಿರುವುದರಿಂದ ಅದು ವಾಸಿಯಾಗುವವರೆಗೆ ಸರಪಳಿ ಕಟ್ಟಲಾಗುವುದಿಲ್ಲ ಎಂದು ವೇಲಾಯುಧ ಹೇಳಿದ್ದನ್ನೆ ಸಭೆಯಲ್ಲಿ ಕೃಷ್ಣೇಗೌಡ ಹೇಳಿದ.

ವೆಟರ್ನರಿ ಸ್ಟಾಕಮಾನ್ "ಹುಚ್ಚುನಾಯಿ ಜೊಲ್ಲು ಆ ಗಾಯಕ್ಕೇನಾದರೂ ತಾಗಿದ್ದರೆ ಅದಕ್ಕೆ ಹುಚ್ಚು ಬಂದೇಬರುತ್ತೆ" ಎಂದು ಅಕ್ಕಪಕ್ಕದವರ ಕಿವಿಯಲ್ಲಿ ಗೊಣಗುತ್ತಿದ್ದುದು ಕೇಳಿಸಿತು.

ಯಾವ ಲಾಭವೂ ಇಲ್ಲದೆ ಆ ಆನೆಗೆ ಕೇಡುಬಗೆಯುವ ಸದವಕಾಶ ಉಪಯೋಗಿಸಿಕೊಳ್ಳಲು ಎಲ್ಲರೂ ಕಾತರರಾಗಿರುವಂತೆ ಕಂಡಿತು.

"ನನಗೆ ಸರಿಯಾದ ವೆಪನ್ ಕೊಟ್ಟರೆ ಅದನ್ನು ಈಗಿಂದೀಗಲೇ ಶೂಟ್ ಮಾಡಿ ಬಿಡುತ್ತೇನೆ. ಊರಿನ ಬಳಿ ಕಾಡಾನೆಗಳ ಕಾಟಕ್ಕೂ ಈ ಹೆಣ್ಣಾನೆಯೇ ಕಾರಣ" ಎಂದು ರೇಂಜರ್ ಎದುರು ಹಾರಾಡಿದ ನಾಗರಾಜ.

ಕೃಷ್ಣೇಗೌಡ ಆ ಆನೆ ಲಾಯ ಬಿಟ್ಟು ಹೊರಗೆ ಹೋಗುವುದೇ ಇಲ್ಲ ಎಂದು ಎಲ್ಲರ ದೂರುಗಳನ್ನೂ ಸಾರಾಸಗಟು ಅಲ್ಲಗಳೆದ. ಕೊನೆಗೆ ಗುಂಪಿನ ಕೋಪ ಶಮನಕ್ಕೆಂದು ಅದು ರಾತ್ರಿ ಲಾಯ ಬಿಟ್ಟು ಹೊರಬಂದರೆ ಯಾರು ಏನು ಬೇಕಾದರೂ ಮಾಡಬಹುದೆಂದೂ, ಕೊಂದರೂ ಪರವಾಗಿಲ್ಲ ಎಂದುಬಿಟ್ಟ. ಅದನ್ನು ಶೂಟ್ ಮಾಡುತ್ತೇವೆಂದು ಕೇವಲ ಸಭೆಯಲ್ಲಿ ಹೇಳುವುದಷ್ಟೇ ಹೊರತು ಅದನ್ನು ಕೊಲ್ಲಲು ಯಾರೂ ಮುಂದಾಗುವುದಿಲ್ಲ ಎಂದು ಕೃಷ್ಣೇಗೌಡನಿಗೆ ಖಾತರಿಯಾಗಿ ಗೊತ್ತಿತ್ತು.

ಶೂಟಿಂಗಿಗೆ ಪರ್ಮಿಷನಗಿ ಸಿಕ್ಕಿದನ್ನು ನೋಡಿ ಸಭೆ ಬರಖಾಸ್ತಾಯ್ತು. ರೇಂಜರು ಅದು ಅಷ್ಟೊಂದು ಪುಂಡು ಆನೆಯಾದರೆ ಅದರ ಮೇಲೆ ಯಾಕೆ ಆಕ್ಷನ್ ತಗೊಂಡಿಲ್ಲ. ಅಂಥ ಸಂದರ್ಭ ಬಂದರೆ ಶೂಟ್ ಮಾಡೇಬಿಡು ಎಂದೂ ನಾಗರಾಜನಿಗೆ ಹೇಳಿದರು.

ಕೃಷ್ಣೇಗೌಡ ಅದಕ್ಕೆ ಗಾಯ ಮಾಡಿ ಕೈಕಾಲು ಮುರಿದರೆ ನೋಡಿಕೊಳ್ಳುವುದು ಮುರಿದವರ ಜವಾಬ್ದಾರಿಯೆ ಹೊರತು ತನ್ನದಲ್ಲವೆಂದೂ, ಅದು ಸತ್ತರೆ ಅದರ ಹೆಣಸಾಗಿಸಲು ಸಹ ತನ್ನಿಂದ ಸಾಧ್ಯವಿಲ್ಲವೆಂದೂ ಹೇಳಿದ.

ಎಲ್ಲರೂ ನಾಗರಾಜನಿಗೆ ಸಭೆಯಲ್ಲಿ ಸರಿಯಾದ ಶಾಸ್ತಿ ಆಯ್ತೆಂದು ಸಮಾಧಾನಪಟ್ಟರು.

## ಅಧ್ಯಾಯ – ೧೦

ಕೃಷ್ಣೇಗೌಡರ ಆನೆ ಮಠದಲ್ಲಿ ಇರಬೇಕಾದರೆ ಒಬ್ಬ ಆನೆ ಶಾಸ್ತ್ರ ನೋಡುವವನು ಈ ಆನೆಯಿಂದ ಐದು ಜನ ಪ್ರಾಣ ಕಳೆದುಕೊಳ್ಳುತ್ತಾರೆಂದು ಹೇಳಿದ್ದ. ಮಠದವರು ಅದನ್ನು ಯಾರಿಗಾದರೂ ದಾಟಿಸಲು ಯೋಚಿಸಿದ್ದಕ್ಕೆ ಇದೂ ಒಂದು ಕಾರಣ. ವೇಲಾಯುಧ ಇದನ್ನು ಒಂದು ಚೂರೂ ನಂಬಿರಲಿಲ್ಲ. ಆದರೆ ಕೃಷ್ಣೇಗೌಡರು ಮೀಟಿಂಗ್ ಮುಗಿಸಿಕೊಂಡು ಬಂದು ಅವನಿಗೆ ಈ ಆನೆಯನ್ನು ಹದ್ದುಬಸ್ತಿನಲ್ಲಿ ಇಡದುದಕ್ಕೆ ಬಾಯಿಗೆ ಬಂದಹಾಗೆ

ಬಯ್ದು ಮೇಲೆ ಆನೆ ಶಾಸ್ತ್ರದವನು ಆಡಿದ ಮಾತುಗಳ ಮೇಲೆ ನಂಬಿಕೆ ಬರದಿದ್ದರೂ ಜ್ಞಾಪಕಕ್ಕೆ ಬಂತು. ಅವನು ಲೆಕ್ಕ ಹಾಕಿದ, ಇಲ್ಲಿಯವರೆಗೆ ಆನೆ ದೆಸೆಯಿಂದ ಸತ್ತರೆಂದು ಜನಗಳು ದೂರುತ್ತಿರುವುದು ಎಷ್ಟು ಜನ ಎಂದು. ಆದರೆ ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣ ಸತ್ತಿದ್ದನ್ನು ಯಾವುದೇ ರೀತಿಯಿಂದ ಯೋಚಿಸಿದರೂ ಆನೆ ಲೆಕ್ಕಕ್ಕೆ ಜಮಾ ಹಾಕುವುದು ಹೇಗೆಂದು ತಿಳಿಯಲಿಲ್ಲ. ಏಕೆಂದರೆ ಲಾರಿಯಲ್ಲಿ ಬರುತ್ತಿದ್ದ ಕಳ್ಳಮಾಲನ್ನು ಶಿವೇಗೌಡರ ಸಾಮಿಲ್ಲಿನಲ್ಲಿ ಅನ್‌ಲೋಡು ಮಾಡಲು ಆನೆಯೊಂದಿಗೆ ವೇಲಾಯುಧ ಸಾಮಿಲ್ಲಿನಲ್ಲೇ ಕಾಯುತ್ತಿದ್ದ. ಆದರೆ ಈ ವಿಷಯ ಹೇಳಿ ಆನೆಗೂ ಇದಕ್ಕೂ ಸಂಬಂಧವಿಲ್ಲೆಂದು ಯಾರಿಗೂ ಹೇಳುವಂತೆ ಇರಲಿಲ್ಲ. ಏಕೆಂದರೆ ಈ ವ್ಯವಹಾರವೇ ಅಂಥದು.

ಆದರೂ ಕೃಷ್ಣೇಗೌಡರು ಬಯ್ದಿದ್ದರಿಂದ ಇವತ್ತು ಲಾಯದಲ್ಲೇ ಮಲಗಿ ಅದೇನಾದರೂ ಕಳ್ಳತನದಲ್ಲಿ ಹೊರಹೋಗುವುದನ್ನು ಕಂಡರೆ ಸರಿಯಾಗಿ ಚಚ್ಚಿ ಬುದ್ಧಿ ಕಲಿಸಲು ತೀರ್ಮಾನಿಸಿದ್ದ. ಅದು ಒಮ್ಮೆ ಕಾಡಿಗೆ ಹೋಗಿ ಬಂದಾಗಲಿಂದ ಏನೋ ದುರ್ಬುದ್ಧಿ ಶುರುವಾಗಿದೆ ಎಂದು ಅವನಿಗೂ ಶಂಕೆ. ಆನೆ ಲಾಯದಲ್ಲಿ ಮಲಗಲು ಹೋಗುತ್ತೇನೆಂದು ಹೇಳಿದಾಗ ಅವನ ಹೆಂಡತಿ ರೇಗಿದಳು. ವೇಲಾಯುಧ ರಾತ್ರಿ ಸಾಮಿಲ್ಲಿಗೆ ಅನ್‌ಲೋಡು ಮಾಡಲು ಆನೆ ಕರೆದುಕೊಂಡು ಹೋಗಬೇಕಾದುದಕ್ಕೇ ಅವಳು ಗೊಣಗಾಡಿದ್ದಳು. ಈಗ ಲಾಯಕ್ಕೆ ಮಲಗಲು ಹೋಗುತ್ತಾನೆಂದು ಕೇಳಿ "ಆನೆ ಜೊತೆ ಮಲಗುತ್ತೀಯಾ; ನೀನ್ಯಾವ ಗಂಡಸು" ಎಂದು ಹೀಯ್ಯಾಳಿಸಿದಳು.

ಆನೆಯ ಕಾಲಿನ ಉಗುರುಗಳ ಬಳಿ ಅಂಕುಶದಿಂದ ತಿವಿದರೆ ಅದಕ್ಕೆ ಪ್ರಾಣವೇ ಹೋಗುವಷ್ಟು ನೋವಾಗುತ್ತದೆಂದೂ, ಆ ಭಯಂಕರ ನೋವಿಗೆ ನಾಲ್ಕು ಸಾರಿ ತಿವಿಯುವುದರೊಳಗೆ ಎಂಥ ಪುಂಡು ಆನೆಯಾದರೂ ಶರಣಾಗಿ ನೆಲದ ಮೇಲೆ ಮಲಗಿಬಿಡುತ್ತದೆಂದೂ ವೇಲಾಯುಧನ ಅಪ್ಪ ಅವನಿಗೆ ಹೇಳಿದ್ದ. ಇವತ್ತು ಆನೆ ಏನಾದರೂ ರಾತ್ರೆ ಲಾಯದಿಂದ ಹೊರಗೆ ಕಾಲಿಟ್ಟರೆ ಅದಕ್ಕೆ ಅಲ್ಲಿಗೇ ತಿವಿದು ಬುದ್ಧಿ ಕಲಿಸಬೇಕೆಂದು ಯೋಚಿಸುತ್ತಿದ್ದ ವೇಲಾಯುಧನಿಗೆ ಹೆಂಡತಿ ಮಾತಿನಿಂದ ಸಿಟ್ಟು ಬಂತು. ಮೊದಲು ಆನೆಗೆ ಬುದ್ಧಿ ಕಲಿಸಿ ಆಮೇಲೆ ನಿನಗೆ ಕಲಿಸುತ್ತೇನೆ ಎಂದು ಜೋರುಮಾಡಿದ. "ಹಂಗೇ ಮಾಡು. ನಾನು ಮಾತ್ರ ಚೂರು ತಪ್ಪು ಮಾಡಿದರೂ ಹೊಡಿಯೋದಕ್ಕೆ ಬರ್ತೀಯಾ, ಆನೆ ಮಾತ್ರ ಏನು ಮಾಡಿದರೂ ಸುಮ್ಮನಿರ್ತೀಯ. ಅದು ಹೆಣ್ಣಾನೆ ತಿಳುಕೋ! ಸದರ ಕೊಟ್ರೆ ಏನು ಬೇಕಾದರೂ ಮಾಡುತ್ತೆ" ಎಂದು ಮಾರ್ಮಿಕವಾಗಿ ನುಡಿದಳು. ಅವಳ ಚಿತಾವಣೆಯಿಂದ ಷರಾಬು ಕುಡಿಯುತ್ತಿದ್ದ ವೇಲಾಯುಧನಿಗೆ ಕೋಪ ಏರುತ್ತಾ ಹೋಯ್ತು.

ಆದರೆ ದುರದೃಷ್ಟವಶಾತ್ ಆಗಿದ್ದೇ ಬೇರೆ. ವೇಲಾಯುಧ ಷರಾಬಿನ ಮತ್ತಿನಲ್ಲಿ ತೂರಾಡುತ್ತಾ ಹೋಗುತ್ತಿರಬೇಕಾದರೆ ಕೃಷ್ಣೇಗೌಡರ ಬೇಲಿ ಹೊರಗೇ ಆನೆ ಅವನ ಕೈಗೆ ಸಿಕ್ಕಿಬಿತ್ತು. ವೇಲಾಯುಧನಿಗೆ ಕೋಪ ನೆತ್ತಿಗೇರಿ ಕಬ್ಬಿಣದ ಅಂಕುಶ ಎತ್ತಿಕೊಂಡು ಆನೆಯ ಕಾಲುಗುರುಗಳನ್ನೇ ನೋಡುತ್ತ ನುಗ್ಗಿದ.

ಮನುಷ್ಯನ ಹಣೆಬರಹವನ್ನು ಎಷ್ಟು ಸಣ್ಣ ಸೂಕ್ಷ್ಮ ಸಂಗತಿಗಳು ನಿಯಂತ್ರಿಸುತ್ತವೆ ಎಂದು ಯೋಚಿಸಿದರೆ ಆಶ್ಚರ್ಯ ಆಗುತ್ತೆ! ಮಕ್ಕಳಿಲ್ಲದ ವೇಲಾಯುಧನಿಗೆ ಮನಸ್ಸಿನ ಆಳದಲ್ಲಿ ಏನೇನು ಅಳುಕುಗಳಿತ್ತೋ ಗೊತ್ತಿಲ್ಲ. ಕೃಷ್ಣೇಗೌಡನ ಹೆಣ್ಣಾನೆ ಹುಡುಕಿಕೊಂಡು ಕಾಡಿನ ಆನೆಗಳು ಊರಿನ ಬಳಿ ಸುಳಿದಾಡಿದ್ದು ಅವನಿಗೆ ಆನೆಯ ಮೇಲೆ ದ್ವೇಷ ಸಾಧನೆ ಮಾಡಲು ಪ್ರೇರಣೆಯಾಯ್ತೋ ಏನೋ. ಮಠದವರು ಇವನನ್ನು ಓಡಿಸಿದಾಗ ಆ ಆನೆ ಊಟ ಬಿಟ್ಟು ಸೊರಗಿದ್ದು ಈಗ ಕಾಡಿಗೆ ಹೋಗಿ ಬಂದುದರಿಂದ ಅದು ದೊಡ್ಡ ಅಧಿಕಪ್ರಸಂಗವಾಗಿ ಕಂಡಿರಲೂ ಸಾಕು. ಆ ಆನೆಯ ಮಾವುತ ಆಗಿದ್ದರಿಂದಲೇ ಇವನಿಗೆ ಸಂಬಳ ಸಿಗುತ್ತಿದ್ದರೂ ಅದು ಹೆಣ್ಣಾನೆಯಾದ್ದರಿಂದಲೂ

ಮತ್ತು ಅದನ್ನು ಕರೆದುಕೊಂಡು ಹಗಲೆನ್ನದೆ ರಾತ್ರಿ ಎನ್ನದೆ ವೇಲಾಯುಧ ಕೆಲಸಕ್ಕೆ ಹೋಗಬೇಕಾದ್ದರಿಂದಲೂ ವೇಲಾಯುಧನ ಹೆಂಡತಿಗೆ ಮಾತ್ರ ಒಂದು ರೀತಿಯ ವಿಚಿತ್ರ ಮಾತ್ಸರ್ಯ ಅದರ ಮೇಲೆ ಇದ್ದುದು ನಿಜ. ಬಸುರಿಯಾಗದೆ ವರ್ಷ ಕಳೆದ ಹಾಗೂ ವಿನಾಕಾರಣ ಅವರ ಸಂಸಾರಕ್ಕೆ ಅನ್ನ ಕೊಡುತ್ತಿದ್ದ ಈ ಆನೆ ವಿಷಯದಲ್ಲಿ ಸೂಕ್ಷ್ಮವಾದ ದ್ವೇಷ ಅವಳಲ್ಲಿ ರೂಪುಗೊಳ್ಳುತ್ತಾ ಇತ್ತು. ಕಾರೋ ಲಾರಿಯೋ ಟ್ರಾಕ್ಟರೋ ಯಾವುದನ್ನೇ ಆಗಲಿ ಗಂಡಸರು ಅಷ್ಟೊಂದು ಹಚ್ಚಿಕೊಂಡರೆ ಕೆಲವು ಹೆಂಗಸರಿಗೆ ಸಿಟ್ಟುಬರುತ್ತದೆ, ತಮ್ಮ ಆಕರ್ಷಣ ಶಕ್ತಿಗೆ ಇವು ಸವಾಲು ಎಂದೇ ತಿಳಿಯುತ್ತಾರೆ. ಅಂಥದರಲ್ಲಿ ಆನೆಯಂಥ ಒಂದು ಜೀವ, ಅದೂ ಹೆಣ್ಣಾನೆ ವೇಲಾಯುಧನನ್ನು ಹಚ್ಚಿಕೊಂಡರೆ!

ಬೇಸಿಗೆ ಬಂತೆಂದರೆ ಸಾಕು ಮೂಡಿಗೆರೆಯಲ್ಲಿ ಮನುಷ್ಯರಿಗೆ ನೂರಾರು ತರದ ತೆವಲುಗಳು, ಕಾಮನೆಗಳು, ದ್ವೇಷಗಳು, ಮಾತ್ಸರ್ಯಗಳು ಕೆದರುತ್ತವೆ. ವೇಲಾಯುಧನ ಹೆಂಡತಿಯ ಪ್ರಚೋದಿಸುವ ಮಾತುಗಳಿಗೆ ಅವಳ ಒಳಮನಸ್ಸಿನ ಸುಪ್ತಭಾವನೆಗಳು, ಕಾಮನೆಗಳು ಯಾವೂ ಕಾರಣವಿಲ್ಲದೆ ಕೇವಲ ಬೇಸಿಗೆಯ ಸೆಖೆ, ಧೂಳು, ನಿಶ್ಚಲ ರಾತ್ರಿಗಳೇ ಕಾರಣವಿರಬಹುದು!

ವೇಲಾಯುಧ ಹೆಂಡತಿಯ ಮಾತಿನ ಸಿಟ್ಟಿನಲ್ಲಿ ಎರಡು ಲೋಟ ಷರಾಬು ಹೆಚ್ಚಿಗೆ ಕುಡಿಯದಿದ್ದರೆ, ಅವನ ಹೆಂಡತಿ ಅವನ ಮರ್ಮಕ್ಕೇ ತಾಗುವಂತೆ ಅವನ ಗಂಡಸ್ತನವನ್ನು ಹಿಯ್ಯಾಳಿಸದಿದ್ದರೆ, ಅಂಕುಶ ಎತ್ತಿಕೊಂಡು ಮುನ್ನುಗ್ಗಿದ ವೇಲಾಯುಧನಿಗೆ ಆ ಆನೆಗಿದ್ದ ಎರಡು ನೀಳ ದಂತಗಳು ಕಣ್ಣಿಗೆ ಬಿದ್ದು ಇದು ಯಾವುದೋ ಗಂಡಾನೆ ಎಂದು ಖಂಡಿತಾ ಗೊತ್ತಾಗುತ್ತಿತ್ತು. ಆದರೆ ಅದರ ಕಾಲು ಉಗುರುಗಳ ಕಡೆಗೆ ಕಣ್ಣಿಟ್ಟು ರೋಷದಿಂದ ಬಯ್ಯುತ್ತಾ ನುಗ್ಗುತ್ತಿದ್ದ ಅವನಿಗೆ ಅದರ ಸೊಂಡಿಲು ಸೊಂಟಕ್ಕೆ ಸುತ್ತಿ ಬಂದಿದ್ದು ಸಹ ಗೊತ್ತಾಗಲಿಲ್ಲ.

## ಅಧ್ಯಾಯ – ೧೧

ಕೃಷ್ಣೇಗೌಡರ ತೋಟದ ಬೇಲಿ ಮೂಲೆಯಲ್ಲಿ ಬಿಳಿ ಬೂರುಗದ ಮರದ ಕೆಳಗೆ ಒಳ್ಳೆ ಆಯಕಟ್ಟಿನ ಗಂಡಿಯಲ್ಲಿ ನಾಗರಾಜ ಒಬ್ಬನೇ ಕೋವಿ ಹಿಡಿದುಕೊಂಡು ಕುಳಿತಿದ್ದ. ಆತ ಕುಳಿತಿದ್ದ ಗಂಡಿ ಭಾರಿ ಹೆಸರುವಾಸಿಯಾದ ಶಿಕಾರಿ ಗಂಡಿ. ಕಾಡಿನಿಂದ ಕಾಡಿಗೆ ಸಂಚರಿಸುವ ಯಾವ ಕಾಡು ಪ್ರಾಣಿಯಾದರೂ ಆ ಗಂಡಿಯ ಮೂಲಕವೇ ಹಾದು ಹೋಗಬೇಕು. ಕಾಡು ಪ್ರಾಣಿಗಳು ಆ ಗಂಡಿಯಲ್ಲಿ ನೂರಾರು ವರ್ಷಗಳಿಂದ ನಡೆದು ನಡೆದು ಅದು ಗಟ್ಟಿಯಾಗಿ ನೆಲ ಸಿಮೆಂಟಿನಂತಾಗಿತ್ತು. ಬಹುಶಃ ನೂರಾರು ವರ್ಷಗಳ ಹಿಂದೆ ತಮಿಳುನಾಡಿನ ಮುದುಮಲೈನಿಂದ ಮಹಾರಾಷ್ಟ್ರದವರೆಗೂ ಹಬ್ಬಿರುವ ಈ ಕಾಡಿನಲ್ಲಿ ಕಾಡುಪ್ರಾಣಿಗಳು ಸಹ್ಯಾದ್ರಿ ಕಾಡುಗಳುದ್ದಕ್ಕೂ ವಲಸೆ ಹೋಗಲು ಮಾಡಿಕೊಂಡಿದ್ದ ಹೆದ್ದಾರಿ ಇರಬೇಕು ಇದು. ಕಾಡುಪ್ರಾಣಿಗಳ ಸುಪ್ತ ಪ್ರಜ್ಞೆಯಲ್ಲಿ ದಾಖಲಾಗಿರುವ ಈ ದಾರಿಗೆ ಈಗ ಅಲ್ಲಲ್ಲಿ ತೋಟ, ಗದ್ದೆ ಮುಂತಾದ ನೂರೆಂಟು ವಿಘ್ನಗಳು ತಲೆದೋರಿವೆ. ಹಾಗೆಂದು ಅವುಗಳ ಚಿತ್ತಭಿತ್ತಿಯಲ್ಲಿ ದಾಖಲಾಗಿರುವ ಈ ನಕಾಶೆಗಳನ್ನು ಅವು ಬದಲಿಸಲು ಸಾಧ್ಯವೆ? ಈಗಲೂ ಅಳಿದುಳಿದ ಕಾಡುಪ್ರಾಣಿಗಳು ಆ ಹಾದಿಯಲ್ಲೇ ಓಡಾಡುತ್ತವೆ.

ಆನೆ ಅಷ್ಟು ದೊಡ್ಡ ಪ್ರಾಣಿಯಾದರೂ ಸುಳಿವೇ ಕೊಡದೆ ತಂಗಾಳಿಯಂತೆ ಓಡಾಡಬಲ್ಲದು ಎನ್ನುವುದು ನಾಗರಾಜನ ಸರ್ವಿಸ್ಸಿನಲ್ಲಿ ಎಷ್ಟೋ ಸಾರಿ ಗಮನಕ್ಕೆ ಬಂದಿತ್ತು. ಅದಕ್ಕೇ ಅವನು ಮೈಯೆಲ್ಲ ಕಣ್ಣಾಗಿ ಕುಳಿತಿದ್ದ. ಇದು ಸಾಕಿದ ಆನೆಯಾದ್ದರಿಂದ ಏನೇ ಆದರೂ ಕಾಡಾನೆಯಷ್ಟು ಇದು ಸೂಕ್ಷ್ಮವಾಗಿ ಇರುವುದಿಲ್ಲ ಎಂದು ಅವನಿಗೆ ಧೈರ್ಯ.

ದಾರಿಯಲ್ಲಿ ಇದ್ದಕ್ಕಿದ್ದ ಹಾಗೆ ಸದ್ದಾಯ್ತು. ಬೆಚ್ಚಿಬಿದ್ದ ನಾಗರಾಜ ಕೋವಿ ಎತ್ತಿ ನೋಡುತ್ತಿದ್ದ ಹಾಗೆ ನಸುಗತ್ತಲಲ್ಲಿ ರಾಮಪ್ಪ ಕೋವಿ ಹಿಡಿದು ಓಡಿಬರುತ್ತಿದ್ದ. ಬಂದವನೇ "ಆನೆ ಬೇಲಿ ದಾಟಿ ಹೋಯ್ತು ಸಾರ್" ಎಂದ.

ನಾಗರಾಜನಿಗೆ ರೇಗಿ ಹೋಯ್ತು "ನೀನೇನು ಕತ್ತೆ ಕಾಯ್ತಿದ್ದೀಯೇನೋ? ಷೂಟ್ ಮಾಡೋದಕ್ಕೆ ಏನಾಗಿತ್ತು ನಿನಗೆ?" ಎಂದು ರೇಗಿದ.

"ಹೊಡೆದೇ ಬಿಡಬೇಕಿತ್ತೂ ಅಂತೀರಾ?" ಎಂದು ಗಾಬರಿಯಲ್ಲಿ ರಾಮಪ್ಪ ಕೇಳಿದ.

"ಕೈಯ್ಯಾಗೆ ಕೋವಿ ಹಿಡಕೊಂಡಿದ್ದೆಯೋ ಇನ್ನೇನಾದರೂ ಹಿಡುಕೊಂಡಿದ್ದೆಯೋ ಬೇಕೂಫ" ನಾಗರಾಜ ಉರಿದು ಬಿದ್ದ.

ರಾಮಪ್ಪ ಅವಾಕ್ಕಾದ. ಅವನಿಗೆ ನಾಗರಾಜ ಆನೆಯನ್ನು ಕೊಂದೇ ಬಿಡಬೇಕೆಂದು ತೀರ್ಮಾನಿಸಿರುವುದು ಗೊತ್ತಿರಲ್ಲಿಲ್ಲ. ಸುಮ್ಮನೆ ಆತ್ಮರಕ್ಷಣೆಗೆಂದು ಕೋವಿ ಕೈಯ್ಯಲ್ಲಿ ಹಿಡಿದು ಈ ಆನೆಯೇ ಕಾರಣವೋ ಅಲ್ಲವೋ ಪತ್ತೆ ಮಾಡಲು ಬಂದಿದ್ದೇವೆಂದೇ ಅವನು ಊಹಿಸಿದ್ದ. ನಾಗರಾಜನ ತೀರ್ಮಾನ ಅವನಿಗೆ ಹುಚ್ಚಾಟದಂತೆ ಕಂಡಿತು. "ಏನ್ ಸಾರ್ ನೀವು ಹೇಳೋದು! ಎರಡು ಮೂರು ಇದ್ದ ಹಾಗೆ ಕಾಣ್ತು! ಈ ಕೋವೀಲಿ ಅವಕ್ಕೆ ಹೊಡೆದು ಅರೆಪೆಟ್ಟಾದ್ರೆ ಆಮೇಲೆ ನನ್ಕತೆ!" ಎಂದ ಗಾಬರಿಯಲ್ಲಿ.

"ಥತ್! ನಿನ್ನಂಥ ಹೆದರುಪುಕ್ಲನ್ನ ಕರಕೊಂಡು ಬಂದಿದ್ದು ನನ್ನ ತಪ್ಪು ಅಷ್ಟೆ. ಯಾವ ಕಡೆ ಹೋಯ್ತು ಅದ್ನಾರು ಹೇಳು" ಎಂದ ನಾಗರಾಜ ಸಿಟ್ಟಿನಲ್ಲಿ.

ರಾಮಪ್ಪ ಕೃಷ್ಣೇಗೌಡನ ತೋಟದ ಹಿನ್ನೆಲೆಯಲ್ಲಿ ಕತ್ತಲಲ್ಲಿ ಇನ್ನೂ ಕಪ್ಪಾಗಿ ಕರ್ರಗೆ ಹಬ್ಬಿದ್ದ ಪರ್ವತ ಪಂಗ್ತಿಗಳನ್ನೂ ಕಾಡನ್ನೂ ತೋರಿಸಿದ.

ನಾಗರಾಜ ಯೋಚಿಸಿದ. ಅವನಿಗೆ ಒಂದು ಕ್ಷಣ ಈ ಆನೆ ಮೇಲೆ ದ್ವೇಷ ಸಾಧನೆ ಮಾಡುವುದು ಅರ್ಥಹೀನ ಎನ್ನಿಸಿತು. ಆದರೆ ಮರುಕ್ಷಣ ಅವನ ವೈರಿಗಳ ಮುಖಗಳೆಲ್ಲಾ ಮನಸ್ಸಿನಲ್ಲಿ ಒಂದೊಂದಾಗಿ ಮೂಡಿದವು. ಮತ್ತೆ ನಾಗರಾಜನಿಗೆ ಕೋಪ ಉಕ್ಕಿತು.

ಜೊತೆಗೆ ತಾನೂ ಬರುತ್ತೇನೆಂದು ಹೇಳಿದ ಗಾರ್ಡ್ ರಾಮಪ್ಪನಿಗೆ "ನಾನು ಬರೋವರ್ಗೂ ನೀನಿಲ್ಲೇ ಬಿದ್ದಿರೋ" ಎಂದು ಉಗಿದು, ಕೋವಿ ಹಿಡಿದು ಅವನು ತೋರಿಸಿದ ದಿಕ್ಕಿನ ಕಡೆಗೆ ಓಡಿ ರಾಮಪ್ಪನ ಕಣ್ಣೆದುರೇ ಕತ್ತಲಲ್ಲಿ ಕರಗಿಹೋದ. ಅದೇ ಕೊನೆ ರಾಮಪ್ಪ ನಾಗರಾಜನನ್ನು ನೋಡಿದ್ದು.



# ಅಧ್ಯಾಯ – ೧೨

ಕೃಷ್ಣೇಗೌಡನ ಆನೆ ಜೊತೆ ಇನ್ನೊಂದಾನೆ ಇತ್ತೆ? ಅದು ಕಾಡಾನೆಯೇ? ನಾಗರಾಜನನ್ನು ಅವು ಸಾಯಿಸಿದುವೆ? ಅವನ ಹೆಣ ಏನಾಯ್ತು? ಯಾವುದಕ್ಕೂ ಯಾರೂ ಸರಿಯಾದ ಉತ್ತರ ದೊರಕಿಸಿಕೊಳ್ಳಲು ಯತ್ನಿಸಲಿಲ್ಲ.

ಬೆಳಿಗ್ಗೆ ಆನೆ ತಿಕ್ಕಿ ಉಂಡೆಯಾಗಿದ್ದ ವೇಲಾಯುಧನ ಹೆಣವನ್ನೇ ನಾಗರಾಜನ ಹೆಣ ಎಂದು ಹೇಳಿ ಪೋಲೀಸಿನವರು ಕೇಸು ಕ್ಲೋಸ್ ಮಾಡಲು ಹೊರಟಿದ್ದರು. ಆದರೆ ವೇಲಾಯುಧನ ಹೆಂಡತಿ ಹುಯ್ಯಲಿಡುತ್ತಾ ಬಟ್ಟೆ ಅಂಕುಶಗಳನ್ನು ತೋರಿಸಿ ಒದರಾಡಿದ್ದು ಅವರಿಗೆ ಅಡ್ಡಿಯಾಯ್ತು.

ಕೆಲವರು "ಕಾಡಾನೆಗಳ ಹಿಂದೆ ಹೋದ್ರೆ ಉಳಿಗಾಲ ಉಂಟೇನ್ರೋ? ರಾಮಪ್ಪ ಕಾಡಾನೆಗಳ ಜೊತೆ ಅದು ಇದ್ದಿದ್ದು ನೋಡಿದೆ ಅಂದಮೇಲೂ ನಾಗರಾಜ ಅತ್ತ ಹೋಗಿದ್ದು ನೋಡಿದರೆ ಅವನಿಗೆ ಬುದ್ಧಿ ಸ್ಥಿಮಿತದಲ್ಲಿರಲ್ಲಿಲ್ಲ ಅಂತ ಕಾಣ್ತದೆ" ಎಂದರು.

ವೆಟರ್ನರಿ ಸ್ಟಾಕ್‌ಮನ್ "ಬುದ್ಧಿ ಸ್ಥಿಮಿತದಲ್ಲಿ ಇಲ್ದೆ ಇದ್ದಿದ್ದು ಆನೆಗೆ. ಮಾವುತನನ್ನು ಕೊಂದಿದ್ದು ನೋಡಿದರೆ ಅದಕ್ಕೆ ಹುಚ್ಚುನಾಯಿ ಹುಚ್ಚು ಗ್ಯಾರಂಟಿ ಹಿಡಿದಿತ್ತು" ಎಂದು ತನ್ನ ವಾದ ಸಮರ್ಥಿಸಿಕೊಂಡ.

ಕೆಲವರು ಸಾರ್ವಜನಿಕ ಸಭೆಯಲ್ಲಾದ ಅವಮಾನ ತಾಳಲಾರದೆ ನಾಗರಾಜ ಆತ್ಮಹತ್ಯೆ ಮಾಡಿಕೊಂಡನೆಂದು ಹೇಳಿದರು.

ಆನೆ ಹೊಸಕಿ ಬಿಸಾಕಿದ್ದ ಮಾಂಸದ ಉಂಡೆಯನ್ನು ತನ್ನ ಗಂಡನದೆಂದು ಗುರುತಿಸಿ ಗೋಳೋ ಎಂದು ಅಳುತ್ತಾ ಕುಳಿತಿದ್ದ ವೇಲಾಯುಧನ ಹೆಂಡತಿ ಪೋಲೀಸರು ಮಹಜರಿಗೆ ಬರುತ್ತಲೂ ಗಟ್ಟಿ ಗಂಟಲಲ್ಲಿ ಹುಯ್ಯಲಿಡಲು ಶುರುಮಾಡಿದಳು. ಬಹುಶಃ ತನಗಾದ ಭಯಂಕರ ಅನ್ಯಾಯವನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟರೆ ತನಗೇನಾದರೂ ಪರಿಹಾರ ದೊರೆಯುತ್ತದೆ ಎಂದು ಆಕೆ ಯೋಚಿಸಿದ್ದಳೋ ಏನೋ! ಪೋಲೀಸರು ಕೇಳಿದ ಪ್ರಶ್ನೆಗಳಿಗೆ ಎದೆ ಎದೆ ಬಡಿದುಕೊಳ್ಳುತ್ತಾ ಗಟ್ಟಿ ಗಂಟಲಲ್ಲಿ ಕಿರಿಚುತ್ತಿದ್ದಳು. ತನಗೆ ಮಕ್ಕಳಾಗದಿದ್ದುದು, ತಾನು ವೇಲಾಯುಧ ಲಾಯದಲ್ಲಿ ಮಲಗಲು ಹೊರಟಾಗ ಅಂದಿದ್ದು, ವೇಲಾಯುಧ ಆನೆ ಉಗುರಿಗೆ ತಿವಿಯುತ್ತೇನೆಂದು ಹೇಳಿದ್ದು, ಹೀಗೆ ಬೇಕಿದ್ದು ಬೇಡದ್ದು ಎಲ್ಲಾ ಸೇರಿಸಿ ಕೂಗಿದಳು. ಮಧ್ಯೆ ಮಧ್ಯೆ ಕೃಷ್ಣೇಗೌಡರ ಆನೆಗೆ ಶಾಪಗಳೂ ಸೇರಿತ್ತು. ಅವಳು ಹುಯ್ಯಲಿಡುತ್ತಿರುವುದೂ ಪೋಲೀಸರು ಅದನ್ನೇ ಬರೆದುಕೊಳ್ಳುತ್ತ ನಿಂತಿರುವುದೂ ಪರಿಸ್ಥಿತಿಯನ್ನು ಒಂದು ಪ್ರಹಸನದಂತೆ ಮಾಡಿತ್ತು. ಪ್ರಕಾಶ ಸ್ಥಳದ ಪರಿಶೀಲನೆ ಮಾಡುತ್ತ ಆನೆಯ ದಂತ ನೆಲಕ್ಕೆ ತಾಗಿ ಪಿಕ್ಕಾಸಿಯಲ್ಲಿ ಅಗೆದ ಹಾಗೆ ಮಣ್ಣು ಎದ್ದಿರುವುದನ್ನು ತೋರಿಸುತ್ತಾ ಇದು ಕೃಷ್ಣೇಗೌಡನ ಆನೆ ಕೆಲಸ ಅಲ್ಲವೆಂದು ಕಿವಿಯಲ್ಲಿ ಹೇಳಿದ. ವೇಲಾಯುಧನ ಹೆಂಡತಿಯ ಹುಯ್ಯಲನ್ನೂ ಪ್ರಕಾಶನ ವಿಶ್ಲೇಷಣೆಯನ್ನೂ ಕೇಳಿದ ಮೇಲೆ ನನಗೆ ಹಿಂದಿನ ರಾತ್ರಿ ಅಲ್ಲೇನು ನಡೆದಿರಬಹುದೆಂಬ ಸ್ಪಷ್ಟ ಚಿತ್ರ ಮೂಡಿತು. ಆದರೆ ನಾವು ಅದನ್ನು ಯಾರ ಹತ್ತಿರವೂ ಹೇಳಹೋಗಲಿಲ್ಲ. ಎಲ್ಲ ಕೃಷ್ಣೇಗೌಡನ ಆನೆಯಿಂದಾದ ಘಟನಾವಳಿಗಳನ್ನು ತಮತಮಗೆ ತೋಚಿದಂತೆ ವಿಶ್ಲೇಷಿಸುತ್ತ ಇದರಲ್ಲೂ ಏನೋ ಒಂದು ನೀತಿ ಪಾಠ ಇದೆಯೆಂದು ಹುಡುಕುತ್ತಿರಬೇಕಾದರೆ ನಾವು ಯಾಕೆ ಮಧ್ಯೆ ಮೂಗುಹಾಕುವುದು ಎನಿಸಿತು.

ವೇಲಾಯುಧನ ಅವಸಾನ ಹೇಗಾಯ್ತೆಂದು ಸ್ಪಷ್ಟವಾದನಂತರ ಪೋಲೀಸರಿಗೆ ಪೀಕಲಾಟಕ್ಕೆ ಬಂದಿದ್ದು ನಾಗರಾಜನ ಅಂತರ್ಧಾನ. ನಾಗರಾಜನ ಅಂತರ್ಧಾನ ಸಾವೋ ಕೊಲೆಯೋ ಆತ್ಮಹತ್ಯೆಯೋ ಏನಾದರೂ

ಒಂದಾಗಿದ್ದರೆ ಎಲ್ಲಾ ಸೇರಿ ಅಯ್ಯೋ ಪಾಪ ಎಂದು ಕಣ್ಣೀರು ಸುರಿಸಿ ತಿಥಿ ಮಾಡಿ ಕೈ ತೊಳೆದುಕೊಳ್ಳುತ್ತಿದ್ದರು. ಜನಗಳ ನೂರೆಂಟು ತರದ ಬೇಜವಾಬ್ದಾರಿ ಊಹಾಪೋಹಗಳ ಹಿಂದೆಲ್ಲಾ ಹೋಗಿ ಹುಡುಕಾಡಿದರೂ ನಾಗರಾಜ ಅವರಿಗೆ ಪತ್ತೆಯೇ ಆಗಲಿಲ್ಲ. ಮೊದಲಿಗೆ ಕೃಷ್ಣೇಗೌಡರ ಆನೆಯೇ ಅವನನ್ನು ದುರ್ಗಮವಾದ ಕಾಡಿನಲ್ಲಿ ಎಲ್ಲೋ ಒಂದು ಕಡೆ ಕೊಂದು ನೆಲಕ್ಕೆ ಹಾಕಿ ತಿಕ್ಕಿದೆ ಎಂದು ಶಂಕಿಸಿದ್ದರು. ಹಾಗೇ ಆಗಿದ್ದರೆ ಆ ಆನೆಯ ನಿಮಿತ್ತ ನಡೆದ ಎಲ್ಲ ಘಟನೆಗಳಿಗೂ ಒಂದು ಅರ್ಥ ಸ್ಫುರಿಸುತ್ತಿತ್ತೋ ಏನೋ! ಪೋಲೀಸರು ಕಾಡೆಲ್ಲಾ ಹುಡುಕಾಡಿ ನಾಗರಾಜನ ಕೋವಿ ಸಿಕ್ಕಿದೆ. ಆದರೆ ಹೆಣ ಸಿಗಲಿಲ್ಲ ಎಂದು ಮಹಜರು ಬರೆದುಕೊಂಡರು. ಆದರೆ ಕೋವಿ ಸಿಕ್ಕಿದ್ದು ಮೂಡಿಗೆರೆಯಿಂದ ಹದಿನೈದು ಕಿಲೋಮೀಟರು ದೂರದಲ್ಲಿ! ಮತ್ತೆ ಜನಗಳ ಊಹಾಪೋಹ ದಿಕ್ಕು ಬದಲಿಸಿ ನಾಗರಾಜನ ಕೋವಿ ಇಲ್ಲಿಯವರೆಗೆ ಬಂದಿದ್ದು ಹೇಗೆ? ಎಂದು ಶುರುವಾಯ್ತು.

ಜನಗಳ ಬೇಜವಾಬ್ದಾರಿತನದ ಮಾತುಗಳಲ್ಲಿ ಸುಳ್ಳು ಯಾವುದು, ನಿಜ ಯಾವುದು ಬೇರ್ಪಡಿಸಲಾಗುವುದಿಲ್ಲ. ನಾಗರಾಜನಿಗೆ ಇದ್ದಕ್ಕಿದ್ದಂತೆ ಮನಃಪರಿವರ್ತನೆಯಾಗಿ ಕೋವಿ ತೆಗೆದು ಚರಂಡಿಗೆ ಎಸೆದು ಧರ್ಮಸ್ಥಳದ ಬಸ್ಸು ಹತ್ತಿದನೆಂದೂ, ತಲೆಬೋಳಿಸಿಕೊಂಡು ಧರ್ಮಸ್ಥಳದಲ್ಲಿ ಓಡಾಡುತ್ತಿರುವುದನ್ನು ತಾವು ಕಣ್ಣಾರೆ ಕಂಡೆವೆಂದೂ ಕೆಲವರು ಹೇಳಿದರು. ಗಾರ್ಡು ರಾಮಪ್ಪ ಇದ್ದರೂ ಇರಬಹುದೇನೋ ಎಂದು ಧರ್ಮಸ್ಥಳಕ್ಕೆ ಹೋಗಿ ತಲೆ ಬೋಳಿಸಿಕೊಂಡವರ ಹಿಂದೆಲ್ಲಾ ತಿರುಗಾಡಿ ಬಂದ.

ಕೆಲವರು ನಾಗರಾಜ ಆನೆ ಬೆನ್ನಟ್ಟಿದವನು ದಾರಿಯಲ್ಲಿ ಹಿಂದಿರುಗಿ ಬರುತ್ತಿರಬೇಕಾದರೆ ಎದುರಿಗೆ ಸಿಕ್ಕ ಗಂಧ ಸಾಗಾಣಿಕೆಯ ಗಂಗಾಧರನ ಕಾರಿಗೆ ಕೈ ಅಡ್ಡಹಾಕಿ ಹಿಂದುಮುಂದು ನೋಡದೆ ಅದರೊಳಗೆ ಕುಳಿತು ಆನೆಯನ್ನು ಕಾರಿನಲ್ಲಿ ಬೆನ್ನಟ್ಟುವಂತೆ ಹೇಳಿದನೆಂದೂ, ನಾಗರಾಜನನ್ನು ಅವನ ಗ್ಯಾಂಗೇ ಖೂನಿ ಮಾಡಿ ಹೆಣ ನಾಪತ್ತೆ ಮಾಡಿರಬೇಕೆಂದೂ ಹೇಳಿದರು.

ನಾಗರಾಜನ ಕೋವಿ ಸಿಕ್ಕು ಹೆಣ ಸಿಕ್ಕದಿರುವುದನ್ನು ನೋಡಿದರೆ ಇದು ಆನೆ ಕೆಲಸ ಅಲ್ಲವೆಂದು ನನಗೂ ಪ್ರಕಾಶನಿಗೂ ಅನ್ನಿಸುತ್ತಿತ್ತು. ಅವನ ಕೋವಿ ಹದಿನೈದು ಕಿಲೋಮೀಟರು ದೂರದಲ್ಲಿ ಸಿಕ್ಕಿದನ್ನೂ, ಅವನು ಕಳ್ಳಸಾಗಾಣಿಕೆಯವರ ಕಾರು ಹತ್ತಿದನೆಂಬ ವದಂತಿಯನ್ನೂ ಕೇಳಿ ನಾವು ಗಾರ್ಡು ರಾಮಪ್ಪನಿಗೆ ಈ ವಿಷಯ ತಿಳಿಸಿದೆವು.

ಆದರೆ ರಾಮಪ್ಪನಿಗೆ ಈ ಸಮಾಚಾರ ಹೇಳಿದಾಗ ನಮಗಿಂತ ಅವನಿಗೇ ಈ ಬಗ್ಗೆ ಹೆಚ್ಚು ಗೊತ್ತಿರುವಂತೆ ಮಾತಾಡಿದ.

ನಾಗರಾಜ ಗಂಗಾಧರನ ಗ್ಯಾಂಗಿನ ಕಾರನ್ನು ನಿಲ್ಲಿಸಿ ಒಳಗೆ ಏನಿದೆ ಚೆಕ್ ಮಾಡಲು ಇಣುಕಿ ನೋಡಿದನಂತೆ. ಒಳಗಿದ್ದ ಒಬ್ಬ ಖೇಡಿ ನಾಗರಾಜ ತಲೆಯನ್ನು ಹೊರಗೆಳೆದುಕೊಳ್ಳದಂತೆ ಜುಟ್ಟು ಹಿಡಿದು ಕಾರಿನ ಗಾಜನ್ನು ಏರಿಸಿ ಕುತ್ತಿಗೆ ಸಿಗಿಸಿದನಂತೆ. ಕಿಟಕಿಯಲ್ಲಿ ಕುತ್ತಿಗೆ ಸಿಕ್ಕಿಕೊಂಡು ವಿಲವಿಲ ಒದ್ದಾಡುತ್ತಿದ್ದ ನಾಗರಾಜನ ಸಮೇತ ಕಾರು ಚಾರ್ಮಡಿ ಕಡೆಗೆ ದೌಡಾಯಿಸುತ್ತಿದ್ದುದನ್ನು ಮಕ್ಕಿ ಗದ್ದೆ ಹತ್ತಿರ ನೈಟ್ ಬಸ್ಸಿಗೆ ಕಾಯುತ್ತಾ ನಿಂತಿದ್ದ ಕೆಲವರು ನೋಡಿದರೆಂದು ಗಾರ್ಡು ರಾಮಪ್ಪ ಹೇಳಿ "ಕಳ್ಳಸಾಗಾಣಿಕೆಯವರು ಯಾವುದಕ್ಕೂ ಹೇಸದ ಜನ. ನಾಗರಾಜ ಅವರನ್ನು ಎದುರು ಹಾಕಿಕೊಂಡಿದ್ದೇ ಅಲ್ಲ. ನಾವು ಹೇಳಿದರೆ ನಮ್ಮ ಮಾತು ಯಾರು ಕೇಳುತ್ತಾರೆ ಹೇಳಿ" ಎಂದ. ಒಟ್ಟಿನಲ್ಲಿ ಗಾರ್ಡು ರಾಮಪ್ಪ ನಾಗರಾಜನನ್ನು ನೋಡಿದ್ದೇ ಕೊನೆ ಸಾರಿ.

ನೊಂದ ನಾಗರಾಜನ ಮನೆಯವರಿಗೆ ಈ ರೀತಿ ಹುಚ್ಚಾಪಟ್ಟೆ ಊಹಾಪೋಹಗಳನ್ನು ಕೇಳಿ ಎಷ್ಟು ಕಳವಳವಾಗಬಹುದು ಎನ್ನುವುದನ್ನೂ ಲೆಕ್ಕಿಸದೆ ಒದರುತ್ತಿದ್ದರು ಜನಗಳು.

ಡಿಪಾರ್ಟ್‌ಮೆಂಟಿನವರು ಪತ್ರಿಕೆಗಳಲ್ಲಿ ಅವನ ಫೋಟೋ ಕೊಟ್ಟು, ಮನೆಯವರು, ಮೇಲಧಿಕಾರಿಗಳು ಹಾಗೂ ಊರಿನ ಜನರೆಲ್ಲಾ ನಿನ್ನದೇ ನಿರೀಕ್ಷೆಯಲ್ಲಿದ್ದಾರೆಂದೂ, ನಿನ್ನ ವಿರುದ್ಧ ಯಾವುದೇ ಕ್ರಮ ಅಥವಾ ಷೋಕಾಸ್ ನೋಟೀಸ್ ಅಥವಾ ತನಿಖೆ ನಡೆಸುವುದಿಲ್ಲವೆಂದೂ, ಈ ಮನವಿ ನೋಡಿದ ಕೂಡಲೇ ಎಲ್ಲಿದ್ದರೂ ಹಿಂದಿರುಗಿ ಬರತಕ್ಕದೆಂದೂ ಜಾಹೀರಾತು ಕೊಟ್ಟು ಇಂದಲ್ಲ ನಾಳೆ ಅವನು ಬರಬಹುದೆಂದು ಕಾಯುತ್ತಿದ್ದಾರೆ.

ಕೃಷ್ಣೇಗೌಡ ಮಾತ್ರ ಆ ಆನೆ ಮತ್ತೆ ಊರಿಗೆ ಹಿಂದಿರುಗಿದರೆ ಏನಪ್ಪಾ ಕತೆ ಎಂದು ಕಳವಳದಲ್ಲಿ ದಿನ ದೂಡುತ್ತಿದ್ದಾನೆ!

## ಲೇಖಕರ ಪರಿಚಯ :

ಶ್ರೀಯುತ **ಕೆ.ಪಿ. ಪೂರ್ಣಚಂದ್ರ ತೇಜಸ್ವಿ** (೧೯೩೮–೨೦೦೭) ಕನ್ನಡ ಅಗ್ರಮಾನ್ಯ ಗಣ್ಯಲೇಖಕರಲ್ಲಿ ಮುಖ್ಯರು. ಕುವೆಂಪು–ಹೇಮಾವತಿ ದಂಪತಿಗಳ ಮಗನಾಗಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳಿಯಲ್ಲಿ ಜನಿಸಿದರು. ಬದುಕಿದ್ದು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಸಮೀಪದ ನಿಂಬೆಮೂಲೆಯ 'ನಿರುತ್ತರ'ದಲ್ಲಿ. ಕೃಷಿ, ಸಾಹಿತ್ಯಕೃಷಿ, ಕಾಫಿ ತೋಟಗಾರಿಕೆ, ಛಾಯಾಗ್ರಹಣ, ಪುಸ್ತಕ ಪ್ರಕಾಶನ, ಶಿಕಾರಿ ಮುಂತಾದ ವೃತ್ತಿಗಳಲ್ಲಿ ತೊಡಗಿಕೊಂಡಿದ್ದ ತೇಜಸ್ವಿಯವರು ನಿಜವಾದ ಅರ್ಥದಲ್ಲಿ ನಿರಂಕುಶಮತಿಗಳಾಗಿದ್ದವರು.



ಇವರ ವಿದ್ಯಾಭ್ಯಾಸ ಮೈಸೂರು, ಶಿವಮೊಗ್ಗ ಮುಂತಾದೆಡೆ ನಡೆಯಿತು. ಕನ್ನಡ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದರೂ ಸರ್ಕಾರಿ ಕೆಲಸವನ್ನು ಒಲ್ಲದೆ ಕೃಷಿಯತ್ತ ಮುಖಮಾಡಿದರು. ಲೋಹಿಯಾರವರ ತತ್ವಚಿಂತನೆ, ಕುವೆಂಪು ಅವರ ಕಲಾಸೃಷ್ಟಿ, ಕಾರಂತರ ಜೀವನದೃಷ್ಟಿ ಮತ್ತು ಬದುಕಿನ ಪ್ರಯೋಗಶೀಲತೆಗಳು ತೇಜಸ್ವಿಯವರ ಸಾಹಿತ್ಯ ರಚನೆಯ ಮೇಲೆ ಗಾಢ ಪರಿಣಾಮವನ್ನು ಉಂಟುಮಾಡಿವೆ. ಆದ್ದರಿಂದಲೇ ಅವರು ಜಾತ್ಯತೀತವಾದ, ವರ್ಗಾತೀತವಾದ, ಲಿಂಗಾತೀತವಾದ ಹಾಗೂ ಶ್ರೀಸಾಮಾನ್ಯರ ಸಮಾಜವನ್ನು ಸೃಷ್ಟಿಸಿರುವುದನ್ನು ಕಾಣಬಹುದು. ಸೃಷ್ಟಿಯ ವಿಸ್ಮಯವನ್ನು ನಿಗೂಢವನ್ನು ತೇಜಸ್ವಿ ಕುತೂಹಲದಿಂದ ನೋಡಬಲ್ಲರು. ಸಮಾಜ ಮತ್ತು ಪ್ರಕೃತಿ ಇವೆರಡರ ತೀವ್ರವಾದ ಮುಖಾಮುಖಿಯನ್ನು ಇವರು ತಮ್ಮ ಕೃತಿಗಳಲ್ಲಿ ಚಿತ್ರಿಸಿದ್ದಾರೆ. ಸಮಾಜವಾದಿ ಚಳುವಳಿ, ರೈತ ಚಳುವಳಿ, ಜಾತಿವಿನಾಶ ಸಮ್ಮೇಳನಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ತೇಜಸ್ವಿ ತಮ್ಮ ವಿಶಿಷ್ಟ ವೈನೋದಿಕ ದರ್ಶನದ ಚಿಕಿತ್ಸಕ ದೃಷ್ಟಿಯನ್ನು ಕಥೆಗಳಲ್ಲಿ ಬೀರಿದವರು.

ಹುಲಿಯೂರಿನ ಸರಹದ್ದು, ಅಬಚೂರಿನ ಪೋಸ್ಟಾಫೀಸು, ಕಿರಗೂರಿನ ಗಯ್ಯಾಳಿಗಳು, ಪರಿಸರದ ಕಥೆ, ಪಾಕಕ್ರಾಂತಿ ಮತ್ತು ಇತರ ಕಥೆಗಳು – ಇವು ತೇಜಸ್ವಿಯವರ ಕಥಾಸಂಕಲನಗಳು. ಸ್ವರೂಪ, ನಿಗೂಢ ಮನುಷ್ಯರು, ಕರ್ವಾಲೋ, ಚಿದಂಬರ ರಹಸ್ಯ, ಜುಗಾರಿಕ್ರಾಸ್, ಮಾಯಾಲೋಕ–೧, ಕಾಡು ಮತ್ತು ಕ್ರೌರ್ಯ – ಇವು ಕಾದಂಬರಿಗಳು.

ಇವಲ್ಲದೆ: ಬೃಹನ್ನಳೆ ಸೋಮುವಿನ ಸ್ವಗತಲಹರಿ (ಕವಿತೆ), ಯಮಳ ಪ್ರಶ್ನೆ (ನಾಟಕ), ವ್ಯಕ್ತಿವಿಶಿಷ್ಟ ಸಿದ್ಧಾಂತ (ಸೈದ್ಧಾಂತಿಕ ಬರಹ), ವಿಮರ್ಶೆಯ ವಿಮರ್ಶೆ (ವಿಮರ್ಶೆ), ಅಣ್ಣನ ನೆನಪುಗಳು (ಜೀವನ ಚರಿತ್ರೆ), ಕಿರಿಯರಿಗಾಗಿ ಪರಿಸರ, ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು (ಪರಿಸರ) ಮುಂತಾದ ಕೃತಿಗಳನ್ನು ಪ್ರಕಟಿಸಿದ್ದಾರೆ. ಅಲೆಮಾರಿಯ ಅಂಡಮಾನ್ ಮತ್ತು ಮಹಾನದಿ ನೈಲ್ ಎಂಬುದು ತೇಜಸ್ವಿಯವರ ಪ್ರವಾಸಕಥನ. ಕಾಡಿನ ಕಥೆಗಳ ಮಾಲಿಕೆಯ ೫ ಸಂಪುಟಗಳು, ಮಿಲೆನಿಯಂ ಪುಸ್ತಕ ಸರಣಿ, ವೈಜ್ಞಾನಿಕ ಸಾಹಿತ್ಯ, ಪರಿಸರ ವಿಸ್ಮಯ ಮಾಲಿಕೆ, ಪಕ್ಷಿಲೋಕ ಹೀಗೆ ನಾನಾ ಕೃತಿಗಳನ್ನು ತೇಜಸ್ವಿ ಕನ್ನಡಕ್ಕೆ ನೀಡಿದ್ದಾರೆ.

ಮರಾಠಿ, ಹಿಂದಿ, ಮಲೆಯಾಳಂ, ತಮಿಳು, ಇಂಗ್ಲಿಷ್, ಜಪಾನಿ ಭಾಷೆಗಳಿಗೆ ತೇಜಸ್ವಿಯವರ ಅನೇಕ ಕೃತಿಗಳು ಅನುವಾದಗೊಂಡಿದೆ. ಅಬಚೂರಿನ ಪೋಸ್ಟಾಫೀಸು, ಕುಬಿ ಮತ್ತು ಇಯಾಲ, ತಬರನ ಕತೆ ಚಲನಚಿತ್ರಗಳಾಗಿ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳನ್ನು ಪಡೆದಿವೆ. ತಬರನ ಕತೆ, ಕಿರಗೂರಿನ ಗಯ್ಯಾಳಿಗಳು, ಕೃಷ್ಣೇಗೌಡನ ಆನೆ, ಪರಿಸರದ ಕಥೆಗಳು ರಂಗದ ಮೇಲೆ ಪ್ರಯೋಗಗೊಂಡಿವೆ.

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಶಿವರಾಮಕಾರಂತ ಪ್ರಶಸ್ತಿ, ರಾಷ್ಟ್ರೀಯ ಸ್ವರ್ಣ ಕಮಲ ಪ್ರಶಸ್ತಿಯ ಚಿನ್ನದ ಪದಕ, ರಾಷ್ಟ್ರೀಯ ಕಥಾ ಪ್ರಶಸ್ತಿ, ಭಾರತೀಯ ಭಾಷಾ ಪರಿಷತ್ತಿನ ಪ್ರಶಸ್ತಿ ಮುಂತಾದ ಪುರಸ್ಕಾರಗಳಿಗೆ ತೇಜಸ್ವಿ ಬಾಜನರಾಗಿದ್ದರು.

## ಶಬ್ದಾರ್ಥ :

ಖಾಯಮ್ಮು–ನಿತ್ಯವೂ; ಪುಕಾರು–ಗದ್ದಲ, ತಕರಾರು, ಅಪವಾದ; ಇನಾಮು–ಬಹುಮಾನ; ಪರಿ–ರೀತಿ; ಅನ್ಯಮನಸ್ಕ–ಮನಸ್ಸು ಬೇರೆಡೆಯಲ್ಲಿರುವುದು; ಪೀಜು–ಫ್ಯೂಸ್ (fuse); ಜಪ್ಪಿ–ಚಚ್ಚಿ; ದೂಷಿಸು–ಆಪಾದನೆ ಮಾಡು; ಸಲಾಮ್–ನಮಸ್ಕಾರ; ಹವಣಿಸು–ಯೋಚಿಸು, ಉಪಾಯಮಾಡು; ತ್ರಾಸ–ಕಷ್ಟ; ಸಾತ್ವಿಕ–ಒಳ್ಳೆಯತನ; ವರ್ಜಿಸು–ಬಿಟ್ಟುಬಿಡು; ಬಡಾಯಿ–ಜಂಬ; ಕ್ಷಿಪ್ರಮಾರ್ಗ–ಸುಲಭದ ದಾರಿ; ಪಗಡುದಸ್ತು –ಮೈಕೈತುಂಬಿಕೊಂಡಿರು; ಸೈರಣೆ–ತಾಳ್ಮೆ; ಅವಜ್ಞೆ–ಕಡೆಗಣಿಸುವಿಕೆ; ಐ ವಿಟ್‌ನೆಸ್ (eye-witness)–ಪ್ರತ್ಯಕ್ಷ ಸಾಕ್ಷಿ; ಮರ್ಮಕ್ಕೆ–ಮನಸ್ಸಿಗೆ ತಾಗುವಂತಹ; ಜಖಂ–ಹಾನಿಯಾಗು; ಪರಿವರ್ತನೆ–ಬದಲಾವಣೆ; ಕ್ಷುದ್ರ–ಚಿಕ್ಕ ಪುಟ್ಟ; ಅಸಂಭವ–ಸಾಧ್ಯವಾಗದ; ಇತ್ಯರ್ಥ–ತೀರ್ಮಾನ; ಪ್ರವರ–ಅನವಶ್ಯಕ ವಿವರಣೆ; ಅಭಿಮತ–ಅಭಿಪ್ರಾಯ; ನಾಟ–ಮರದ ದಿಮ್ಮಿ; ರೋಸಿಹೋಗು–ಸಾಕಾಗಿಹೋಗು; ರೇಜಿಗೆ–ಜುಗುಪ್ಸೆ; ಪಾರ್ಶ್ವ–ಭಾಗ; ಬಿಟ್ಟಿ–ಪುಕ್ಕಟೆ; ಆಸ್ಥೆ–ಕಾಳಜಿ; ಚಿತಾವಣೆ–ಇತರರನ್ನು ಪ್ರಚೋದಿಸುವುದು; ಕುಗುರು–ತೂಕಡಿಸು; ಕಾನ್‌ಫಿಸಿಕೇಟ್ (confisicate)–ಜಪ್ತಿಮಾಡು, ಮುಟ್ಟುಗೋಲು ಹಾಕು, ವಶಪಡಿಸಿಕೋ; ಮನ್ನಾ–ರದ್ದು; ಎರಾಡಿಕೇಶನ್ (eradication)–ನಿರ್ಮೂಲನ, ಮೂಲೋತ್ಪಾಟನ; ಮನ್ನಾಜಂಗ್ಲಿ–ಮೀಸಲು ಅರಣ್ಯ; ಮಹಜರ್–ಸ್ಥಳ ಪರಿಶೀಲನೆ; ವಕ್ತಾರ–ಪ್ರತಿನಿಧಿ; ಪರ್ವಾನಗಿ–ಅನುಮತಿ; ಬರಖಾಸ್ತಾಗು–ಮುಗಿದುಹೋಗು; ದುರ್ಬುದ್ಧಿ–ಕೆಟ್ಟಬುದ್ಧಿ; ಹಿಯ್ಯಾಳಿಸು–ನಿಂದಿಸು; ಅಂಕುಶ–ಆನೆಯನ್ನು ಹದ್ದಿನಲ್ಲಿಡಲು ಉಪಯೋಗಿಸುವ ಒಂದು ಲೋಹದ ಸಾಧನ; ನೀಳದಂತ–ಉದ್ದನೆಯ ಹಲ್ಲು; ಗಂಡಿ–ತಗ್ಗು ಪ್ರದೇಶ, ಕುಳಿ; ವಿಘ್ನ–ತೊಂದರೆ; ಅವಕ್ಕಾಗು–ಮಾತಿಲ್ಲದಂತಾಗು, ಆಶ್ಚರ್ಯಪಡು; ಪಂಗ್ತಿ–ಸಾಲು; ಹುಯ್ಯಲಿಡು–ರೋಧಿಸು; ಸ್ಥಿಮಿತ–ಹಿಡಿತ; ಪ್ರಹಸನ–ನಾಟಕ; ಪೀಕಲಾಟ–ಸಂಕಷ್ಟ; ಶಂಕಿಸು–ಅನುಮಾನಿಸು; ಖೂನಿ–ಕೊಲೆ; ವದಂತಿ–ಸುದ್ದಿ; ಹೇಸದ–ಹೆದರದ.

## ಟಿಪ್ಪಣಿ:

೧. **ಸಿರಂ (serum) :**

ಇದೊಂದು ವೈದ್ಯಶಾಸ್ತ್ರದಲ್ಲಿ ಬಳಕೆಯಲ್ಲಿರುವ ಪದ. ನಿರ್ದಿಷ್ಟ ರೋಗಕಾರಕ ಸೂಕ್ಷ್ಮ ಜೀವಿಯನ್ನು ನಾಶಮಾಡಬಲ್ಲ ಪ್ರತಿಕಾಯವಿರುವ, ಮುಖ್ಯವಾಗಿ ಲಸಿಕೆಗಳಲ್ಲಿ ಬಳಸುವ ಪ್ರಾಣಿ ಮೂಲದ ದ್ರವ. ಅಧ್ಯಾಯ-೫ರಲ್ಲಿ ವೆಟರ್ನರಿ ಸ್ಟಾಕ್‌ಮನ್ ಪುಟ್ಟಯ್ಯ ಕರೆಂಟಿನ ತೊಂದರೆಯಿಂದಾಗಿ ಸಿರಂ ಕೆಟ್ಹೋಗಿದೆ ಎಂಬ ಮಾತು ಹೇಳುವುದನ್ನು ಗಮನಿಸಬಹುದು.

೨. **ಮನ್ನಾಜಂಗ್ಲಿ :**

ಸರ್ಕಾರವು ಸಾರ್ವಜನಿಕರ ಪ್ರವೇಶವನ್ನು ನಿಷೇಧಿಸಿ, ತನ್ನ ಹತೋಟಿಯಲ್ಲಿಟ್ಟುಕೊಂಡಿರುವ ಮೀಸಲು ಅರಣ್ಯ ಪ್ರದೇಶವನ್ನು ಮನ್ನಾಜಂಗ್ಲಿ ಎಂದು ಕರೆಯುತ್ತಾರೆ. ಇದು ಅನ್ಯದೇಶ್ಯ ಪದವಾಗಿದ್ದು ಜನರ ಭಾಷೆಯಲ್ಲಿ ಬೆರೆತುಹೋಗಿದೆ.

## : ಅಭ್ಯಾಸ ಭಾಗ :

### ಅ) ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳು:

೧. ನಮ್ಮ ಕಡೆ ಕೆಮ್ಮು ಕಾಲಿಂಗ್‌ಬೆಲ್ ಇದ್ದಹಾಗೆ.

೨. ಆನೆ ಸಾಕುವುದು ಎಂದರೆ ಎಲೆಕ್ಷನ್ನಿಗೆ ನಿಂತ ಹಾಗೆ.

೩. ಆನೆಗೂ ಮಾನ ಮರ್ಯಾದೆ ಇರುತ್ತೆ ತಿಳುಕೊ.

೪. ನನ್ನ ಕೊಡಲಿ ಯಾಕೆ ತಂದು ಆಫೀಸಿನಲ್ಲಿ ಇಟ್ಕೊಂಡಿದ್ದೀರ?

೫. ವೆಪನ್ ಸಾರ್, ವೆಪನ್ ನಮಗೆ ಮುಖ್ಯ.

೬. ನಿನ್ನ ಪುಕಾರೇನಿದ್ರೂ ಬರ್‍ವಣಿಗೇಲಿ ಇರಬೇಕು.

೭. ಡ್ರೈವರಣ್ಣ ಎತ್ಲಾಗಿ ಹೋದ! ಇಲ್ಲೇ ಇದ್ದನಲ್ಲ!

೮. ಕುಶಾಲಿಗಂತ ಸೊಂಡಿಲು ಬೀಸಿದರೆ ಸಾಕಲ್ಲ.

೯. ಹದಿನಾಲ್ಕು ಇಂಜಕ್ಷನ್ ಹೊಟ್ಟೆಗೆ ಚುಚ್ಚುಸ್ಕೊತೀನಿ.

೧೦. ಕೃಷ್ಣೇಗೌಡರ ಆನೆಗೂ ಕಚ್ಚಿದೆ ಅಂತ ವರ್ತಮಾನ ಉಂಟಪ್ಪ.

೧೧. ನಂಗೇನು ಈ ನಾಯಿಗಳನ್ನು ಕಂಡರೆ ಪ್ರೀತಿನಾ ಸ್ವಾಮಿ!

೧೨. ಹೊರಗಡೆಯಿಂದ ಎಕ್ಸ್‌ಪೋರ್ಟ್ ಆದವು.

೧೩. ಮುನ್ಸಿಪಾಲ್ ಪ್ರೆಸಿಡೆಂಟಾಗಿ ಊರನ್ನು ಸ್ವಚ್ಛವಾಗಿಡೋದು ನಿಮ್ಮ ಕರ್ತವ್ಯ.

೧೪. ಕಂಬದ ಮೇಲೆ ಯಾಕೋ ಕೈಲಾಸ ಕಂಡಹಾಗೆ ಇದೆಯಲ್ಲಾ.

೧೫. ಈ ಕಂಬದೊಳ್ಗೆ ಏನೋ ಸೇರ್‌ಕೊಂಡಿದೆ.

೧೬. ಆನೆ ಬೇಲಿ ದಾಟಿ ಹೋಯ್ತು ಸಾರ್.

೧೭. ಕೋವಿ ಸಿಕ್ಕಿದೆ. ಆದರೆ ಹೆಣ ಸಿಗಲಿಲ್ಲ.

## ಆ) ಒಂದು ಅಂಕದ ಪ್ರಶ್ನೆಗಳು (ಒಂದು ವಾಕ್ಯದಲ್ಲಿ ಉತ್ತರಿಸಿ):

೧. ನಿರೂಪಕರಿಗೆ ಯಾವ ಕೆಲಸ ಖಾಯಮ್ಮಾಗಿತ್ತು?

೨. ದುರ್ಗಪ್ಪ ಏನನ್ನು ಕೇಳಿ ಪಡೆಯಲು ಬಂದಿದ್ದನು?

೩. ದುರ್ಗಪ್ಪನ ಪ್ರಕಾರ ತರ್ಲೆ ಡಿಪಾರ್ಟ್‌ಮೆಂಟ್ ಯಾವುದು?

೪. ಕೃಷ್ಣೇಗೌಡರ ಆನೆ ಮೊದಲು ಯಾವ ಮಠದಲ್ಲಿತ್ತು?

೫. ಕೃಷ್ಣೇಗೌಡರ ಆನೆಯ ಹೆಸರೇನು?

೬. ಆನೆಗೆ ಜಗದ್ಗುರುಗಳನ್ನು ಹೊರುವ ಕೆಲಸ ತಪ್ಪಿಹೋದುದೇಕೆ?

೭. ಆನೆಯ ಮಾವುತನ ಹೆಸರೇನು?

೮. ರಹಮಾನ್ 'ಐ ವಿಟ್‌ನೆಸ್' ಎಂದು ಯಾರನ್ನು ತೋರಿಸಿದನು?

೯. ನಿರೂಪಕರ ಇಕಾಲಜಿಸ್ಟ್ ಗೆಳೆಯ ಯಾರು?

೧೦. ಆನೆ ಇಲ್ಲದ್ದರಿಂದ ವೇಲಾಯುಧ ಎಲ್ಲಿ ಕೆಲಸಕ್ಕೆ ಸೇರಿದ?

೧೧. ಶಿವೇಗೌಡರು ರಾತ್ರೋರಾತ್ರಿ ಆನೆ ಕರೆದುಕೊಂಡು ಹೋದುದ್ದೇಕೆ?

೧೨. ಪೋಸ್ಟ್‌ಮನ್ ಜಬ್ಬಾರನಿಗೆ ಒದಗಿದ ತೊಂದರೆ ಏನು?

೧೩. ಜಬ್ಬಾರ್ ವೆಟರ್ನರಿ ಆಸ್ಪತ್ರೆಗೆ ಬರಲು ಕಾರಣವೇನು?

೧೪. ಮುನ್ಸಿಪಾಲಿಟಿ ಪ್ರೆಸಿಡೆಂಟರ ಹೆಸರೇನು?

೧೫. ನಿರೂಪಕರ ಪ್ರಕಾರ ಮುನ್ಸಿಪಾಲಿಟಿ ಪ್ರೆಸಿಡೆಂಟರ ಕರ್ತವ್ಯ ಯಾವುದು?

೧೬. ಟೆಲಿಫೋನ್ ಕಂಬದ ಮೇಲೆ ಮೃತನಾದ ಲೈನ್‌ಮನ್ ಯಾರು?

೧೭. ಟೆಲಿಫೋನ್ ಸಿಬ್ಬಂದಿ ಯಾರ ವಿರುದ್ಧ ಮುಷ್ಕರ ಹೂಡಿದರು?

೧೮. ಯಾವ ವಿಷಯ ಪ್ರಸ್ತಾಪಿಸಲು ಲೇಖಕರು ಮೀಟಿಂಗಿಗೆ ಹೋಗಿದ್ದರು?

೧೯. ರೇಂಜರ್ ಆನೆಗೆ ಶೂಟ್ ಮಾಡುವಂತೆ ಯಾರಿಗೆ ಸೂಚಿಸಿದರು?

೨೦. ಆನೆಶಾಸ್ತ್ರದವನು ಏನೆಂದು ಭವಿಷ್ಯ ನುಡಿದಿದ್ದನು?

೨೧. ನಾಗರಾಜ ಕೋವಿ ಹಿಡಿದು ಎಲ್ಲಿ ಕುಳಿತಿದ್ದ?

೨೨. ಪೊಲೀಸರು ಏನೆಂದು ಮಹಜರು ಬರೆದುಕೊಂಡರು?

## ಇ) ಎರಡು ಅಂಕಗಳ ಪ್ರಶ್ನೆಗಳು (ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ):

೧. ನಮ್ಮ ಕಡೆ ಕೆಮ್ಮುವುದು ಕಾಲಿಂಗ್ ಬೆಲ್ ಇದ್ದಹಾಗೆ ಎಂದು ನಿರೂಪಕರು ಹೇಳುವುದೇಕೆ?

೨. ದುರ್ಗಪ್ಪ ಏಕೆ ಬಂದಿರಬಹುದೆಂಬ ನಿರೂಪಕರು ಯೋಚಿಸಿದರು?

೩. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆ ಹೇಗೆ?

೪. ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸಾದುದೇಕೆ?

೫. ಆನೆ ಸಾಕುವುದರ ಬಗ್ಗೆ ಜನರ ನಂಬಿಕೆ ಏನಾಗಿತ್ತು?

೬. ಸೊರಗಿದ್ದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ?

೭. ಕಾಡಾನೆಗಳ ಹಾವಳಿಗೆ ಪ್ರಕಾಶ್ ನೀಡಿದ ಕಾರಣಗಳೇನು?

೮. ಫಾರೆಸ್ಟ್ ಡಿಪಾರ್ಟ್‌ಮೆಂಟಿನವರ ನಂಬರ್ ಒನ್ ಎನಿಮಿಗಳು ಯಾರು ಯಾರು?

೯. ನಾಗರಾಜ ದುರ್ಗಪ್ಪನ ಮೇಲೆ ಏನೆಂದು ರೇಗಿದನು?

೧೦. ಡ್ರೈವರ್‌ನ ತಲೆ ಜಜ್ಜಿ ಹೋದದ್ದು ಹೇಗೆ? ಆನೆ ಅದಕ್ಕೆ ಕಾರಣವೆ?

೧೧. ತನ್ನ ಕೆಲಸ ಅತ್ಯಂತ ಅಪಾಯಕಾರಿಯೆಂದು ದುರ್ಗಪ್ಪ ವಿವರಿಸಿದ್ದು ಹೇಗೆ?

೧೨. ಜಬ್ಬಾರ್ ನಿರೂಪಕರಿಗೆ ಅಂಚೆ ವಿಲೇವಾರಿ ಬಗ್ಗೆ ಅಸಡ್ಡೆಯಿಂದ ಏನು ಹೇಳಿದ?

೧೩. ನಾಯಿ ಕಚ್ಚಿದ್ದೆಲ್ಲಿ ಎಂದಾಗ ಜಬ್ಬಾರ್ ಇರುಸುಮುರುಸಿನಿಂದ ಏನು ಹೇಳಿದನು?

೧೪. ಹುಚ್ಚುನಾಯಿಗಳು ಆಸ್ಪತ್ರೆಯಲ್ಲಿ ಹೇಗೆ ವರ್ತಿಸುತ್ತವೆಂದು ಪುಟ್ಟಯ್ಯ ಹೇಳಿದನು?

೧೫. ನಾಯನ್ನು ಕೊಲ್ಲದೆ ನೌಕರರು ಸುಳ್ಳು ಹೇಳಿರುವರೆಂದು ನಿರೂಪಕರು ಯಾವ ಸಲಹೆ ನೀಡಿದರು?

೧೬. ಆನೆಯೇ ತಿಪ್ಪಣ್ಣನ ಸಾವಿಗೆ ಕಾರಣವೆಂದು ದುರ್ಗಪ್ಪ ಹೇಳಿದಾಗ ನಿರೂಪಕರ ಪ್ರತಿಕ್ರಿಯೆ ಏನು?

೧೭. ಡ್ರೈವರ್ ಅಬ್ಬಾಸ್, ಕ್ಲೀನರ್ ಕೃಷ್ಣರ ಸಾವಿಗೆ ಕಾರಣವೇನು?

೧೮. ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣರ ಸಾವಿಗೆ ಆನೆ ಕಾರಣವಲ್ಲವೆಂದು ಕೃಷ್ಣೇಗೌಡರಿಗೆ ಏಕೆ ಹೇಳಲಾಗಲಿಲ್ಲ?

೧೯. ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ?

೨೦. ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು?

## ಈ) ನಾಲ್ಕು ಅಂಕಗಳ ಪ್ರಶ್ನೆಗಳು (ಐದಾರು ವಾಕ್ಯಗಳಲ್ಲಿ ಉತ್ತರಿಸಿ):

೧. ದುರ್ಗಪ್ಪ ನಿರೂಪಕರ ಬಳಿಗೆ ಬಂದ ಸಂದರ್ಭವನ್ನು ವಿವರಿಸಿ.

೨. ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲವೇಕೆ? ವಿವರಿಸಿ.

೩. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆಯನ್ನು ವಿವರಿಸಿ. ಅದು ಪೇಟೆಯಲ್ಲಿ ಏನು ಮಾಡುತ್ತಿತ್ತು?

೪. ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗಹಾಕಲು ಮಠದವರು ಹವಣಿಸಿದ್ದೇಕೆ?

೫. ಎಲ್ಲರ ನಿರೀಕ್ಷೆ ಸುಳ್ಳಾಗುವಂತೆ ಕೃಷ್ಣೇಗೌಡ ಆನೆಯನ್ನು ಹೇಗೆ ಸಾಕಿದನು?

೬. ಕಾಡಾನೆಗಳ ಹಾವಳಿ ನಿರೂಪಕರ ಅನುಭವಕ್ಕೆ ಬಂದುದು ಹೇಗೆ?

೭. ಅರಣ್ಯ ಇಲಾಖೆಯ ಶತ್ರುಗಳ ಕಾರ್ಯಭಾರವನ್ನು ನಾಗರಾಜ ವಿವರಿಸಿದ್ದು ಹೇಗೆ?

೮. ನಿದ್ರೆ ಮಂಪರಿನಲ್ಲಿದ್ದ ಡ್ರೈವರ್ ಪರಂಧಾಮಕ್ಕೆ ಹೋದ ಸಂದರ್ಭವನ್ನು ವಿವರಿಸಿ.

೯. ಡ್ರೈವರ್ ಸಾವಿನ ಸುದ್ದಿಯನ್ನು ಶಿವೇಗೌಡ ಮತ್ತಿತರರು ಹೇಗೆ ಮುಚ್ಚಿ ಹಾಕಿದರು?

೧೦. ದುರ್ಗಪ್ಪನಿಗೆ ಲೈನ್‌ಮನ್ ಕೆಲಸ ರೋಸಿ ಹೋಗಲು ಕಾರಣಗಳೇನು?

೧೧. ಪೋಸ್ಟ್‌ಮನ್ ಜಬ್ಬಾರನ ಬವಣೆಗಳನ್ನು ನಿರೂಪಕರು ಹೇಗೆ ವಿವರಿಸಿದ್ದಾರೆ?

೧೨. ಪುಟ್ಟಯ್ಯ ತನ್ನ ಅಸಹಾಯಕತೆಯನ್ನು ಹೇಗೆ ವಿವರಿಸುತ್ತಾನೆ?

೧೩. ಬೀದಿನಾಯಿಗಳ ನಿವಾರಣೆಗೆ ಖಾನ್ ಸಾಹೇಬರು ತೆಗೆದುಕೊಂಡಿದ್ದ ಕ್ರಮಗಳಾವುವು?

೧೪. ಟೆಲಿಫೋನ್ ಲೈನ್‌ಮನ್ ತಿಪ್ಪಣ್ಣನ ಸಾವಿನ ಸಂದರ್ಭವನ್ನು ವಿವರಿಸಿ.

೧೫. ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣನ ಸಾವಿಗೆ ಕೃಷ್ಣೇಗೌಡರ ಆನೆ ಕಾರಣವೆ ವಿವರಿಸಿ?

೧೬. ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಸವತಿ ಮಾತ್ಸರ್ಯ ಮೂಡಲು ಕಾರಣಗಳೇನು?

೧೭. ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯಗಳೇನು?

೧೮. ತನ್ನ ಆನೆಯ ಬಗ್ಗೆ ಕೃಷ್ಣೇಗೌಡನಲ್ಲಿ ಬೇಸರ ಮೂಡಲು ಕಾರಣಗಳೇನು?

## ಭಾಷಾಭ್ಯಾಸ :

೧. ನಾಟಿ, ನಾಟು, ನಾಟ – ಈ ಪದಗಳ ಅರ್ಥವ್ಯತ್ಯಾಸವನ್ನು ಕೇಳಿ ತಿಳಿಯಿರಿ.

೨. ಧೇನಿಸುತ್ತ, ಗ್ರಾಚಾರ – ಮುಂತಾದ ಪದಗಳನ್ನು ಪಟ್ಟಿಮಾಡಿ ಅವುಗಳ ಗ್ರಾಂಥಿಕ ರೂಪಗಳನ್ನು ಬರೆಯಿರಿ.

೩. ಕಂಟ್ರಿ ಡಾಗ್ (ದೇಸಿ ತಳಿಯ ನಾಯಿ) ಕಂತ್ರಿನಾಯಿ ಆಗಿ ಬಳಕೆಯಲ್ಲಿರುವ ಪದರೂಪವನ್ನು ಗಮನಿಸಿ.

೪. ಅಡಿ, ಕಳೆ, ಬಗೆ, ಹಿಡಿ, ಹದ್ದು – ಇವುಗಳಿಗೆ ನಾನಾರ್ಥ ರೂಪಗಳನ್ನು ಬರೆಯಿರಿ.

೫. 'ಕೃಷ್ಣೇಗೌಡನ ಆನೆ' ಕತೆಯಲ್ಲಿ ನಿರೂಪಕ ಬಳಸುವ ನುಡಿಗಟ್ಟುಗಳನ್ನು ಗಮನಿಸಿರಿ. ಅವುಗಳ ಅರ್ಥ ತಿಳಿದುಕೊಳ್ಳಲು ಯತ್ನಿಸಿ.
ಉದಾಹರಣೆಗೆ : ತುತ್ತೂರಿ ಊದು, ತರ್ಪಣ ಬಿಡು, ನರಪೇತಲ ನಾರಾಯಣ, ಗಾಳಿಸುದ್ದಿ ಹಬ್ಬು, ಹೆಸರುವಾಸಿಯಾಗು, ಮುಖ ಹಿಂಜಿಕೊಳ್ಳು, ಅಧಿಕಪ್ರಸಂಗ ಮಾಡು, ಕಾಲುಕೀಳು, ಕಣ್ಣಿಗೆ ಒತ್ತಿಕೋ, ಗಾಳಿಗೆ ಉಗಿ, ದೇಶಾವರಿ ನಗೆ ಬೀರು, ಮೂಗು ಹಾಕು, ಮೇಲೆ ಎತ್ತಿ ಕಟ್ಟು, ಉರಿಯುವ ಬೆಂಕಿಗೆ ತುಪ್ಪ ಸುರಿ, ಹದ್ದುಬಸ್ತಿನಲ್ಲಿಡು ಇತ್ಯಾದಿ.

೬. ಈ ಕಥೆಯಲ್ಲಿ ಬಂದಿರುವ ಅನ್ಯದೇಶ್ಯ ಪದಗಳನ್ನು ಪಟ್ಟಿಮಾಡಿರಿ.

## ಚಟುವಟಿಕೆ :

೧. ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಇತರ ಕಥೆಗಳನ್ನು ಅಭ್ಯಾಸಮಾಡಿ.

೨. ಕಾಡುಪ್ರಾಣಿಗಳನ್ನು ಸಾಕುವ ಅಪಾಯಗಳನ್ನು ಕುರಿತು ಲೇಖನ ರಚಿಸಿ.

೩. ಇತ್ತೀಚೆಗೆ ಪಟ್ಟಣ ಪ್ರದೇಶದಲ್ಲಿ ಹೆಚ್ಚುತ್ತಿರುವ ಆನೆಗಳ ಹಾವಳಿ ಬಗ್ಗೆ ಮಾಹಿತಿ ಸಂಗ್ರಹಿಸಿ, ಲೇಖನ ರಚಿಸಿ.

೪. ಎ. ನಾಗೇಶ್ ನಿರ್ದೇಶನದ 'ಕೃಷ್ಣೇಗೌಡನ ಆನೆ' ರಂಗ ಪ್ರಯೋಗವನ್ನು ವೀಕ್ಷಿಸಿ.

## ಆಕರ :

| | |
|---|---|
| ಕೃತಿ | : ಕಿರಗೂರಿನ ಗಯ್ಯಾಳಿಗಳು. |
| ಲೇಖಕ | : ಕೆ. ಪಿ. ಪೂರ್ಣಚಂದ್ರ ತೇಜಸ್ವಿ. |
| ಮೊದಲ ಮುದ್ರಣ | : ೧೯೯೧. |
| ಪ್ರಕಾಶಕರು | : ಪುಸ್ತಕ ಪ್ರಕಾಶನ<br>೯೧, ೯ನೇ ಮೇನ್, ಸರಸ್ವತಿಪುರಂ, ಮೈಸೂರು ೫೭೦೦೦೯. |

## ಹೆಚ್ಚಿನ ಓದಿಗೆ :

೧. ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಬದುಕು-ಬರಹ, ಲೇ: ಡಾ॥ ಕರೀಗೌಡ ಬೀಚನಹಳ್ಳಿ. ಪ್ರಕಾಶಕರು: ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ.

೨. ಶತಮಾನದ ಸಣ್ಣಕತೆಗಳ ಸಮೀಕ್ಷೆ ಲೇ: ಡಾ॥ ಕರಿಗೌಡ ಬೀಚನಹಳ್ಳಿ

೩. ತೇಜಸ್ವಿ ಕಥನ ಲೇ: ಟಿ. ಪಿ. ಅಶೋಕ ಪ್ರ: ಅಕ್ಷರ ಪ್ರಕಾಶನ, ಹೆಗ್ಗೋಡು.

೪. ಕಂಡಷ್ಟು ಲೇ: ಡಾ॥ ಜಿ. ಪಿ. ಬಸವರಾಜು, ಪ್ರ: ಚೇತನಾ ಬುಕ್ ಹೌಸ್, ಮೈಸೂರು.

೫. ಪೂರ್ಣಚಂದ್ರ ತೇಜಸ್ವಿ ವಿಶೇಷ ಸಂಚಿಕೆ, ಸಂಚಯ ಸಾಂಸ್ಕೃತಿಕ ಪತ್ರಿಕೆ.

೬. 'ತೇಜಸ್ವಿ ಕಥನ ಸಾಹಿತ್ಯದ ಸಾಂಸ್ಕೃತಿಕ ನೆಲೆಗಳು'– ಡಾ. ಎಚ್.ಎಸ್. ಸತ್ಯನಾರಾಯಣ

*ಆನೆ ಹೋದುದೆ ಬೀದಿ*
*ಅವರಿಗವರದೆ ಹಾದಿ*
– ದ.ರಾ. ಬೇಂದ್ರೆ





# ಟಿಪ್ಪಣಿಗಾಗಿ

# ಟಿಪ್ಪಣಿಗಾಗಿ

## : ಅನುಬಂಧ – ೧ (ಅ) :

| ಪಠ್ಯ | ೧ ಅಂಕ | ೨ ಅಂಕ | ೩ ಅಂಕ | ೪ ಅಂಕ | ೫ ಅಂಕ | ಒಟ್ಟು ಅಂಕಗಳು |
|---|---|---|---|---|---|---|
| **ಪದ್ಯಭಾಗ**<br>ಒಟ್ಟು ಪ್ರಶ್ನೆಗಳು | ೪ | ೫ | ೩ | ೪ | ೨ | |
| ಉತ್ತರಿಸಬೇಕಾದುದು | ೪ | ೪ | ೨ | ೩ | ೧ | |
| ಹೆಚ್ಚುವರಿ ಪ್ರಶ್ನೆಗಳು | – | ೧ | ೧ | ೧ | ೧ | |
| ಒಟ್ಟು ಅಂಕಗಳು | ೪ | ೮ | ೬ | ೧೨ | ೫ | ೩೫ |
| **ಗದ್ಯಭಾಗ**<br>ಒಟ್ಟು ಪ್ರಶ್ನೆಗಳು | ೩ | ೪ | ೨ | ೩ | – | |
| ಉತ್ತರಿಸಬೇಕಾದುದು | ೩ | ೩ | ೧ | ೨ | | |
| ಹೆಚ್ಚುವರಿ ಪ್ರಶ್ನೆಗಳು | – | ೧ | ೧ | ೧ | – | |
| ಒಟ್ಟು ಅಂಕಗಳು | ೩ | ೬ | ೩ | ೮ | – | ೨೦ |
| **ದೀರ್ಘಗದ್ಯಭಾಗ**<br>ಒಟ್ಟು ಪ್ರಶ್ನೆಗಳು | ೩ | ೪ | ೨ | ೩ | – | |
| ಉತ್ತರಿಸಬೇಕಾದುದು | ೩ | ೩ | ೧ | ೨ | – | |
| ಹೆಚ್ಚುವರಿ ಪ್ರಶ್ನೆಗಳು | – | ೧ | ೧ | ೧ | – | |
| ಒಟ್ಟು ಅಂಕಗಳು | ೩ | ೬ | ೩ | ೮ | – | ೨೦ |
| **ಭಾಷಾಭ್ಯಾಸ ರಚನೆ**<br>ಒಟ್ಟು ಪ್ರಶ್ನೆಗಳು | – | ೭ | – | ೪ | ೨ | |
| ಉತ್ತರಿಸಬೇಕಾದುದು | – | ೬ | – | ೨ | ೧ | |
| ಹೆಚ್ಚುವರಿ ಪ್ರಶ್ನೆಗಳು | – | ೧ | – | ೨ | ೧ | |
| ಒಟ್ಟು ಅಂಕಗಳು | – | ೧೨ | – | ೮ | ೫ | ೨೫ |

## : ಅನುಬಂಧ – ೧ (ಆ) :

| | |
|---|---|
| ಜ್ಞಾನ (Knowledge) | 35% |
| ತಿಳಿವಳಿಕೆ (Understanding) / ಗ್ರಹಿಕೆಗೆ (Comprehension) | 25% |
| ಅನ್ವಯ (Application) / ಅಭಿವ್ಯಕ್ತಿ (Expression) | 30% |
| ಕೌಶಲ್ಯ (Skill) / ಮೆಚ್ಚುಗೆಗೆ (Appreciation) | 10% |

# : ಅನುಬಂಧ – ೨ :

## I. ಪ್ರಶ್ನೆಪತ್ರಿಕೆ ರಚನೆ ಮತ್ತು ಉತ್ತರ ಪತ್ರಿಕೆಯ ಮೌಲ್ಯಮಾಪನಕ್ಕೆ ಸೂಚನೆಗಳು:

೧. **ಒಂದು ಅಂಕದ ಪ್ರಶ್ನೆಗಳು :** ಉತ್ತರ ನೇರವಾಗಿದ್ದು, ಗೊಂದಲಕ್ಕೆ ಅವಕಾಶವಿರಬಾರದು. ಒಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಬೇಕಾಗಿರುವುದು ಅಪೇಕ್ಷಣೀಯ. ಅತಿ ಸಣ್ಣ ಪ್ರಶ್ನೆಗಳಿರಬೇಕು.

೨. **ಎರಡು ಅಂಕಗಳ ಪ್ರಶ್ನೆಗಳು :** ಉತ್ತರಗಳು ಎರಡು–ಮೂರು ವಾಕ್ಯಗಳಲ್ಲಿ, ಸರಳವಾಗಿ ಉತ್ತರಿಸುವಂತೆ ಇರಬೇಕು. ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ಮುಖ್ಯಾಂಶಗಳನ್ನು ಒಳಗೊಂಡಿರುವಂತೆ ಉತ್ತರಿಸಬಹುದಾದ ಪ್ರಶ್ನೆಗಳನ್ನು ನೀಡಬೇಕು. ಅತಿ ಸಣ್ಣ ಪ್ರಶ್ನೆಗಳನ್ನಾಗಲಿ, ದೀರ್ಘ ಪ್ರಶ್ನೆಗಳನ್ನಾಗಲಿ ನೀಡಬಾರದು.

೩. **ಮೂರು ಅಂಕಗಳ ಪ್ರಶ್ನೆಗಳು :** ಇವು ಸಾಂದರ್ಭಿಕ ವಿವರಣೆಯನ್ನು ಬಯಸುವ ವಾಕ್ಯಗಳಾಗಿರಬೇಕು. ಕವಿ/ಲೇಖಕರ ಹೆಸರು ಪದ್ಯ/ಗದ್ಯ/ದೀರ್ಘಗದ್ಯಗಳ ಶೀರ್ಷಿಕೆಯ ಉಲ್ಲೇಖಗಳು, ವಾಕ್ಯದ ಸಂದರ್ಭ ಸ್ವಾರಸ್ಯವನ್ನು, ಭಾವವನ್ನು ಸೂಚಿಸುವ ಉತ್ತರ ಬರೆಯುವಂತೆ ಇರಬೇಕು.

೪. **ನಾಲ್ಕು ಅಂಕಗಳ ಪ್ರಶ್ನೆಗಳು :** ಉತ್ತರಗಳು ಐದಾರು ವಾಕ್ಯಗಳಲ್ಲಿರಬೇಕು. ಉತ್ತರ ಸುಲಭವಾಗಿ, ವಿವರವಾದ ಅರ್ಥ ಗ್ರಾಹ್ಯವಾಗುವಂತಿರಬೇಕು. ವಿವರಣಾತ್ಮಕ–ವಿಶ್ಲೇಷಣಾತ್ಮಕ ಉತ್ತರಗಳಿರುವಂತೆ ಈ ಭಾಗದಲ್ಲಿ ಪ್ರಶ್ನೆಗಳಿರುವುದು ಸೂಕ್ತ. ಪಠ್ಯದ ಮುಖ್ಯಾಂಶಗಳ ಪಾಠವನ್ನು ವಿದ್ಯಾರ್ಥಿಯು ವಿವರಿಸುವಂತಹ ಪ್ರಶ್ನೆಗಳಿದ್ದಲ್ಲಿ, ಗ್ರಹಿಕೆ ಶಕ್ತಿಯ ಮೌಲ್ಯಮಾಪನಕ್ಕೆ ಅನುಕೂಲಕರ.

೫. **ಐದು ಅಂಕಗಳ ಪ್ರಶ್ನೆಗಳು :** ಇದು ಪದ್ಯದ ಭಾವಾರ್ಥವನ್ನು ವಿವರಿಸುವಂತೆ ಕೇಳಲಾದ ಪ್ರಶ್ನೆಗಳು. ಮಧ್ಯವಾರ್ಷಿಕ, ಪೂರ್ವಸಿದ್ಧತಾ ಮತ್ತು ವಾರ್ಷಿಕ ಪರೀಕ್ಷೆಗಳಲ್ಲಿ ಭಾವಾರ್ಥಕ್ಕೆ ಎರಡು ಪದ್ಯಭಾಗಗಳಲ್ಲಿ ಒಂದನ್ನು ಉತ್ತರಿಸುವಂತೆ ಕೇಳುವುದು. ಎರಡು ಪದ್ಯಗಳಲ್ಲಿ ಒಂದನ್ನು ಹಳಗನ್ನಡ/ನಡುಗನ್ನಡ ಭಾಗದಿಂದ ಆಯ್ದು, ಇನ್ನೊಂದನ್ನು ಹೊಸಗನ್ನಡ ಕವಿತೆಗಳಿಂದ ನೀಡುವುದು ಸೂಕ್ತ. ಪದ್ಯಗಳನ್ನು ಆಯುವಾಗ ವೈಶಿಷ್ಟ್ಯಪೂರ್ಣ ಭಾಗಗಳನ್ನೇ ಆಯ್ದು ನೀಡುವುದು ಅಪೇಕ್ಷಣೀಯ. ಕವಿಯ ಹೆಸರು, ಕಾವ್ಯ–ಕವಿತೆಯ ಶೀರ್ಷಿಕೆ, ಸಾರಾಂಶ ಮತ್ತು ಒಟ್ಟು ಭಾವದ ಆಶಯವನ್ನು ವಿವರಿಸುವ ಉತ್ತರಗಳಿರುವುದು ಅಗತ್ಯ. ಅಭ್ಯಾಸ ಪುಸ್ತಕದಲ್ಲಿ ಸೂಚಿಸಿರುವ ಪದ್ಯಗಳೊಂದಿಗೆ, ಇನ್ನಿತರ ಮುಖ್ಯ ಭಾಗಗಳನ್ನು ಪರಿಗಣಿಸಬಹುದು.

೬. **ಭಾಷಾಭ್ಯಾಸ :** ಎರಡು ಅಂಕದ ಆರು ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸುವುದು. ಒಟ್ಟು ಏಳು ಪ್ರಶ್ನೆಗಳನ್ನು ಕೇಳಿ, ಆರಕ್ಕೆ ಪರೀಕ್ಷಾರ್ಥಿಯು ಉತ್ತರವನ್ನು ಬರೆಯಬೇಕು. ಇವುಗಳಲ್ಲಿ ಪದಗಳಿಗೆ ಅರ್ಥ ಬರೆಯುವುದು, ಸಮಾನಾರ್ಥ ಪದಗಳನ್ನು ಬರೆಯುವುದು, ನಾನಾರ್ಥಗಳನ್ನು ಬರೆಯುವುದು, ತತ್ಸಮ–ತದ್ಭವ ಸೂಚಿಸುವುದು, ಗುಣವಾಚಕ ಗುರುತಿಸುವುದು, ವಿಭಕ್ತಿ ಪ್ರತ್ಯಯ ಸೂಚಿಸುವುದು, ಧಾತು ಗುರುತಿಸುವುದು, ಕಾಲಸೂಚಕ–ನಿಷೇಧಾರ್ಥಕಗಳನ್ನು ಬರೆಯುವುದು, ದ್ವಿರುಕ್ತಿ–ಅನುಕರಣಾವ್ಯಯ–ನುಡಿಗಟ್ಟುಗಳನ್ನು ವಾಕ್ಯಗಳಲ್ಲಿ ಅರ್ಥಪೂರ್ಣವಾಗಿ ಬಳಸುವಂತೆ ಕೇಳುವುದು ಇತ್ಯಾದಿ ವಿಭಾಗಗಳನ್ನು ಅವಲೋಕಿಸುವುದು ಅಗತ್ಯ. ಪ್ರಯೋಗ ಪುಸ್ತಕವನ್ನು ಪರಾಮರ್ಶಿಸಿ, ಪಠ್ಯದಲ್ಲಿರುವ ಪದಗಳನ್ನೇ ಪ್ರಶ್ನೆಗಳಿಗೆ ಆಯುವುದು ತೀರಾ ಅಗತ್ಯವಾಗಿರುತ್ತದೆ.

೭. **ರಚನೆ :** ಈ ವಿಭಾಗದಲ್ಲಿ ಪ್ರಬಂಧ ರಚನೆ (೫ ಅಂಕಗಳು), ಪತ್ರ ಲೇಖನ (೪ ಅಂಕಗಳು) ಮತ್ತು ಗಾದೆಮಾತಿನ ವಿಸ್ತರಣೆ (೪ ಅಂಕಗಳು) ಎಂಬ ಮೂರು ವಿಭಾಗಗಳ ಪ್ರಶ್ನೆಗಳಿರಬೇಕು.

ಅ) ಪ್ರಬಂಧವು ಪರೀಕ್ಷಾರ್ಥಿಯ ರಚನಾ ಕೌಶಲವನ್ನು ಪರೀಕ್ಷಿಸುವಂತಿರಬೇಕು. ಪ್ರಬಂಧಕ್ಕೆ ಸೂಚಿಸುವ ವಿಷಯಗಳು ವಿದ್ಯಾರ್ಥಿಗಳು ಅರ್ಥಮಾಡಿಕೊಂಡು ಸುಲಭವಾಗಿ ಚರ್ಚಿಸುವಂತಿರಬೇಕು. ಪೀಠಿಕೆ, ವಿಷಯದ ಪರ–ವಿರೋಧಗಳ ಸಮರ್ಥನೆ, ವಿಷಯ ವಿಶ್ಲೇಷಣೆ, ಮುಕ್ತಾಯ ಮುಂತಾದ ವಿಭಾಗಗಳನ್ನೊಳಗೊಂಡ ರಚನೆಯಾಗಿರಬೇಕು. ಎರಡು ವಿಷಯಗಳನ್ನು ಸೂಚಿಸಿ, ಒಂದಕ್ಕೆ ಪ್ರಬಂಧ ರಚಿಸಲು ಸೂಚಿಸಿರಬೇಕು, ಪ್ರಯೋಗ ಪುಸ್ತಕದಲ್ಲಿರುವ ಸೂಚಿಸಿರುವ ವಿಷಯಗಳನ್ನು ಪರಿಶೀಲಿಸುವುದು ಸೂಕ್ತ.

ಆ) ಪತ್ರಲೇಖನದಲ್ಲಿ ವ್ಯಾವಹಾರಿಕ ಮತ್ತು ವೈಯಕ್ತಿಕ ಪತ್ರಗಳೆರಡನ್ನೂ ಸೂಚಿಸಿ, ಒಂದನ್ನು ರಚಿಸಲು ಸೂಚಿಸಬೇಕು. ದಿನಾಂಕ, ಹೊರ–ಒಳ ವಿಳಾಸಗಳು, ಸಂಬೋಧನೆ, ಪತ್ರದ ಒಡಲು, ಮುಕ್ತಾಯ, ಸಹಿ – ಇತ್ಯಾದಿ ಭಾಗಗಳನ್ನು ಗಮನಿಸಬೇಕಾಗುವುದು.

ಇ) ಗಾದೆಗಳನ್ನು ಅರ್ಥ ವಿವರಿಸುವಂತೆ ಕೇಳುವಾಗ ಆದಷ್ಟೂ ವಿವಿಧ ಪ್ರಾಂತ್ಯಗಳಲ್ಲೂ ಬಳಕೆಯಲ್ಲಿರುವ, ನೇರವಾಗಿ ಅರ್ಥ ಗ್ರಹಿಸಬಹುದಾದ ಗಾದೆ ಮಾತುಗಳನ್ನು ನೀಡುವುದು ಸೂಕ್ತ. ಅರ್ಥಗ್ರಾಹ್ಯ ಕಷ್ಟಕರವಾದ ಗಾದೆಮಾತುಗಳನ್ನು ನೀಡುವುದು ಅನಪೇಕ್ಷಣೀಯ.

## II. ಪ್ರಶ್ನೆಪತ್ರಿಕೆ ತಯಾರಿಸುವಾಗ ಗಮನಿಸಲೇಬೇಕಾದ ಕೆಲವು ಸಂಗತಿಗಳು:

೧. ಪ್ರಶ್ನೆ ಪತ್ರಿಕೆಯು ರಚಿಸುವವರ ಅಥವಾ ಮೌಲ್ಯಮಾಪಕರ ಬೌದ್ಧಿಕತೆಯನ್ನು ಪ್ರದರ್ಶಿಸುವಂತಿರದೆ ವಿದ್ಯಾರ್ಥಿಗಳಲ್ಲಿರುವ ವ್ಯಕ್ತಿ ವಿಭಿನ್ನತೆ (Individual differences) ಗಳನ್ನು ಗಮನದಲ್ಲಿರಿಸಿಕೊಂಡು ಎಲ್ಲಾ ಮಟ್ಟದ ವಿದ್ಯಾರ್ಥಿಗಳಿಗೆ ಅಂದರೆ, ಬುದ್ಧಿವಂತ (Gifted), ಸಾಮಾನ್ಯ (Average), ಹಾಗೂ ನಿಧಾನ ಕಲಿಕೆಯ (Slow learner) ವಿದ್ಯಾರ್ಥಿಗಳೆಲ್ಲರಿಗೂ ಅನುಕೂಲಕರವಾಗಬೇಕು. ಇದಕ್ಕಾಗಿ ಪ್ರಶ್ನೆಪತ್ರಿಕೆಯು ಸುಲಭ, ಸಾಮಾನ್ಯ ಹಾಗೂ ಕಠಿಣ ಪ್ರಶ್ನೆಗಳನ್ನು ಒಳಗೊಂಡಿರುವುದು ಅಗತ್ಯ.

೨. ಪ್ರಶ್ನೆ ಪತ್ರಿಕೆಯಲ್ಲಿ ನೀಡಲಾದ ಪ್ರಶ್ನೆಗಳು ವಿದ್ಯಾರ್ಥಿಗಳ ಜ್ಞಾನ (Knowledge), ತಿಳಿವಳಿಕೆ (Understanding), ಅನ್ವಯ (Application) ಹಾಗೂ ಕೌಶಲ (Skill)ಗಳನ್ನು ಅಳೆಯುವಂತಿರಬೇಕು.

೩. 'ನೀಲ ನಕ್ಷೆ' (Blue print) ಯನ್ನು ಮೊದಲು ತಯಾರಿಸಿಕೊಂಡು, ಆ ಪ್ರಕಾರವಾಗಿ ಪ್ರಶ್ನೆಪತ್ರಿಕೆ ತಯಾರಿಸಬೇಕು. ಪಠ್ಯಪುಸ್ತಕದಲ್ಲಿ ನೀಡಿರುವ ನೀಲ ನಕಾಶೆಯು, ಮಾದರಿ ಪ್ರಶ್ನೆಪತ್ರಿಕೆಗಾಗಿ ತಯಾರಿಸಿರುವ ಒಂದು ಮಾದರಿ ಮಾತ್ರ. ವಿಷಯದ ವ್ಯಾಪ್ತಿ ಮತ್ತು ಕಠಿಣತೆಗಳನ್ನು ಗಮನದಲ್ಲಿರಿಸಿಕೊಂಡು ಪ್ರತಿಘಟಕ, ಅಧ್ಯಾಯ – ಇವುಗಳಿಗೆ ನಿಗದಿಪಡಿಸಿರುವ ಅವಧಿ, ಅದಕ್ಕೆ ತಕ್ಕಂತೆ ಎಷ್ಟು ಅಂಕಗಳಿರಬೇಕು ಎಂದು ನಿರ್ಧರಿಸಿ ನೀಲನಕ್ಷೆಯನ್ನು ಸಿದ್ಧಪಡಿಸಿ, ಪ್ರಶ್ನೆಪತ್ರಿಕೆ ತಯಾರಿಸಬೇಕು.

೪. ಪ್ರಶ್ನೆಗಳನ್ನು ರಚಿಸುವಾಗ ಆದ್ಯತೆ ಹಾಗೂ ಸಮತೋಲನ ಕಾಪಾಡಿಕೊಳ್ಳಬೇಕು. ಪ್ರಶ್ನೆಗಳು ನೇರ ಹಾಗೂ ಸ್ಪಷ್ಟವಾಗಿರಬೇಕು. ಯಾವುದೇ ಬಗೆಯ ದ್ವಂದ್ವಾರ್ಥ ಅಥವಾ ಸಂಶಯಗಳಿಗೆ ಅವಕಾಶಗಳಿರಬಾರದು. ಅಲ್ಲದೆ ಯಾವುದೇ ವ್ಯಕ್ತಿ, ಧರ್ಮ, ಜಾತಿಯ ಬಗ್ಗೆ ಪ್ರಶ್ನೆಗಳನ್ನು ಕೇಳುವಾಗ ಪ್ರಶ್ನೆಗಳ ಸೂಕ್ಷ್ಮತೆಗಳ ಕಡೆಗೆ ಗಮನದಲ್ಲಿಟ್ಟುಕೊಳ್ಳಬೇಕು.

೫. ಪ್ರಶ್ನೆಗಳು ವಿವಿಧ ಅಂಕಗಳ ಪ್ರಶ್ನೆಗಳಲ್ಲಿ ಪುನರಾವರ್ತನೆಯಾಗದಂತೆ ಎಚ್ಚರವಹಿಸಬೇಕು. ಪಠ್ಯ ವಿಷಯದ ಹೊರತಾದ ಪ್ರಶ್ನೆಗಳು ಬಂದಲ್ಲಿ, ಕೃಪಾಂಕ ನೀಡಬೇಕಾದ ಸಂದರ್ಭಗಳು ಒದಗಬಹುದು. ಇಂತಹ ಸಂದರ್ಭಗಳು ಎದುರಾಗದಂತೆ ಎಚ್ಚರವಹಿಸಬೇಕು.

೬. ಪ್ರಶ್ನೆ ಪತ್ರಿಕೆಯನ್ನು ತಯಾರಿಸುವವರು ಸೂಕ್ತವಾದ–ಸಮರ್ಪಕವಾದ ಮಾದರಿ ಉತ್ತರಗಳನ್ನು (Scheme of Valuation) ರಚಿಸಿಕೊಂಡು ಮೌಲ್ಯಾಂಕಗಳನ್ನು (Value points) ನೀಡಬೇಕು.

೭. ಪ್ರಶ್ನೆ ಪತ್ರಿಕೆಗಳಲ್ಲಿ ಮುದ್ರಣ ದೋಷಗಳಿರಬಾರದು. ನಿಗಧಿತ ಅವಧಿಯೊಳಗೆ ಪರೀಕ್ಷಾರ್ಥಿಯು ಎಲ್ಲ ಪ್ರಶ್ನೆಗಳನ್ನೂ ಉತ್ತರಿಸಲು ಅವಕಾಶವಿರುವಂತಹ ಪ್ರಶ್ನೆಪತ್ರಿಕೆ ತಯಾರಿಸಬೇಕು. ಸಮಯ ನಿರ್ವಹಣೆ (Time management) ಅತ್ಯಂತ ಮುಖ್ಯವಾದ ಅಂಶವಾಗಿರುತ್ತದೆ.

# : ಮಾದರಿ ಪ್ರಶ್ನೆಪತ್ರಿಕೆಯ ನೀಲನಕ್ಷೆ – ೧ :

| | ೧ ಅಂಕ | ೨ ಅಂಕ | ೩ ಅಂಕ | ೪ ಅಂಕ | ೫ ಅಂಕ | |
|---|---|---|---|---|---|---|
| **I. ಪದ್ಯ** | | | | | | |
| ೧. ಕದಡಿದ ಸಲಿಲಂ ತಿಳಿವಂದದೆ | ೧ | – | – | ೧ | ೧ | |
| ೨. ವಚನಗಳು | – | – | ೧ | – | – | |
| ೩. ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು | – | ೧ | ೧ | ೧ | ೧ | |
| ೪. ಪಗೆಯಂ ಬಾಲಕನೆಂಬರೇ | – | ೧ | – | – | – | |
| ೫. ಜಾಲಿಯ ಮರದಂತೆ | ೧ | – | – | – | – | |
| ೬. ಹಬ್ಬಲಿ ಅವರ ರಸಬಳ್ಳಿ | – | ೧ | – | – | – | |
| ೭. ಬೆಳಗು ಜಾವ | – | – | ೧ | ೧ | – | |
| ೮. ಮುಂಬೈ ಜಾತಕ | – | – | – | ೧ | – | |
| ೯. ಶಿಲುಬೆ ಏರಿದ್ದಾನೆ | – | ೧ | – | – | – | |
| ೧೦. ಒಂದು ಹೂ ಹೆಚ್ಚಿಗೆ ಇಡುತೀನಿ | ೧ | – | – | – | – | |
| ೧೧. ಹತ್ತಿ... ಚಿತ್ತ... ಮತ್ತು... | – | ೧ | – | – | – | |
| ೧೨. ಒಮ್ಮೆ ನಗುತ್ತೇವೆ | ೧ | – | – | – | – | |
| **II. ಗದ್ಯ** | | | | | | |
| ೧. ಮುಟ್ಟಿಸಿಕೊಂಡವನು | – | ೧ | ೧ | – | – | |
| ೨. ವಾಲ್‌ಪರೈ : ಅಭಿವೃದ್ಧಿ ತಂದ ದುರಂತ | – | ೧ | – | – | – | |
| ೩. ಆಯ್ಕೆಯಿದೆ ನಮ್ಮ ಕೈಯಲ್ಲಿ | – | ೧ | – | – | – | |
| ೪. ಕನ್ನಡವನ್ನು ಕಟ್ಟುವ ಕೆಲಸ | ೧ | – | – | ೧ | – | |
| ೫. ಧಣಿಗಳ ಬೆಳ್ಳಿಲೋಟ | ೧ | – | ೧ | – | – | |
| ೬. ಬದುಕನ್ನು ಪ್ರೀತಿಸಿದ ಸಂತ | – | ೧ | – | ೧ | – | |
| ೭. ತಿರುಳ್ಗನ್ನಡದ ಬೆಳ್ನುಡಿ | – | – | – | ೧ | – | |
| ೮. ಹಳ್ಳಿಯ ಚಹಾ ಹೋಟೇಲುಗಳು | ೧ | – | – | – | – | |
| **III. ದೀರ್ಘಗದ್ಯ** | | | | | | |
| ೧. ಕೃಷ್ಣೇಗೌಡನ ಆನೆ | ೩ | ೪ | ೨ | ೩ | – | |
| **ಒಟ್ಟು** | ೧೦ | ೧೩ | ೭ | ೧೦ | ೨ | |
| **IV. ಭಾಷಾಭ್ಯಾಸ** | – | ೭ | – | – | – | |
| **V. ಪ್ರಬಂಧ ರಚನೆ** | – | – | – | – | ೨ | |
| **VI. ಪತ್ರ ಲೇಖನ** | – | – | – | ೨ | – | |
| **VII. ಗಾದೆಮಾತು ವಿಸ್ತರಣೆ** | – | – | – | ೨ | – | |
| **ಒಟ್ಟು** | – | ೭ | – | ೪ | ೨ | |
| **ಒಟ್ಟು ಪ್ರಶ್ನೆಗಳು** | ೧೦ | ೨೦ | ೦೭ | ೧೪ | ೦೪ | ೫೫ |

# : ಮಾದರಿ ಪ್ರಶ್ನೆಪತ್ರಿಕೆಯ ನೀಲನಕ್ಷೆ – ೨ :

| | ೧ ಅಂಕ | ೨ ಅಂಕ | ೩ ಅಂಕ | ೪ ಅಂಕ | ೫ ಅಂಕ | |
|---|---|---|---|---|---|---|
| **I. ಪದ್ಯ** | | | | | | |
| ೧. ಕದಡಿದ ಸಲಿಲಂ ತಿಳಿವಂದದೆ | – | – | ೧ | – | ೧ | |
| ೨. ವಚನಗಳು | – | ೧ | – | ೧ | – | |
| ೩. ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು | – | ೧ | – | ೧ | – | |
| ೪. ಪಗೆಯಂ ಬಾಲಕನೆಂಬರೇ | ೧ | – | – | – | ೧ | |
| ೫. ಜಾಲಿಯ ಮರದಂತೆ | – | – | ೧ | – | – | |
| ೬. ಹಬ್ಬಲಿ ಅವರ ರಸಬಳ್ಳಿ | ೧ | – | – | ೧ | – | |
| ೭. ಬೆಳಗು ಜಾವ | – | – | ೧ | – | – | |
| ೮. ಮುಂಬೈ ಜಾತಕ | ೧ | ೧ | – | – | – | |
| ೯. ಶಿಲುಬೆ ಏರಿದ್ದಾನೆ | – | – | – | ೧ | – | |
| ೧೦. ಒಂದು ಹೂ ಹೆಚ್ಚಿಗೆ ಇಡುತೀನಿ | – | ೧ | – | – | – | |
| ೧೧. ಹತ್ತಿ... ಚಿತ್ತ... ಮತ್ತು... | ೧ | – | – | – | – | |
| ೧೨. ಒಮ್ಮೆ ನಗುತ್ತೇವೆ | – | ೧ | – | – | – | |
| **II. ಗದ್ಯ** | | | | | | |
| ೧. ಮುಟ್ಟಿಸಿಕೊಂಡವನು | – | – | ೧ | – | – | |
| ೨. ವಾಲ್‌ಪರೈ : ಅಭಿವೃದ್ಧಿ ತಂದ ದುರಂತ | – | – | – | ೧ | – | |
| ೩. ಆಯ್ಕೆಯಿದೆ ನಮ್ಮ ಕೈಯಲ್ಲಿ | ೧ | ೧ | – | – | – | |
| ೪. ಕನ್ನಡವನ್ನು ಕಟ್ಟುವ ಕೆಲಸ | ೧ | ೧ | – | – | – | |
| ೫. ಧಣಿಗಳ ಬೆಳ್ಳಿಲೋಟ | – | – | ೧ | ೧ | – | |
| ೬. ಬದುಕನ್ನು ಪ್ರೀತಿಸಿದ ಸಂತ | ೧ | ೧ | – | – | – | |
| ೭. ತಿರುಳ್ಗನ್ನಡದ ಬೆಳ್ನುಡಿ | – | ೧ | – | – | – | |
| ೮. ಹಳ್ಳಿಯ ಚಹಾ ಹೋಟೇಲುಗಳು | – | – | – | ೧ | – | |
| **III. ದೀರ್ಘಗದ್ಯ** | | | | | | |
| ೧. ಕೃಷ್ಣೇಗೌಡನ ಆನೆ | ೩ | ೪ | ೨ | ೩ | – | |
| **ಒಟ್ಟು** | ೧೦ | ೧೩ | ೭ | ೧೦ | ೨ | |
| **IV.** ಭಾಷಾಭ್ಯಾಸ | – | ೭ | – | – | – | |
| **V.** ಪ್ರಬಂಧ ರಚನೆ | – | – | – | – | ೨ | |
| **VI.** ಪತ್ರ ಲೇಖನ | – | – | – | ೨ | – | |
| **VII.** ಗಾದೆಮಾತು ವಿಸ್ತರಣೆ | – | – | – | ೨ | – | |
| **ಒಟ್ಟು** | – | ೭ | – | ೪ | ೨ | |
| **ಒಟ್ಟು ಪ್ರಶ್ನೆಗಳು** | ೧೦ | ೨೦ | ೦೭ | ೧೪ | ೦೪ | ೫೫ |

# ದ್ವಿತೀಯ ಪಿ.ಯು.ಸಿ. ಕನ್ನಡ ಭಾಷೆ

## ಮಾದರಿ ಪ್ರಶ್ನೆ ಪತ್ರಿಕೆ – ೧

*ಅವಧಿ : ೩–೧೫ ಗಂಟೆ}* *{ಗರಿಷ್ಠ ಅಂಕಗಳು : ೧೦೦*

### ಅ – ವಿಭಾಗ

**I ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣವಾಕ್ಯದಲ್ಲಿ ಉತ್ತರಿಸಿ:** ೧ × ೧೦ = ೧೦

೧. ರಾವಣನ ಎದುರು ಪ್ರತ್ಯಕ್ಷವಾದ ವಿದ್ಯಾದೇವತೆ ಯಾರು?
೨. ಜಾಲಿಯ ಮುಳ್ಳು ಹೇಗೆ ಆವರಿಸಿರುತ್ತದೆ?
೩. ಮುದುಕಿಯು ಏನೆಂದು ಹರಕೆ ಹೊತ್ತಳು?
೪. ಜನರಿಗೆ ಯಾವುದಕ್ಕೆ ಗತಿಯಿಲ್ಲ?
೫. ಸ್ಥಳೀಯ ಭಾಷೆ ಕಲಿಯದ ಅನ್ಯಭಾಷಿಕರು ಏನಾಗುತ್ತಾರೆ?
೬. ಧಣಿಗಳ ಮನೆಯ ಪಕ್ಕದಲ್ಲಿ ಯಾವ ಹೊಳೆ ಹರಿಯುತ್ತಿತ್ತು?
೭. ಕಲಿಯುಗದ ಅಮೃತ ಯಾವುದು?
೮. ಕೃಷ್ಣೇಗೌಡರ ಆನೆ ಮೊದಲು ಯಾವ ಮಠದಲ್ಲಿತ್ತು?
೯. ಪೋಸ್ಟ್‌ಮನ್ ಜಬ್ಬಾರನಿಗೆ ಒದಗಿದ ತೊಂದರೆ ಏನು?
೧೦. ಕೃಷ್ಣೇಗೌಡರ ಆನೆಯ ಹೆಸರೇನು?

### ಆ – ವಿಭಾಗ

**II ಅ) ಯಾವುದಾದರೂ *ನಾಲ್ಕು* ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ:** ೨ × ೪ = ೮

೧೧. ತಾನು ಘೋರತರ ವಿಷ ಕುಡಿಯುವುದಾಗಿ ದ್ರೌಪದಿ ಏಕೆ ಹೇಳುತ್ತಾಳೆ?
೧೨. ಧನ ಮತ್ತು ಸುತನ ವಿಷಯದಲ್ಲಿ ಸೋಮನಾಥನ ಅಭಿಪ್ರಾಯವೇನು?
೧೩. ಹಿತ್ತಾಳೆಗಿಂತ ಬಲುಹೀನ ಯಾವುದು?
೧೪. ಶಿಲುಬೆಗೇರಿಸಿದವರ ಗುಣಗಳು ಇಂದು ಯಾವ ವೇಷ ತಾಳಿವೆ?
೧೫. ಆತ್ಮಕ್ಕೆ ಕಮಟು ಹತ್ತುವುದು ಎಂದರೇನು?

**ಆ) ಯಾವುದಾದರೂ *ಮೂರು* ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ:** ೨ × ೩ = ೬

೧೬. ಕೊನೆಯಲ್ಲಿ ಬಸಲಿಂಗನಿಗೆ ಏನೆಂದು ನಿಶ್ಚಿತವಾಗತೊಡಗಿತ್ತು?
೧೭. ಮಾರ್ಷ್‌ನನ್ನು ಕಂಡು ಆದಿವಾಸಿಗಳು ಹೇಗೆ ಪ್ರತಿಕ್ರಿಯಿಸಿದರು?

೧೮. ಸೀತಾಳ ಬಯಕೆ, ನಂಬಿಕೆಗಳು ಹೇಗಿದ್ದವು?

೧೯. ಕಲಾಂ ಅವರ ಬದುಕಿನ ಮಂತ್ರ ಯಾವುದು?

**ಇ) ಯಾವುದಾದರೂ *ಮೂರು* ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: ೨ × ೩ = ೬**

೨೦. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆ ಹೇಗೆ?

೨೧. ಸೊರಗಿದ್ದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ?

೨೨. ನಾಗರಾಜ ದುರ್ಗಪ್ಪನ ಮೇಲೆ ಏನೆಂದು ರೇಗಿದನು?

೨೩. ಡ್ರೈವರ್ ಅಬ್ಬಾಸ್, ಕ್ಲೀನರ್ ಕೃಷ್ಣರ ಸಾವಿಗೆ ಕಾರಣವೇನು?

## ಇ – ವಿಭಾಗ

**III ಅ) ಯಾವುದಾದರೂ *ಎರಡು* ವಾಕ್ಯಗಳ ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ: ೩ × ೨ = ೬**

೨೪. ಪುಷ್ಪವಿಲ್ಲದೆ ಪರಿಮಳವನರಿಯಬಹುದೆ.

೨೫. ಕೂಳುಗೇಡಿಂಗೊಡಲ ಹೊರುವಿರಿ.

೨೬. ತುಂಬಿರುವ ತನಕ ತುಂತುಂಬಿ ಕುಡಿಯಬೇಕು.

**ಆ) ಯಾವುದಾದರೂ *ಒಂದು* ವಾಕ್ಯ ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ: ೩ × ೧ = ೩**

೨೭. ಅವನು ನನ್ನಷ್ಟೇ ಒಳ್ಳೆಯ ಡಾಕ್ಟರು, ಏನೂ ತಪ್ಪು ತಿಳಿಯಬೇಡ.

೨೮. ಪಾವಕ್ಕಿ ಕಮ್ಮಿ ಮಾಡಿದರೆ ಸುಮ್ಮನೆ ಇರ್ತಿಯೇನೋ ನೀನು?

**ಇ) ಯಾವುದಾದರೂ *ಒಂದು* ವಾಕ್ಯ ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ: ೩ × ೧ = ೩**

೨೯. ನಮ್ಮ ಕಡೆ ಕೆಮ್ಮು ಕಾಲಿಂಗ್ ಬೆಲ್ ಇದ್ದ ಹಾಗೆ.

೩೦. ನಂಗೇನು ಈ ನಾಯಿಗಳನ್ನ ಕಂಡರೆ ಪ್ರೀತಿನಾ ಸ್ವಾಮಿ!

## ಈ – ವಿಭಾಗ

**IV ಅ) ಯಾವುದಾದರೂ *ಮೂರು* ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ: ೪ × ೩ = ೧೨**

೩೧. ರಾವಣನಲ್ಲಿ ಕಂಡುಬರುವ ಪಶ್ಚಾತ್ತಾಪವನ್ನು ಕವಿ ಹೇಗೆ ನಿರೂಪಿಸಿದ್ದಾನೆ?

೩೨. ತನಗೊದಗಿದ ಸಂಕಟವನ್ನು ಹೇಳಿಕೊಳ್ಳುವ ದ್ರೌಪದಿಯ ಸ್ವಗತದ ನುಡಿಗಳಾವುವು?

೩೩. 'ಬೆಳಗು ಜಾವ' ಕವನದ ಮೂಲಕ ಕವಿ ಬೇಂದ್ರೆ ಹೇಳಿರುವ ವಿಚಾರಗಳಾವುವು?

೩೪. 'ಮುಂಬೈ ಜಾತಕ'ದಲ್ಲಿ ಮಕ್ಕಳ ಬಾಲ್ಯದ ಚಿತ್ರಣ ಹೇಗೆ ನಿರೂಪಿತವಾಗಿದೆ?

**ಆ) ಯಾವುದಾದರೂ *ಎರಡು* ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ: ೪ × ೨ = ೮**

೩೫. ಕನ್ನಡಿಗರೆನ್ನಿಸಿಕೊಳ್ಳಲು ಯಾವ ಯೋಗ್ಯತೆಯ ಪ್ರಶ್ನೆಗಳು ನಮ್ಮನ್ನು ಚುಚ್ಚಬೇಕು? ವಿವರಿಸಿ.

೩೬. ಕಲಾಂ ಅವರು ಯಾವಾಗಲೂ ಸಾಧ್ಯತೆಗಳನ್ನು ಅರಸುವ ಆಶಾಜೀವಿ ಹೇಗೆ? ವಿವರಿಸಿರಿ.

೩೭. ಎಂತಹ ತಿರುಳು ಕನ್ನಡದಲ್ಲಿ ಕತೆಯನ್ನು ಹೇಳುವುದಾಗಿ ಮುದ್ದಣ ಹೇಳುವನು?

**ಇ) ಯಾವುದಾದರೂ *ಎರಡು* ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ: ೪ × ೨ = ೮**

೩೮. ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲವೇಕೆ? ವಿವರಿಸಿ.

೩೯. ಎಲ್ಲರ ನಿರೀಕ್ಷೆ ಸುಳ್ಳಾಗುವಂತೆ ಕೃಷ್ಣೇಗೌಡ ಆನೆಯನ್ನು ಹೇಗೆ ಸಾಕಿದನು?

೪೦. ಆನೆಯು ಇಲ್ಲಿ ಬಾಯಿಲ್ಲದ ಜನರ ಸಂಕೇತವಾಗಿರುವುದನ್ನು ವಿಶ್ಲೇಷಿಸಿ.

## ಉ – ವಿಭಾಗ

**V ಅ) ಯಾವುದಾದರೂ *ಒಂದು* ಪದ್ಯದ ಭಾವಾರ್ಥವನ್ನು ಬರೆಯಿರಿ: ೫ × ೧ = ೫**

೪೧. ಕದಡಿದ ಸಲಿಲಂ ತಿಳಿವಂ
ದದೆ ತನ್ನಿಂ ತಾನೆ ತಿಳಿದ ದಶವದನಂಗಾ
ದುದು ವೈರಾಗ್ಯಂ ಸೀತೆಯೊ
ಳುದಾತ್ತನೊಳ್ ಪುಟ್ಟದಲ್ತೆ ನೀಲೀರಾಗಂ

೪೨. ಎಲ್ಲರೊಳು ಕಲಿಭೀಮನೇ ಮಿಡು
ಕುಳ್ಳ ಗಂಡನು ಹಾನಿ ಹರಿಬಕೆ
ನಿಲ್ಲದಂಗೈಸುವನು ಕಡು ಹೀಹಾಳಿಯುಳ್ಳವನು
ಖುಲ್ಲನಿವನುಪಟಳವನಾತಂ
ಗೆಲ್ಲವನು ಹೇಳುವೆನು ಬಳಿಕವ
ನಲ್ಲಿ ಹುರುಳಿಲ್ಲದೊಡೆ ಕುಡಿವೆನು ಘೋರತರ ವಿಷವ

## ಭಾಷಾಭ್ಯಾಸ

**VI ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿರಿ: ೨ × ೬ = ೧೨**

೪೩. *ಈ ಪದಗಳಿಗೆ ಅರ್ಥ ಬರೆಯಿರಿ:*
ಕೃತಾಂತಜಿಹ್ವೆ , ಎಚ್ಚಾಳುತನ.

೪೪. *ಈ ಪದಗಳಿಗೆ ನಾನಾರ್ಥ ಬರೆಯಿರಿ:*
ಬಗೆ, ರಾಗ.

೪೫. *ಈ ಕೆಳಗಿನ ಕ್ರಿಯಾಪದಗಳಲ್ಲಿ 'ಧಾತು' ಗುರುತಿಸಿರಿ:*
ತಿಕ್ಕುವೆನು, ಬಂದಳು.

೪೬. *ಈ ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ:*
ತಲೆಬಾಗು, ಕಣ್ಣುಕೆಂಪಗಾಗು.

೪೭. *ಈ ಪದಗಳಿಗೆ ತದ್ಭವ ರೂಪವನ್ನು ಬರೆಯಿರಿ:*
ಘೂಕ, ಧರಾ.

೪೮. *ಈ ಕೆಳಗಿನ ಪದಗಳಲ್ಲಿನ ಗುಣವಾಚಕಗಳನ್ನು ಗುರುತಿಸಿರಿ:*
ನಳಿನಾನನೆ, ದೊಡ್ಡಮರ.

೪೯. *ಇವುಗಳ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ, ಹೆಸರಿಸಿರಿ:*
ಮನೆಯಿಂದ, ಆಸ್ಪತ್ರೆಗೆ.

**ಆ) ಯಾವುದಾದರೂ ಒಂದನ್ನು ಕುರಿತು ಪ್ರಬಂಧವನ್ನು ಬರೆಯಿರಿ.** **೫ × ೧ = ೫**

೫೦. ತ್ಯಾಜ್ಯ ವಸ್ತುಗಳ ಪುನರ್ಬಳಕೆ.

೫೧. ಮಾತೃಭಾಷೆಯಲ್ಲಿ ಶಿಕ್ಷಣ.

**ಇ) ಪತ್ರಲೇಖನ: ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ:** **೪ × ೧ = ೪**

೫೨. ಕನ್ನಡ ನಾಡುನುಡಿಯ ಅಭಿಮಾನವನ್ನು ಕುರಿತು ನಿಮ್ಮ ಗೆಳೆಯರಿಗೊಂದು ಪತ್ರ ಬರೆಯಿರಿ.

೫೩. ಸಮರ್ಪಕ ವಿದ್ಯುತ್ ಪೂರೈಕೆಗಾಗಿ ಸಂಬಂಧಿಸಿದ ಇಲಾಖಾ ಮುಖ್ಯಸ್ಥರಿಗೆ ಪತ್ರವೊಂದನ್ನು ಬರೆಯಿರಿ.

**ಈ) ಈ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ:** **೪ × ೧ = ೪**

೫೪. ಸಂತೆಯ ಹೊತ್ತಿಗೆ ಮೂರು ಮೊಳ ನೇಯ್ದಂತೆ.

೫೫. ತುಂಬಿದ ಕೊಡ ತುಳುಕುವುದಿಲ್ಲ.

# ಮಾದರಿ ಪ್ರಶ್ನೆ ಪತ್ರಿಕೆ – ೨

*ಅವಧಿ : ೩ ಗಂಟೆ}* *{ಗರಿಷ್ಠ ಅಂಕಗಳು : ೧೦೦*

## ಅ – ವಿಭಾಗ

**I ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣವಾಕ್ಯದಲ್ಲಿ ಉತ್ತರಿಸಿ: ೧ × ೧೦ = ೧೦**

೧. ನಿಷ್ಪ್ರಯೋಜಕನಾದ ಮಗ ಯಾರೆಂದು ಸೋಮನಾಥ ಹೇಳಿದ್ದಾನೆ?
೨. ಬ್ಯಾಸಗಿ ದಿವಸಕ್ಕೆ ಯಾವ ಮರ ತಂಪು?
೩. ಕುಳಿತು ಕೆಮ್ಮುವ ಪ್ರಾಣಿ ಯಾರು?
೪. ಹತ್ತಿಯ ಬೀಜಕ್ಕೆ ಯಾವುದು ತಪ್ಪದ ಕರ್ಮ?
೫. ಭೂಮಿಯ ಮೇಲಿನ ಮೊದಲ ವಿಜ್ಞಾನಿ ಯಾರು?
೬. ಕನ್ನಡದ ಮೂಲಕ ಕಲಿತು ಶ್ರೇಷ್ಠ ವಿಜ್ಞಾನಿಯಾದವರು ಯಾರು?
೭. ಲೇಖಕಿಯ ಪತಿ ಯಾವ ತೊಂದರೆಯಿಂದ ಬಳಲಿದರು?
೮. ನಿರೂಪಕರ ಕೊಡಲಿಯ ಆಕಾರ ಹೇಗಿತ್ತು?
೯. ಆನೆ ಯಾರ ಅಂಗಡಿಯನ್ನು ದೂಡಿ ಬೀಳಿಸಿತು?
೧೦. ಆನೆಶಾಸ್ತ್ರದವನು ಏನೆಂದು ಭವಿಷ್ಯ ನುಡಿದಿದ್ದನು?

## ಆ – ವಿಭಾಗ

**II ಅ) ಯಾವುದಾದರೂ *ನಾಲ್ಕು* ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: ೨ × ೪ = ೮**

೧೧. ಯಾವ ಗುಣಗಳಿಲ್ಲದವನು ಡಾಂಭಿಕನೆನಿಸುತ್ತಾನೆ?
೧೨. ಮಲಗಿರುವ ಭೀಮನನ್ನು ದ್ರೌಪದಿ ಹೇಗೆ ಎಬ್ಬಿಸಿದಳು?
೧೩. ಮೊಮ್ಮಗಳ ಆತುರಕ್ಕೆ ಮುದುಕಿ ಏನೆಂದುಕೊಂಡಳು?
೧೪. ತಂದೆ ಮಗುವಿಗೆ ಕಾಣಿಸಿಕೊಳ್ಳುವ ಬಗೆ ಹೇಗೆ?
೧೫. ಕವಯಿತ್ರಿ ನಗುವ ನಗು ಎಂತಹುದು?

**ಆ) ಯಾವುದಾದರೂ *ಮೂರು* ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: ೨ × ೩ = ೬**

೧೬. ಲೇಖಕರಲ್ಲಿ ಕನ್ನಡ ಪ್ರೀತಿ ಸ್ಫುರಿಸಿದ್ದು ಹೇಗೆ?
೧೭. ಮಾದೇಗೌಡರು ಪಥ್ಯದ ವಿಚಾರವಾಗಿ ಹೊಂದಿದ್ದ ನಿಲುವು ಯಾವುದು?

೧೮. ಕಲಾಂ ಅವರು ಬಂಡೆಗಳ ಬಸಿರಲ್ಲಿ ಕಂಡದ್ದೇನು?

೧೯. ಸಂಸ್ಕೃತ ಕನ್ನಡಗಳು ಸೇರಿದರೆ ಹೇಗೆ ಸೊಗಯಿಸುತ್ತದೆ?

**ಇ) ಯಾವುದಾದರೂ *ಮೂರು* ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: ೨ × ೩ = ೬**

೨೦. ಆನೆ ಸಾಕುವುದರ ಬಗ್ಗೆ ಜನರ ನಂಬಿಕೆ ಏನಾಗಿತ್ತು?

೨೧. ಆನೆ ಮರ ತಳ್ಳುವ ಬಗೆಯನ್ನು ಲೇಖಕರು ಹೇಗೆ ನಿರೂಪಿಸಿದ್ದಾರೆ?

೨೨. ಲೇಖಕರು ಕ್ಯಾಲಿಕ್ಯುಲೇಟರ್‌ನಲ್ಲಿ ಲೆಕ್ಕಹಾಕಿ ಜಬ್ಬಾರ್‌ಗೆ ಏನೆಂದು ಹೇಳಿದರು?

೨೩. ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹಿರಾತು ನೀಡಿದರು?

## ಇ – ವಿಭಾಗ

**III ಅ) ಯಾವುದಾದರೂ *ಎರಡು* ವಾಕ್ಯಗಳ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ: ೨ × ೩ = ೬**

೨೪. ಉದಾತ್ತನೊಳ್ ಪುಟ್ಟದಲ್ತೆ ನೀಲೀರಾಗಂ.

೨೫. ಹಾನಿ ಹರಿಬಕೆ ನಿಲ್ಲದಂಗೈಸುವನು.

೨೬. ಬಿನ್ನಾಣದ ಮಾತಿಗೆ ಕೊನೆಯಿಲ್ಲ.

**ಆ) ಯಾವುದಾದರೂ *ಒಂದು* ವಾಕ್ಯ ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ: ೩ × ೧ = ೩**

೨೭. ಬಸಲಿಂಗಪ್ಪ, ನೀನು ತುಂಬಾ ಒಳ್ಳೆಯವನು.

೨೮. ಬೆಳ್ಳಿಲೋಟಕ್ಕೆ ಇದೀಗ ಕುದುಪನಿಂದಾಗಿ ಜೀವ ಬಂದಂತಾಯ್ತು.

**ಇ) ಯಾವುದಾದರೂ *ಒಂದು* ವಾಕ್ಯ ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ: ೩ × ೧ = ೩**

೨೯. ಆನೆಗೂ ಮಾನ ಮರ್ಯಾದೆ ಇರುತ್ತೆ ತಿಳಕೊ.

೩೦. ಕೃಷ್ಣೇಗೌಡರ ಆನೆಗೂ ನಾಯಿ ಕಚ್ಚಿದೆ ಅಂತ ವರ್ತಮಾನ ಉಂಟಪ್ಪ.

## ಈ – ವಿಭಾಗ

**IV ಅ) ಯಾವುದಾದರೂ *ಮೂರು* ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ: ೪ × ೩ = ೧೨**

೩೧. ರಕ್ಷಿಸಬೇಕಾದವರೆ ಭಕ್ಷಕರಾದರೆ ಒದಗುವ ವಿಘಟನೆಯನ್ನು ಬಸವಣ್ಣನವರು ಹೇಗೆ ಚಿತ್ರಿಸಿದ್ದಾರೆ?

೩೨. ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿರಿ.

೩೩. ಜನಪದರು ಹೇಳುವಂತೆ ನಮ್ಮ ನೆರೆಹೊರೆ ಹೇಗಿರಬೇಕು? ವಿವರಿಸಿರಿ.

೩೪. ಶಿಲುಬೆಗೇರಿದ ಜಿಸಸ್‌ನ ದೇಹ ಏನನ್ನು ಹೇಳುವಂತಿದೆ? ವಿವರಿಸಿ.

**ಆ) ಯಾವುದಾದರೂ *ಎರಡು* ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ:** ೪ × ೨ = ೮

೩೫. ಅಂತರಾಷ್ಟ್ರೀಯ ವಿದ್ಯಮಾನಗಳಿಂದಾಗಿ ವಾಲ್‌ಪರೈಗೆ ಒದಗಿದ ಸಮಸ್ಯೆಗಳೇನು?

೩೬. ಧಣಿ ಹಾಗೂ ಹೊಳೆಯ ನಡುವಿನ ಸಮರವನ್ನು ಚಿತ್ರಿಸಿ.

೩೭. 'ಹಳ್ಳಿಯ ಚಹಾ–ಫಳಾರದ ಅಂಗಡಿ ವಾರ್ತಾ ಇಲಾಖೆ ಇದ್ದಂತೆ' – ಹೇಗೆ? ವಿವರಿಸಿ.

**ಇ) ಯಾವುದಾದರೂ *ಎರಡು* ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ:** ೪ × ೨ = ೮

೩೮. ದುರ್ಗಪ್ಪ ನಿರೂಪಕರ ಬಳಿಗೆ ಬಂದ ಸಂದರ್ಭವನ್ನು ವಿವರಿಸಿ.

೩೯. ಡ್ರೈವರನ ಸಾವಿನ ಸುದ್ದಿಯನ್ನು ಶಿವೇಗೌಡ ಮತ್ತಿತರರು ಹೇಗೆ ಮುಚ್ಚಿಹಾಕಿದರು?

೪೦. ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಸವತಿ ಮಾತ್ಸರ್ಯ ಮೂಡಲು ಕಾರಣಗಳೇನು?

## ಉ – ವಿಭಾಗ

**V ಅ) ಯಾವುದಾದರೂ *ಒಂದು* ಪದ್ಯದ ಭಾವಾರ್ಥವನ್ನು ಬರೆಯಿರಿ:** ೧ × ೫ = ೫

೪೧. ಇವರಂ ಪ್ರಾಣಪ್ರಿಯರಂ
ನೆವಮಿಲ್ಲದೆ ಕರ್ಮವಶಮೆ ನೆವಮೆನೆ ಕಂದ
ರ್ಪವಿಮೋಹದಿಂದಗಲ್ಚಿದೆ
ನವಿವೇಕಿಯೆನೆನ್ನ ಕುಲದ ಪೆಂಪಟಿವಿನೆಗಂ

೪೨. ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ।
ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂ ನೋಡುತಂ॥
ಕೆಲವಂ ಸಜ್ಜನ ಸಂಘದಿಂದಲರಿಯಲ್ ಸರ್ವಜ್ಞನಪ್ಪಂ ನರಂ।
ಪಲವುಂ ಪಳ್ಳ ಸಮುದ್ರವೈ ಹರಹರಾ ಶ್ರೀಚೆನ್ನಸೋಮೇಶ್ವರಾ॥

## ಭಾಷಾಭ್ಯಾಸ

**VI ಅ) ಪ್ರಶ್ನೆಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿರಿ:** ೨ × ೬ = ೧೨

೪೩. *ಈ ಪದಗಳಿಗೆ ಅರ್ಥ ಬರೆಯಿರಿ:*
ಸ್ವಾದ, ಪಂಕ.

೪೪. *ಈ ಪದಗಳಿಗೆ ಸಮಾನಾರ್ಥಗಳನ್ನು ಬರೆಯಿರಿ:*
ತಮ, ಮಾಹೆ.

೪೫. *ಈ ನುಡಿಗಟ್ಟುಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿರಿ:*
ಮೊರೆಯಿಡು, ತಲೆಕೊಡವು.

೪೬. *ಇವುಗಳ ಕಾಲಸೂಚಕಗಳನ್ನು ಬರೆಯಿರಿ:*
ಬಂದರು, ಹೋಗುವಳು.

೪೭. *ಇವುಗಳ ಗುಣವಾಚಕಗಳನ್ನು ಗುರುತಿಸಿ:*
ಮರಿಮೀನು, ಉಗ್ರಕೋಪ.

೪೮. *ಇವುಗಳ ತದ್ಭವ ರೂಪ ತಿಳಿಸಿ:*
ಶ್ರೀ, ಆಯುಷ್ಯ.

೪೯. *ಈ ದ್ವಿರುಕ್ತಿಗಳನ್ನು ವಾಕ್ಯಗಳಲ್ಲಿ ಉಪಯೋಗಿಸಿರಿ:*
ಬೇಗಬೇಗ, ಕುಣಿಕುಣಿದು.

**ಆ) ಯಾವುದಾದರೂ ಒಂದನ್ನು ಕುರಿತು ಪ್ರಬಂಧವನ್ನು ಬರೆಯಿರಿ: ೫ × ೧ = ೫**

೫೦. ತಂತ್ರಜ್ಞಾನದಲ್ಲಿ ಕನ್ನಡ ಭಾಷೆಯ ಬಳಕೆ.

೫೧. ತ್ಯಾಜ್ಯ ವಸ್ತುಗಳ ಮರುಬಳಕೆಯ ಅಗತ್ಯ.

**ಇ) ಪತ್ರಲೇಖನ: ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ: ೪ × ೧ = ೪**

೫೨. ಬ್ಯಾಂಕಿನಲ್ಲಿ ನಿಮ್ಮ ಉಳಿತಾಯ ಖಾತೆಯ ಅಕೌಂಟ್ ತೆರೆಯಲು ವ್ಯವಸ್ಥಾಪಕರಿಗೊಂದು ಪತ್ರ ರಚಿಸಿ.

೫೩. ನಿಮ್ಮ ಭವಿಷ್ಯದ ಬಗೆಗಿನ ಕನಸನ್ನು ಸ್ನೇಹಿತರೊಂದಿಗೆ ಹಂಚಿಕೊಳ್ಳುವ ಬಗೆಗೆ ಒಂದು ಪತ್ರ ಬರೆಯಿರಿ.

**ಈ) ಈ ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ: ೪ × ೧ = ೪**

೫೪. ಕುಳಿತು ತಿನ್ನುವವರಿಗೆ ಕುಡಿಕೆ ಹೊನ್ನು ಸಾಲದು.

೫೫. ಹಣಕ್ಕಿಂತ ಗುಣ ಮುಖ್ಯ.

❄ ❄

# : ಅನುಬಂಧ – ೩ :

## ಜ್ಞಾನಪೀಠ ಪ್ರಶಸ್ತಿ ಪಡೆದ ಕನ್ನಡ ಸಾಹಿತಿಗಳು

| | | |
|---|---|---|
| ೧) ಶ್ರೀ ಕುವೆಂಪು | ಶ್ರೀರಾಮಾಯಣ ದರ್ಶನಂ | ೧೯೬೮ |
| ೨) ಶ್ರೀ ದ.ರಾ. ಬೇಂದ್ರೆ | ನಾಕುತಂತಿ | ೧೯೭೩ |
| ೩) ಶ್ರೀ ಕೆ. ಶಿವರಾಮ ಕಾರಂತ | ಮೂಕಜ್ಜಿಯ ಕನಸುಗಳು | ೧೯೭೭ |
| ೪) ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ | ಚಿಕವೀರ ರಾಜೇಂದ್ರ | ೧೯೮೩ |
| ೫) ಶ್ರೀ ವಿ.ಕೃ. ಗೋಕಾಕ್ | ಭಾರತ ಸಿಂಧೂರಶ್ಮಿ | ೧೯೯೦ |
| ೬) ಶ್ರೀ ಯು.ಆರ್. ಅನಂತಮೂರ್ತಿ | ಸಮಗ್ರ ಸಾಹಿತ್ಯ | ೧೯೯೪ |
| ೭) ಶ್ರೀ ಗಿರೀಶ ಕಾರ್ನಾಡ್ | ಸಮಗ್ರ ಸಾಹಿತ್ಯ | ೧೯೯೭ |
| ೮) ಶ್ರೀ ಚಂದ್ರಶೇಖರ ಕಂಬಾರ | ಸಮಗ್ರ ಸಾಹಿತ್ಯ | ೨೦೧೨ |

## ನಮ್ಮ ರಾಷ್ಟ್ರಕವಿಗಳು

೧) ಶ್ರೀ ಎಂ. ಗೋವಿಂದ ಪೈ
೨) ಶ್ರೀ ಕೆ.ವಿ. ಪುಟ್ಟಪ್ಪ
೩) ಶ್ರೀ ಜಿ.ಎಸ್. ಶಿವರುದ್ರಪ್ಪ

## ಕರ್ನಾಟಕರತ್ನ ಪ್ರಶಸ್ತಿ ಪುರಸ್ಕೃತರು

| | |
|---|---|
| ೧) ಶ್ರೀ ಕುವೆಂಪು | ೧೯೯೨ |
| ೨) ಶ್ರೀ ರಾಜಕುಮಾರ್ | ೧೯೯೩ |
| ೩) ಶ್ರೀ ಎಸ್. ನಿಜಲಿಂಗಪ್ಪ | ೧೯೯೯ |
| ೪) ಶ್ರೀ ಸಿ.ಎನ್.ಆರ್. ರಾವ್ | ೧೯೯೯ |
| ೫) ಶ್ರೀ ಪಂಡಿತ ಭೀಮಸೇನ ಜೋಷಿ | ೨೦೦೫ |
| ೬) ಶ್ರೀ ಶ್ರೀ ಶ್ರೀ ಶಿವಕುಮಾರಸ್ವಾಮಿಗಳು | ೨೦೦೭ |
| ೭) ಶ್ರೀ ದೇ. ಜವರೇಗೌಡ | ೨೦೦೮ |
| ೮) ಶ್ರೀ ವೀರೇಂದ್ರ ಹೆಗ್ಗಡೆ | ೨೦೦೯ |

# ಪಂಪ ಪ್ರಶಸ್ತಿ ಪುರಸ್ಕೃತರು

| | | |
|---|---|---|
| ೧) ಶ್ರೀ ಕೆ.ವಿ. ಪುಟ್ಟಪ್ಪ | ಶ್ರೀರಾಮಾಯಣ ದರ್ಶನಂ | ೧೯೮೭ |
| ೨) ಶ್ರೀ ತೀ.ನಂ. ಶ್ರೀಕಂಠಯ್ಯ | ಭಾರತೀಯ ಕಾವ್ಯ ಮೀಮಾಂಸೆ *(ಮರಣೋತ್ತರ)* | ೧೯೮೮ |
| ೩) ಶ್ರೀ ಕೆ. ಶಿವರಾಮ ಕಾರಂತ | ಮೈಮನಗಳ ಸುಳಿಯಲ್ಲಿ | ೧೯೮೯ |
| ೪) ಶ್ರೀ ಎಸ್.ಎಸ್. ಭೂಸನೂರಮಠ | ಶೂನ್ಯ ಸಂಪಾದನೆಯ ಪರಾಮರ್ಶೆ | ೧೯೯೦ |
| ೫) ಶ್ರೀ ಪು.ತಿ. ನರಸಿಂಹಾಚಾರ್ | ಶ್ರೀ ಹರಿಚರಿತ | ೧೯೯೧ |
| ೬) ಶ್ರೀ ಎ.ಎನ್. ಮೂರ್ತಿರಾವ್ | ದೇವರು | ೧೯೯೨ |
| ೭) ಶ್ರೀ ಎಂ. ಗೋಪಾಲಕೃಷ್ಣ ಅಡಿಗ | ಸುವರ್ಣ ಪುತ್ಥಳಿ | ೧೯೯೩ |
| ೮) ಶ್ರೀ ಸೇಡಿಯಾಪು ಕೃಷ್ಣಭಟ್ | ವಿಚಾರ ಪ್ರಪಂಚ | ೧೯೯೪ |
| ೯) ಶ್ರೀ ಕೆ.ಎಸ್. ನರಸಿಂಹಸ್ವಾಮಿ | ದುಂಡುಮಲ್ಲಿಗೆ | ೧೯೯೫ |
| ೧೦) ಶ್ರೀ ಎಂ.ಎಂ. ಕಲಬುರ್ಗಿ | ಸಂಶೋಧನಾ ಕಾರ್ಯಕ್ಕಾಗಿ | ೧೯೯೬ |
| ೧೧) ಶ್ರೀ ಜಿ.ಎಸ್. ಶಿವರುದ್ರಪ್ಪ | ಸಂಶೋಧನೆ ಮತ್ತು ಸಾಹಿತ್ಯ | ೧೯೯೭ |
| ೧೨) ಶ್ರೀ ದೇ. ಜವರೇಗೌಡ | ಸಮಗ್ರ ಸಾಹಿತ್ಯ | ೧೯೯೮ |
| ೧೩) ಶ್ರೀ ಚೆನ್ನವೀರ ಕಣವಿ | ಸಮಗ್ರ ಸಾಹಿತ್ಯ | ೧೯೯೯ |
| ೧೪) ಶ್ರೀ ಎಲ್. ಬಸವರಾಜು | ಸಮಗ್ರ ಸಾಹಿತ್ಯ | ೨೦೦೦ |
| ೧೫) ಶ್ರೀ ಕೆ.ಪಿ. ಪೂರ್ಣಚಂದ್ರ ತೇಜಸ್ವಿ | ಸಮಗ್ರ ಸಾಹಿತ್ಯ | ೨೦೦೧ |
| ೧೬) ಶ್ರೀ ಎಂ. ಚಿದಾನಂದಮೂರ್ತಿ | ಸಮಗ್ರ ಸಾಹಿತ್ಯ | ೨೦೦೨ |
| ೧೭) ಶ್ರೀ ಚಂದ್ರಶೇಖರ ಕಂಬಾರ | ಸಮಗ್ರ ಸಾಹಿತ್ಯ | ೨೦೦೩ |
| ೧೮) ಶ್ರೀ ಎಚ್.ಎಲ್. ನಾಗೇಗೌಡ | ಸಮಗ್ರ ಸಾಹಿತ್ಯ | ೨೦೦೪ |
| ೧೯) ಶ್ರೀ ಎಸ್.ಎಲ್. ಭೈರಪ್ಪ | ಸಮಗ್ರ ಸಾಹಿತ್ಯ | ೨೦೦೫ |
| ೨೦) ಶ್ರೀ ಜಿ.ಎಸ್. ಆಮೂರ | ಸಮಗ್ರ ಸಾಹಿತ್ಯ | ೨೦೦೬ |
| ೨೧) ಶ್ರೀ ಯಶವಂತ ಚಿತ್ತಾಲ | ಸಮಗ್ರ ಸಾಹಿತ್ಯ | ೨೦೦೭ |
| ೨೨) ಶ್ರೀ ಟಿ.ವಿ. ವೆಂಕಟಾಚಲಶಾಸ್ತ್ರಿ | ಸಮಗ್ರ ಸಾಹಿತ್ಯ | ೨೦೦೮ |
| ೨೩) ಶ್ರೀ ಚಂದ್ರಶೇಖರ ಪಾಟೀಲ | ಸಮಗ್ರ ಸಾಹಿತ್ಯ | ೨೦೦೯ |
| ೨೪) ಶ್ರೀ ಜಿ.ಎಚ್. ನಾಯಕ | ಸಮಗ್ರ ಸಾಹಿತ್ಯ | ೨೦೧೦ |
| ೨೫) ಶ್ರೀ ಬರಗೂರು ರಾಮಚಂದ್ರಪ್ಪ | ಸಮಗ್ರ ಸಾಹಿತ್ಯ | ೨೦೧೧ |
| ೨೬) ಶ್ರೀ ಡಿ.ಎನ್. ಶಂಕರಭಟ್ಟ | ಸಮಗ್ರ ಸಾಹಿತ್ಯ | ೨೦೧೨ |

## ತಂಬಾಕು ದುಷ್ಪರಿಣಾಮಗಳು– ಅರೋಗ್ಯ ಜೀವನದ ಅಪ್ಪುಗೆ

ಅಪಾರವಾದ ಮಾಹಿತಿ ಇದ್ದಾಗಲೂ, ನಿರಂತರ ತಂಬಾಕು ಬಳಕೆಯಿಂದಾಗುತ್ತಿರುವ ಸಾವುಗಳು ವ್ಯಾಪಕಾವಾಗಿ ಹೆಚ್ಚಾಗುತ್ತಿವೆ.

ಅಂತರಾಷ್ಟ್ರೀಯ ರೋಗಗಳ ವರ್ಗೀಕರಣ (ICD) ವಿಭಾಗದ ಪ್ರಕಾರ ತಂಬಾಕು ಬಳಕೆಯನ್ನು ಇನ್ನೆಂದು ಒಂದು ಹವ್ಯಾಸ ಎಂದುಕೊಳ್ಳದೆ ಇದೊಂದು ಅರೋಗ್ಯದ ಸಮಸ್ಯೆ ಎಂದು ವರ್ಗೀಕರಿಸಿದೆ

ಅತ್ಯಲ್ಪ ಪ್ರಮಾಣದ ತಂಬಾಕು ಕೂಡ ಸುರಕ್ಷಿತವಲ್ಲ. ಒಬ ತಂಬಾಕು ವ್ಯಸನಿಯು ತಂಬಾಕು ಸಂಬಂಧಿ ಖಾಯಿಲೆಗೆ ಒಳಗಾದಲ್ಲಿ 50%ರಷ್ಟು ಅವನು ಅವಧಿಗೂ ಮುನ್ನ ಸಾಯುವ ಸಂಭವವಿದೆ. ಪ್ರತಿವರ್ಷ ತಂಬಾಕಿನಿಂದಾಗಿ ಸುಮಾರು 40 ಲಕ್ಷ ಜನರು ಅವಧಿಗೂ ಮುನ್ನ ಸಾವನ್ನಪ್ಪಿದ್ದಾರೆ. ಈ ಸಾಂಕ್ರಮಿಕ ಮಾರಿ 25 ಕೋಟಿಯಷ್ಟು ಜಿವಂತವಾಗಿರುವ ಮಕ್ಕಳು ಹಾಗೂ ವಯಸ್ಕರನ್ನು ಕೊಲ್ಲುವ ಸಂಭವವಿದೆ, ಇದು ಮೂರನೆ ಒಂದು ಭಾಗದಷ್ಟು ಅಭಿವೃದ್ದಿ ಹೊಂದಿದ ರಾಷ್ಟ್ರಗಳ ಜನಸಂಖ್ಯೆಗೆ ಸಮವಾಗಿವೆ.

ಅಮೇರಿಕಾದ ವೈದ್ಯಕೀಯ ಒಕ್ಕೂಟದ ಪ್ರಕಾರ: ತಂಬಾಕಿನ ಮೇಲೆ ಅತಿಯಾಗಿ ಅವಲಂಬಿತವಾಗಿರುವುದು, ಅಧಿಕ ರಕ್ತದೊತ್ತಡ ಅಥವಾ ಮಧುಮೇಹದಂತಹ ದೀರ್ಘಕಾಲದ ಅನಾರೋಗ್ಯಕ್ಕೆ ಇಡುಮಾಡುವುದು ಮತ್ತು ಒಬ್ಬ ರೋಗಿಗೆ ಇದರಿಂದ ಯಶಸ್ವಿಯಾಗಿ ಗುಣಮುಖವಾಗಲು, ವೈದ್ಯರಿಗೂ ಕೂಡ ರೋಗಿಗೆ ದೀರ್ಘಕಾಲದ ಚಿಕಿತ್ಸೆ ನೀಡುವುದು ಅನಿವಾರ್ಯವಾಗುವುದು.

ತಂಬಾಕು ಅನೇಕ ಪ್ರಕಾರಗಳಲ್ಲಿ ಬಳಸಲ್ಪಡುತ್ತದೆ,;ಅವೆಂದರೆ ಧೂಮಪಾನ –ಸೀಗರೇಟು, ಬೀಡಿ; ಜಗಿಯುವ–ಪಾನ್, ಖೈನಿ; ಹಲ್ಲುಗಳಿಗೆ ಅಥವಾ ಮೂಗಿಗೆ ಹಚ್ಚಿಕೊಳ್ಳುವ– ಮಶೇರಿ,ನಾಸಿಪುಡಿ ಅಥವಾ ನಸ್ಯ.

ತಂಬಾಕು 4000ರಕ್ಕಿಂತಲೂ ಅಧಿಕ ರಾಸಯನಿಕಗಳನ್ನು ಒಳಗೊಂಡಿದ್ದು ಇದರಲ್ಲಿ 60ಕ್ಕೂ ಅಧಿಕ ರಾಸಯನಿಕಗಳು ಕ್ಯಾನ್ಸರ್ ರೋಗಕಾರಕವಾಗಿವೆ. ಇವುಗಳಲ್ಲಿ ಕೆಲವೊಂದು ಪಾಲಿಸೈಕ್ಲಿಕ್ ಅರೋಮ್ಯಾಟಿಕ್ ಹೈಡ್ರೋಕಾರ್ಬನಗಳು (PAH)– ಬೆಂಜೋ $\{ a \}$ ಪ್ಯರೀನ್, ತಂಬಾಕು ಸೀಮಿತ –ನೈಟ್ರೋಸಮೈನ್ – ನೈಟ್ರೊಸೊನೊರೊನಿಕೊಟಿನ್ – ಬೆನೆಜ್, ಲೋಹಗಳು ಮತ್ತು ಅಸಾವಯವ ಸಂಯುಕ್ತಗಳು–ಆರ್ಸೇನಿಕ್, ನಿಕ್ಕೆಲ್, ಕ್ರೋಮಿಯಂ, ಕ್ಯಾಡ್‌ಮಿಯಂ, ಪೊಲೆನಿಯಮ್–210

ಹದಿ ಹರೆಯದ ಪ್ರಾಯದ ಯುವಕರು ಈ ದುಶ್ಚಟಕ್ಕೆ ಬಲಿಯಾಗುವುದಲ್ಲದೆ ಅರೋಗ್ಯದ ಮೇಲುಂಟಾಗುವ ಪರಿಣಾಮಗಳ ಅರಿವಿಲ್ಲದೆ ಅತಿಯಾದ ಒತ್ತಡಕ್ಕೆ ಒಳಾಗಗುತ್ತಾರೆ. ಜಗತ್ತಿನಲ್ಲಿ ತಡೆಯಬಹುದಾದ ಸಾವುಗಳಲ್ಲಿ ತಂಬಾಕು ಕಾರಣವೇ ಒಂದು ಅತ್ಯಂತ ದೊಡ್ಡ ಕಾರಣವಾಗಿದೆ. ತಂಬಾಕು ಬಳಕೆಯ ಪ್ರತಿಕೂಲವು ದೇಹದ ಪ್ರತಿಯೊಂದು ಜೀವಕೋಶದ ಮೇಲೆ ಪರಿಣಾಮ ಬೀರುತ್ತದೆ, ಕೆಲವೊಂದು ಸಂದಂರ್ಭಗಳಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಖಾಯಿಲೆಗಳೆಂದರೆ ಕ್ಯಾನ್ಸರ್, ಹೃದಯಾಘಾತ, ಹೊಡೆತಗಳು,; ತೀರ್ವತಡೆಒಡ್ಡುವ ಶ್ವಾಸಕೋಶ ಸಂಬಂಧಿ ರೋಗಗಗಳು, ಬಾಹ್ಯ ನಳೀಯ ರೋಗಗಳು ಮತ್ತು ಅಧಿಕ ರಕ್ತದೊತ್ತಡ.

ಪ್ರತಿ ಘಂಟೆಗೆ, ಕ್ಯಾನ್ಸರ್ ರೋಗದಿಂದಾಗಿ ಕಡಿಮೆಯೆಂದರೂ 50 ಜನ ಭಾರತದಲ್ಲಿ ಕೊಲ್ಲಲ್ಪಡುತ್ತಾರೆ ಮತ್ತು 100 ಹೊಸ ರೋಗಿಗಳನ್ನು ಪಡೆಯುತ್ತದೆ. ಭಾರತವು ಜಗಿಯುವ ತಂಬಾಕಿನಿಂದಾಗುವ ಬಾಯಿ ಕ್ಯಾನ್ಸರ್ ರೋಗದ ಭಾರಿ ಸಂಖ್ಯೆಯ ರೋಗಿಗಳನ್ನು ಒಳಗೊಂಡಿದೆ.

ಸರಿಸಮವಾಗಿ ಸೇದಿಬಿಟ್ಟ ಹೊಗೆ ಅಥವಾ ನಿಷ್ಕ್ರೀಯ ಧೂಮಪಾನವು ಅರೋಗ್ಯಕ್ಕೆ ಹಾನಿಕಾರಕವಾಗಿದೆ. ಇದನ್ನು ಸೇವಿಸಿದ ಅನೇಕರು ಧೂಮಪಾನಿಗಳು ಸೇವಿಸುವ ಪ್ರಮಾಣದಷ್ಟೆ ರಾಸಯನಿಕಗಳನ್ನು ಸೇವಿಸುತ್ತಾರೆ. ಹಾಗಾಗಿ ಸಾರ್ವಜನಿಕ ಪ್ರದೇಶಗಳಲ್ಲಿ ಸರ್ಕಾರವು ಧೂಮಪಾನವನ್ನು ಕಟ್ಟುನಿಟ್ಟಾಗಿ ನಿಷೇಧಿಸಿದೆ.



BEFORE





AFTER





ಮೇಲಿನ ಚಿತ್ರವು ಧ್ವನಿಪೆಟ್ಟಿಗೆನ್ನು ಕಳೆದುಕೊಂಡ ಮಹಿಳೆಗೆ ಸೇರಿದ್ದಾಗಿದೆ, ತಮ್ಮ ಕಾರ್ಯಸ್ಥಾನ(ಕಚೇರಿಯಲ್ಲಿ)ದಲ್ಲಿ ನಿರಂತರ ಸೇದಿಬಿಟ್ಟ ಹೊಗೆ ಅಥವಾ ನಿಷ್ಕ್ರೀಯ ಧೂಮಪಾನ ಸೇವಿಸುವುದೆ ಪ್ರಮುಖ ಕಾರಣ ಎಂದು ಕಂಡು ಬಂದಿದೆ.

# ಟಿಪ್ಪಣಿಗಾಗಿ

ಟಿಪ್ಪಣಿಗಾಗಿ

## ಟಿಪ್ಪಣಿಗಾಗಿ

# ಟಿಪ್ಪಣಿಗಾಗಿ

# ಟಿಪ್ಪಣಿಗಾಗಿ

# ಟಿಪ್ಪಣಿಗಾಗಿ

# ಟಿಪ್ಪಣಿಗಾಗಿ

## ಟಿಪ್ಪಣಿಗಾಗಿ